

Scanned by CamScanner



Scanned by CamScanner




Scanned by CamScanner




Scanned by CamScanner




Scanned by CamScanner




Scanned by CamScanner



Scanned by CamScanner



ಪೂಜ್ಯ ಶ್ರೀ ಷ॥ ಬ್ರ॥ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಗವಿಮಠ ಬಸವಕಲ್ಯಾಣ

Scanned by CamScanner

# ಭಾವೈಕ್ಯತೆಯನ್ನು ಸಾರುವುದೇ ವೀರಶೈವ ಧರ್ಮದ ಗುರಿ

ಬಸವಕಲ್ಯಾಣ, ಸೆ.೧೩-ಸಂಕುಚಿತವಾದ ಭಾವನೆಗಳನ್ನು ದೂರಮಾಡಿ ಮನುಷ್ಯ ಮನುಷ್ಯನಲ್ಲಿ ಭಾವೈಕ್ಯತೆಯನ್ನು ಉಂಟುಮಾಡುವುದೇ ವೀರಶೈವ ಧರ್ಮದ ಪರಮ ಗುರಿಯಾಗಿದೆ ಎಂದು ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರು ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಕರೆ ಕೊಟ್ಟರು.

ಅವರು ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರವಾಗಿರುವ ತ್ರಿಪುರಾಂತದ ಮರಿದೇವರ(ಗವಿ)ಗುಡ್ಡದಲ್ಲಿ ಜರುಗಿದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಷ್ಟಶತಮಾನೋತ್ಸವ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಿದ್ದರು. ಈ ಶತಮಾನದ ಕೊನೆಯ ದಶಕದಲ್ಲಿ ಅಷ್ಟಶತಮಾನೋತ್ಸವ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿಯೆಂದು ಹರ್ಷವ್ಯಕ್ತಪಡಿಸಿದ ಜಗದ್ಗುರುಗಳು ಈ ಕ್ಷೇತ್ರದ ಸಮಗ್ರ ಬೆಳವಣಿಗೆಗಾಗಿ ಸರ್ವರೂ ಗಮನಿಸಬೇಕೆಂದು ಆಶಿಸಿದ ಜಗದ್ಗುರುಗಳು ತಮ್ಮ ಪೀಠದಿಂದ ಒಂದು ಲಕ್ಷ ರೂಪಾಯಿ ಜೀರ್ಣೋದ್ಧಾರ ಕಾರ್ಯಕ್ಕಾಗಿ ಕೊಡುವುದಾಗಿ ಘೋಷಿಸಿದರು.

ಹಿಂದೆ ಕಲ್ಯಾಣಕ್ಕೆ ಬಂದಿರುವ ಶರಣ ಸಮೂಹಕ್ಕೆ ಪಂಚಗವಿಯಲ್ಲಿ ಅವರಿಗೆ ಅಂಗಸಂಸ್ಕಾರಗೊಳಿಸಿ ಲಿಂಗ ಸಂಧಾನಗೊಳಿಸಿದ ಶ್ರೇಯಸ್ಸು ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸಲ್ಲುತ್ತದೆ. ಅವರು ನಡೆದಾಡಿದ ಪುಣ್ಯಭೂಮಿಯಲ್ಲಿ, ನಾವಿಂದು ಸಮ್ಮಿಲಿತರಾಗಿರುವುದು ತೃಪ್ತಿಯನ್ನು ತಂದಿದೆ. ಅನ್ಯರಾರೂ ವೈರಿಗಳಿಲ್ಲ, ನಮ್ಮವರೇ ನಮಗೆ ವೈರಿಯಾಗಿ ಈ ಧರ್ಮಸಿದ್ಧಾಂತವನ್ನು ಅಲ್ಲಸಲ್ಲದ ರೀತಿಯಲ್ಲಿ ತಿಳಿದು ನಡೆಯುತ್ತಿರುವುದು ಅಧೋಗತಿಗೆ ಕಾರಣವೆಂದು ಹೇಳಿದರು.

ಸಮಾರಂಭದಲ್ಲಿ ನಾಡಿನ ನೂರಾರು ಜನ ಶಿವಾಚಾರ್ಯರು ಅಡಿಷನಲ್ ಪೊಲೀಸ್ ಕಮಿಷನರ್, ಸಿ.ಮೋತಿರಾಮ, ಆರ್.ಡಿ.ಜಲ್ದೆ, ಐಪಿಎಸ್ ಖ್ಯಾತ ಕೈಗಾರಿಕೋದ್ಯಮಿ ಬೆಂಗಳೂರಿನ ಎನ್.ಆರ್.ಪಂಡಿತಾರಾಧ್ಯರು ಬಿ.ಎಸ್.ಶಿವಣ್ಣ, ಎಸ್.ಎನ್.ವಿನೋದ ಮೊದಲಾದವರಿಗೆ ಶಾಲು ಹೊದಿಸಿ ಸತ್ಕರಿಸಲಾಯಿತು. 48 ದಿನ ತಮ್ಮ 50ನೇ ಅನುಷ್ಠಾನ ನೆರವೇರಿಸಿದ ವಿಮಲಖೇಡದ ಗುರುಪಾದ ಶಿವಾಚಾರ್ಯರಿಗೆ ತಪೋರತ್ನ ಪ್ರಶಸ್ತಿಯನ್ನು ಇತ್ತು ಜಗದ್ಗುರುಗಳು ಹರಸಿದರು. ಇದೇ ಸಂದರ್ಭದಲ್ಲಿ ವಿಮಲಖೇಡ ಶ್ರೀಗಳನ್ನು ಕುರಿತು ಪ್ರೊ.ಸಿದ್ಧರಾಮಯ್ಯ ಮಠಪತಿ ಗೋರಟಾ ಬರೆದ ಪುಸ್ತಕ ಪೂಜ್ಯ ಜಗದ್ಗುರುಗಳು ಬಿಡುಗಡೆ ಮಾಡಿದರು.

ಮುಖ್ಯ ಅತಿಥಿಯಾಗಿ ಔಸಾದ ಗುರುಬಾಬಾ ಮಹಾರಾಜ ಹಾಗೂ ಕಲ್ಬುರ್ಗಿಯ ರೇವಣಸಿದ್ಧಶಿವಾಚಾರ್ಯರು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಜ್ಞಾನೇಶ್ವರ ಮಹಾರ್‍ಾಜ ವಹಿಸಿದ್ದರು. ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಬೇಲೂರಿನ ಗುರುಲಿಂಗ ಶಿವಾಚಾರ್ಯರು ಸರ್ವರನ್ನು ಸ್ಮರಿಸಿದರು. ಕ್ಷೇತ್ರದ ಪ್ರಗತಿಯ ಬಗೆಗೆ ಪಡೋಳಾ ಆಶ್ರಮದ ರಾಜೇಶ್ವರ ಸ್ವಾಮಿಗಳು ಮಾತನಾಡಿದರು. ಬೆಂಗಳೂರಿನ ಪಂ.ಷಣ್ಮುಖಯ್ಯ ಅಕ್ಕೂರಮಠ ವಿಶೇಶ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಪಂಚಾಕ್ಷರಿ ಎಂಬ ಪಟುವನ್ನು ರುದ್ರಮುನಿ ಶಿವಾಚಾರ್ಯ ಮಠಕ್ಕೆ ನಿಶ್ಚಯಿಸಿ ಘೋಷಣೆ ಮಾಡಲಾಯಿತು. ಕಾರ್ಯಕ್ರಮದ ಯಶಸ್ವಿಗಾಗಿ ಶ್ರಮಿಸಿದ ಟ್ರಸ್ಟಿನ ಎಲ್ಲ ಪದಾಧಿಕಾರಿಗಳನ್ನು ಹಾಗೂ ಗೋರಟಾದ ಸಂಗೀತ ರುದ್ರ ಸಂಘದ ಸದಸ್ಯರನ್ನು ಇತರ ಧರ್ಮಾಭಿಮಾನಿಗಳನ್ನು ಪೀಠಾಭಿಮಾನಿಗಳನ್ನು ಸನ್ನಿಧಿ ಸ್ಮರಿಸಿದರು.

ಶರಣಪ್ಪ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು. ಆಗಮಿಸಿದ ಸರ್ವರನ್ನು ಬಸವೇಶ್ವರ ದೇವಸ್ಥಾನ ಕಮಿಟಿಯ ಅಧ್ಯಕ್ಷ ಸೋಮಶೇಖರಯ್ಯ ವಸ್ತ್ರದ ಸ್ವಾಗತಿಸಿದರು. ರಾಜಶೇಖರ ಸ್ವಾಮಿ ಗೋರಟಾ, ಸೂರ್ಯಕಾಂತ ಶೀಲವಂತ ಕಾರ್ಯಕ್ರಮ, ನಿರೂಪಿಸಿದರು. ದಯಾನಂದ ಶೀಲವಂತ, ವೀರಣ್ಣಾ ಶಾಂತಪ್ಪ ಶೀಲವಂತ ಸರ್ವರನ್ನು ವಂದಿಸಿದರು.

**ಬಸವೇಶ್ವರ ದೇವಸ್ಥಾನಕ್ಕೆ ಭೇಟಿ**

ಬೆಳಿಗ್ಗೆ ಪೂಜ್ಯ ಜಗದ್ಗುರುಗಳು ಬಸವೇಶ್ವರ ದೇವಸ್ಥಾನಕ್ಕೆ ಭೇಟಿ ಇತ್ತು, ನಡೆಯುತ್ತಿರುವ ಗೋಪುರದ ಕೆಲಸ ಕಾರ್ಯವನ್ನು ಪರಿಶೀಲಿಸಿ ಸಂತಸ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ದೇವಸ್ಥಾನ ಪಂಚಕಮಿಟಿಯವರು ಜಗದ್ಗುರುಗಳನ್ನು ಹೂ ಮತ್ತು ಮಡಿ ಅರ್ಪಿಸಿ ಗೌರವಿಸಿದರು. ನಂತರ ತ್ರಿಪುರಾಂತದ ಪ್ರವಾಸಿ ಮಂದಿರದಿಂದ ಮರಿದೇವರ ಗುಡ್ಡದ ರುದ್ರಮುನಿ ಶಿವಾಚಾರ್ಯರ ಪವಿತ್ರ ಕ್ಷೇತ್ರದವರೆಗೆ ಜಗದ್ಗುರುಗಳವರನ್ನು ಸಕಲ ವಾದ್ಯ ವೈಭವಗಳೊಂದಿಗೆ ಅಡ್ಡಪಲ್ಲಕ್ಕಿ ಮಹೋತ್ಸವದಿಂದ ಕರೆದೊಯ್ಯಲಾಯಿತು.

Sanje vani 14-9-97

ದಿನಾಂಕ 14-9-1997 ಸಂಜೆವಾಣಿ ಪತ್ರಿಕೆ

Scanned by CamScanner

# 'ವೀರಶೈವ ತಾತ್ವಿಕ ಸಂಘಟನೆಯಾಗಿ ರೂಪಗೊಳ್ಳಲಿ'

29-9-2005

(ಸ್ವಂತ ಸುದ್ದಿಗಾರರಿಂದ)

ಬಸವಕಲ್ಯಾಣ, 28- ವೀರಶೈವ ಲಿಂಗವಂತ ಸಾಂಸ್ಕೃತಿಕ ಸಮನ್ವಯ ಪರಂಪರೆ ಸಮಾಜದಲ್ಲಿ ಪ್ರಬಲ ತಾತ್ವಿಕ ಸಂಘಟನೆಯಾಗಿ ರೂಪುಗೊಳ್ಳಬೇಕೆಂದು ಶ್ರೀಮದ್ ರಂಭಾಪುರಿ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇಲ್ಲಿಯ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮಠದಲ್ಲಿ ಶ್ರೀ ಪಂಚಾಕ್ಷರಿ ದೇವರ ಪಟ್ಟಾಧಿಕಾರ ಮಹೋತ್ಸವದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಶಾಂತಿ, ನೆಮ್ಮದಿ, ಸಾಮರಸ್ಯವನ್ನು ಕದಡಿ ಸಮಾಜದ ಸ್ವಾಸ್ಥ ಕೆಡಿಸುವ ದುಷ್ಟ ಶಕ್ತಿಗಳು ತೀವ್ರ ಗತಿಯಲ್ಲಿ ಬೆಳೆಯುತ್ತಿರುವುದು ದುರದೃಷ್ಟಕರ ಸಂಗತಿ ಎಂದು ವಿಷಾದಿಸಿದ ಜಗದ್ಗುರುಗಳು, ಸ್ವಾರ್ಥ ಮತ್ತು ಸಂಕುಚಿತ ಮನೋಭಾವ ತುಂಬಿ ತುಳುಕುತ್ತಿರುವ ಇಂದಿನ ದಿನಗಳಲ್ಲಿ ಅಧ್ಯಾತ್ಮ ಜ್ಞಾನ, ಧಾರ್ಮಿಕ ಮನೋಭಾವ ಬೀರುವಲ್ಲಿ ಮಠಮಂದಿರಗಳು ಮಹತ್ವದ ಪಾತ್ರ ವಹಿಸಲಿ ಎಂದು ಆಶಿಸಿದರು.

ಶ್ರೀಕೇದಾರ ಜಗದ್ಗುರುಗಳು ಆಶೀರ್ವಚನ ನೀಡಿ, ಸಮಾಜದಲ್ಲಿ ಮನಸ್ಸು ಮತ್ತು ಆತ್ಮವನ್ನು ಕೂಡಿಸುವುದೆ ಧಾರ್ಮಿಕ ತತ್ವ ಅದನ್ನು ಬೆಳೆಸಿ, ದಿಕ್ಕು ತಪ್ಪಿ ನಡೆಯುತ್ತಿರುವ ಸಮಾಜವನ್ನು ಸರಿದಾರಿಗೆ ತರುವಲ್ಲಿ ಆದರ್ಶ ಗುರುಗಳ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ಎಲ್ಲ ಧರ್ಮಗುರುಗಳು ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಮಾತನಾಡಿ, ಈ ಮಠದ ವ್ಯಾಪ್ತಿಯಲ್ಲಿ ಪರಿಸರ ಸಂರಕ್ಷಣೆ, ಅರಣ್ಯ ಬೆಳೆಸಲು ಅಗತ್ಯದ ನೆರವನ್ನು ತಮ್ಮ ಇಲಾಖೆಯಿಂದ ನೀಡುವುದಾಗಿ ಹೇಳಿದರು.



ಬಸವಕಲ್ಯಾಣ ತ್ರಿಪುರಾಂತ ಶ್ರೀಘನಲಿಂಗ ರುದ್ರಮುನಿ ಗವಿಮಠದಲ್ಲಿ ಬುಧವಾರ ನಡೆದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಾಧಿಕಾರ ಮಹೋತ್ಸವದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು, ಶ್ರೀ ಕೇದಾರ ಜಗದ್ಗುರುಗಳು ಇತರ ಗಣ್ಯರು ಪಾಲ್ಗೊಂಡಿದ್ದರು.

ಇನ್ನೋರ್ವ ಅತಿಥಿಗಳಾದ ಶಾಸಕ ಮಲ್ಲಿಕಾರ್ಜುನ ಖೂಬಾ ಅವರು ಮಠದ ಅಭಿವೃದ್ಧಿಗಾಗಿ ಐದು ಲಕ್ಷ ರೂ.ಗಳ ಅನುದಾನ ನೀಡುವುದಾಗಿ ಪ್ರಕಟಿಸಿದರು.

ಮತ್ತೋರ್ವ ಅತಿಥಿಗಳಾದ ವಿಧಾನ ಪರಿಷತ್ ಸದಸ್ಯ ಮಾರುತಿರಾವ ಮಾಲೆ ಅವರು ಮಠದ ಅಭಿವೃದ್ಧಿಗೆ ಒಂದು ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದರು.

ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಈಶ್ವರ ಖಂಡ್ರೆ, ಮಾಜಿ ಮಂತ್ರಿ ಬಸವರಾಜ ಪಾಟೀಲ ಅಟ್ಟೂರ, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಗುರುಲಿಂಗ ಶಿವಾಚಾರ್ಯರು, ಶ್ರೀ ಶಾಂತಲಿಂಗ ಶಿವಾಚಾರ್ಯರು, ಪುರಸಭಾಧ್ಯಕ್ಷೆ ಶ್ರೀಮತಿ ಧೊಂಡುಬಾಯಿ ತ್ರಿಮುಖ, ಉಪಾಧ್ಯಕ್ಷ ಸಂಜಯ ಶ್ರೀವಾತ್ಸವ, ಎ.ಪಿ.ಎಂ.ಸಿ. ಅಧ್ಯಕ್ಷ ಸಿದ್ರಾಮ ಗುದಗೆ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಾಬುರಾವ ಗುದಗೆ, ಶರಣಪ್ಪ ಬಿರಾದಾರ, ಬಸವರಾಜ ಸ್ವಾಮಿ ಉಪಸ್ಥಿತರಿದ್ದರು. ರಮೇಶ ರಾಜೋಳೆ, ಸೂರ್ಯಕಾಂತ ಶೀಲವಂತ ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ 29-9-2005 ಹೊಂಯುರ ಕರ್ನಾಟಕ ಪತ್ರಿಕೆ

Scanned by CamScanner

# ರುದ್ರಮುನಿ ಮಠ ಒಡೆತನ-ಸರಕಾರದ ಹಸ್ತಕ್ಷೇಪ ಬೇಡ

ಬಸವಕಲ್ಯಾಣ, ಜು.23- ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದ ಮೂಲ ಒಡೆತನಕ್ಕೆ ಸಂಬಂಧಿಸಿ ಸರಕಾರದ ಹಸ್ತಕ್ಷೇಪ ಬೇಡ ಎಂದು ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆಯಲಾಗಿದೆ. ಶಾಸಕ ಹಾಗೂ ಸಂಬಂಧಿತರಿಗೂ ಪತ್ರದ ಪ್ರತಿಗಳನ್ನು ಕಳುಹಿಸಲಾಗಿದೆ. ಸರಕಾರ ಯಾವುದೇ ರೀತಿ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಮಠದ ಅಭಿವೃದ್ಧಿಗೆ ಶ್ರಮಿಸಬಹುದು. ಆದರೆ ಇದರ ಮೂಲ ಒಡತನಕ್ಕೆ ಮತ್ತು ಸ್ಥಿರ-ಚರ ಆಸ್ತಿಗೆ ಯಾವುದೇ ಹಸ್ತಕ್ಷೇಪ ಎಂದು ಕೋರಲಾಗಿದೆ.

ಗವಿ ಮಠದ ಸ್ಥಿರ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಟ್ರಸ್ಟ್‌ನ ಸೋಮಶೇಖರ ವಸ್ತ್ರದ, ಬಸಯ್ಯ ಸ್ವಾಮಿ, ಶರಣಪ್ಪ ಬಿರಾದಾರ, ದಯಾನಂದ ಶೀಲವಂತ ಸೇರಿದಂತೆ ಹನ್ನೊಂದು ಜನ ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಶರಣರ ಸ್ಮಾರಕಗಳ ಜತೆ ಐತಿಹಾಸಿಕ ಕ್ಷೇತ್ರಗಳನ್ನೊಳಗೊಂಡು ಬಸವಕಲ್ಯಾಣ ಸರ್ವಾಂಗೀಣ ಅಭಿವೃದ್ಧಿ ಯೋಜನೆ ಕೈಗೊಂಡಿರುವ ಸರಕಾರದ ಕ್ರಮ ಸ್ವಾಗತಾರ್ಹ. ಇಡಿ ಕಲ್ಯಾಣದ ಪರಿಸರದಲ್ಲೇ ಅತ್ಯಂತ ಪ್ರಾಚೀನ ಪುಣ್ಯಕ್ಷೇತ್ರ ಎನಿಸಿರುವ ತ್ರಿಪುರಾಂತದ ಶ್ರೀ ಶಿವಾಚಾರ್ಯ ಗವಿ (ಮರಿದೇವರ ಗುಡ್ಡ) ತನ್ನದೆ ಗುರು ಪರಂಪರೆ ಹೊಂದಿದೆ. 11ನೇ ಶತಮಾನದಲ್ಲಿ ಶ್ರೀ ಜಗದ್ಗುರು ರೇವಣಸಿದ್ಧರು ಮಠ ಸ್ಥಾಪಿಸಿದ್ದರೆಂದು ಉಲ್ಲೇಖಿಸಲಾಗಿದೆ.

ಕಲ್ಯಾಣ ಚಾಲುಕ್ಯ ಅರಸರ ಒಂದನೇ ಸೋಮೇಶ್ವರರ ಪ್ರಾರ್ಥನೆ ಮೇರೆಗೆ ಮಹಾರಾಷ್ಟ್ರದ ಮಂಗಳವೆಡೆ, ಸೊಲ್ಲಾಪುರ, ಗುಲ್ಬರ್ಗ ಜಿಲ್ಲೆಯ ರೇವಗ್ಗಿಯಲ್ಲಿ ಧರ್ಮ ಕಾರ್ಯ ಮಾಡುತ್ತಿದ್ದ ಶ್ರೀ ರೇವಣಸಿದ್ದೇಶ್ವರು ಬಸವಕಲ್ಯಾಣಕ್ಕೆ ಆಗಮಿಸಿದ್ದರು. ಇಲ್ಲಿ ಶಿವಾನುಷ್ಠಾನ ಕೈಗೊಂಡು ಶಾಶ್ವತ ನೆಲೆ ನಿಲ್ಲಲು ಒಂದು ಗುಹೆ ಸ್ಥಾಪಿಸಿ ಚಂಗಲಗ ಮಂಟಪ, ಬಿಲ್ವ ವನಗಳನ್ನು ಬೆಳೆಸಿದರು. ಬೃಹತ್ ಕೆರೆ ನಿರ್ಮಿಸಿದ್ದರು ಎಂದು ಗತ ವೈಭವ, ಮಠದ ಗುರು ಪರಂಪರೆ ವಿಶೇಷತೆಯನ್ನು ಪತ್ರದಲ್ಲಿ ಬಣ್ಣಿಸಲಾಗಿದೆ.

**ನೇಮಕ ಮಾಡಿ:** ಸರಕಾರ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಲ್ಲಿ ವಿವಿಧ ಸಂಘ ಸಂಸ್ಥೆಗಳಿಂದ ನಾಮನಿರ್ದೇಶಿತ ಸದಸ್ಯರ ನೇಮಕ ನಡೆದಿದೆ. ಶ್ರೀ ಮಠದ ಟ್ರಸ್ಟ್ ಗೌರವಾಧ್ಯಕ್ಷರಾದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರ ಹೆಸರನ್ನು ಮಂಡಳಿಗೆ ಪುನಃ ನಾಮನಿರ್ದೇಶನ ಮಾಡುವಂತೆ ಮನವಿ ಮಾಡಲಾಗಿದೆ.

ಹಿಂದಿನ ಸರಕಾರ ಮಂಡಳಿಗೆ ರಾಜೇಶ್ವರ ಶ್ರೀಗಳನ್ನು ನಾಮನಿರ್ದೇಶನ ಸದಸ್ಯರನ್ನಾಗಿ ನೇಮಿಸಿತ್ತು. ಆದರೆ ನೂತನ ಸಮ್ಮಿಶ್ರ ಸರಕಾರ ನಾಮನಿರ್ದೇಶನ ಪಟ್ಟಿಯಿಂದ ಶ್ರೀಗಳ ಹೆಸರು ತೆಗೆದಿದ್ದು ಈ ಭಾಗದ ಜನರಿಗೆ ನೋವುಂಟು ಮಾಡಿದೆ. ಸರಕಾರ ಜನರ ಭಾವನೆಗೆ ಸ್ಪಂದಿಸಬೇಕೆಂದು ಕೋರಲಾಗಿದೆ.

## ಶಾಸಕ ಖೂಬಾ ಆಕ್ಷೇಪ

**ಬಸವಕಲ್ಯಾಣ:** ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಮಠದ ಒಡೆತನಕ್ಕೆ ಸಂಬಂಧಿಸಿದಂತೆ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ನಿಲುವಿಗೆ ಶಾಸಕ ಮಲ್ಲಿಕಾರ್ಜುನ ಖೂಬಾ ಆಕ್ಷೇಪಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಭಿವೃದ್ಧಿಪಡಿಸುವಾಗ ಆಕ್ಷೇಪ ಸರಿಯಲ್ಲ. ಬೇಡವೆಂದರೆ ಸ್ವಾಮಿಗಳೇ ಹಣ ಒದಗಿಸಿ ಈ ಸ್ಥಳವನ್ನು ಅಭಿವೃದ್ಧಿಪಡಿಸುತ್ತಾರೆಯೇ ಎಂದು ಖಾರವಾಗಿ ಪ್ರಶ್ನಿಸಿದರು. ಸರಕಾರ ಬಸವಕಲ್ಯಾಣದ ಸಮಗ್ರ ಅಭಿವೃದ್ಧಿ ದೃಷ್ಟಿಕೋನದಿಂದಲೇ ಯೋಜನೆ ರೂಪಿಸುತ್ತಿದೆ. ಈ ಸಂಬಂಧ ವಿಶೇಷಾಧಿಕಾರಿ ಡಾ.ಜಾಮದಾರ ಅವರು ಪರಿಶೀಲನೆ ನಡೆಸಿದ್ದಾರೆ. ಸಮರ್ಪಕ ನೀಲನಕ್ಷೆ ಸಿದ್ಧಪಡಿಸಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಯಾವುದೇ ಅಡ್ಡಿ, ಆಕ್ಷೇಪ ಅಸಮಂಜಸ ಎಂದು ಹೇಳಿದರು.

ವಿಜಯ ಕರ್ನಾಟಕ ದಿನಪತ್ರಿಕೆ ದಿನಾಂಕ 8-07-2006

Scanned by CamScanner

# ಬಸವಕಲ್ಯಾಣ: ಸಂಭ್ರಮದ ಮಡಿವಾಳ ಮಾಚಿದೇವರ ಜಾತ್ರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪಟ್ಟಣದ ತ್ರಿಪುರಾಂತದಲ್ಲಿ ಕಳೆದ ಮೂರು ದಿನಗಳಿಂದ ಮಡಿವಾಳ ಮಾಚಿದೇವರ ಜಾತ್ರೆ ಸಡಗರ ಸಂಭ್ರಮದಿಂದ ನಡೆಯಿತು. ಈ ನಿಮಿತ್ತ ಸೋಮವಾರ ಸಂಜೆ ಧರ್ಮಸಭೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಸಕ ಮಲ್ಲಿಕಾರ್ಜುನ ಖೂಬಾ ಅವರು, ತ್ರಿಪುರಾಂತದಲ್ಲಿಯ ರಸ್ತೆಗಳ ಅಭಿವೃದ್ಧಿಗೆ 20 ಲಕ್ಷ ರೂ. ಹೆಚ್ಚುವರಿ ಹಣ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ನೇತೃತ್ವ ವಹಿಸಿದ್ದ ಮರಿದೇವರ ಗುಡ್ಡ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶರಣರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಪಾವನವಾಗುತ್ತದೆ ಎಂದರು.

ಜಿಪಂ ಸದಸ್ಯ ಸಂಜೀವ ಕಾಳೇಕರ್, ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆಸೀಫ್ ಹಾಜಿ, ಮುಖಂಡರಾದ ಕೇಶಪ್ಪ ಬಿರಾದಾರ, ರವೀಂದ್ರ ಬೋರೋಳೆ, ಹಣಮಂತ ಬೊಕ್ಕೆ, ರಾಜೀವ ಪಾಟೀಲ ಹಳ್ಳಿ, ಹಣಮಂತ ಅಂಬಲಗೆ, ಸಿಡಿಪಿಒ ಬಸವರಾಜ ವರವಟ್ಟಿ ಮುಂತಾದವರು ಉಪಸ್ಥಿತರಿದ್ದರು. ಬಕ್ಕಯ್ಯಸ್ವಾಮಿ ನಿರೂಪಿಸಿದರು. ನಂತರ ನಾಟಕದ ಪ್ರದರ್ಶನ ನಡೆಯಿತು. ಜ.16ರಂದು ಮುಂಜಾನೆ ಪಲ್ಲಕ್ಕಿ ಮೆರವಣಿಗೆ ಹಾಗೂ ಅಗ್ನಿಪೂಜೆ ಮತ್ತು ಅಗ್ನಿಪ್ರವೇಶ ನಡೆಯಿತು. ಸಾವಿರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಸೋಮವಾರ ಸಂಜೆ ನಡೆದ ಧರ್ಮ ಸಭೆಯಲ್ಲಿ ಶಾಸಕ ಮಲ್ಲಿಕಾರ್ಜುನ ಖೂಬಾ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜಿಪಂ ಸದಸ್ಯ ಸಂಜೀವ ಕಾಳೇಕರ್, ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆಸೀಫ್ ಹಾಜಿ ಪಾಲ್ಗೊಂಡಿದ್ದರು

ದಿನಾಂಕ 15-01-2006 ಪ್ರಜಾವಾಣಿ ಪತ್ರಿಕೆ

Scanned by CamScanner

# ಬಸವಕಲ್ಯಾಣ ಮಂಡಳಿ ವ್ಯಾಪ್ತಿಗೆ 443 ಎಕರೆ ಜಮೀನು

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಜೂನ್ 23 ರಂದು ಬಸವಕಲ್ಯಾಣ ಅಭಿವೃದ್ಧಿ ಮಂಡಳಿಗೆ ಚಾಲನೆ ದೊರೆತು ಕಾಮಗಾರಿ ಆರಂಭವಾಯಿತೆಂದರೆ ವಿವಿಧೆಡೆ ಇರುವ ಸುಮಾರು 29 ಶರಣ ಸ್ಮಾರಕಗಳ 443.03 ಎಕರೆ ಜಮೀನು ಮಂಡಳಿ ವ್ಯಾಪ್ತಿಗೆ ಹೋಗಲಿದೆ.

ಪಟ್ಟಣದಲ್ಲಿಯ ಕೆಲವು ಸ್ಮಾರಕಗಳ ಭೂಮಿ ಬಸವೇಶ್ವರ ದೇವಸ್ಥಾನ ಸಮಿತಿ ಹಾಗೂ ಇನ್ನಿತರೆ ದೇವಸ್ಥಾನ ಸಮಿತಿಗಳ ಹೆಸರಿನಲ್ಲಿದ್ದರೆ ಇನ್ನೂ ಕೆಲವು ಸ್ಥಳಗಳ ಜಾಗ ಸರ್ಕಾರಿ, ಗಾಂವಠಾಣ ಜಮೀನು ಎಂದು ಪರಿಗಣಿಸಲಾಗಿದೆ. ಕೆಲವು ಸ್ಥಳಗಳು ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿಯೂ ಇವೆ.

ಐದಾರು ಪ್ರಮುಖ ಸ್ಮಾರಕಗಳ ಸುಮಾರು 21ಎಕರೆ 25 ಗುಂಟೆ ಜಮೀನು ಅತಿಕ್ರಮಣಕ್ಕೊಳಗಾದ ಬಗ್ಗೆಯೂ ಮಂಡಳಿ ದಾಖಲೆಗಳಲ್ಲಿ ನಮೂದಾಗಿದೆ. ಕೆಲವು ಸ್ಥಳಗಳ ಜಾಗಕ್ಕೆ ಸಂಬಂಧಿಸಿದಂತೆ ವಿವಾದ ಏರ್ಪಟ್ಟಿರುವುದರಿಂದ ಅಂತಹ ಸ್ಮಾರಕಗಳನ್ನು ವಿವಾದ ಬಗೆಹರಿದ ನಂತರವೇ ಅವುಗಳನ್ನು ಜೀರ್ಣೋದ್ಧಾರಗೊಳಿಸಲು ನಿರ್ಧರಿಸಲಾಗಿದೆ.

ಮಂಡಳಿ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಸ್ಥಳವಾದ ಕೋಟೆ 23 ಎಕರೆ 37 ಗುಂಟೆ ಪ್ರದೇಶದಲ್ಲಿ ಹರಡಿಕೊಂಡಿದೆ. ಬಸವೇಶ್ವರ ಮಂದಿರ –20 ಗುಂಟೆ, ದೇವರ ದಾಸಿಮಯ್ಯನ ಗವಿ–03ಗುಂಟೆ, ಹರಳಯ್ಯನ ಗವಿ– 1ಗುಂಟೆ, ಮಡಿವಾಳ ಮಾಚಿದೇವರ ಹೊಂಡ– 5ಎ 27ಗುಂಟೆ, ನುಲಿಯ ಚಂದಯ್ಯನ ಗುಡಿ–3ಎಕರೆ, ಪರುಷಕಟ್ಟೆ–04 ಗುಂಟೆ, ಅಲ್ಲಮಪ್ರಭು ದೇವರ ಗದ್ದುಗೆ ಮಠ–5ಎ 29ಗುಂಟೆ, ಅಕ್ಕನಾಗಮ್ಮನ ಗವಿ–4ಎ 26ಗುಂ, ಕಂಬಳಿ ಮಠ–1ಎ 11ಗುಂ, ಬಂದವರ ಓಣಿ– 9ಎ 23ಗುಂಟೆ, ಅರಿವಿನ ಮ್ನನೆ–13ಎ 29ಗುಂಟೆ, ವಿಜ್ಞಾನೇಶ್ವರ ಗವಿ, ಯಳೆಹೂಟೆ ಶಿಕ್ಷೆ ಸ್ಥಳ–1ಎಕರೆ, ವಸ್ತು ಸಂಗ್ರಹಾಲಯ– 30ಗುಂಟೆ, ಅನುಭವ ಮಂಟಪ– 7ಎಕರೆ, ಪಂಚಸೂತ್ರದ ಗವಿ– 2ಗುಂಟೆ, ಬಸವ ಭವನ–5 ಎಕರೆ, ಬಸವ ವನ– 4ಎ 18ಗುಂಟೆ, ಥೇರ್ ಮೈದಾನ–15ಎ 19ಗುಂಟೆ,

ಕಿನ್ನರಿ ಬೊಮ್ಮಯ್ಯನ ಗುಡಿ ಹಳ್ಳಿ ಖೇಡ್– 5ಎ 38ಗುಂ, ಮೋಳಿಗೆ ಮಾರಯ್ಯನ ಸ್ಮಾರಕ ಮೋಳಕೇರಾ– 4ಎ 20ಗುಂ, ಸದಾನಂದ ಮಠ–11ಎ 26ಗುಂ, ಸಿದ್ದೇಶ್ವರ ಮಂದಿರ ಶಿವಪುರ –15 ಗುಂಟೆ, ಶಿವ ಮಂದಿರ ನಾರಾಯಣಪುರ– 13ಗುಂಟೆ, ತ್ರಿಪುರಾಂತಕೇಶ್ವರ ಮಂದಿರ– 1ಗುಂಟೆ, ತ್ರಿಪುರಾಂತ ಕೆರೆ– 264ಎ 30ಗುಂಟೆ, ರುದ್ರಮುನಿ ಗವಿ– 5ಗುಂಟೆ,

ಇವುಗಳಲ್ಲಿ ಮಡಿವಾಳ ಮಾಚಿದೇವರ ಹೊಂಡ 2ಗುಂಟೆಯಷ್ಟು ಅತಿಕ್ರಮಣವಾದರೆ ಅಕ್ಕನಾಗಮ್ಮನ ಗವಿ– 10 ಗುಂಟೆ, ಬಸವೇಶ್ವರ ಅರಿವಿನ ಮನೆ–2 ಎಕರೆ, ತ್ರಿಪುರಾಂತ ಕೆರೆ 17ಎ 03ಗುಂಟೆಯಷ್ಟು ಅತಿ ಕ್ರಮಣಕ್ಕೊಳ ಗಾಗಿದೆ ಎಂದು ತಿಳಿಸಲಾಗಿದೆ.

ಈ ರೀತಿ ಇನ್ನು ಮುಂದೆ ಯಾವುದೇ ಜಾಗದ ಅತಿಕ್ರಮಣವಾಗಬಾರದು ಎಂಬ ಉದ್ದೇಶದಿಂದ ಮಂಡಳಿ ವತಿಯಿಂದ ಮೊದಲು ಪ್ರತಿಯೊಂದು ಸ್ಮಾರಕದ ಸುತ್ತ ಆವರಣ ಗೋಡೆ ನಿರ್ಮಿಸಲು ಯೋಜಿಸಲಾಗಿದೆ.

ಪ್ರತಿಯೊಂದು ಸ್ಮಾರಕವನ್ನು ಚಾಲುಕ್ಯ ವಾಸ್ತುಶಿಲ್ಪ ಶೈಲಿಯಲ್ಲಿ ನವೀಕರಣಗೊಳಿಸಿ ಖಾಲಿ ಜಾಗದಲ್ಲಿ ಸುಂದರವಾದ ಉದ್ಯಾನವನ, ಉತ್ತಮವಾದ ಸಂಪರ್ಕ ರಸ್ತೆ ಸೌಲಭ್ಯ ಕಲ್ಪಿಸಿ ಸ್ಮಾರಕದ ಪ್ರದೇಶದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತದೆ.

ದಿನಾಂಕ 16-06-2006 ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಸಂಭ್ರಮದ ಇಟಗಾ ಶ್ರೀಗಳ ಜನ್ಮೋತ್ಸವ

**ವಿಕ ಸುದ್ದಿಲೋಕ**

**ಹುಮನಾಬಾದ್:** ಇಟಗಾ ಯೋಗಾ ಶ್ರಮದಲ್ಲಿ ಶುಕ್ರವಾರ ಪೀಠಾಧಿಪತಿ ಶ್ರೀ ಚನ್ನಮಲ್ಲೇಶ್ವರ ತ್ಯಾಗಿ ಶಿವಯೋಗಿಗಳ 56ನೇ ಜನ್ಮ ದಿನೋತ್ಸವ ಸಂಭ್ರಮದಿಂದ ಆಚರಿಸಲಾಯಿತು.

ಗ್ರಾಮದ ಮುತ್ತೈದೆಯರಿಂದ ಕುಂಭಮೇಳ ಹಾಗೂ ಪಾರ್ವತಿ ಪರಮೇಶ್ವರ ಕಲ್ಯಾಣೋತ್ಸವ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಬಸವಕಲ್ಯಾಣ ತ್ರಿಪುರಾಂತ ಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಭರತನೂರಿನ ಶ್ರೀ ಚಿಕ್ಕನಂಜೇಶ್ವರ ಸ್ವಾಮಿ ನೇತೃತ್ವ ವಹಿಸಿದ್ದರು.

ಸಾಕ್ಷರತಾ ಮಿಷನ್ ಮಾಜಿ ರಾಜ್ಯಾಧ್ಯಕ್ಷ ಬಿ.ನಾರಾಯಣರಾವ ಮಾತನಾಡಿ, ಶ್ರೀಗಳು ಸರಳ ಜೀವಿಗಳಾಗಿ ಧಾರ್ಮಿಕ ಸೇವೆಯಿಂದ ರಾಜ್ಯಾದ್ಯಂತ ಅಪಾರ ಭಕ್ತರನ್ನು ಹೊಂದಿದ್ದಾರೆ. ರಾಜ್ಯದಲ್ಲಿ ನಡೆದಿರುವ ರೈತರ ಆತ್ಮಹತ್ಯೆ ತಡೆಗಟ್ಟಲು ಎಲ್ಲಾ ಮಠಾಧೀಶರು ಧಾರ್ಮಿಕತೆಯೊಂದಿಗೆ ಅರಿವು ಮೂಡಿಸಿ ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪರಿಸರ ವಾಹಿನಿ ವತಿಯಿಂದ ನಡೆದ ಬಿಲ್ವಪತ್ರಿ, ಬನ್ನಿ ಮರಗಳ ಸಂರಕ್ಷಣೆ ಜಾಗೃತಿ ಕಾರ್ಯಕ್ರಮಕ್ಕೆ ಸಸಿ ವಿತರಿಸುವ ಮೂಲಕ ಶ್ರೀಗಳು ಚಾಲನೆ ನೀಡಿದರು.

ವಾಹಿನಿ ಅಧ್ಯಕ್ಷ ಶೈಲೇಂದ್ರ ಕಾವಡಿ ಮಾತನಾಡಿ, ಬಿಲ್ವಪತ್ರಿ ಗಿಡದ ಎಲೆಗಳು ಅನೇಕ ಔಷಧಿ ಗುಣ ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಇಂಥ ಗಿಡಗಳು ಕಣ್ಮರೆಯಾಗುತ್ತಿದ್ದು, ಇದನ್ನು ಉಳಿಸಿಕೊಂಡು ಹೋಗಲು ಪ್ರತಿಯೊಬ್ಬರು ಮುಂದಾಗಬೇಕು ಕರೆ ನೀಡಿದರು.

ಉದಗೀರ ಮಠದ ಅಡೆಪ್ಪ ಮಹಾರಾಜ ಅಧ್ಯಕ್ಷತೆ ವಹಿಸಿದ್ದರು. ಮಲ್ಲಯ್ಯ ಶಾಸ್ತ್ರಿಗಳಿಂದ ವಿಶೇಷ ಕೀರ್ತನೆ ನಡೆಯಿತು. ಸಿದ್ರಾಮಪ್ಪ ಗೋಬರವಾಡಿ ಸ್ವಾಗತಿಸಿದರು. ನೀಲಕಂಠ ವಂದಿಸಿದರು.

ದಿನಾಂಕ 29-06-2008 ವಿಜಯಕರ್ನಾಟಕ ದಿನಪತ್ರಿಕೆ

Scanned by CamScanner

# ಸಂಗೀತದಿಂದ ನೆಮ್ಮದಿ: ಶ್ರೀ

ಭಾನುವಾರ

**ವಿಕ ಸುದ್ದಿಲೋಕ** 24-2-2008

ಬಸವಕಲ್ಯಾಣ: ಸಂಗೀತದಿಂದ ಮಾನಸಿಕ ನೆಮ್ಮದಿ ಸಾಧ್ಯ. ಎಲ್ಲರೂ ಸಂಗೀತಾಸಕ್ತಿ ಬೆಳೆಸಿಕೊಳ್ಳಬೇಕು ಎಂದು ಬೇಲೂರನ ಶ್ರೀ ಗುರುಲಿಂಗ ಶಿವಾಚಾರ್ಯರು ಹೇಳಿದರು.

ಲಿಂ.ಶ್ರೀ ಸೋಮಶೇಖರಯ್ಯ ಸ್ವಾಮೀಜಿ 33ನೇ ಪುಣ್ಯ ಸ್ಮರಣೋತ್ಸವದ ನಿಮಿತ್ತ ಬಿರಾದಾರ ಬಡಾವಣೆಯ ರೇವಣಸಿದ್ಧಯ್ಯ ಮಠಪತಿಯವರ ನಿವಾಸದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಸಂಗೀತದಿಂದ ಎಲ್ಲರನ್ನೂ ಗೆಲ್ಲಬಹುದಾಗಿದ್ದು ಸಂಗೀತ ಕ್ಕೆ ತನ್ನದೇ ಆದ ಶಕ್ತಿ ಇದೆ ಎಂದರು.

ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರ ಮುನಿ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ರಾತ್ರಿಯಿಡಿ ಸಂಗೀತ ಕಾರ್ಯಕ್ರಮ ನಡೆಯಿತು. ಅಣವೀರಯ್ಯ ಬೆಳಕೊಟಾ, ವೀರಯ್ಯ ಸ್ವಾಮಿ ನಿಂಗದಳ್ಳಿ, ಅಮೃತೇಶ ಕಲಶೆಟ್ಟಿ, ಸುಭಾಶ ಕಲಖೋರಾ, ಮಲ್ಲಯ್ಯ ಸ್ವಾಮಿ ಡೋಗರಗಾಂವ, ನಾಗೇಂದ್ರಪ್ಪ ಪಾಟೀಲ್ಲ, ಗುರುಶಾಂತಯ್ಯ ಭೂಪನೂರ ಕಾರ್ಯಕ್ರಮ ನಡೆಸಿಕೊಟ್ಟರು.

ನಗರಸಭೆ ನೂತನ ಅಧ್ಯಕ್ಷ ರಾಜಕುಮಾರ ಸುಗರೆ, ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಗುರುನಾಥ ಲಾತೂರೆ , ಬಸವರಾಜ ವರಕಲೆಯ ವರನ್ನು ಸನ್ಮಾನಿಸಲಾಯಿತು. ಸ್ಮರಣೋತ್ಸವದ ಅಂಗ ವಾಗಿ ಅಮೃತಪ್ಪ ಕಲಶೆಟ್ಟಿ, ನಾಗೇಂದ್ರಪ್ಪ ಪಾಟೀಲ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗುರುಲಿಂಗಪ್ಪ ಭುಜುರ್ಕೆ ಸ್ವಾಗತಿಸಿದರು. ಬಸವಂತಪ್ಪ ಲವಾರೆ ವಂದಿಸಿದರು ವಿಶ್ವನಾಥ ಬಿರಾದಾರ ನಿರೂಪಿಸಿದರು.

ಮಲ್ಲಿಕಾರ್ಜುನ ನಂದಿ, ಶಾಂತವೀರಯ್ಯ ಸ್ವಾಮಿ ಇತರರಿದ್ದರು.

ದಿನಾಂಕ 24-2-2008 ಭಾನುವಾರ
ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

## 'ಜಂಗಮರು ಸಕಲ ವಿದ್ಯಾ ಪಾರಂಗತರಾಗಲಿ'

ಬಸವಕಲ್ಯಾಣ: ಜಂಗಮರು ದುಶ್ಚಟಗಳ ದಾಸರಾಗದೆ ಸಕಲ ವಿದ್ಯಾ ಪಾರಂಗತರಾಗಿ ಪಾಂಡಿತ್ಯವನ್ನು ಗಳಿಸಿಕೊಂಡು ಸಮಾಜದ ಗೌರವಕ್ಕೆ ಪಾತ್ರರಾಗಬೇಕು ಹಾಗೂ ಸಂಸ್ಕೃತಿ ಪರಂಪರೆಯ ರಕ್ಷಕರಾಗಬೇಕು ಎಂದು ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಕರೆ ಕೊಟ್ಟರು.

ಇಲ್ಲಿಯ ಬಸವೇಶ್ವರ ದೇವಸ್ಥಾನದಲ್ಲಿ ಭಾನುವಾರ ನಡೆದ ತಾಲ್ಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಜಂಗಮರೆಂದರೆ ಜೋಳಿಗೆ ಹಿಡಿದು ಬೇಡಿ ತಿನ್ನುವವರು ಎಂಬ ಭಾವನೆ ಜನರಲ್ಲಿ ಬೆಳೆದಿದೆ. ಇದಲ್ಲದೆ ಈಚೆಗೆ ಸಮಾಜದ ಯುವಕರು ದುಶ್ಚಟ, ದುರ್ಗುಣಗಳನ್ನು ಕಲಿತು ದಾರಿ ತಪ್ಪಿ ನಡೆಯುತ್ತಿರುವುದರಿಂದ ಈ ಸಮಾಜಕ್ಕೆ ಯಾರೂ ಬೆಲೆ ಕೊಡದಂತಾಗಿದೆ ಎಂದು ಖೇದದಿಂದ ಹೇಳಿದರು.

ಉದ್ಘಾಟನೆ ನೆರವೇರಿಸಿದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಸಮಾಜದಲ್ಲಿ ಒಗ್ಗಟ್ಟು ಅವಶ್ಯಕ ಎಂದರಲ್ಲದೆ ವೀರಶೈವ ಧರ್ಮ ಮತ್ತು ಪರಂಪರೆ ಬಗ್ಗೆ ವಿವರಿಸಿದರು. ಡಾ.ಬಸವರಾಜ ಸ್ವಾಮಿ ತ್ರಿಪುರಾಂತ ಅವರು ಮಾತನಾಡಿ ಸಮಾಜ ಹಿಂದುಳಿಯಲು ಸರ್ಕಾರದ ದಿವ್ಯ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದರು.

ಬಸವೇಶ್ವರ ದೇವಸ್ಥಾನ ಸಮಿತಿ ಮಾಜಿ ಅಧ್ಯಕ್ಷ ಸೋಮಶೇಖರ ವಸ್ತ್ರದ್, ಜಂಗಮ ಸಮಾಜದ ಜಿಲ್ಲಾಧ್ಯಕ್ಷ ರಾಚಯ್ಯ ಸ್ವಾಮಿ, ತಾಲ್ಲೂಕು ಅಧ್ಯಕ್ಷ ಪಂಚಾಕ್ಷರಿ ಹಿರೇಮಠ ಮಾತನಾಡಿದರು.

ಲಿಂಗಯ್ಯ ಸ್ವಾಮಿ ಬಸವನಮಠ, ಡಾ.ರಾಜಶೇಖರ ಸ್ವಾಮಿ, ನಾಗಯ್ಯ ಸ್ವಾಮಿ, ಬಕ್ಕಯ್ಯ ಸ್ವಾಮಿ ತ್ರಿಪುರಾಂತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಬಸವರಾಜ ದಿಂಡೆ, ಮಲ್ಲಿಕಾರ್ಜುನ ಕಾಡಾದಿ, ಸದಾನಂದ ಸ್ವಾಮಿ, ಬಸವರಾಜ ಮಠಪತಿ, ಸಂತೋಷ ಕಾಡಾದಿ, ಮುರುಘಯ್ಯ ಸ್ವಾಮಿ, ರೇವಣಸಿದ್ಧಯ್ಯ, ಮಲ್ಲಯ್ಯ ಗುಂಡೂರ್, ನೀಲಕಂಠಯ್ಯ, ಬಸವಲಿಂಗಪ್ಪ ಉಪಸ್ಥಿತರಿದ್ದರು. ಶಿವಕುಮಾರ 'ಎಸ್.ಮಠಪತಿ ಸ್ವಾಗತಿಸಿದರೆ ಶಿವಪುತ್ರ ಕಾಡಾದಿ ನಿರೂಪಿಸಿದರು. ಪ್ರಭುಲಿಂಗಯ್ಯ ಟೆಂಕಸಾಲಿಮಠ ವಂದಿಸಿದರು.

... ಅವರು ತಿಳಿಸಿದ್ದಾರೆ.

ಅಲೀಮ್ ಅಂಜುಮ್(ಅಧ್ಯಕ್ಷ) ರಾವಸಾಬ್ ಜಾಧವ (ಉಪಾಧ್ಯಕ್ಷ) ಮುರಲಿ ದಾದೆ (ಕಾರ್ಯದರ್ಶಿ) ವಿಷ್ಣುಕಾಂತ ಸೂರ್ಯವಂಶಿ (ಖಜಾಂಚಿ)

ಸಭೆ: ನಗರಸಭೆ ಚುನಾವಣೆ ಸಿದ್ಧತೆ ಬಗ್ಗೆ ಚರ್ಚಿಸಲು ಆ.8ರಂದು ಇಲ್ಲಿಯ ಹೌಸಿಂಗ್‌ಬೋರ್ಡ್ ಕಾಲೋನಿಯ ಡಾ.ಎಸ್. ಬಿ.ದುರ್ಗೆ ನಿವಾಸದಲ್ಲಿ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರ ಸಭೆ ಕರೆಯಲಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸಂಜೀವ ಗೋಡಬೋಲೆ ತಿಳಿಸಿದ್ದಾರೆ.

ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅಲ್ಲದೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಅವರು ಕೇಳಿಕೊಂಡಿದ್ದಾರೆ.

## ತಾಲ್ಲೂಕು ವಾರ್ತೆ



ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನದಲ್ಲಿ ಭಾನುವಾರ ನಡೆದ ಜಂಗಮ ಕ್ಷೇಮಾಭಿವೃದ್ಧಿ ಸಂಸ್ಥೆ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಕಾಣಬಹುದು.

5-08-2007 ಪ್ರಜಾವಾಣಿ ಪತ್ರಿಕೆ

Scanned by CamScanner

# ತ್ರಿಪುರಾಂತದಲ್ಲಿ ಶ್ರೀ ರೇಣುಕಾಚಾರ್ಯರ ಜಯಂತಿ

22-3-08 VIJay

ವಿಕ ಸುದ್ದಿಲೋಕ

ಬಸವಕಲ್ಯಾಣ: ತ್ರಿಪುರಾಂತ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ನಿಮಿತ್ತ ಬುಧವಾರ ಧಾರ್ಮಿಕ ಸಭೆ ನಡೆಯಿತು.

ಸಾನ್ನಿಧ್ಯ ವಹಿಸಿದ್ದ ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು ಧ್ವಜಾರೋಹಣ ನೆರವೇರಿಸಿದರು. ಅಧ್ಯಕ್ಷತೆ ವಹಿಸಿದ್ದ ಗಡಿಗೌಂಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಠದ ಇತಿಹಾಸ ವಿವರಿಸಿದರು. ಸಸ್ತಾಪೂರದ ಶ್ರೀ ಸದಾನಂದ ಅಪ್ಪಗಳು ಸಮ್ಮುಖ ವಹಿಸಿದ್ದರು. ನಗರಸಭೆ ಅಧ್ಯಕ್ಷ ರಾಜಕುಮಾರ ಸುಗರೆ, ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಪಿಎಸ್ಐ ಉದಯರವಿ, ಎಸ್ಎಸ್‌ಕೆಜಿ ನಿರ್ದೇಶಕ ಅಶೋಕಕುಮಾರ ಶ್ರೀವಾಸ್ತವ, ಈಶ್ವರ ಎಸ್., ಅಶೋಕ ಇಂಡಿ ಉಪಸ್ಥಿತರಿದ್ದರು.

ಡಾ.ಬಸವರಾಜ ಪ್ರಾಸ್ತಾವಿಕ ಮಾತನಾಡಿದರು. ಶರಣಪ್ಪ ಬಿರಾದಾರ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಅಮೃತೇಶ ಕಲಶೆಟ್ಟಿ, ವೀರಯ್ಯ ಸ್ವಾಮಿ, ರಾಜಕುಮಾರ ಮದಕಟ್ಟಿ, ಡಾಂಡೇಕರ್ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಮಠದ ಶಿಷ್ಯರನ್ನು ಸನ್ಮಾನಿಸಲಾಯಿತು.

ವೇದಮೂರ್ತಿ ಬಸವತೀರ್ಥಯ್ಯ ಕಡಾದೆ ಅವರಿಂದ ಬೆಳಗ್ಗೆ ರೇಣುಕಾಚಾರ್ಯರ ಮೂರ್ತಿ ಮತ್ತು ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ಜರುಗಿತು.

ವಿಕ ಚಿತ್ರಲೋಕ



ತ್ರಿಪುರಾಂತ ಮರಿದೇವರ ಗುಡ್ಡದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ಜರುಗಿತು. ಶ್ರೀ ಸದಾನಂದ ಅಪ್ಪಗಳು, ಗುರುಲಿಂಗ ಶ್ರೀ, ಅಭಿನವ ಘನಲಿಂಗ ರುದ್ರಮುನಿ ಶ್ರೀ, ಅಶೋಕಕುಮಾರ ಶ್ರೀವಾಸ್ತವ, ರಮೇಶ ರಾಜೋಳೆ ಇದ್ದರು.

ದಿನಾಂಕ 22-3-2008 ವಿಜಯಕರ್ನಾಟಕ ಪತ್ರಿಕೆ

# ಬಸವಕಲ್ಯಾಣ: ಇಂದು ಲಿಂಗದೀಕ್ಷೆ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಇಲ್ಲಿಯ ಮರಿದೇವರ ಗುಡ್ಡದಲ್ಲಿಯ ಘನಲಿಂಗ ರುದ್ರಮುನಿ ದೇವಸ್ಥಾನದಲ್ಲಿ ಆ.30ರಂದು ಅಭಿನವ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಲಿಂಗದೀಕ್ಷೆ ಮತ್ತು ಅಯ್ಯಾಚಾರ ಕಾರ್ಯಕ್ರಮ ನಡೆಯಲಿದೆ.

ಇದಲ್ಲದೆ ಅ.31ರಂದು ಶ್ರಾವಣ ಮಾಸದ ಸಮಾರೋಪ ಸಮಾರಂಭ ನಡೆಯುವುದು. ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಲಿದ್ದರೆ ಬೇಲೂರ ಗುರುಲಿಂಗ ಶಿವಾಚಾರ್ಯರು, ತಡೋಳಾ ರಾಜೇಶ್ವರ ಶಿವಾಚಾರ್ಯರು, ಸಸ್ತಾಪುರ ಈಶ್ವರಾನಂದ ಸ್ವಾಮಿಯವರು, ಶಾಸಕರಾದ ಬಸವರಾಜ ಪಾಟೀಲ ಅಟ್ಟೂರ್, ರಾಜಶೇಖರ ಪಾಟೀಲ ಹುಮನಾಬಾದ, ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ಎಂ.ಜಿ.ಮುಳೆ, ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟೆ ಪಾಲ್ಗೊಳ್ಳಲಿದ್ದಾರೆ.

ದಿನಾಂಕ 30-08-2008 ಪ್ರಜಾವಾಣಿ ಪತ್ರಿಕೆ

# ಶ್ರಾವಣ ಮಾಸದ ಮಂಗಲೋತ್ಸವ ನಾಳೆ

ಬಸವಕಲ್ಯಾಣ : ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶ್ರಾವಣ ಮಾಸದ ಮಂಗಲ ಮಹೋತ್ಸವ ಮತ್ತು ಶಾಸಕರ ಸನ್ಮಾನ ಹಾಗೂ ಧಾರ್ಮಿಕ ಸಮಾರಂಭ ಭಾನುವಾರ ಬೆಳಗ್ಗೆ 11ಕ್ಕೆ ಜರುಗಲಿದೆ.

ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು ಸಾನ್ನಿಧ್ಯ, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಅಧ್ಯಕ್ಷತೆ, ಗವಿಮಠದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಸಸ್ತಾಪುರದ ಶ್ರೀ ಈಶ್ವರಾನಂದ ಸ್ವಾಮಿಗಳು ಸಮ್ಮುಖ ವಹಿಸುವರು.

ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್, ರಾಜಶೇಖರ ಪಾಟೀಲ್ ಹುಮನಾಬಾದ್, ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ಎಂ.ಜಿ.ಮುಳೆ, ಪ್ರಮುಖರಾದ ರಾಜು ಸುಗರೆ, ಆರ್‌ಟಿಓ ಸಂಜಯ ವಾಡೇಕರ್, ಐ.ಎಂ.ಬಿರಾದಾರ, ಪಿಎಸ್ಐ ಉದಯರವಿ, ಈಶ್ವರ ಪರಿಟ್, ಅಶೋಕಕುಮಾರ ಶ್ರೀವಾಸ್ತವ, ರವಿ ಚಂದನಕೆರೆ, ಸುನೀಲ ಪಾಟೀಲ್ ಭಾಗವಹಿಸುವರು.

ದಿನಾಂಕ 30-08-2008 ವಿಜಯಕರ್ನಾಟಕ ಪತ್ರಿಕೆ

Scanned by CamScanner

17/1/07

# 'ಶರಣರ ಮಾರ್ಗದಲ್ಲಿ ನಡೆದರೆ ಶಾಂತಿಯ ಬದುಕು'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಮಡಿವಾಳ ಮಾಚಿದೇವರ ಜಾತ್ರೆ ನಿಮಿತ್ತವಾಗಿ ನಡೆದ ಧರ್ಮ ಸಭೆಯಲ್ಲಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ದೇವರು, ಪುರಸಭೆ ಅಧ್ಯಕ್ಷೆ ಧೋಂಡುಬಾಯಿ ತ್ರಿಮುಖೆ, ತುಕಾರಾಮ ಮಲ್ಲಪ್ಪ, ಸಂಜೀವ ಕಾಳೇಕರ್, ಸಾಯಬಣ್ಣ ಮಡಿವಾಳ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬಸವಕಲ್ಯಾಣ: 12ನೇ ಶತಮಾನದ ಬಸವಾದಿ ಶರಣರ ತತ್ವಗಳನ್ನು ಅನುಸರಿಸಿದರೆ ಮನುಷ್ಯನಿಗೆ ಶಾಂತಿ ಸಮಾಧಾನದ ಬದುಕು ಸಾಧ್ಯ ಎಂದು ಶಾಸಕ ಮಲ್ಲಿಕಾರ್ಜುನ ಖೂಬಾ ಅವರು ಅಭಿಪ್ರಾಯಪಟ್ಟರು.

ಪಟ್ಟಣದ ತ್ರಿಪುರಾಂತದಲ್ಲಿ ಶರಣ ಮಡಿವಾಳ ಮಾಚಿದೇವರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಧರ್ಮ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಾಚಿದೇವರ ಸ್ಮಾರಕ ಜೀರ್ಣೋದ್ಧಾರಕ್ಕೆ ದೇಣಿಗೆ ಕೊಡುವುದಾಗಿ ಘೋಷಿಸಿದ ಅವರು ತ್ರಿಪುರಾಂತದಲ್ಲಿಯ ಎಲ್ಲ ರಸ್ತೆಗಳಿಗೆ ಸಿಮೆಂಟ್ ಹಾಕಿಸುವ ಯೋಜನೆ ಹಾಕಿಕೊಳ್ಳಲಾಗಿದ್ದು ಕೆಲವು ರಸ್ತೆಗಳ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ ಎಂದರು.

ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ದೇವರು ನೇತೃತ್ವ ವಹಿಸಿದ್ದರು. ಪುರಸಭೆ ಅಧ್ಯಕ್ಷೆ ಧೊಂಡುಬಾಯಿ ತ್ರಿಮುಖೆ, ಉಪಾಧ್ಯಕ್ಷ ಸಂಜಯ ಶ್ರೀವಾಸ್ತವ, ಮಾಜಿ ತಾಪಂ ಅಧ್ಯಕ್ಷ ತುಕಾರಾಮ ಮಲ್ಲಪ್ಪ, ಜಿಪಂ ಸದಸ್ಯ ಸಂಜೀವ ಕಾಳೇಕರ್, ಉಪ ತಹಸೀಲ್ದಾರ ಸಾಯಬಣ್ಣ ಮಡಿವಾಳ, ಮಾಣಿಕಪ್ಪ ಮುಚಳಂಬೆ, ಸಿಪಿಐ ಎಚ್.ಎನ್. ಪಾಟೀಲ, ಬಸವಲಿಂಗಪ್ಪ ರಾಜೋಳೆ, ರಾಜೀವ ಹೊಸಮನಿ, ಶಿವಬಸಪ್ಪ ಚನ್ನಮಲ್ಲೆ, ವಿಜಯಕುಮಾರ ಮಡಿವಾಳ ಮುಂತಾದವರು ಪಾಲ್ಗೊಂಡಿದ್ದರು. ಸಮಾರಂಭದ ನಂತರ ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಿತಲ್ಲದೆ ಅಗ್ಗಿ ತುಳಿಯುವ ಕಾರ್ಯಕ್ರಮ ನಡೆಯಿತು. ಜಾತ್ರೆ ನಿಮಿತ್ತವಾಗಿ ಅತ್ತಿಗೆಗೆ ಬಂದ ಸಂಕಟ ಎಂಬ ಸಾಮಾಜಿಕ ನಾಟಕ ಪ್ರದರ್ಶಿಸ ಲಾಯಿತು.

17-1-2007 ಪ್ರಜಾವಾಣಿ ಪತ್ರಿಕೆ

# ಚಾಂಗ್ಲೇರಾದಲ್ಲಿ ರಥೋತ್ಸವ

ವಿಕ ಸುದ್ದಿಲೋಕ

21-11-07 ಬುಧವಾರ

ಹುಮನಾಬಾದ್: ತಾಲೂಕಿನ ಚಾಂಗ್ಲೇರಾದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರೆ ನಿಮಿತ್ಯ ಬುಧವಾರ ಸಂಜೆ 6ಕ್ಕೆ ರಥೋತ್ಸವ ಜರುಗಲಿದೆ.

ಜೆಡಿಎಸ್ ರಾಜ್ಯಾಧ್ಯಕ್ಷ ಮಿರಾಜುದ್ದೀನ್ ಪಟೇಲ್ ರಥೋತ್ಸವಕ್ಕೆ ಚಾಲನೆ ನೀಡುವರು. ಮಾಜಿ ಸಚಿವ ಬಸವರಾಜ ಪಾಟೀಲ್ ಹುಮನಾಬಾದ್ ಅಧ್ಯಕ್ಷತೆ ವಹಿಸುವರು. ತ್ರಿಪುರಾಂತ ಹಿರೇಮಠದ ಶ್ರೀ ಘನಲಿಂಗ ಶಿವಾಚಾರ್ಯ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಗುರುಲಿಂಗ ಶಿವಾಚಾರ್ಯರು ನೇತೃತ್ವ, ಚನ್ನಮಲ್ಲೇಶ್ವರ ತ್ಯಾಗಿ ಸಮ್ಮುಖ ವಹಿಸುವರು.

ಜಿಲ್ಲಾಧಿಕಾರಿ ಹರ್ಷ ಗುಪ್ತ, ಮಾಜಿ ಶಾಸಕರಾದ ಸುಭಾಷ ಕಲ್ಲೂರ, ರಾಜಶೇಖರ ಪಾಟೀಲ್, ಜಿ.ಪಂ. ಅಧ್ಯಕ್ಷೆ ಜಯಶೀಲಾರೆಡ್ಡಿ, ಉಪಾಧ್ಯಕ್ಷ ರಾಜಶೇಖರ ಪಾಟೀಲ್, ಗ್ರಾ.ಪಂ. ಅಧ್ಯಕ್ಷ ಮಹಾಂತಯ್ಯ ತೀರ್ಥ ಪಾಲ್ಗೊಳ್ಳುವರು.

21-11-2007 ಬುಧುವಾರ ವಿಜಯ ಕರ್ನಾಟಕ

Scanned by CamScanner



ಬಸವಕಲ್ಯಾಣದ ತ್ರಿಪುರಾಂತದಲ್ಲಿರುವ ಘನಲಿಂಗ ರುದ್ರಮುನಿ ಗವಿಮಠ ಹತ್ತಿರದ ಪಂಚಸೂತ್ರ ಗವಿಯ ಮುಂದೆ ನಂದಿ ವಿಗ್ರಹ ಅನಾವರಣಗೊಳಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗುರುಲಿಂಗಯ್ಯಸ್ವಾಮಿ, ವೇ.ಕಾಶೀನಾಥ ಸ್ವಾಮಿ, ಸಿದ್ರಾಮ ಬಿರಾದಾರ ಇದ್ದರು. 28/5/06

ದಿನಾಂಕ 28-5-2006 ಪ್ರಜಾವಾಣಿ ಪತ್ರಿಕೆ

ಗುಲ್ಬರ್ಗ

## ರಂಭಾಪುರಿ ಜಗದ್ಗುರು ಪ್ರವಾಸ

ಬಾಳೆ ಹೊನ್ನೂರಿನ ಶ್ರೀಮದ್ ರಂಭಾಪುರಿ ಜಗದ್ಗುರು ಮಾ.23ರಂದು ಬೆಳಗ್ಗೆ 9ಕ್ಕೆ ಹೈಕ ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆವ 25ನೇ ವಾರ್ಷಿಕೋತ್ಸವ ಸಮಾರಂಭಕ್ಕೆ ಆಗಮಿಸಲಿದ್ದಾರೆ. ಅದೇ ದಿನ ಸ್ಟೇಷನ್ ಬಬಲಾದ್‌ನಲ್ಲಿ ನಡೆವ ಲಿಂ.ಸಿದ್ದಲಿಂಗ ಶಿವಯೋಗಿಗಳ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಧ್ಯಾಹ್ನ 4ಕ್ಕೆ ಅಫಜಲಪುರ ತಾಲೂಕಿನ ಇಂಚಗೇರಿ ಬ್ರಹನ್ಮಠದಲ್ಲಿ ಗುರುಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 7ಕ್ಕೆ ಇಲ್ಲಿನ ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ರೇಣುಕಾ ಜಯಂತಿ, 25ರಂದು ಬಸವಕಲ್ಯಾಣದಲ್ಲಿ ಮರಿದೇವರ ಗುಡ್ಡದ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಿದ್ರಾಮಪ್ಪ ಆಲಗೂಡಕರ್ ತಿಳಿಸಿದ್ದಾರೆ.

Date 16-3-2010
ಮಂಗಳವಾರ
ವಿಜಯಕರ್ನಾಟಕ
ದಿನಪತ್ರಿಕೆ.

ಸಂಜೆವಾಣಿ 17/01/07



ಬಸವಕಲ್ಯಾಣ: ತ್ರಿಪೂರಾಂತ ಬಡಾವಣೆಯಲ್ಲಿ ಶ್ರೀ ಮಡಿವಾಳ ಮಾಚಿದೇವರ ಜಾತ್ರೆಯಲ್ಲಿ ಶಾಸಕ ಮಲ್ಲಿಕಾರ್ಜುನ ಖೂಬಾ ಹಾಗೂ ಶ್ರೀನಿವಾಸವ ಮತ್ತು ದೇವಸ್ಥಾನದ ಭಕ್ತ ಮಂಡಳಿ ಜನಸಾಗರ ಸೇರಿದಂತೆ ಬೆಳಿಗ್ಗೆ ಡೊಳ್ಳು ವಾದ್ಯ ಮುಂತಾದ ಪಲ್ಲಕಿ ಮೆರವಣಿಗೆಯಲ್ಲಿ ನಡೆಯಿತು. ಮತ್ತು ತ್ರಿಪುರಾಂತ ಕೆರೆಯಲ್ಲಿ ಅಗ್ನಿ ತುಳಿಯಲಾಯಿತು. ಸಾವಿರಾರು ಮಹಿಳೆಯರು ಮಕ್ಕಳು ಮತ್ತು ವಿಧದ ಭಾಗಗಳಿಂದ ಜನರು ಸೇರಿದರು. ಘನಲಿಂಗ ರುದ್ರಮಣಿ ಶಿವಾಚಾರ್ಯ ಸ್ವಾಮಿ ಸೇರಿದರು.

17-01-2007 ಸಂಜೆವಾಣಿ ಪತ್ರಿಕೆ

Scanned by CamScanner

# ಕೊರೆಯುವ ಚಳಿಯಲ್ಲೂ ಸಂಭ್ರಮದ ವೀರಭದ್ರೇಶ್ವರ ರಥೋತ್ಸವ

23-11-07

**ವಿಕ ಸುದ್ದಿಲೋಕ**

ಹುಮನಾಬಾದ್: ತಾಲೂಕಿನ ಚಾಂಗಲೇರಾ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವರ ರಥೋತ್ಸವವು ಬುಧವಾರ ಮಧ್ಯರಾತ್ರಿ ಅಪಾರ ಜನಸ್ತೋಮದ ನಡುವೆ ಕೊರೆಯುವ ಚಳಿಯಲ್ಲಿಯೂ ಅತ್ಯಂತ ಸಡಗರ -ಸಂಭ್ರಮ, ಶ್ರದ್ಧಾ ಭಕ್ತಿಯಿಂದ ಜರುಗಿತು.

ಸಂಜೆ ಆರಂಭಗೊಂಡ ಪಲ್ಲಕ್ಕಿ ಮೆರವಣಿಗೆ ಮಧ್ಯರಾತ್ರಿ ಥೇರ್ ಮೈದಾನಕ್ಕೆ ತಲುಪಿತು. ನಂತರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ವಿಶೇಷ ಪುರಂತರ ಸೇವೆ, ಕಲಗಿ ತೂರಾಯಿ, ಭಜನೆ, ಡೊಳ್ಳು ಕುಣಿತ, ನವಿಲು ಕುಣಿತ, ಮಹಾರಾಷ್ಟ್ರದ ವಿಶೇಷ ಬ್ಯಾಂಡ್ ಪ್ರದರ್ಶನ , ಜನಪದ ತಂಡ, ಶಾಲಾ ಮಕ್ಕಳ ಲೇಜಿಮ ಪ್ರದರ್ಶನ ಅತ್ಯಂತ ಆಕರ್ಷಣೆಯವಾಗಿದ್ದವು.

ಅಲ್ಲದೆ, ಬಣ್ಣ-ಬಣ್ಣದ ಪಟಾಕಿಗಳು ಸಹ ಉತ್ಸವದಲ್ಲಿ ಪಾಲ್ಗೊಂಡು ಭಕ್ತರ ಮನ ಸೂರೆಗೊಂಡವು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಬಣ್ಣದ ಬಣ್ಣದ ಹೂವುಗಳಿಂದ ಹಾಗೂ ವಿದ್ಯುತ್ ದೀಪದಿಂದ ಅಲಂಕೃತಗೊಂಡಿದ್ದ ರಥ ಭಕ್ತರ ಕಣ್ಮನ ಸೆಳೆಯಿತು. ರಾಜ್ಯ ಸೇರಿದಂತೆ ಆಂಧ್ರ, ಮಹಾರಾಷ್ಟ್ರದ ಅಪಾರ ಭಕ್ತರು ಪಾಲ್ಗೊಂಡಿದ್ದರು. ಆರಂಭದಲ್ಲಿ ದೇವಸ್ಥಾನದಲ್ಲಿ ನಡೆದ ರಥೋತ್ಸವ ಕಾರ್ಯಕ್ರಮವನ್ನು ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಶಾಸಕ ಮೆರಾಜುದ್ದೀನ್ ಪಟೇಲ್ ಉದ್ಘಾಟಿಸಿದರು.

ಸಾನ್ನಿಧ್ಯ ತ್ರಿಪೂರಾಂತ ಒರೇಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಮ್ಮುಖ ಇಟಗಾ ಯೋಗಾಶ್ರಮದ ಶ್ರೀ ಚನ್ನಮಲ್ಲೇಶ್ವರ ತ್ಯಾಗಿ ವಹಿಸಿದ್ದರು. ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಜಯಶೀಲಾರೆಡ್ಡಿ, ಹೆಚ್ಚುವರಿ ಪೊಲೀಸ ವರಿಷ್ಠಾಧಿಕಾರಿ ಜಿ.ಎಂ. ಯಾತನೂರ, ಸಿಪಿಐ ಡಾ. ಗಿರೀಶ ಭೋಜಣ್ಣನವರ್, ತಹಸೀಲ್ದಾರ ಹಾಗೂ ದೇವಸ್ಥಾನ ಸಮಿತಿ ಅಧ್ಯಕ್ಷ ಡಿ.ಪಿ. ಪ್ರಾಣೇಶಕುಮಾರ, ಪರಿಸರ ವಾಹಿನಿ ಅಧ್ಯಕ್ಷ ಶೈಲೇಂದ್ರ ಕಾವಡಿ, ಗಣ್ಯರಾದ ರೇವಣಸಿದ್ದಯ್ಯಾ ಪೂಜಾರಿ, ರಾಜಶೇಖರ ಮಳ್ಳಿ ಉಪಸ್ಥಿತರಿದ್ದರು. ರವಿ ಘಾರೇಲ ಸ್ವಾಗತಿಸಿದರು. ಶಿವಕುಮಾರ ಸಾಲಿ ನಿರೂಪಿಸಿದರು.

ಜುನಾ



**ಚಳಿಯಲ್ಲೂ ಭಕ್ತಿಯ ಪರಾಕಾಷ್ಠೆ**

**ಹುಮನಾಬಾದ್ ತಾಲೂಕಿನ ಚಾಂಗಲೇರಾದಲ್ಲಿ ಬುಧವಾರ ಮಧ್ಯರಾತ್ರಿ ಅಪಾರ ಭಕ್ತ ಸಮೂಹದ ನಡುವೆ ಅದ್ದೂರಿ ರಥೋತ್ಸವ ಜರುಗಿತು.**

ದಿನಾಂಕ 23-11-2007 ವಿಜಯಕರ್ನಾಟಕ ಪತ್ರಿಕೆ

Scanned by CamScanner

# ಶಿವಪುರದಲ್ಲಿ ಅನುಷ್ಠಾನ ಮಂಗಲ

ಬಾನುವಾರ 5/8/07

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ತಾಲ್ಲೂಕಿನ ಶಿವಪುರದ ಸಿದ್ಧಲಿಂಗೇಶ್ವರ ಕಮರಿ ಮಠದಲ್ಲಿ ಶರಣೆ ಬಸಮ್ಮತಾಯಿಯವರು ಕಳೆದ 21 ದಿನಗಳಿಂದ ನಡೆಸಿದ ಅನುಷ್ಠಾನ ಹಾಗೂ ಭಾಗ್ಯವಂತಿದೇವಿ ಪುರಾಣ ಕಾರ್ಯಕ್ರಮದ ಸಮಾರೋಪ ಸಮಾರಂಭ ಶನಿವಾರ ನಡೆಯಿತು.

ಬಂಥನಾಳ ವೃಷಭಲಿಂಗ ಸ್ವಾಮಿಗಳು, ಬೇಲೂರ ಗುರುಲಿಂಗ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ದೇವರು, ವಿರೂಪಾಕ್ಷ ಶಿವಾಚಾರ್ಯರು ಹುಡಗಿ ನೇತೃತ್ವ ವಹಿಸಿದ್ದರು. ಮಾಜಿ ಶಾಸಕ ಎಂ.ಜಿ.ಮುಳೆ ಉದ್ಘಾಟನೆಯನ್ನು ನೆರವೇರಿಸಿದರು.

ಶಾಸಕ ಮಲ್ಲಿಕಾರ್ಜುನ ಖೂಬಾ, ತಹಸೀಲ್ದಾರ ಡಿ.ವೈ.ಪಾಟೀಲ, ತಾಪಂ ಸದಸ್ಯೆ ಮಹಾನಂದಾ ಕನಕಟ್ಟೆ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಿದ್ಧಯ್ಯ ಸ್ವಾಮಿ, ಸಿದ್ರಾಮ ಧುಮ್ಮನಸೂರೆ, ಶಿವರಾಜ ರಾಜೋಳೆ, ಉಮಾಕಾಂತ ಬಿರಾದಾರ, ಬಸವರಾಜ ಪಾಟೀಲ, ಕವಿರಾಜ ಕಿಣಗಿ, ಬಾಬುರಡ್ಡಿ, ಬಾಬುರಾವ ಧುಮಾಳ, ವೀರಣ್ಣ ಮೋಳಕೇರಿ, ತಿಪ್ಪಣ್ಣ ಮೇತ್ರೆ, ನಾಗಪ್ಪ ಪೆದ್ದೆ, ದತ್ತು ಗೋಕುಳೆ, ಮಲ್ಲಪ್ಪ ಕೋಟೆ, ವಿಶ್ವನಾಥ ಮೂಲಗೆ ಮುಂತಾದವರು ಉಪಸ್ಥಿತರಿದ್ದರು.

21 ದಿನಗಳ ಕಾಲ ಪುರಾಣ ಹೇಳಿದ ಶರಣೆ ಲಲ್ಲೇಶ್ವರಿ ಅಮ್ಮನವರನ್ನು ಈ ಸಂದರ್ಭದಲ್ಲಿ ಸತ್ಕರಿಸಲಾಯಿತು. ಶಂಕರರಾವ ಜಮಾದಾರ ಸ್ವಾಗತಿಸಿದರೆ ರಮೇಶ ರಾಜೋಳೆ ನಿರೂಪಿಸಿದರು.

5-08-2007 ಪ್ರಜಾವಾಣಿ ಪತ್ರಿಕೆ

# ಜಂಗಮ ಸಮಾಜ ಕಚೇರಿ ಆರಂಭ

[illegible] 6/8/07

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿಯ ಬಸವೇಶ್ವರ ದೇವಸ್ಥಾನ ಸಮೀಪದ ಬಸವನಮಠ ಕಾಂಪ್ಲೇಕ್ಸ್‌ನಲ್ಲಿ ತಾಲ್ಲೂಕು ಜಂಗಮ ಸಮಾಜ ಸಂಘದ ಕಚೇರಿ ಉದ್ಘಾಟನಾ ಸಮಾರಂಭ ಭಾನುವಾರ ಅದ್ದೂರಿಯಾಗಿ ನಡೆಯಿತು.

ತ್ರಿಪುರಾಂತ ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟನೆಯನ್ನು ನೆರವೇರಿಸಿದರು.

ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು, ಜಂಗಮ ಕ್ಷೇಮಾಭಿವೃದ್ಧಿ ಸಂಸ್ಥೆ ಜಿಲ್ಲಾಧ್ಯಕ್ಷ ರಾಚಯ್ಯ ಸ್ವಾಮಿ ಧನಾಶ್ರೀ, ತಾಲ್ಲೂಕು ಅಧ್ಯಕ್ಷ ಪಂಚಾಕ್ಷರಿ ಹಿರೇಮಠ, ಲಿಂಗಯ್ಯಸ್ವಾಮಿ ಬಸವನಮಠ, ಬಕ್ಕಯ್ಯ ಸ್ವಾಮಿ ತ್ರಿಪುರಾಂತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಶಿವಪುತ್ರ ಕಾಡಾದಿ, ಶಿವಕುಮಾರ ಮಠಪತಿ, ಪ್ರಭುಲಿಂಗಯ್ಯ ಟೆಂಕಸಾಲಿಮಠ, ಸಂತೋಷ ಕಾಡಾದಿ, ಬಸವರಾಜ ವರವಟ್ಟಿ, ಡಾ.ಬಸವರಾಜ ಸ್ವಾಮಿ, ಡಾ.ರಾಜಶೇಖರ ಸ್ವಾಮಿ, ಮುರುಘಯ್ಯ ಸ್ವಾಮಿ, ಬಸವಲಿಂಗಯ್ಯ ಮುಂತಾದವರು ಉಪಸ್ಥಿತರಿದ್ದರು.

6-8-2007 ಪ್ರಜಾವಾಣಿ

# ಇಂದು ಮಾಸಿಕ ಧರ್ಮಸಭೆ

ಬಸವಕಲ್ಯಾಣ: ತ್ರಿಪೂರಾಂತದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠ (ಮರಿದೇವರ ಗುಡ್ಡ)ದಲ್ಲಿ ಅಮವಾಸ್ಯೆ ನಿಮಿತ್ತ ಮಂಗಳವಾರ ಸಂಜೆ 5ಕ್ಕೆ ಮಾಸಿಕ ಧರ್ಮಸಭೆ ಜರುಗಲಿದೆ. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಂಕಲ್ಪದಂತೆ ಪ್ರತಿ ಅಮವಾಸ್ಯೆಗೆ ಧರ್ಮಸಭೆ ಆಯೋಜಿಸಲಾಗುತ್ತಿದೆ. ಮಂಗಳವಾರದ ಸಭೆಯಲ್ಲಿ ಸಾಹಿತಿಗಳು, ಶಿವಾಚಾರ್ಯರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

3-06-2008 ವಿಜಯಕರ್ನಾಟಕ ಪತ್ರಿಕೆ

Scanned by CamScanner

# ‘ಮನೆಯಿಂದಲೇ ಸುಧಾರಣೆಯಾಗಬೇಕು’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ದೇಶ ಸುಧಾರಿ ಸಬೇಕಾದರೆ ಆ ಕಾರ್ಯ ಮೊದಲು ಪ್ರತಿಯೊಬ್ಬರ ಮನೆಯಿಂದ ಆರಂಭ ಹಾಗಬೇಕು ಎಂದು ಇಲ್ಲಿಯ ಸಿಪಿಐ ಪ್ರಕಾಶ ಮುರುಗೋಡ್ ಅಭಿಪ್ರಾಯ ಪಟ್ಟರು.

ಇಲ್ಲಿಯ ಎಸ್.ಎಸ್. ಖೂಬಾ ಮಹಾ ವಿದ್ಯಾಲಯದಲ್ಲಿ ಭಾನುವಾರ ಎನ್ಎಸ್ಎಸ್ ಘಟಕದ ವಾರ್ಷಿಕ ಶಿಬಿರ ವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ.ಅಶೋಕಕುಮಾರ ಶ್ರೀವಾಸ್ತವ, ಅನುಭವ ಮಂಟಪ ಉಪಾಧ್ಯಕ್ಷ ವೈಜನಾಥ ಕಾಮಶೆಟ್ಟಿ, ಬಸವೇಶ್ವರ ದೇವಸ್ಥಾನ ಮಾಜಿ ಅಧ್ಯಕ್ಷ ಬಸವರಾಜ ತೊಂಡಾರೆ, ಸಿ.ಬಿ.ಪ್ರತಾಪುರೆ ಮಾತನಾಡಿದರು. ಎಸ್.ಜಿ.ಕರ್ಣೆ ಸ್ವಾಗತಿಸಿದರೆ ವೆಂಕಣ್ಣ ದೊಣ್ಣೆಗೌಡ ನಿರೂಪಿಸಿದರು. ಡಿ.ಎಸ್.ಪಾಟೀಲ ವಂದಿಸಿದರು.



ಬಸವಕಲ್ಯಾಣದ ಎಸ್.ಎಸ್.ಖೂಬಾ ಕಾಲೇಜಿನಲ್ಲಿ ಭಾನುವಾರ ಸಿಪಿಐ ಪ್ರಕಾಶ ಮುರುಗೋಡ್ ಸಸಿ ನೆಟ್ಟು ಎನ್ಎಸ್ಎಸ್ ಶಿಬಿರ ಉದ್ಘಾಟಿಸಿದರು. ಪ್ರಾಚಾರ್ಯ ಎಸ್.ಜಿ. ಕರ್ಣೆ, ಅಶೋಕಕುಮಾರ ಶ್ರೀವಾಸ್ತವ ಚಿತ್ರದಲ್ಲಿದ್ದಾರೆ.

ಪ್ರಜಾವಾಣಿ ಪತ್ರಿಕೆ

19-3-08 ವಿಜಯ ಕರ್ನಾಟಕ

# ರೇಣುಕಾಚಾರ್ಯರ ಜಯಂತಿ ಇಂದು

ವಿಕ ಸುದ್ದಿ ಲೋಕ

ಬಸವಕಲ್ಯಾಣ: ತ್ರಿಪೂರಾಂತದ ಮರಿದೇವರ ಗುಡ್ಡದಲ್ಲಿಯ ಶ್ರೀ ಘನಲಿಂಗ ರುದ್ರಮುನಿ ಗವಿ ಮಠದಲ್ಲಿ ಬುಧವಾರ ಬೆಳಿಗ್ಗೆ 11ಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ನಿಮಿತ್ತ ಧಾರ್ಮಿಕ ಸಭೆ ಜರುಗಲಿದೆ.

ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು ಸಾನಿಧ್ಯ, ಗಡಿಗೌಂಡಗಾಂವ ಶ್ರೀ ಶಾಂತವೀರ ಶಿವಾಚಾರ್ಯರು ಅಧ್ಯಕ್ಷತೆ, ಸಸ್ತಾಪೂರನ ಶ್ರೀ ಸದಾನಂದ ಅಪ್ಪ ಅವರು ಸಮ್ಮುಖ, ತ್ರಿಪೂರಾಂತ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು.

ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ಎಂ.ಜಿ.ಮುಳೆ, ಮಾಜಿ ಸಚಿವ ಬಸವರಾಜ ಪಾಟೀಲ್ ಅಟ್ಟೂರ, ತಹಸೀಲ್ದಾರ್ ಡಿ.ವೈ. ಪಾಟೀಲ್, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಅನೀಲ ಬಿರಾದಾರ, ಬಿಜೆಪಿ ಯುವ ಮುಖಂಡ ಸುನೀಲ ಪಾಟೀಲ್, ನಗರಸಭೆ ಅಧ್ಯಕ್ಷ ರಾಜು ಸುಗರೆ, ಈಶ್ವರ ಎನ್, ಸಿದ್ರಾಮ ಗುದಗೆ, ಪಿಎಸ್ಐ ಉದಯ ರವಿ, ಎಸ್ಎಸ್ಕೆಬಿ ನಿರ್ದೇಶಕ ಅಶೋಕ ಕುಮಾರ ಶ್ರೀವಾಸ್ತವ, ಎಸ್‌ಬಿಎಚ್ ವ್ಯವಸ್ಥಾಪಕ ಆರ್.ಜಿ.ಹೆಬ್ಬಾಳಕರ್, ಅಶೋಕ ಇಂಡಿ ಭಾಗವಹಿಸುವರು.

# ಇಂದು ಜಯಂತಿ

ಬಸವಕಲ್ಯಾಣ: ಇಲ್ಲಿಯ ಮರಿದೇವರ ಗುಡ್ಡದ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಮಾರ್ಚ್ 19ರಂದು ಬೆಳಿಗ್ಗೆ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ಸಮಾರಂಭ ನಡೆಯಲಿದೆ.

ಬೇಲೂರ ಹಿರೇತನ ಮಠದ ಗುರುಲಿಂಗ ಶಿವಾಚಾರ್ಯರ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗಡಿಗೌಂಡಗಾಂವ ಶಾಂತವೀರ ಶಿವಾಚಾರ್ಯರು, ಸಸ್ತಾಪುರ ಸದಾನಂದ ಅಪ್ಪಗಳು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮಾಜಿ ಸಚಿವ ಬಸವರಾಜ ಪಾಟೀಲ ಅಟ್ಟೂರ್, ಎಂ.ಜಿ.ಮುಳೆ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಲಾಗಿದೆ.

19-3-08 ಪ್ರಜಾವಾಣಿ

19-3-2008 ಪ್ರಜಾವಾಣಿ ಪತ್ರಿಕೆ

19-3-2008 ವಿಜಯ ಕರ್ನಾಟಕ ಪತ್ರಿಕೆ

Scanned by CamScanner

23-3-08 ಪ್ರಜಾವಾಣಿ



ಬಸವಕಲ್ಯಾಣದ ಘನಲಿಂಗ ರುದ್ರಮುನಿ ದೇವಸ್ಥಾನದಲ್ಲಿ ಈಚೆಗೆ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಗುರುಲಿಂಗ ಶಿವಾಚಾರ್ಯರು ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮುಂತಾದವರು ಇದ್ದರು.

# ನಾಮಕರಣಕ್ಕೆ ಆಗ್ರಹ

**ಬಸವಕಲ್ಯಾಣ:** ಇಲ್ಲಿಯ ಪ್ರಸಿದ್ಧ ತ್ರಿಪುರಾಂತ ಕೆರೆಗೆ ಅದರ ನಿರ್ಮಾತೃಗಳಾದ ಹಾಗೂ ರೇಣುಕಾಚಾರ್ಯರ ಸದ್ ಸಂಪ್ರದಾಯವನ್ನು ಮುಂದುವರೆಸಿದ ಜಗದ್ಗುರು ರೇವಣಸಿದ್ಧರ ನಾಮಕರಣ ಮಾಡಬೇಕು ಎಂದು ಬೇಲೂರ ಗುರುಲಿಂಗ ಶಿವಾಚಾರ್ಯರು ಆಗ್ರಹಿಸಿದ್ದಾರೆ.

ಇಲ್ಲಿಯ ಘನಲಿಂಗ ರುದ್ರಮುನಿ ದೇವಸ್ಥಾನದಲ್ಲಿ ಈಚೆಗೆ ಹಮ್ಮಿಕೊಂಡ ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೇತೃತ್ವ ವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ವೀರಶೈವ ತತ್ವ ಸಿದ್ಧಾಂತ ಪಾಲಿಸಲು ಹೇಳಿದರು. ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು, ಸಸ್ತಾಪುರ ಸದಾನಂದ ಅಪ್ಪಗಳು ಮಾತನಾಡಿದರು.

ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ನಗರಸಭೆ ಅಧ್ಯಕ್ಷ ರಾಜೀವ ಸುಗೂರೆ, ಸೋಮಶೇಖರ ವಸ್ತ್ರದ್, ಅಶೋಕ ಇಂಡಿ, ಬಸತೀರ್ಥಯ್ಯ ಕಾಡಾದಿ, ಪ್ರಾಚಾರ್ಯ ಅಶೋಕ ಶ್ರೀವಾಸ್ತವ, ಪಿಎಸ್ಐ ಉದಯರವಿ, ಕರಬಸಯ್ಯ ಸ್ವಾಮಿ, ರೇವಣಸಿದ್ಧಯ್ಯ ಸ್ವಾಮಿ ಉಪಸ್ಥಿತರಿದ್ದರು.

ರಾಜಕುಮಾರ ಮದಕಟ್ಟಿ, ಅಮೃತೇಶ ಕಲ್ಲಶೆಟ್ಟಿ, ವೀರಯ್ಯಸ್ವಾಮಿ, ಪ್ರವೀಣ ದಾಂಡೇಕರ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿದರೆ ರಮೇಶ ರಾಜೋಳೆ ನಿರೂಪಿಸಿದರು. ಶರಣಪ್ಪ ಬಿರಾದಾರ ವಂದಿಸಿದರು.

ಜಯಂತಿ ಅಂಗವಾಗಿ ರಾತ್ರಿ ಭಜನೆ, ಜಾಗರಣೆ ನಡೆಯಿತು. ಗದ್ದುಗೆ ಪೂಜೆ, ಅಭಿಷೇಕ, ಮಾಡಲಾಯಿತು.

ದಿನಾಂಕ 23-3-2008 ಪ್ರಜಾವಾಣಿ ಪತ್ರಿಕೆ



**ಉದ್ಘಾಟನೆ...**

ತ್ರಿಪೂರಾಂತ ಮರಿ ದೇವರ ಗುಡ್ಡದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಉದ್ಘಾಟಿಸುತ್ತಿರುವ ಎಂಎಲ್ಸಿ ಬಸವರಾಜ ಪಾಟೀಲ್ ಹುಮನಾಬಾದ, ಶಾಸಕ ಬಸವರಾಜ ಪಾಟೀಲ್ ಅಟ್ಟೂರ್, ರಂಭಾಪುರಿ ಜಗದ್ಗುರುಗಳು, ತಡೋಳಾ ಶ್ರೀಗಳು ಉಪಸ್ಥಿತರಿದರು.

ದಿನಾಂಕ 26-3-2010 ಶುಕ್ರವಾರ ಕನ್ನಡಪ್ರಭಾ ದಿನಪತ್ರಿಕೆ

Scanned by CamScanner

2/5/06



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಶ್ರೀ ಮಡಿವಾಳೇಶ್ವರ ಮಾಚಿದೇವರ ಜಯಂತಿ ಆಚರಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮತ್ತಿತರರಿದ್ದರು.

ದಿನಾಂಕ 2-5-2006 ವಿಜಯ ಕರ್ನಾಟಕ ಪತ್ರಿಕೆ




ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಡೆದ ಜಂಗಮ ಸಮಾಜ ಕ್ಷೇಮಾಭಿವೃದ್ಧಿ ಟ್ರಸ್ಟ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಶಾಂತವೀರ ಶಿವಾಚಾರ್ಯರು ಮಾತನಾಡಿದರು. ರಾಚಯ್ಯಾ ಸ್ವಾಮಿ, ಶ್ರೀ ರುದ್ರಮುನಿ ಶಿವಾಚಾರ್ಯರು, ಸೋಮಶೇಖರ ವಸ್ತ್ರದ, ಬಸವರಾಜ ವರವಟ್ಟಿ, ಪಂಚಾಕ್ಷರಿ ಸ್ವಾಮಿ, ಡಾ.ಸ್ವಾಮಿ ಇದ್ದರು. 10-8-2007 Vijay Karn

ದಿನಾಂಕ 10-8-2007 ವಿಜಯ ಕರ್ನಾಟಕ ಪತ್ರಿಕೆ

Scanned by CamScanner

ಠಾಣಾ ಕುಶನೂರ ಗ್ರಾಮದಲ್ಲಿ ಅಕ್ಕಮಹಾದೇವಿ ಹಾಗೂ ಮಡಿವಾಳರ ಸಿದ್ಧಲಿಂಗೇಶ್ವರ ಜಯಂತಿ ಮಹೋತ್ಸವ.



ದಿನಾಂಕ 27-04-2008 ಪ್ರಜಾವಾಣಿ ದಿನಪತ್ರಿಕೆ

## 'ಸುಖ-ಶಾಂತಿಗೆ ಧರ್ಮ ಅನುಸರಿಸಿ'

**ಬಸವಕಲ್ಯಾಣ:** ಮನಸ್ಸಿನ ಸುಖ ಶಾಂತಿಗಾಗಿ ಧರ್ಮವನ್ನು ಅನುಸರಿಸುವುದು ಅವಶ್ಯಕವಾಗಿದೆ ಎಂದು ಕೇದಾರ ಜಗದ್ಗುರು ಸಿದ್ಧೇಶ್ವರಲಿಂಗ ಶಿವಾಚಾರ್ಯರು ಹೇಳಿದರು. ತಾಲ್ಲೂಕಿನ ಗಡಿಗೌಂಡಗಾಂವದಲ್ಲಿ ಈಚೆಗೆ ಹಾವಗಿಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ಶಾಂತವೀರ ಶಿವಾಚಾರ್ಯರ ದ್ವಾದಶ ಪೀಠಾರೋಹಣ ನಿಮಿತ್ತವಾಗಿ ನಡೆದ ಧರ್ಮಸಭೆಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಪಂಚಪೀಠಗಳ ಇತಿಹಾಸ ಹಾಗೂ ಪರಂಪರೆ ಮತ್ತು ಅವುಗಳು ಅನುಸರಿಸುವ ತತ್ವ ಸಿದ್ಧಾಂತವನ್ನು ವಿವರಿಸಿದರು. ಭಕ್ತರ ಉದ್ಧಾರದ ಸದುದ್ದೇಶವನ್ನು ಪೀಠಗಳು ಹೊಂದಿವೆ ಎಂದರು.

ಶಾಂತವೀರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ತಡೋಳಾ ರಾಜೇಶ್ವರ ಶಿವಾಚಾರ್ಯರು, ಬೇಲೂರ ಗುರುಲಿಂಗ ಶಿವಾಚಾರ್ಯರು, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮುಖಂಡರಾದ ರಾಜಕುಮಾರ ಸಿರಗಾಪುರ, ಜಬ್ಬಾರಸಾಬ್ ಗೋಬರೆ, ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಗನ್ನಾಥ ಪತಂಗೆ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶರಣಬಸಪ್ಪ ಬಿರಾದಾರ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಗ್ರಾಪಂ ಅಧ್ಯಕ್ಷೆ ಕವಿತಾ ಪಾಂಡ್ರೆ, ಕಾಶಪ್ಪ ಪೊಲೀಸ್‌ಪಾಟೀಲ, ಸಂಗಪ್ಪ ತಾಂಬೋಳೆ, ಬಾಬುಗೌಡ್ ಪಾಟೀಲ, ಧೂಳಪ್ಪ ಭರಶೆಟ್ಟಿ ಉಪಸ್ಥಿತರಿದ್ದರು. ಶಿವಕುಮಾರ ಶಾಸ್ತ್ರಿ ನಿರೂಪಿಸಿದರು. ಕಾರ್ಯಕ್ರಮದ ಮೊದಲು ಕ್ಷೀರ ಕುಂಭೋತ್ಸವ ನಡೆಯಿತು.

ದಿನಾಂಕ 29-04-2008 ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಶ್ರೀರಂಭಾಪುರಿ ಜಗದ್ಗುರು ಅಡ್ಡ ಪಲ್ಲಕ್ಕಿ ಉತ್ಸವ

## ಇಂದು ಭಾವೈಕ್ಯ ಜನ ಜಾಗೃತಿ ಧರ್ಮ ಸಮಾರಂಭ

**ವಿಕ ಸುದ್ದಿ ಲೋಕ**



**ಬಸವಕಲ್ಯಾಣ:** ತಾಲೂಕಿನ ಶರಣ ನಗರದಲ್ಲಿ ಶ್ರೀ ರಾಚೋಟೇಶ್ವರ ನೂತನ ಮಂದಿರ ಉದ್ಘಾಟನೆ, ಶ್ರೀ ರಾಚೋಟೇಶ್ವರ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಸಿದ್ಧಾಂತ ಶಿಖಾಮಣಿ ಜೀವನ ದರ್ಶನ-ಪ್ರವಚನ, ಭಾವೈಕ್ಯ ಜನಜಾಗೃತಿ ಧರ್ಮ ಸಮಾರಂಭ ಮತ್ತು ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡ ಪಲ್ಲಕ್ಕಿ ಉತ್ಸವ ಶುಕ್ರವಾರ ಬೆಳಗ್ಗೆ ಜರುಗಲಿದೆ.

ಬೆಳಗ್ಗೆ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣದ ನಂತರ ನಡೆಯಲಿರುವ ಜನಜಾಗೃತಿ ಧರ್ಮ ಸಮಾರಂಭದ ದಿವ್ಯ ಸಾನಿಧ್ಯ ಶ್ರೀಮದ್ ರಂಭಾಪುರಿ ಜಗದ್ಗುರುಗಳವರು ವಹಿಸುವರು.

ಹಾರಕೂಡನ ಶ್ರೀ ಚನ್ನವೀರ ಶಿವಾಚಾರ್ಯರು, ಮೆಹಕರನ ಶ್ರೀ ರಾಜೇಶ್ವರ ಶಿವಾಚಾರ್ಯರು, ಇಟಗಾದ ತ್ಯಾಗಿ ಚನ್ನಮಲ್ಲೇಶ್ವರ ಯೋಗಿ, ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಹಿರಣಾಗಾಂವನ ಶ್ರೀ ಜೈಶಾಂತಲಿಂಗ ಸ್ವಾಮಿಜಿ, ಹಳ್ಳಿಖೇಡನ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ರಾಜೇಶ್ವರನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮುತ್ಯಾನ ಬಬಲಾದನ ಶ್ರೀ ಗುರುಪಾದಲಿಂಗ ಸ್ವಾಮಿಗಳು, ಯರಬಾಗನ ಶ್ರೀ ಬಸವಲಿಂಗ ಶಿವಾಚಾರ್ಯರು, ಶ್ರೀ ಓಮಯ್ಯಾ ಸ್ವಾಮಿ ಗೋಳಾ ಸಮ್ಮುಖ ವಹಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಹುಮನಾಬಾದ್ ಅಧ್ಯಕ್ಷತೆ ವಹಿಸುವರು. ಸಂಸದ ನರಸಿಂಗರಾವ ಸೂರ್ಯವಂಶಿ, ಪ್ರಮುಖರಾದ ಎಂ.ಜಿ.ಮುಳೆ, ಗುರುಪಾದಪ್ಪಾ ನಾಗಮಾರಪಳ್ಳಿ, ಸುಭಾಷ ಕಲ್ಲೂರ, ಮೆರಾಜುದ್ದಿನ್ ಪಟೇಲ್, ಬಂಡೆಪ್ಪ ಕಾಶೆಂಪೂರ, ಮಲ್ಲಿಕಾರ್ಜುನ ಖೂಬಾ, ಪ್ರಕಾಶ ಖಂಡ್ರೆ, ರಾಜಶೇಖರ ಪಾಟೀಲ ಹುಮನಾಬಾದ್, ಜಿಪಂ ಅಧ್ಯಕ್ಷೆ ಜೈಶೀಲಾ ರೆಡ್ಡಿ, ಉಪಾಧ್ಯಕ್ಷೆ ರಾಜಶೇಖರ ಪಾಟೀಲ ಮದರಗಾಂವ, ನೀಲಕಂಠ ರಾಠೋಡ, ಸುನೀಸಿಂಗ ಹಜಾರಿ, ತಾಪಂ ಮಾಜಿ ಅಧ್ಯಕ್ಷ ತುಕಾರಾಮ ಮಲ್ಲಪ್ಪಾ ಇತರರು ಭಾಗವಹಿಸಲಿದ್ದಾರೆ.

ದಿನಾಂಕ 2-5-2008 ವಿಜಯ ಕರ್ನಾಟಕ ದಿನಪತ್ರಿಕೆ

# ಸತ್ಸಂಗದಿಂದ ಆತ್ಮ ಶಾಂತಿ ಸಾಧ್ಯ: ರುದ್ರಮುನಿ

ಪ್ರಜಾವಾಣಿ ವಾರ್ತೆ

**ಚಿಟಗುಪ್ಪಾ:** 'ಜೀವನದಲ್ಲಿ ಆತ್ಮ ಶಾಂತಿ ಪಡೆಯಬೇಕಾದಲ್ಲಿ, ಪುಣ್ಯಪುರುಷರ, ಸಿದ್ಧಿಪುರುಷರ, ದರ್ಶನ ಪಡೆಯುವುದರೊಂದಿಗೆ ಸತ್ಸಂಗ ಮಾಡಬೇಕು' ಎಂದು ಬಸವ ಕಲ್ಯಾಣದ ರುದ್ರಮೂನಿ ಶಿವಾಚಾರ್ಯರು ತಿಳಿಸಿದ್ದಾರೆ.

ಅವರು ಈಚೆಗೆ ವೃತ್ತದ ಬೆಳಕೇರಾದ ಶ್ರೀಮದ್‌ಜಗದ್ಗುರು ರೇವಣಸಿದ್ಧೇಶ್ವರ ದೇವಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಲಾಡಗೇರಿ ಹಿರೇಮಠದ ಅಧಿಪತಿ ಗಂಗಾಧರ ಶಿವಾಚಾರ್ಯರ 41ದಿನಗಳ ಮೌನ ವ್ರತದ ಆರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತ, ಬದುಕಿನಲ್ಲಿ ಪುಣ್ಯ ಕಾರ್ಯಗಳನ್ನು ಮಾಡಿದಲ್ಲಿ ಮಾತ್ರ ಮುಕ್ತಿದೊರೆಯುತ್ತದೆ ಎಂದು ನುಡಿದರು.

ಬೆಳಕೇರಾ ಗ್ರಾಮದಿಂದ ಗುಡ್ಡದ ಮೇಲಿನ ದೇವಾಲಯದ ವರೆಗೆ



ಚಿಟಗುಪ್ಪಾ ವೃತ್ತದ ಬೆಳಕೇರಾದ ಶ್ರೀಮದ್‌ಜಗದ್ಗುರು ರೇವಣಸಿದ್ದೇಶ್ವರ ದೇವಾಲಯದಲ್ಲಿ ಲಾಡಗೇರಿ ಮಠದ ಗಂಗಾಧರ ಶಿವಾಚಾರ್ಯರು 41ದಿನಗಳ ಮೌನ ವ್ರತ ಗುರುವಾರ ಆರಂಭಸಿದ್ದಾರೆ.

ಭಜನ ಸಂಗೀತ, 101 ಮುತ್ತೈದೆಯರಿಂದ ಕುಂಭ ಮೇಳದ ಮೆರವಣಿಗೆಯ ಮೂಲಕ ಗಂಗಾಧರ ಶಿವಾಚಾರ್ಯರನ್ನು ಕರೆದುಕೊಂಡು ಬರಲಾಯಿತು.

ಗಾದಗಿ ಗವಿಮಠದ ವೈಜಿನಾಥ ಶಿವಾಚಾರ್ಯ, ಚಿಲ್ಲರ್ಗಿ ಗುರುಪಾದ ಶಿವಾಚಾರ್ಯ, ಷಣ್ಮುಖಯ್ಯ ಶಾಸ್ತ್ರಿ, ರಾಜ್ಯ ಯುವಮೋರ್ಚಾ ಬಿಜೆಪಿ ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಟೀಲ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ವಿಶ್ವನಾಥ ಪಾಟೀಲ್, ರಾಜು ಕುಡಂಬಲ, ಓಂಕಾರ ಪಾಟೀಲ್, ಚಂದ್ರಶೇಖರ್ ಪಾಟೀಲ್, ಗ್ರಾಪಂ ಅಧ್ಯಕ್ಷ ಶೀವಕುಮಾರ, ಗ್ರಾಪಂ ಸದಸ್ಯ ಸಂಜುಕುಮಾರ, ಧೂಳಪ್ಪ ಹುಡಗಿ, ವಿರಪಣ್ಣ ನಾರಾಯಣಪೇಟ್, ಶಿವಕುಮಾರ ಪಾಟೀಲ್, ಮಡೆಪ್ಪ ಮೂಲಗೆ, ಸಂತೋಷ ಕೋರಿ, ಕಾಶಯ್ಯ, ಶಂಭುಲಿಂಗ, ಬಸವರಾಜ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

ಹಲವಾರು ಜನ ಭಕ್ತಾದಿಗಳು ಆಗಮಿಸಿದ್ದರು. ಗ್ರಾಮಸ್ಥರಿಂದ ಪ್ರಸಾದ, ದಾಸೋಹ ವ್ಯವಸ್ಥೆ ಮಾಡಲಾಗಿತ್ತು.

ದಿನಾಂಕ 31-7-2008 ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಶ್ರಾವಣ ಮಾಸದ ಮಂಗಲ ಮಹೋತ್ಸವ

**ವಿಕ ಸುದ್ದಿಲೋಕ**

**ಬಸವಕಲ್ಯಾಣ:** ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಭಾನುವಾರ ಶ್ರಾವಣ ಮಾಸದ ಮಂಗಲ ಮಹೋತ್ಸವ ನಿಮಿತ್ತ ಧಾರ್ಮಿಕ ಕಾರ್ಯಕ್ರಮ ಜರುಗಿತು.

ಸನ್ಮಾನ ಸ್ವೀಕರಿಸಿದ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್, ಮಠದ ಪ್ರಗತಿಗೆ ಸಹಕರಿಸಲು ಸಿದ್ಧರಿರುವುದಾಗಿ ತಿಳಿಸಿದರು. ರಸ್ತೆ, ಕಲ್ಯಾಣ ಮಂಟಪ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಡಾ.ಬಸವರಾಜ ಸ್ವಾಮಿ ಮಾನಾಡಿದರು. ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು ಸಾನ್ನಿಧ್ಯ, ಠಾಣಾಕುಶನೂರಿನ ಶ್ರೀ ಸಿದ್ಧಲಿಂಗ ಸ್ವಾಮಿ ಅಧ್ಯಕ್ಷತೆ, ಗವಿಮಠದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಸಸ್ತಾಪೂರದ ಶ್ರೀ ಈಶ್ವರಾನಂದ ಸ್ವಾಮಿಗಳು, ಡೋಣಗಾಂವದ ಶ್ರೀ ನಾಗೇಂದ್ರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು.

ಆರ್‌ಟಿಒ ಸಂಜಯ ವಾಡೇಕರ್, ಪ್ರಮುಖರಾದ ರವಿ ಚಂದನಕೆರೆ, ರಾಜು ಸುಗರೆ, ನಟರಾಜ ಬಿರಾದಾರ, ಸಂತೋಷ ಮಹಾಲಿಂಗ, ಪ್ರಕಾಶ ಮಹಾಲಿಂಗ, ಸಂಗಮೇಶ ಸ್ವಾಮಿ ಉಪಸ್ಥಿತರಿದ್ದರು. ದಯಾನಂದ ಶೀಲವಂತ ಸ್ವಾಗತಿಸಿದರು. ಶರಣಪ್ಪ ಬಿರಾದಾರ ವಂದಿಸಿದರು. ಆರ್.ಟಿ.ರಾಜೋಳೆ ನಿರೂಪಿಸಿದರು.



**ಬಸವಕಲ್ಯಾಣದ ಶ್ರೀ ಘನಲಿಂಗ ರುದ್ರಮುನಿ ಗವಿಮಠದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮಲ್ಲಿ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಮಾತನಾಡಿದರು. ಗುರುಲಿಂಗ ಶ್ರೀ, ಸಿದ್ಧಲಿಂಗ ಶ್ರೀ, ಅಭಿನವ ರುದ್ರಮುನಿ ಶ್ರೀ, ಸಂಜಯ ವಾಡೇಕರ್, ರವಿ ಚಂದನಕೆರೆ, ರಾಜು ಸುಗರೆ ಇದ್ದರು.**

ದಿನಾಂಕ 3-09-2008 ವಿಜಯ ಕರ್ನಾಟಕ ದಿನಪತ್ರಿಕೆ

# 5ರಂದು ಬೆಳಕೇರಾಕ್ಕೆ ರಂಭಾಪುರಿ ಜಗದ್ಗುರು

**ವಿಕ ಸುದ್ದಿಲೋಕ**

**ಹುಮನಾಬಾದ್:** ಬೆಳಕೇರಾದ ಶ್ರೀ ರೇವಣಸಿದ್ದೇಶ್ವರ ಬೆಟ್ಟದಲ್ಲಿ 5ರಂದು ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮತ್ತು ಶ್ರೀ ವೀರಭದ್ರೇಶ್ವರ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಧರ್ಮ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ.

ಬೆಟ್ಟದಲ್ಲಿ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಬೀದರ್ ಲಾಡಗೇರಿಯ ಶ್ರೀ ಗಂಗಾಧರ ಶಿವಾಚಾರ್ಯರ ಶ್ರಾವಣ ಮಾಸದ ಅನುಷ್ಠಾನ ಮಂಗಲ ನಿಮಿತ್ತ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಆಗಮಿಸುವರು.

ದೇವಸ್ಥಾನದಲ್ಲಿ 4ರಂದು ಬೆಳಗ್ಗೆ 9ಕ್ಕೆ ಸಾಮೂಹಿಕ ಲಿಂಗ ದೀಕ್ಷೆ, ಅಯ್ಯಾಚಾರ, ಸಂಜೆ 6ಕ್ಕೆ ದೀಪೋತ್ಸವ ನಡೆಯಲಿದೆ. 5ರಂದು ಬೆಳಗ್ಗೆ 10ಕ್ಕೆ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ, ಮಧ್ಯಾಹ್ನ 12.30ಕ್ಕೆ ಜನಜಾಗೃತಿ ಸಭೆ ನಡೆಯಲಿದೆ. ಚಿಟಗುಪ್ಪ, ಹುಡಗಿ, ಮೆಹಕರ್, ರಾಜೇಶ್ವರ, ಬೆಮಳಖೇಡ, ಸೋಂತ, ತ್ರಿಪುರಾಂತ ಶ್ರೀಗಳು ನೇತೃತ್ವ, ಮಾಜಿ ಶಾಸಕ ಸುಭಾಷ ಕಲ್ಲೂರ ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಉಸ್ತುವಾರಿ ಸಚಿವ ರೇವುನಾಯಕ ಬೆಳಮಗಿ ಮಂಟಪ, ಶಾಸಕ ರಾಜಶೇಖರ ಪಾಟೀಲ್ ಧರ್ಮ ಜಾಗೃತಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಗುರುಪಾದಪ್ಪ ನಾಗಮಾರಪಳ್ಳಿ, ಬಸವರಾಜ ಪಾಟೀಲ್ ಅಟ್ಟೂರ್, ಈಶ್ವರ ಖಂಡ್ರೆ, ಬಂಡೆಪ್ಪ ಖಾಶೆಂಪೂರ್, ಪ್ರಭು ಚವ್ಹಾಣ್, ಐಜಿಪಿ ರಾಘವೇಂದ್ರ ಔರಾದಕರ್, ಮುಖ್ಯಮಂತ್ರಿ ಉಪ ಕಾರ್ಯದರ್ಶಿ ಡಾ.ಸಿಂಧೆ ಭೀಮಸೇನರಾವ, ಡಾ.ರಾಜಶೇಖರ ಸ್ವಾಮಿ ಗೋರ್ಟಾ ಭಾಗವಹಿಸುವರು ಎಂದು ಸ್ವಾಗತ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ತಿಳಿಸಿದ್ದಾರೆ.

ದಿನಾಂಕ 3-09-2008 ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

ಪ್ರಜಾವಾಣಿ

ಶುಕ್ರವಾರ
5ನೇ ಸೆಪ್ಟೆಂಬರ್ 2008

2 G*



## ಅನುಷ್ಠಾನ ಸಮಾಪ್ತಿ

ಬಸವಕಲ್ಯಾಣದ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಈಚೆಗೆ ನಡೆದ ಶ್ರಾವಣ ಅನುಷ್ಠಾನ ಸಮಾಪ್ತಿ ಹಾಗೂ ಗಣ್ಯರ ಸನ್ಮಾನ ಸಮಾರಂಭದಲ್ಲಿ ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಮಾತನಾಡಿದರು.

ದಿನಾಂಕ 5-09-2008 ಪ್ರಜಾವಾಣಿ ದಿನಪತ್ರಿಕೆ

# ಕೆರೆಗೆ ರೇವಣಸಿದ್ಧರ ಹೆಸರಿಡಲು ಆಗ್ರಹ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಇಲ್ಲಿಯ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಈಚೆಗೆ ನಡೆದ ಶ್ರಾವಣ ಅನುಷ್ಠಾನ ಸಮಾರೋಪ ಹಾಗೂ ಗಣ್ಯರ ಸತ್ಕಾರ ಸಮಾರಂಭದಲ್ಲಿ ನಗರದಲ್ಲಿಯ ತ್ರಿಪುರಾಂತ ಕೆರೆಗೆ ಜಗದ್ಗುರು ರೇವಣಸಿದ್ಧರ ಕೆರೆ ಎಂದು ಹೆಸರಿಡಬೇಕು ಎಂದು ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ.ಬಸವರಾಜ ಸ್ವಾಮಿ ಅವರು ರೇವಣಸಿದ್ಧರು ತ್ರಿಪುರಾಂತ ಕೆರೆ ನಿರ್ಮಿಸಿರುವ ದಾಖಲೆಗಳಿರುವ ಕಾರಣ ಅದಕ್ಕೆ ಅವರ ಹೆಸರಿಡುವುದು ಸೂಕ್ತವಾಗಿದೆ ಎಂದರು.

ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಅವರು ಮಾತನಾಡಿ ದೇವ ಸ್ಥಾನದ ಕಾರ್ಯಗಳಿಗೆ ಧನ ಸಹಾಯ ಒದಗಿಸಲಾಗುವುದು ಎಂದು ಭರವಸೆ ಕೊಟ್ಟರು.

ಬೇಲೂರ ಗುರುಲಿಂಗ ಶಿವಾ ಚಾರ್ಯರು ಸಾನಿಧ್ಯ ವಹಿಸಿದ್ದರೆ ಅಭಿ ನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಠಾಣಾ ಕುಸನೂರ್ ಸಿದ್ಧಲಿಂಗ ಶಿವಾ ಚಾರ್ಯರು, ಸಸ್ತಾಪುರ ಈಶ್ವರಾನಂದ ಸ್ವಾಮಿಗಳು, ಡೋಣಗಾಂವ ನಾಗೇಂದ್ರ ಶಿವಾಚಾರ್ಯರು, ಮುಖಂಡರಾದ ರವಿ ಚಂದನಕೇರೆ, ದಯಾನಂದ ಶೀಲವಂತ, ರಾಜೀವ ಸುಗೂರೆ, ಸಂಜೀವ ವಾಡೇಕರ್, ಬಕ್ಕಯ್ಯ ಸ್ವಾಮಿ, ಸೋಮಶೇಖರ ವಸ್ತ್ರದ್, ಪ್ರಕಾಶ ಮಹಾಲಿಂಗ, ಸಂಗಮೇಶ ಸ್ವಾಮಿ, ನಟರಾಜ ಬಿರಾದಾರ, ಬಸವಂತಪ್ಪ ಲವಾರೆ, ಕಲ್ಪನಾ ಶೀಲವಂತ ಉಪಸ್ಥಿತರಿದ್ದರು. ರುದ್ರೇಶ್ ಗೋರಟಾ ಸ್ವಾಗತಿಸಿದರು. ಆರ್.ಟಿ. ರಾಜೋಳೆ ನಿರೂಪಿಸಿದರು. ಶರಣಪ್ಪ ಬಿರಾದಾರ ವಂದಿಸಿದರು.

ದಿನಾಂಕ 5-09-2008 ಪ್ರಜಾವಾಣಿ ದಿನಪತ್ರಿಕೆ.

Scanned by CamScanner

## ಪಟ್ಟಾಧಿಕಾರ ಮಹೋತ್ಸವ

ಬಸವಕಲ್ಯಾಣ: ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 3ನೇ ವಾರ್ಷಿಕ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಮತ್ತು ಶ್ರೀಗಳ 23ನೇ ಜನ್ಮ ದಿನಾಚರಣೆ ಇತ್ತೀಚೆಗೆ ಜರುಗಿತು. ಶ್ರೀಗಳು ಆಶೀರ್ವಚನ ನೀಡಿದರು. ನಟರಾಜ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರಕಾಶ ಮಹಾಲಿಂಗ, ಈಶ್ವರ ಪಟೀಲ್, ಡಾ.ಬಾಲಕೃಷ್ಣ ರಾಠೋಡ, ಟ್ರಸ್ಟಿಗಳಾದ ಪೀರಪ್ಪ ಶೀಲವಂತ, ಜಗದೀಶ ರಾಮಣ್ಣ, ಸೋಮಶೇಖರ ತ್ರಿಪುರಾಂತ, ಸಂಗಮೇಶ ಸ್ವಾಮಿ, ಮಲ್ಲಿಕಾರ್ಜುನ ರಾಜೋಳೆ ಉಪಸ್ಥಿತರಿದ್ದರು. ರಮೇಶ ರಾಜೋಳೆ ಸ್ವಾಗತಿಸಿದರು.

ದಿನಾಂಕ 2-10-2008 ವಿಜಯ ಕರ್ನಾಟಕ ದಿನಪತ್ರಿಕೆ.

## ಜನವರಿಯಲ್ಲಿ ಶಿವಪುರ ಸಿದ್ಧಲಿಂಗೇಶ್ವರ ಜಾತ್ರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ತಾಲ್ಲೂಕಿನ ಶಿವಪುರದ ಕಮರಿಮಠದಲ್ಲಿ ಜ.14ರಿಂದ 18ರವರೆಗೆ ಸದ್ಗುರು ಸಿದ್ಧಲಿಂಗೇಶ್ವರರ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಜಾತ್ರಾ ಮಹೋತ್ಸವ ಸಮಿತಿ ಪ್ರಮುಖರಾದ ಕವಿರಾಜ ಕಿಣಗಿ ತಿಳಿಸಿದ್ದಾರೆ.

14ರಂದು ಬೇಲೂರ ಗುರುಲಿಂಗ ಶಿವಾಚಾರ್ಯರು ಧರ್ಮಧ್ವಜಾರೋಹಣ ನೆರವೇರಿಸಿ ಜಾತ್ರೆಗೆ ಚಾಲನೆ ಕೊಡುವರು. 16ರಂದು ರುದ್ರಾಭಿಷೇಕ, ತೊಟ್ಟಿಲು ಕಾರ್ಯಕ್ರಮ ನಡೆಯುತ್ತದೆ. ರಾತ್ರಿ 9ಗಂಟೆಗೆ ಸಸ್ತಾಪುರ ಶಿವಲಿಂಗೇಶ್ವರ ಮಠದ ಸದಾನಂದ ಸ್ವಾಮಿ ಅವರಿಂದ ಪ್ರವಚನ ನಡೆಯುತ್ತದೆ.

16ರಂದು ಮುಂಜಾನೆ ರುದ್ರಪೂಜೆ, ರಾತ್ರಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶಿವಾನುಭವಗೋಷ್ಠಿ ನಡೆಯುತ್ತದೆ.

17ರಂದು ಕಡಗಂಚಿ ವೀರಭದ್ರ ಶಿವಾಚಾರ್ಯರು ಹಾಗೂ ಅನಿಲಕುಮಾರ ಪಾಟೀಲ ಸೊಲ್ಲಾಪುರ ಅವರು ಪ್ರವಚನ ಹೇಳುವರು.

18ರಂದು ಮುಂಜಾನೆ ಪಲ್ಲಕ್ಕಿ ಮೆರವಣಿಗೆ ಮತ್ತು ಅಗ್ನಿಪೂಜೆ ನಡೆಯುತ್ತದೆ. ನಂತರ ಗುರುಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯುವ ಶಿವಾನುಭವ ಗೋಷ್ಠಿಯಲ್ಲಿ ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಹಾಗೂ ಇತರೆ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ದಿನಾಂಕ 12-12-2008 ಶುಕ್ರವಾರ ಪ್ರಜಾವಾಣಿ ಪತ್ರಿಕೆ.

## ಪಟ್ಟಾಭಿಷೇಕ ವರ್ಧಂತಿ

ತ್ರಿಪುರಾಂತದ ಪವಿತ್ರ ಪತ್ರಿ ವನದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಗುರು ಪಟ್ಟಾಭಿಷೇಕದ 5ನೇ ವರ್ಧಂತಿ ಹಾಗೂ 25ನೇ ಜನ್ಮ ದಿನೋತ್ಸವ ಮಂಗಳವಾರ ಬೆಳಗ್ಗೆ 11ಕ್ಕೆ ಶ್ರೀಮಠದಲ್ಲಿ ಜರುಗಲಿದೆ.

ದಿನಾಂಕ 28-9-2010 ಮಂಗಳವಾರ ವಿಜಯ ಕರ್ನಾಟಕ
ದಿನ ಪತ್ರಿಕೆ

Scanned by CamScanner

## ಅನುಷ್ಠಾನ ಸಮಾರೋಪ

**ಔರಾದ್** : ತಾಲೂಕಿನ ಡೋಣಗಾವ್ (ಎಚ್) ಗ್ರಾಮದ ಭಕ್ತಮುಡಿ ತಪೋವನದಲ್ಲಿ ಗುರುಲಿಂಗ್ ಶಿವಾಚಾರ್ಯ ಸ್ವಾಮೀಜಿಯವರು ಕೈಗೊಂಡಿದ್ದ ಅನುಷ್ಠಾನದ ಸಮಾರೋಪ ಸಮಾರಂಭ ವೈಭವದಿಂದ ನೆರವೇರಿತು. ಬ್ರಹ್ಮಕುಮಾರಿ ಸುನಂದಾ ಅವರು ಈ ಸಂದರ್ಭದಲ್ಲಿ ಉಪದೇಶ ಮಾಡಿದರು. ಚಂದ್ರಶೇಖರ್ ಶಿವಾಚಾರ್ಯ, ನಾಗಭೂಷಣ ಶಿವಾಚಾರ್ಯ, ರುದ್ರಮುನಿ ಶಿವಾಚಾರ್ಯ, ಗಂಗಾಧರ ಶಿವಾಚಾರ್ಯ, ಘನಲಿಂಗ ಶಿವಾಚಾರ್ಯ, ಬಿ.ಕೆ. ಜಯಶ್ರೀ ಪಾಲ್ಗೊಂಡಿದ್ದರು. ಸಾವಿರಾರು ಭಕ್ತರು ಪಾಲ್ಗೊಂಡು ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾದರು.

ದಿನಾಂಕ 27-12-2008 ವಿಜಯಕರ್ನಾಟಕ ದಿನಪತ್ರಿಕೆ



ಕಮಲನಗರ ಸಮೀಪದ ಡೋಣಗಾಂವ(ಎಂ)ಗ್ರಾಮದ ಭಕ್ತಮುಡಿ ತಪೋವನ ಮಹಾಳಪ್ಪಯ್ಯ ಮಠದಲ್ಲಿ ಇತ್ತೀಚೆಗೆ ನಿಯೋಜಿತ ಪೀಠಾಧಿಪತಿ ಪೂಜ್ಯ ಗುರುಲಿಂಗ ಸ್ವಾಮಿ ಶಿವಾಚಾರ್ಯ ಅವರ ಮೌನ ಅನುಷ್ಠಾನದ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿದರು. ಡಾ.ನಾಗಭೂಷಣ ಶಿವಾಚಾರ್ಯ, ನಾಗಲಿಂಗ ದೇಶಿಕೇಂದ್ರ, ಗಂಗಾಧರ ಸ್ವಾಮಿ ಹಾಗೂ ಇನ್ನಿತರರಿದ್ದಾರೆ.

## 'ಅಧರ್ಮ ಕಾರ್ಯಗಳಿಂದ ಸಮಾಜದಲ್ಲಿ ಹಿಂಸೆ'

**ಕಮಲನಗರ:** ಧರ್ಮದ ಹೆಸರಿನಲ್ಲಿ ನಡೆಯುವ ಅಧರ್ಮ ಕಾರ್ಯಗಳಿಂದ ದೇಶ ಮತ್ತು ಸಮಾಜದಲ್ಲಿ ಹಿಂಸೆ ಮತ್ತು ಭ್ರಷ್ಟಾಚಾರ ತಾಂಡವಾಡುತ್ತಿವೆ. ಹೊನ್ನು ಹೆಣ್ಣು ಮತ್ತು ಮಣ್ಣಿನ ಆಸೆಗಾಗಿ ಬದುಕು ಅರ್ಥಹೀನ ರೀತಿಯಲ್ಲಿ ಕಾಣುವುದು ವಿನಾಶದ ಸಂಕೇತವಾಗಿದೆ ಎಂದು ಈಶ್ವರೀಯ ವಿಶ್ವ ವಿದ್ಯಾಲಯದ ಸುನಂದಾ ನುಡಿದರು.

ಕಮಲನಗರ ಸಮೀಪದ ಡೋಣಗಾಂವ(ಎಂ)ಗ್ರಾಮದ ಭಕ್ತಮುಡಿ ತಪೋವನ ಮಹಾಳಪ್ಪಯ್ಯ ಮಠದಲ್ಲಿ ಇತ್ತೀಚೆಗೆ ನಿಯೋಜಿತ ಪೀಠಾಧಿಪತಿ ಗುರುಲಿಂಗ ಸ್ವಾಮಿ ಶಿವಾಚಾರ್ಯ ಅವರ ಮೌನ ಅನುಷ್ಠಾನದ ಮುಕ್ತಾಯ ಸಮಾರಂಭದ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿಯೋಜಿತ ಪೀಠಾಧಿಪತಿ ಪೂಜ್ಯ ಗುರುಲಿಂಗ ಸ್ವಾಮಿ ಅವರು ಮಾತನಾಡಿದರು. ವೇದಿಕೆ ಮೇಲೆ ಬಸವಕಲ್ಯಾಣದ ಧನಲಿಂಗ ಸ್ವಾಮಿ, ಚಂದ್ರಶೇಖರ ಸ್ವಾಮಿ, ಹಳೆಂಬರ್‌ದ ಡಾ.ನಾಗಭೂಷಣ ಶಿವಾಚಾರ್ಯ, ಲಾಡಗೇರೆ ಮಠದ ಗಂಗಾಧರ ಸ್ವಾಮಿ, ಮಹಾಳಪ್ಪಯ್ಯ ಮಠದ ನಾಗಲಿಂಗ ದೇಶಿಕೇಂದ್ರ, ಡಾ.ಭರಶೆಟ್ಟಿ, ಗುಂಡಪ್ಪ ಮುರ್ಕೆ ಮೊದಲಾದವರು ಉಪಸ್ಥಿತರಿದ್ದರು.

ರಮೇಶ ಸ್ವಾಗತಿಸಿದರು. ವಿಜಯಕುಮಾರ ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ 31-12-2008 ಬುಧವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# 'ಸಮಾಜಮುಖಿ ಕಾರ್ಯ ನಡೆಯಲಿ'

ವಿಕ ಚಿತ್ರಲೋಕ




ಬಸವಕಲ್ಯಾಣದ ಅಲ್ಲಂಪ್ರಭು ದೇವರ ಗದ್ದುಗೆ ಮಠದಲ್ಲಿ ಶುಕ್ರವಾರ ನಡೆದ ಸನ್ಮಾನ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಸುನೀಲ ಪಾಟೀಲ್, ಪಂಡಿತ ನಗರಾಳೆ, ಬಾಳಾಸಾಹೇಬ ಕುಲಕರ್ಣಿ ಇದ್ದರು.

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಸಮಾಜಮುಖಿ ಕಾರ್ಯಗಳು ಈ ಭಾಗದಲ್ಲಿ ನಿರಂತರ ನಡೆಯಬೇಕು ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಅಲ್ಲಮಪ್ರಭು ದೇವರ ಗದ್ದುಗೆ ಮಠದಲ್ಲಿ ಶುಕ್ರವಾರ ಗಜಾನನ ಟ್ರಸ್ಟ್ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಟ್ರಸ್ಟ್‌ನ ಎಲ್ಲ ಪದಾಧಿಕಾರಿಗಳು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆ ನಡೆಸಬೇಕು ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿದ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲಕುಮಾರ ಪಾಟೀಲ್, ಟ್ರಸ್ಟ್‌ನ ಕಾರ್ಯ ಚಟುವಟಿಕೆಗಳಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಟ್ರಸ್ಟ್ ಅಧ್ಯಕ್ಷ ಉಮೇಶ ಶೀಲವಂತ ಅಧ್ಯಕ್ಷತೆ, ಮಡಿವಾಳೇಶ್ವರ ಗುರುಪಾದ ಶ್ರೀ ಸಾನ್ನಿಧ್ಯ ವಹಿಸಿದ್ದರು. ಬಾಳಾಸಾಹೇಬ ಕುಲಕರ್ಣಿ, ಪಂಡಿತ ನಗರಾಳೆ ಮಾತನಾಡಿದರು. ಟ್ರಸ್ಟ್ ಉಪಾಧ್ಯಕ್ಷ ಅರವಿಂದ ಶೀಲವಂತ ಸ್ವಾಗತಿಸಿದರು. ವೈಜನಾಥ ಶೀಲವಂತ ವಂದಿಸಿದರು. ರಾಜಶೇಖರ ಶೀಲವಂತ ನಿರೂಪಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು. ಜಗದೀಶ ಮುಳೆ, ಪ್ರಭು ಶೀಲವಂತ, ಸಂತೋಷ, ರಾಜು ಮಿರಜ್, ಶಂಕರ ಪಂಚಾಳ, ಲಕ್ಷ್ಮೀಕಾಂತ ಪಂಚಾಳ, ಸತೀಶ ಶೀಲವಂತ, ರಾಜಣ್ಣಾ ಶೀಲವಂತ, ಸುರೇಶ ಶೀಲವಂತ, ಜಗನ್ನಾಥ, ಸುಭಾಷ ಬಾವುಗೆ ಪಾಲ್ಗೊಂಡಿದ್ದರು.

ದಿನಾಂಕ 4-01-2009 ರವಿವಾರ ವಿಜಯಕರ್ನಾಟಕ ದಿನಪತ್ರಿಕೆ

Scanned by CamScanner

# ವಿಜೃಂಭಣೆಯ ಮಾಚಿದೇವರ ಜಾತ್ರೆ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಇಲ್ಲಿನ ತ್ರಿಪುರಾಂತದಲ್ಲಿ ಮಡಿವಾಳ ಮಾಚಿದೇವರ ಜಾತ್ರೆಯು ಮೂರು ದಿನ ವಿಜೃಂಭಣೆಯಿಂದ ನೆರವೇರಿತು. ಜಾತ್ರೆಯ ಕೊನೆ ದಿನವಾದ ಶುಕ್ರವಾರ ಭವ್ಯ ಪಲ್ಲಕ್ಕಿ ಮೆರವಣಿಗೆ ಹಾಗೂ ಬೆಂಕಿಕೆಂಡ ತುಳಿಯುವ ಕಾರ್ಯಕ್ರಮ ನಡೆಯಿತು.

ಭದ್ರಪ್ಪ ಪಾಟೀಲ ಹಾಗೂ ನಾಗರಾಜ ಕಂಠಯ್ಯ ಅವರ ಮನೆಗಳಿಂದ ಹೊರಟ ಪಲ್ಲಕ್ಕಿ ಮೆರವಣಿಗೆ ತ್ರಿಪುರಾಂತ ಕೆರೆದಂಡೆಯಲ್ಲಿನ ಅಗ್ನಿಕುಂಡದವರೆಗೆ ನಡೆಯಿತು. ಅಲ್ಲಿ ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ನೆರವೇರಿಸಿದರು. ನಂತರ ಪಲ್ಲಕ್ಕಿಯನ್ನು ಬೆಂಕಿಕೆಂಡದಿಂದ ಒಯ್ಯಲಾಯಿತು ಹಾಗೂ ಮಹಿಳೆ ಮಕ್ಕಳಾದಿಯಾಗಿ ಸಾವಿರಾರು ಭಕ್ತಾದಿಗಳು ಅಗ್ನಿಯನ್ನು ತುಳಿದರು.



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಮಡಿವಾಳ ಮಾಚಿದೇವರ ಜಾತ್ರೆ ಅಂಗವಾಗಿ ಶುಕ್ರವಾರ ನಡೆದ ಅಗ್ನಿ ತುಳಿಯುವ ಕಾರ್ಯಕ್ರಮದ ಸಂದರ್ಭದಲ್ಲಿ ಪಲ್ಲಕ್ಕಿಯನ್ನು ಬೆಂಕಿಕೆಂಡದ ಒಳಗಿನಿಂದಲೇ ಒಯ್ಯಲಾಯಿತು.

ಪ್ರಮುಖರಾದ ಮಡಿವಾಳಪ್ಪ ಪಾಟೀಲ, ಜಗನ್ನಾಥ ಬಿರಾದಾರ, ರಾಮಣ್ಣ ಮಂಠಾಳೆ, ಬಕ್ಕಯ್ಯ ಸ್ವಾಮಿ, ರಾಜೀವ ಪಾಟೀಲ, ನಟರಾಜ ಬಿರಾದಾರ, ಶಿವಬಸವ ಚನ್ನಮಲ್ಲೆ, ಡಾ.ಬಸವರಾಜ ಸ್ವಾಮಿ, ಸಂತೋಷ ಮಾಲಗಾರ ಮುಂತಾದವರು ಪಾಲ್ಗೊಂಡಿದ್ದರು.

ಗುರುವಾರ ರಾತ್ರಿ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಪ್ರವಚನ ಸಮಾರೋಪ ಸಮಾರಂಭ ನಡೆಯಿತು.

ದಿನಾಂಕ 17-01-2009 ಶನಿವಾರ ಪ್ರಜಾವಾಣಿ ದಿನಪತ್ರಿಕೆ.

# ಬಸವಕಲ್ಯಾಣ: ವಿಜೃಂಭಣೆಯ ಮಾಚಿದೇವರ ಜಾತ್ರೆ

**ಬಸವಕಲ್ಯಾಣ:** ಇಲ್ಲಿನ ತ್ರಿಪುರಾಂತದಲ್ಲಿ ಮಡಿವಾಳ ಮಾಚಿದೇವರ ಜಾತ್ರೆಯು ಮೂರು ದಿನ ವಿಜೃಂಭಣೆಯಿಂದ ನೆರವೇರಿತು. ಜಾತ್ರೆಯ ಕೊನೆ ದಿನವಾದ ಶುಕ್ರವಾರ ಭವ್ಯ ಪಲ್ಲಕ್ಕಿ ಮೆರವಣಿಗೆ ಹಾಗೂ ಬೆಂಕಿಕೆಂಡ ತುಳಿಯುವ ಕಾರ್ಯಕ್ರಮ ನಡೆಯಿತು.

ಭದ್ರಪ್ಪ ಪಾಟೀಲ ಹಾಗೂ ನಾಗರಾಜ ಕಂಠಯ್ಯ ಅವರ ಮನೆಗಳಿಂದ ಹೊರಟ ಪಲ್ಲಕ್ಕಿ ಮೆರವಣಿಗೆ ತ್ರಿಪುರಾಂತ ಕೆರೆದಂಡೆಯಲ್ಲಿನ ಅಗ್ನಿಕುಂಡದವರೆಗೆ ನಡೆಯಿತು. ಅಲ್ಲಿ ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ನೆರವೇರಿಸಿದರು. ನಂತರ ಪಲ್ಲಕ್ಕಿಯನ್ನು ಬೆಂಕಿಕೆಂಡದಿಂದ ಒಯ್ಯಲಾಯಿತು ಹಾಗೂ ಮಹಿಳೆ ಮಕ್ಕಳಾದಿಯಾಗಿ ಸಾವಿರಾರು ಭಕ್ತಾದಿಗಳು ಅಗ್ನಿಯನ್ನು ತುಳಿದರು.



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಮಡಿವಾಳ ಮಚಿದೇವರ ಜಾತ್ರೆ ಅಂಗವಾಗಿ ಶುಕ್ರವಾರ ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಿತು.

ಪ್ರಮುಖರಾದ ಮಡಿವಾಳಪ್ಪ ಪಾಟೀಲ, ಜಗನ್ನಾಥ ಬಿರಾದಾರ, ರಾಮಣ್ಣ ಮಂಠಾಳೆ, ಬಕ್ಕಯ್ಯ ಸ್ವಾಮಿ, ರಾಜೀವ ಪಾಟೀಲ, ನಟರಾಜ ಬಿರಾದಾರ, ಶಿವಬಸವ ಚನ್ನಮಲ್ಲೆ, ಡಾ.ಬಸವರಾಜ ಸ್ವಾಮಿ, ಸಂತೋಷ ಮಾಲಗಾರ ಮುಂತಾದವರು ಪಾಲ್ಗೊಂಡಿದ್ದರು.

ಗುರುವಾರ ರಾತ್ರಿ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಪ್ರವಚನ ಸಮಾರೋಪ ಸಮಾರಂಭ ನಡೆಯಿತು. ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಎಚ್.ಕೆ. ಪಠಾಣ, ಡಾ.ಗೋಪಾಲ ರಾಠೋಡ, ಬಕ್ಕಯ್ಯ ಸ್ವಾಮಿ ಪಾಲ್ಗೊಂಡಿದ್ದರು. ನಂತರ ದೇವರ ಗೆದ್ದ ಮಾನವ ನಾಟಕ ಪ್ರದರ್ಶಿಸಲಾಯಿತು.

ದಿನಾಂಕ 26-01-2009 ಸೋಮವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಬಸವಕಲ್ಯಾಣ: ಶರಣರ ತತ್ತ್ವ ಉಪನ್ಯಾಸ

ವಿಕ ಚಿತ್ರಲೋಕ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಬಸವಾದಿ ಶರಣರ ನಾಡಿನಲ್ಲಿ ಶರಣ ತತ್ತ್ವ ಪ್ರಸಾರ ಇನ್ನು ಹೆಚ್ಚು ನಡೆಯಬೇಕು ಎಂದು ಬಸವನಬಾಗೇವಾಡಿಯ ಶ್ರೀ ಗುರುಲಿಂಗ ಶಿವಶರಣರು(ಪೂಜ್ಯ ಸೋಮನಾಳ ಶರಣ) ಸದಾಶಯ ವ್ಯಕ್ತಪಡಿಸಿದರು.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇತ್ತೀಚೆಗೆ ನಡೆದ ಸೋಮನಾಳ ಶರಣರ ಪ್ರವಚನ ಮತ್ತು ಶರಣ ತತ್ತ್ವ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು.

ದೈವಜ್ಞ ಪ್ರಕಾಶ ಕಂಪ್ಲಿ ಮಾತನಾಡಿದರು. ನೇತೃತ್ವ ವಹಿಸಿದ ತ್ರಿಪೂರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಧಾರವಾಡನ ಷಡಕ್ಷರಯ್ಯ ಹಿರೇಮಠ, ಅಗರ ಖೇಡನ ಜಗದೇವಿ ತಾಯಿ ಮಾತನಾಡಿದರು. ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ ಎನ್ನುವ ವಿಷಯ ಕುರಿತು ಪ್ರೊ.ವೆಂಕಣ್ಣ ದೊಣ್ಣೇಗೌಡರ್ ಉಪನ್ಯಾಸ ಮಂಡಿಸಿದರು. ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಉಪಾಧ್ಯಕ್ಷ ರೇವಣಪ್ಪ ರಾಯವಾಡೆ ಅಧ್ಯಕ್ಷತೆ ವಹಿಸಿದ್ದರು. ಪಂಚಾಕ್ಷರಿ ಹಿರೇಮಠ ಸ್ವಾಗತಿಸಿದರೆ, ರುದ್ರಮಣಿ ಮಠಪತಿ ನಿರೂಪಿಸಿದರು.



**ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೋಮನಾಳ ಶರಣರು ಆಶೀರ್ವಚನ ನೀಡಿದರು. ದೈವಜ್ಞ ಪ್ರಕಾಶ ಕಂಪ್ಲಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪ್ರೊ.ದೊಣ್ಣೆಗೌಡರ್ ಇದ್ದರು.**

ರುದ್ರೇಶ ಮಠಪತಿ, ಚಿತ್ರಶೇಖರ ಚಿರಳ್ಳಿ, ಶಾಂತಲಿಂಗ ಮಠಪತಿ ಇದ್ದರು. ವಿಜಾಪುರ, ಇಂಡಿ, ಹೊಸಪೇಟೆ ಹಾಗೂ ಬಳ್ಳಾರಿಯಿಂದ ಆಗಮಿಸಿದ ನೂರಾರು ಜನ ಭಾಗವಹಿಸಿದ್ದರು.

ಧರ್ಮಸಭೆ: ತ್ರಿಪೂರಾಂತನ ಶ್ರೀ ಘನಲಿಂಗ ರುದ್ರಮುನಿ ಗವಿಮಠ(ಮರಿದೇವರಗುಡ್ಡ)ದಲ್ಲಿ ನಡೆದ ಧರ್ಮಸಭೆಯಲ್ಲಿ ಪೂಜ್ಯ ಸೋಮನಾಳ ಶರಣರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ದಿನಾಂಕ 29-01-2009 ಗುರುವಾರ ವಿಜಯ ಕರ್ನಾಟಕ ದಿನಪತ್ರಿಕೆ.

# 'ಸಕಲರ ಉದ್ಧಾರ: ಶರಣ ತತ್ವದ ಸಾರ'

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಸಕಲರ ಉದ್ಧಾರವೇ ಶರಣ ತತ್ವದ ಸಾರವಾಗಿದೆ ಎಂದು ಎಸ್.ಎಸ್. ಖೂಬಾ ಕಾಲೇಜಿನ ಉಪನ್ಯಾಸಕ ವೆಂಕಣ್ಣ ದೊಣ್ಣೆಗೌಡ್ ಅವರು ಅಭಿಪ್ರಾಯಪಟ್ಟರು.

ಇಲ್ಲಿಯ ಬಸವೇಶ್ವರ ದೇವಸ್ಥಾನದಲ್ಲಿ ಶನಿವಾರ ನಡೆದ ಶರಣತತ್ವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು. ದೇವರ ಹೆಸರಲ್ಲಿ ನಡೆಯುತ್ತಿರುವ ರಕ್ತಪಾತ, ಸುಲಿಗೆ ತಡೆಯಲು ಶರಣರ ತತ್ವಗಳನ್ನು ಪಾಲಿಸುವುದು ಅವಶ್ಯಕವಾಗಿದೆ ಎಂದರು.

ದೈವಜ್ಞ ಪ್ರಕಾಶ ವೈದ್ಯ ಕಂಪ್ಲಿ ಮಾತನಾಡಿ ಸತ್ಸಂಗದಿಂದ ಜೀವನದ ಮಟ್ಟವನ್ನು ಉತ್ತುಂಗಕ್ಕೆ ಏರಿಸಬಹುದು. ನಿಸ್ವಾರ್ಥ ಸೇವೆಯಿಂದ ಶರಣ ಸಂತರಂತೆ ಆಗಬಹುದು ಎಂದರು. ಸೋಮನಾಳ ಶರಣರು ಮಾತನಾಡಿ ಶರಣರ ನಾಡು ಧಾರ್ಮಿಕವಾಗಿ ಅಭಿವೃದ್ಧಿ ಹೊಂದಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.



ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನದಲ್ಲಿ ಶನಿವಾರ ನಡೆದ ಶರಣ ತತ್ವ ಚಿಂತನಗೋಷ್ಠಿಯನ್ನು ಅಭಿನವ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಸೋಮನಾಳ ಶರಣರು, ವೆಂಕಣ್ಣ ದೊಣ್ಣೆಗೌಡ್, ರೇವಣಪ್ಪ ವಾಂಜರಖೇಡ್, ಪಂಚಾಕ್ಷರಿ ಹಿರೇಮಠ, ಭೀಮಾಶಂಕರ ಬಿರಾದಾರ, ರುದ್ರಮಣಿ ಮಠಪತಿ ಪಾಲ್ಗೊಂಡಿದ್ದರು.

ಧಾರವಾಡದ ಕಂದಾಯ ಇಲಾಖೆ ಆಯುಕ್ತ ಷಡಕ್ಷರಯ್ಯ ಹಿರೇಮಠ, ಆಗರಖೇಡ ಜಗದೇವಿತಾಯಿ, ಮಾತನಾಡಿದರು.

ರೇವಣಪ್ಪ ರಾಯವಾಡೆ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ರುದ್ರೇಶ ಮಠಪತಿ, ಭೀಮಾಶಂಕರ ಬಿರಾದಾರ, ಶಾಂತಲಿಂಗ ಮಠಪತಿ, ಚಿತ್ರಶೇಖರ ಚಿರಳ್ಳಿ ಉಪಸ್ಥಿತರಿದ್ದರು. ಪಂಚಾಕ್ಷರಿ ಹಿರೇಮಠ ಸ್ವಾಗತಿಸಿದರು. ರುದ್ರಮಣಿ ಮಠಪತಿ ನಿರೂಪಿಸಿದರು.

ದಿನಾಂಕ 30-01-2009 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಮಹಾತ್ಮರ ವ್ಯಕ್ತಿತ್ವ ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು: ಶ್ರೀ ಘನಲಿಂಗ ಶಿವಾಚಾರ್ಯರು



ಬಸವಕಲ್ಯಾಣ, ಫೆ.11- ಪ್ರತಿಯೊಬ್ಬರ ಪುಣ್ಯ ಪುರುಷರ ಸ್ಮರಣೋತ್ಸವ ಮಾಡುವದರಿಂದ ಮಹಾತ್ಮರ ಸ್ಮರಣೋತ್ಸವ ಮಾಡುವದರಿಂದ ಮಹಾತ್ಮರ ವ್ಯಕ್ತಿತ್ವ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತ್ರಿಪುರಾಂತದ ಮರಿದೇವರ ಗುಡ್ಡದ ಶ್ರೀ ಷ.ಬ್ರ.ಘನಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಬಸವ ಕಲ್ಯಾಣದ ಬಿರಾದಾರ ಕಾಲೋನಿಯ ಪ್ರಾಂಗಣದಲ್ಲಿ ಲಿಂಗೈಕ್ಯ ವೇದಮೂರ್ತಿ ಶ್ರೀ ಸೋಮ ಶೇಖರ ಸ್ವಾಮಿ ಮಠಪತಿ ಅವರ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಮೌಲ್ಯಗಳ ಅಳಿವು- ಉಳಿವು ಮಾನವನ ಆಚರಣೆಯಲ್ಲಿವೆ. ನೀತಿವಂತರು ನಿರಾಶೆ ಆಗಬಾರದು. ನೋವು ನುಂಗಿ ನಲಿವನ್ನು ಹೊರ ತರಬೇಕಾಗಿದೆ. ಅಂಜದೇ ಹಿಡಿದ ಕೆಲಸವನ್ನು ಒಂದೇ ಮನಸ್ಸಿನಿಂದ ನೆರವೇರಿಸಿದರೆ, ಶ್ರೇಯಸ್ಸು ಪ್ರಾಪ್ತಿಯಾಗುವದರಲ್ಲಿ ಅನುಮಾನವಿಲ್ಲ. ಅಸಹನೆ, ಅಸಮಾಧಾನ, ಅತೃಪ್ತಿ, ಹೋಗಲಾಡಿಸಿಕೊಂಡವನೇ ನಿಜವಾದ ಧರ್ಮನಿಷ್ಠ, ತ್ಯಾಗ ಔದಾರ್ಯ ಮತ್ತು ಪ್ರಯತ್ನ ನಮ್ಮೆಲ್ಲರ ಗುರಿಯಾಗಬೇಕು ಎಂದು ನುಡಿದರು.

ಸೊಂತ ಗ್ರಾಮದ ಶ್ರೀ ಶಾಂತವೀರ ಶಿವಾಚಾರ್ಯರು, ಹುಡಗಿಯ ಶ್ರೀ ಚನ್ನವೀರ ಶಿವಾಚಾರ್ಯರು, ಕಮಲಾಪೂರದ ಶ್ರೀ ಶಾಂತವೀರ ದೇವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬಸವ ಕಲ್ಯಾಣ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಪ್ರಭುಲಿಂಗ ಸಾಲಿಮಠ, ರಾಷ್ಟ್ರ ಪ್ರಶಸ್ತಿ ವಿಜೇತರಾದ ಬಸಯ್ಯ ಸ್ವಾಮಿ ಕಮಠಾಣ, ಬಸವಲಿಂಗ ಶಂಕರಮಠ, ಸಿದ್ರಾಮಪ್ಪ ಆಲಗೂಡಕರ್, ಉಪಸ್ಥಿತರಿದ್ದರು. ಬಸವಂತ ರಾವ್ ಲಾವಾರೆ ಸ್ವಾಗತಿಸಿದರು. ರೇವಣಸಿದ್ದಯ್ಯ ಮಠಪತಿ ಕಾರ್ಯಕ್ರಮ ಸಂಯೋಜಿಸಿದರು. ರಮೇಶ ರಾಜೋಳ ನಿರೂಪಿಸಿದರು.

ದಿನಾಂಕ 12-2-2009 ಗುರುವಾರ [illegible] ಉತ್ತರ ಕರ್ನಾಟಕ ದಿನ ಪತ್ರಿಕೆ




ಬಸವಕಲ್ಯಾಣ: ಅಲ್ಲಂ ಪ್ರಭು ದೇವರ ಗದ್ದಿಗೆ ಮಠದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಯುವ ಧುರೀಣರಾದ ಸುನೀಲ ಪಾಟೀಲ, ಪಂಡಿತ ನಾಗರಾಳೆ ಅರವಿಂದ ಶೀಲವಂತ ಉಪಸ್ಥಿತರಿದ್ದರು.

ದಿನಾಂಕ 01-02-2009 ರವಿವಾರ ಪ್ರಜಾವಾಣಿ ದಿನ ಪತ್ರಿಕೆ

Scanned by CamScanner

## ರೇಣುಕಾಚಾರ್ಯ ಜಯಂತಿ ಆಚರಣೆಗೆ ನಿರ್ಧಾರ

ಬಸವಕಲ್ಯಾಣ, 1- ಪಟ್ಟಣದಲ್ಲಿ ಆದಿ ರೇಣುಕಾಚಾರ್ಯರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಆಚರಣೆ ಸಮಿತಿ ಮುಖ್ಯಸ್ಥ ಪಂಚಾಕ್ಷರಿ ಹಿರೇಮಠ ತಿಳಿಸಿದ್ದಾರೆ.

ಇದೇ ಮಿ. 9ರಂದು ಜಯಂತಿ ಆಚರಿಸಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಪೂರ್ವಸಿದ್ಧತಾ ಸಭೆ ನಡೆಸಲಾಗಿದೆ. ಘನಲಿಂಗ ಶಿವಾಚಾರ್ಯರು ಸಭೆಯ ನೇತೃತ್ವ ವಹಿಸಿದ್ದರು. ಸೋಮಶೇಖರ ವಸ್ತ್ರದ, ಶಿವಪುತ್ರಪ್ಪ ಕಾಡಾದಿ, ಸದಾನಂದ ರೇವಣಸಿದ್ದಯ್ಯ ವಸ್ತ್ರದ, ಲಿಂಗರಾಜ ಬಿರಾದಾರ, ಲಿಂಗಯ್ಯ ಸ್ವಾಮಿ ಸಭೆಯಲ್ಲಿದ್ದರು.

ದಿನಾಂಕ 2-3-2009 ಸೋಮವಾರ
ಸಂಯುಕ್ತ ಕರ್ನಾಟಕ ದಿನಪತ್ರಿಕೆ

ನಂದಿ ಮೂರ್ತಿ ಸ್ಥಾಪನೆ

## ಉತ್ತಮ ಸಂಸ್ಕಾರ ಅವಶ್ಯಕ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಪ್ರತಿಯೊಬ್ಬರು ಸಂಸ್ಕಾರಹೊಂದಿ ಧರ್ಮಿಷ್ಠರಾಗಿ ಬಾಳಬೇಕು ಎಂದು ತ್ರಿಪೂರಾಂತ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಸಂಗಮೇಶ್ವರ ಬಡಾವಣೆಯ ಶ್ರೀ ಸಂಗಮೇಶ್ವರ ದೇವಾಯಲದಲ್ಲಿ ಇತ್ತೀಚೆಗೆ ನಂದಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿ ಆಶೀರ್ವಚನ ನೀಡಿದ ಅವರು, ಮಾನವನು ಉತ್ತಮ ಸಂಸ್ಕಾರದಿಂದ ದೇವನಾಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ನಂದಿಮೂರ್ತಿಯ ಭಕ್ತಿ ಸೇವೆಯನ್ನು ಕು.ಶ್ರೀದೇವಿ ಮಹಾದೇವಪ್ಪ ಖಂಡಾಳೆ ಸಮರ್ಪಿಸಿದರು. ವೇದಮೂರ್ತಿ ವಿರುಪಾಕ್ಷಯ್ಯ ಮತ್ತು ರಾಜಶೇಖರ ಮಠಪತಿಯವರು ಸಂಗೀತ ವೇದ ಮಂತ್ರ ಘೋಷಣೆಗಳೊಂದಿಗೆ ನಂದಿ ಮೂರ್ತಿಯ ಸಂಸ್ಕಾರ ಪ್ರಕ್ರಿಯೆ ಮಾಡಿ ರುದ್ರಾಭಿಷೇಕ ನಡೆಸಿಕೊಟ್ಟರು.

ಮಾದಪ್ಪ ಖಂಡಾಳೆ ಇದೇ ಸಂದರ್ಭದಲ್ಲಿ ಪೂಜ್ಯರನ್ನು , ಪ್ರಮುಖರನ್ನು ಸನ್ಮಾನಿಸಿದರು. ಸಂಗಮೇಶ್ವರ ದೇವಸ್ಥಾನ ಪಂಚಕಮೀಟಿಯಿಂದ ತ್ರಿಪುರಾಂತ ಶ್ರೀಗಳನ್ನು ಮತ್ತು ಮಾದಪ್ಪ ಖಂಡಾಳೆ ದಂಪತಿಯನ್ನು ಕಮೀಟಿ ಉಪಾಧ್ಯಕ್ಷ ಎ.ಜಿ.ಪಾಟೀಲ್ ಸನ್ಮಾನಿಸಿದರು. ಶ್ರೀಶೈಲ್ ಹೂಡೇದ ವಂದಿಸಿದರು.

ದಿನಾಂಕ 27-2-2009 ಶುಕ್ರವಾರ
ವಿಜಯ ಕರ್ನಾಟಕ ದಿನಪತ್ರಿಕೆ.

## 8ರಂದು ರೇಣುಕಾಚಾರ್ಯ ಜಯಂತಿ

ಬಸವಕಲ್ಯಾಣ: ಇಲ್ಲಿಯ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಮಾರ್ಚ್ 8ಮತ್ತು 9ರಂದು ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

8ರಂದು ರಾತ್ರಿ ಭಜನೆ ಜಾಗರಣೆ ನಡೆಯುತ್ತದೆ. 9ರಂದು ಮುಂಜಾನೆ ವಿಶೇಷ ಪೂಜೆ, ನಗರದಲ್ಲಿ ಮೆರವಣಿಗೆ, ಧರ್ಮಸಭೆ ನಡೆಯುತ್ತದೆ. ಚನ್ನವೀರ ಶಿವಚಾರ್ಯರು, ರುದ್ರಮುನಿ ಶಿವಾಚಾರ್ಯರು, ರಾಜೇಶ್ವರ ಶಿವಾಚಾರ್ಯರು, ಶಾಂತವೀರ ಶಿವಾಚಾರ್ಯರು, ಹಾವಗಿ ಲಿಂಗೇಶ್ವರ ಶಿವಾಚಾರ್ಯರು, ಸಿದ್ಧಲಿಂಗ ಶಿವಾಚಾರ್ಯರು ಮೊದಲಾದವರು ಪಾಲ್ಗೊಳ್ಳುವರು.

ದಿನಾಂಕ 5-3-2009 ಗುರುವಾರ
ಪ್ರಜಾವಾಣಿ ದಿನಪತ್ರಿಕೆ.

## ಬಸವಕಲ್ಯಾಣದಲ್ಲಿ ನಾಳೆ ಜಗದ್ಗುರು ರೇಣುಕಾಚಾರ್ಯ ಜಯಂತಿ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ತ್ರಿಪೂರಾಂತನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ 8 ಮತ್ತು 9 ರಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಜರುಗಲಿದೆ.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಗವಿ ಮಠದ ವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ಸೋಮವಾರ ನಡೆಯಲಿದೆ. ಬೆಳಗ್ಗೆ 8ಕ್ಕೆ ಮೆರವಣಿಗೆಗೆ ಹಾರಕೂಡ ಶ್ರೀ ಚನ್ನವೀರ ಶಿವಾಚಾರ್ಯರು ಚಾಲನೆ ನೀಡಲಿದ್ದಾರೆ.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗಡಿಗೌಂಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದಾರೆ. ಶ್ರೀ ಮಳೇಂದ್ರ ಶಿವಾಚಾರ್ಯರು, ಶ್ರೀ ಶಿವಾನಂದ ಶಿವಾಚಾರ್ಯರು, ಶ್ರೀ ಹಾವಲಿಂಗೇಶ್ವರ ಶಿವಾಚಾರ್ಯರು, ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಗುಹೇಶ್ವರ ಮಹಾಸ್ವಾಮಿಗಳು, ಶ್ರೀ ಮುರಘೇಂದ್ರ ಮಹಾಸ್ವಾಮಿಗಳು, ಶ್ರೀ ಹೊನ್ನಲಿಂಗೇಶ್ವರ ಮಹಾಸ್ವಾಮಿಗಳು ನೇತೃತ್ವ ವಹಿಸುವರು.

ಬೆಳಗ್ಗೆ 11ಕ್ಕೆ ಧಾರ್ಮಿಕ ಕಾರ್ಯಕ್ರಮ ಶ್ರೀಗಳ ಸಾನ್ನಿಧ್ಯವಲ್ಲಿ ನಡೆಯಲಿದ್ದು, ತ್ರಿಪೂರಾಂತ ಗವಿಮಠದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಅಧ್ಯಕ್ಷತೆ ವಹಿಸುವರು. ಶಾಸಕ ಬಸವರಾಜಪಾಟೀಲ್ ಅಟ್ಟೂರ್ ಉದ್ಘಾಟಿಸುವರು. ಶ್ರೀ ಗುರುಲಿಂಗಪ್ಪ ಶಿವಶರಣರು (ಸೋಮನಾಳ ಶರಣರು), ಕಂಪ್ಲಿಯ ದೈವಜ್ಞ ಪ್ರಕಾಶ ವೈದ್ಯರು ಉಪಸ್ಥಿತರಿರುವರು.

**ಸಿಡಿ ಬಿಡುಗಡೆ**

ಇದೇ ಸಂದರ್ಭದಲ್ಲಿ ಜಂಗಮ ಪಾದ ಪೂಜಾ ಸಿಡಿ ಕ್ಯಾಸೆಟ್ ಶಂಕರ ಗೌಡಾ ದಾದಾಗೌಡಾ ಪಾಟೀಲ್ ಬಿಡುಗಡೆ ಮಾಡುವರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಆರ್‌ಟಿಓ ಸಂಜುಕುಮಾರ ವಾಡಿಕರ್, ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟೆ, ಉಪಾಧ್ಯಕ್ಷ ರವಿ ಗಾಯಕವಾಡ, ಜಿಪಂ ಸದಸ್ಯ ಸಂಜುಕುಮಾರ ಕಾಳೇಕರ್, ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿ ಅಧ್ಯಕ್ಷ ಗುರುನಾಥ ಲಾತೂರೆ, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಸಿಪಿಐ ಪಠಾಣ, ಪಿಎಸ್‌ಐ ಸಿದ್ರಾಮಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಗನ್ನಾಥ ಪತಂಗೆ ಇತರರು ಭಾಗವಹಿಸಲಿದ್ದಾರೆ.

ದಿನಾಂಕ 7-3-2009 ಶನಿವಾರ ವಿಜಯ
ಕರ್ನಾಟಕ ದಿನಪತ್ರಿಕೆ

## 15ನೇ ಕಲಾ ಮಹೋತ್ಸವ 15ಕ್ಕೆ

ಬಸವಕಲ್ಯಾಣ: ಜೈ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 15ನೇ ಕಲಾ ಮಹೋತ್ಸವ ವಿದ್ಯಾಲಯದ ಕಲಾನಿಕೇತನಲ್ಲಿ ಭಾನುವಾರ ಜರುಗಲಿದೆ.

ಸಂಜೆ 4 ಗಂಟೆಗೆ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ.ಜೆ.ಎಸ್.ಖಡೇರಾವ್ ಮಹೋತ್ಸವಕ್ಕೆ ಚಾಲನೆ ನೀಡುವರು. ತ್ರಿಪೂರಾಂತದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಸರಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಎಂ.ಎಂ.ತಂಬಾಕೆ ಅಧ್ಯಕ್ಷತೆ ವಹಿಸುವರು. ಗುಲ್ಬರ್ಗದ ದಿ ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್ ಪ್ರಾಚಾರ್ಯ ಬಸವರಾಜ ಜಾನೆ, ಕಲಾವಿದ ದೇವೀಂದ್ರಪ್ಪ ತೋಟನಹಳ್ಳಿ ಭಾಗವಹಿಸುವರು ಎಂದು ಚಿತ್ರಕಲಾ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ತಿಳಿಸಿದ್ದಾರೆ. ಭಾನುವಾರ ಮತ್ತು ಸೋಮವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಚಿತ್ರಕಲಾ ಪ್ರದರ್ಶನ ಇರಲಿದೆ.

ದಿನಾಂಕ 14-3-2009 ಶನಿವಾರ
ವಿಜಯ ಕರ್ನಾಟಕ ದಿನಪತ್ರಿಕೆ.

Scanned by CamScanner

# ಚಿತ್ರಕಲೆ ಭಾವನೆಗಳ ಅಭಿವ್ಯಕ್ತಿ: ಖಂಡೇರಾವ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಚಿತ್ರಕಲೆ ಭಾವನೆಗಳ ಅಭಿವ್ಯಕ್ತಿಯಾಗಿದೆ ಎಂದು ಹಿರಿಯ ಕಲಾವಿದ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಜಿ.ಎಸ್.ಖಂಡೇರಾವ ಅಭಿಪ್ರಾಯಪಟ್ಟರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ಸಂಜೆ ನಡೆದ 15ನೇ ಕಲಾ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಈಚೆಗೆ ಕರಕುಶಲ ವಸ್ತುಗಳನ್ನು ತಯಾರಿಸುವವರು ಸಹ ಚಿತ್ರಕಲಾವಿದರು ಎಂದು ಹೇಳಿಕೊಳ್ಳುತ್ತಿರುವುದು ಸರಿಯಲ್ಲ ಎಂದರು. ಕಲೆ ಸಮಾಜದ ಒಳಿತಿಗಾಗಿ ಇರಬೇಕು. ಚಿತ್ರಕಲಾವಿದ ದಿನನಿತ್ಯದ ಆಗುಹೋಗುಗಳಿಗೆ ಸದಾ ಸ್ಪಂದಿಸುತ್ತಿರಬೇಕು ಎಂದರು.

ಕಲಾವಿದ ಬಸವರಾಜ ಜಾನೆ ಮಾತನಾಡಿ ಬಣ್ಣ, ಗೆರೆ, ನೆರಳು ಬೆಳಕಿನ ಉತ್ತಮ ಸಂಯೋಜನೆ ಕಲಾಕೃತಿಗೆ ಬೆಲೆ ತಂದುಕೊಡುತ್ತದೆ ಎಂದರು.

ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಕಲೆ ಹಾಗೂ ಕಲಾವಿದರನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸಮಾಜದ ಮೇಲಿದೆ ಎಂದರು. ಎಂ.ಎಂ.ತಂಬಾಕೆ, ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.

ಈ ಸಂದರ್ಭದಲ್ಲಿ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ ಹಾಗೂ ಲಂಬಾಣಿ ಭಾಷೆ ಕುರಿತು ಪಿಎಚ್‌ಡಿ ಪಡೆದ ಡಾ.ಸಂತೋಷ ಪವಾರ ಗೌರ್ ಇವರಿಗೆ 'ಸಾಹಿತ್ಯ ರತ್ನ'ಪ್ರಶಸ್ತಿ ಕೊಟ್ಟು ಸನ್ಮಾನಿಸಲಾಯಿತು. ಸುಮತಿ ಮೇತ್ರೆಗೆ ವರ್ಷದ ಆದರ್ಶ ವಿದ್ಯಾರ್ಥಿ ಎಂದು ಆಯ್ಕೆ ಮಾಡಿ ಬಹುಮಾನ ವಿತರಿಸಲಾಯಿತು.

ಅಕ್ಕಮಹಾದೇವಿ, ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಬಸವರಾಜ ವರಕಾಲೆ, ರೇವಣಸಿದ್ಧ ಡೊಂಗರೆ, ನಾಗಪ್ಪ ನಿಣ್ಣೆ, ಚಂದ್ರಕಾಂತ ಸ್ವಾಮಿ, ಪಾರ್ವತಿ ಟಂಕಸಾಲಿಮಠ ಪಾಲ್ಗೊಂಡಿದ್ದರು. ರಮೇಶ ರಾಜೋಳೆ ನಿರೂಪಿಸಿದರು.




ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ಸಂಜೆ ನಡೆದ ಕಲಾಮಹೋತ್ಸವದಲ್ಲಿ ಹಿರಿಯ ಚಿತ್ರಕಲಾವಿದ ಜಿ.ಎಸ್.ಖಂಡೇರಾವ, ಅಭಿನವ ರುದ್ರಮುನಿ ಶಿವಾಚಾರ್ಯರು, ಎಂ.ಎಂ.ತಂಬಾಕೆ, ಪ್ರಭುಲಿಂಗಯ್ಯ ಪಾಲ್ಗೊಂಡಿದ್ದರು.

ದಿನಾಂಕ 17-3-2009 ಮಂಗಳವಾರ ಪ್ರಜಾವಾಣಿ ದಿನಪತ್ರಿಕೆ.

# ಕುಂಚದಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿ ಬರಲಿ: ಡಾ.ಖಂಡೆರಾವ

ಬಸವಕಲ್ಯಾಣ, 16- ನಿಜವಾದ ಪ್ರತಿಭೆಯುಳ್ಳ ಚಿತ್ರಕಲಾವಿದನಲ್ಲಿ ಸಮಾಜಿಕ ಪ್ರಜ್ಞೆಯ ದಿಟ್ಟ ಪ್ರತಿಭೆ ಅವನ ಕುಂಚದಲ್ಲಿ ಮೂಡಿ ನಿಂತಾಗ ಮಾತ್ರ ಕಲಾವಿದನಿಗೂ ಗೌರವ, ಆತನ ಕಲಾ ಪ್ರತಿಭೆಗೂ ಗೌರವ ಎಂದು ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಡಾ. ಜಿ.ಎಸ್. ಖಂಡೆರಾವ ಹೇಳಿದರು.

ನಗರದ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಕಲಾ ಮಹೊತ್ಸವದ ಅತಿಥಿಗಳಾಗಿ ಮಾತನಾಡುತ್ತ, ಚಿತ್ರಕಲಾವಿದರಿಗೆ ಅವರದೇ ಆದ ಸಾಮಾಜಿಕ ಜವಾಬ್ದಾರಿಗಳಿವೆ. ಅದರಂತೆ ಬದುಕುವದು ಅವರ ಕಲಾ ಧರ್ಮವಾಗಬೇಕೆಂದು ಕಾರ್ಯಕ್ರಮ ಸಾನಿಧ್ಯವಹಿಸಿದ ತಿಪ್ರಾಂತಿ ಮರಿದೇವರ ಗುಡ್ಡದ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಲಾವಂತಿಕೆಯಲ್ಲಿ ಧರ್ಮ ಪರಂಪರೆ ಬೆಳೆಸಿಕೊಳ್ಳಬೇಕೆಂದರು. ಕಾರ್ಯಕ್ರಮದಲ್ಲಿ ಪ್ರೊ.ಎಂ.ಎಂ.ತಂಬಾಕೆ, ಡಾ. ಗವಿಸಿದ್ದಪ್ಪಾ ಪಾಟೀಲ, ಡಾ.ಸಂತೋಷ ಪವಾರ ಅವರನ್ನು ಸತ್ಕರಿಸಲಾಯಿತು. ಸೂರ್ಯಕಾಂತ ಶೀಲವಂತ ಬಸವರಾಜು ಮರ್ಕಾಲೆ, ಅಶೋಕ ಎಂ.ಬಿ., ರೇವಣಸಿದ್ದ ಡೊಂಗರಕೆ ಮುಂತಾದವರು ಪಾಲ್ಗೊಂಡಿದ್ದರು. ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಚಾರ್ಯ ಪ್ರಭುಲಿಂಗ ಟೆಂಕಸಾಲಮಠ ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು. ನಾಗಪ್ಪಾ ನಿಣ್ಣ ವಂದಿಸಿದರು. ಕಲಾನೀಕೇತನದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕರಿಸಲಾಯಿತು.

ದಿನಾಂಕ 17-3-2009 ಮಂಗಳವಾರ
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ.

# ಕಲೆಗೆ ಭಾವನೆ ಅಭಿವ್ಯಕ್ತಗೊಳಿಸುವ ಶಕ್ತಿಯಿದೆ: ಖಂಡೇರಾವ್

ಬಸವಕಲ್ಯಾಣ: ಕಲೆಗೆ ಭಾವನೆ ಅಭಿವ್ಯಕ್ತಗೊಳಿಸುವ ಮತ್ತು ಹೊಸ ವಿಷಯಗಳನ್ನು ಸೃಷ್ಟಿಸುವ ಶಕ್ತಿ ಇದೆ ಎಂದು ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ. ಜಿ.ಎಸ್. ಖಂಡೇರಾವ್ ಅಭಿಪ್ರಾಯಪಟ್ಟರು.

ಅವರು ನಗರದ ಕಲಾ ನಿಕೇತನದಲ್ಲಿ ಜೈ ಕರ್ನಾಟಕ ಶಿಕ್ಷಣ ಸಂಸ್ಥೆ ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ ಕಲಾ ಮಹೋತ್ಸವ ಉದ್ಘಾಟಿಸಿ ಮಾತನಾಡಿ, ಕಲೆ ಸಂಸ್ಕೃತಿಯ ಆತ್ಮ. ಸೃಜನಶೀಲತೆಯಲ್ಲಿ ಕಲಾವಿದರ ಯೋಗ್ಯತೆ ಅಡಗಿದೆ ಎಂದರು. ಕಲಾವಿದನಲ್ಲಿ ಸಮಾಜ ಪರ ಕಳಕಳಿ ಅಗತ್ಯ. ಸಮಕಾಲೀನ ಸ್ಫೂರ್ತಿಯನ್ನು ಕಲೆಯಲ್ಲಿ ಬಿಂಬಿಸುವವನೇ ನಿಜವಾದ ಕಲಾವಿದ. ಈ ನಿಟ್ಟಿನಲ್ಲಿ ಯುವ ಕಲಾವಿದರು ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಎಂ ತಂಬಾಕೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆ ಮತ್ತು ಕಲಾವಿದರನ್ನು ಬೆಳೆಸಿ ಪ್ರೋತ್ಸಾಹಿಸುವ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತ್ರಿಪುರಾಂತದ ಪೂಜ್ಯ ಅಭಿನವ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರೆ, ರಮೇಶ ರಾಜೋಳೆ ನಿರೂಪಿಸಿ, ನಾಗಪ್ಪ ನಿಣ್ಣೆ ವಂದಿಸಿದರು.

ಕಾರ್ಯಕ್ರಮದಲ್ಲಿ ಬಸವರಾಜ ಜಾನೆ, ದೇವಿಂದ್ರಪ್ಪ ತೋಟನಹಳ್ಳಿ, ಪ್ರೊ. ಸೂರ್ಯಕಾಂತ ಶೀಲವಂತ, ಬಸವರಾಜ ವರಕಾಲೆ ಮತ್ತು ಜವರೇಗೌಡ ಉಪಸ್ಥಿತರಿದ್ದರು. ಕಲಾ ಮಹೋತ್ಸವ ನಿಮಿತ್ತ ಕಾಲೇಜಿನಲ್ಲಿ ಎರಡು ದಿನಗಳ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿತ್ತು.

ದಿನಾಂಕ 17-3-2009 ಮಂಗಳವಾರ ಕನ್ನಡ ಪ್ರಭಾ ದಿನಪತ್ರಿಕೆ

Scanned by CamScanner

# ಮಾ.9ರಂದು ಜಗದ್ಗುರು ಶ್ರೀರೇಣುಕಾಚಾರ್ಯ ಜಯಂತಿ ಮಹೋತ್ಸವ

ಬಸವಕಲ್ಯಾಣ 5: ತ್ರಿಪುರಾಂತದ ಮರಿದೇವರ ಗುಡ್ಡ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮಠದಲ್ಲಿ ಜರುಗುವ ಜಗದ್ಗುರು ಶ್ರೀ ರೇಣುಕಾದೇವಿ ಜಯಂತಿ ಮಹೋತ್ಸವ ಅತಿ ವಿಜ್ರಂಬಣೆಯಿಂದ ಆಚರಿಸುತ್ತಿದು ಅಂದು ಬೆಳಗ್ಗೆ 8ಗಂಟ್ಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಿಂದ ಶ್ರೀ ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ಸೂಕ್ಷೇತ್ರ ಸಾರಕೂಡದ ಪೂಜ್ಯ ಶ್ರೀ ಷ.ಬ್ರ ಚನ್ನವೀರ ಶಿವಾಚಾರ್ಯರ ಅಮೃತ ಹಸ್ತದಿಂದ ಉದ್ಘಾಟನೆಗೊಂಡು ಮುಖ್ಯ ಬಿದಿಗಳಿಂದ ಹಾದು ತ್ರಿಪೂರಾಂತದ ಶ್ರೀ ಮಠಕ್ಕೆ ತಲೂಪಿದ ಮೇಲೆ ಧರ್ಮ ಸಭೆ ಜರುಗುವುದು, ಸಭೆಯ ದಿವ್ಯಸಾನಿಧ್ಯ ಶ್ರೀ ಷ.ಬ್ರ ರಾಜೇಶ್ವರ ಶಿವಾಚಾರ್ಯರು, ಶ್ರೀ ಷ.ಬ್ರ ಶಾಂತವೀರ ಶಿವಾಚಾರ್ಯರು, ನೆತ್ರತ್ವ ಶ್ರೀ ಷ.ಬ್ರ ಮಳೇಂದ್ರ ಶಿವಾಚಾರ್ಯರು ಶ್ರೀ ಷ.ಬ್ರ ಶಿವಾನಂದ ಶಿವಾಚಾರ್ಯರು, ಶ್ರೀ ಷ.ಬ್ರ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಶ್ರೀ ಷ.ಬ್ರ ಸಿದ್ದಲಿಂಗ ಶಿವಾಚಾರ್ಯರು, ಶ್ರೀ ಮ.ನಿ.ಪ್ರ

(8ನೇ ಪುಟಕ್ಕೆ)

# ಮಾ.9ರಂದು ಜಗದ್ಗುರು ಶ್ರೀರೇಣುಕಾಚಾರ್ಯ ಜಯಂತಿ ಮಹೋತ್ಸವ

(1ನೇ ಪುಟದಿಂದ)

ಗುಹೇಶ್ವರ ಮಹಾಸ್ವಾಮಿಗಳು, ಶ್ರೀ ಮ.ನಿ.ಪ್ರ ಮುರುಘೇಂದ್ರ ಮಹಸ್ವಾಮಿಗಳು ಶ್ರೀ ಮ.ನಿ.ಪ್ರ ಹೊನ್ನಲಿಂಗೇಶ್ವರ ಮಹಾ ಸ್ವಾಮಿಗಳು ವಹಿಸುವರು, ಕರ್ಯಕ್ರಮದ ಉದ್ಘಾಟಕರಾಗಿ ಶಾಸಕರಾದ ಬಸವರಾಜ ಪಾಟೀಲ ಅಟ್ಟೂರ, ಧರ್ಮ ಸಭೆಯ ಅಧ್ಯಕ್ಷತೆ ತ್ರಿಪೂರಾಂತಗವಿ ಮಠದ ಪಿಠಾದಿಪತಿಗಳಾದ ಶ್ರೀ ಷ.ಬ್ರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಹಿಸುವರು ಜಂಗಮ್ಮ ಪಾದ ಪೂಜಾ ಸಿ.ಡಿ.ಕ್ಯಾಶೇಟ ಬಿಡುಗಡೆ ಶಂಕರ ಗೌಡ ದಾದಗೌಡ ಪಟೀಲ ಇವರಿಂದ ಬಿಡುಗಡೆ ಯಾಗಲ್ಲಿದು ಮುಖ್ಯ ಅತಿಥಿಗಳಗಿ ಮಜಿ ಶಾಸಕರಾದ ಮಲ್ಲಿಕಕಜುಧನ ಖೂಬಾ, ಆರ್.ಟಿ.ಓ, ಸಂಜೀವಕುಮಾರ ವಾಡೆಕರ, ನಗರ ಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟಿ, ಉಪಾಧ್ಯಕ್ಷ ರವಿ ಗಾಯಕವಾಡ, ಜಿ.ಪಂ. ಸದಸ್ಯ ಸಂಜುಕಾಳೆಕರ, ಎ.ಪಿ.ಎಂ.ಸಿ.ಅಧ್ಯಕ್ಷ ಸಿದ್ರಾಮಪ್ಪಾ ಗುದಗೆ, ಕ.ಸಾ.ಪ.ಅಧ್ಯಕ್ಷ ಪಿ.ಬಿ.ಟಂಕ ಸಾಲಿಮಠ, ಸಿ.ಪಿ.ಐ.ಎಚ್.ಕೆ.ಪಠಾಣ, ಸಿದ್ರಾಮಯ್ಯ ಬಿ.ಎಮ್, ಪ್ರಾಥಮಿಕ ಶಿಕ್ಷಕಸಂಘದ ಜಿಲ್ಲಾ ಅಧ್ಯಕ್ಷ ಜಗನ್ನಾಥ ಪತಂಗೆ, ಬ.ದೇ.ಪಂ.ಕ.ಅಧ್ಯಕ್ಷ ಗುರುನಾಥ ಲಾತೂರೆ, ಈಶ್ವರ ಎನ್.ಪರಿಟ, ರಾಜಕುಮಾರ ಎಸ್.ಸುಗರೆ, ಪಂಚಾಕ್ಷರಿ ಜಿ, ಹಿರೇಮಠ, ನಗರ ಸಭೆ ಸದಸ್ಯರಾದ ಶ್ರೀಮಂತಿ ಚಮಾಬಾಯಿ ಬಾಬುರಾವ ಮಾಳಿ, ಮಂಗಲಾಬಾಯಿ ಎಚ.ಉದ್ರೆ, ಧಾನಮ್ಮಾ ಅರುಣಕುಮಾರ ಸ್ವಾಮಿ, ಅನೀತಾ ಸಂಜೀವಕುಮಾರ ಹಜಾರಿ ಭಾಗ ವಹಿಸುವರು ನಿರುಪಣೆ ಪ್ರೊ. ರಮೇಶ ರಾಜೋಳೆ, ನಡೆಸಿಕೊಡುವರು. ಬೇಲೂರಿನ ಭಜನಾಮಂಡಳಿ ಅಕ್ಕನಬಳಗದವರಿಂದ ಇಡಿ ರಾತ್ರಿ ಭಜನೆ ಕರ್ಯಕ್ರಮ ಜರುಗುವದೆಂದು ಉತ್ಸವ ಸ್ವಾಗತ ಸಮೀತಿ ಅಧ್ಯಕ್ಷರಾದ ಲಿಂಗರಾಜ ಬೀರಾದರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ 6-3-2009 ಶುಕ್ರವಾರ ಉತ್ತರ ಕರ್ನಾಟಕ ದಿನಪತ್ರಿಕೆ.

## ಸಂಕ್ಷಿಪ್ತ ಸುದ್ದಿ

### ಇಂದು ಕಸಾಪ ಘಟಕ ಉದ್ಘಾಟನೆ

ಬಸವಕಲ್ಯಾಣ: ಕರ್ನಾಟಕ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭ ಆಗಸ್ಟ್ 28ರಂದು ಮುಂಜಾನೆ 11ಗಂಟೆಗೆ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಲಿದೆ.

ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ದೇವರು ಸಾನಿಧ್ಯದಲ್ಲಿ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ ಉದ್ಘಾಟಿಸುವರು. ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಪಂಚಾಕ್ಷರಿ ಹಿರೇಮಠ ಅಧ್ಯಕ್ಷತೆ ವಹಿಸುವರು.

ದಿನಾಂಕ 28-8-2009 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ

(ವರದಿ-ನಾಗಪ್ಪ ನಿಣ್ಣೆ)

ಬಸವಕಲ್ಯಾಣ,ಮಾ.೪-ತಾಲ್ಲೂಕಿನ ತ್ರಿಪೂರಾಂತ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ (ಮರಿದೇವರ ಗುಡ್ಡ) ದಲ್ಲಿ ದಿನಾಂಕ-೩-೦೯ ರಂದು ಸೋಮವಾರ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ ಅದ್ದೂರಿ ಯಾಗಿ ನಡೆಯಲಿದ್ದು ಶ್ರೀ.ಷ.ಬ್ರ. ಅಭಿನವರುದ್ರ ಮುನಿ ಶಿವಾಚಾರ್ಯರ ಅಪ್ಪಣೆ ಮೇರೆಗೆ ಹಾಗೂ ಶ್ರೀ ಕರಬಸಯ್ಯಾ ಸ್ವಾಮಿ ಇವರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾ ಚಾರ್ಯರ ಲಿಂಗೋದ್ಭವ ಮೂರ್ತಿಗೆ ಕರ್ತೃ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಮಹಾರುದ್ರಾಭಿಷೇಕ ಹಾಗೂ ಪೂಜ್ಯ ಶ್ರೀಗಳಿಂದ ಲಿಂಗ ದೀಕ್ಷಾ ಕಾರ್ಯಕ್ರಮ ಜರುಗುವುದು.

ಅಂದು ಮೆರವಣಿಗೆ ಬೆಳ್ಳಿಗೆ ೮ ಗಂಟೆಗೆ ಬಸವೇಶ್ವರ ದೇವಸ್ಥಾನ ದಿಂದ ಮರಿದೇವರ ಗುಡ್ಡದ ವರೆಗೆ ಜಗದ್ಗುರು ರೇಣುಕಾ ಚಾರ್ಯರ ಭಾವ ಚಿತ್ರ ಮೆರವಣಿಗೆ ಉದ್ಘಾಟನೆ ಯನ್ನು ಶ್ರೀ ಷ.ಬ್ರ. ಚೆನ್ನವೀರ ಶಿವಾಚಾರ್ಯರು ಹಾರಕೂಡ ಇವರ ಅಮೃತ ಹಸ್ತದಿಂದ ಜರುಗುವುದು ತಡೋಳಾದ ಶ್ರೀ ಷ.ಬ್ರ. ರಾಜೇಶ್ವರ ಶಿವಾಚಾರ್ಯರು ತಡೋಳಾ ಇವರ ದಿವ್ಯ ಸಾನಿಧ್ಯದಲ್ಲಿ ಅನೇಕ ಹರಗುರು ಚರಮೂರ್ತಿಗಳು ಭಾಗವಹಿಸುವರು. ಮಧ್ಯಾಹ್ನ ಹನ್ನೊಂದು ಗಂಟೆಗೆ ಧಾರ್ಮಿಕ ಸಮಾರಂಭ ನಡೆಯುವುದು. ಉದ್ಘಾಟನೆಯನ್ನು ಶಾಸಕರಾದ ಬಸವರಾಜ ಪಾಟೀಲ ಅಟ್ಟೂರ ಅಧ್ಯಕ್ಷತೆಯನ್ನು ಶ್ರೀ. ಷ.ಬ್ರ.ಅಭಿನವ ರುದ್ರಮುನಿ ಶಿವಾಚಾರ್ಯರು ಗವಿಮಠ ವಹಿಸುವರು.

ಇದೇ ಸಂದರ್ಭದಲ್ಲಿ ಜಂಗಮ ಪಾದ ಪೂಜಾ ಸಿ.ಡಿ. ಕ್ಯಾಸೆಟ ಬಿಡುಗಡೆ ಶ್ರೀ ಶಂಕರ ಗೌಡಾ ದಾದಾಗೌಡ ಪಾಟೀಲ ಇಂಡಿ ಇವರಿಂದ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಜಿಗಾಂವದ ಆರ್.ಟಿ.ಓ. ಸಂಜೀವಕುಮಾರ [illegible], ನಗರ ಸಭೆ ಅಧ್ಯಕ್ಷರಾದ ಗುರುರಾಜ ಶಾಶೆಟ್ಟಿನೊಳ್ಳ ಗೊಂಡಂತೆ ಅನೇಕ ಸಂಘ ಸಂಸ್ಥೆಯ ಅಧ್ಯಕ್ಷರು ಸದಸ್ಯರು, ಭಾಗವಹಿಸುವರು ನಿರೂಪಣೆ ಯನ್ನು ಶ್ರೀ ರಮೇಶ ರಾಜೋಳೆ ನಿರ್ವಹಿಸುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ದಿನಾಂಕ 5-3-2009 ಗುರುವಾರ [illegible]
ದಿನ ಪತ್ರಿಕೆ.

# ಮೌಲ್ಯಗಳ ಅಳಿವು ಉಳಿವು ಮಾನವನ ಆಚರಣೆಯಲ್ಲಿವೆ :ಘನಲಿಂಗ ಶಿವಾಚಾರ್ಯರು

(ವರದಿ-ನಾಗಪ್ಪ ನಿಣ್ಣೆ)

ಬಸವಕಲ್ಯಾಣ,ಫೆ.14-ಪ್ರತಿಯೊಬ್ಬರ ಪುಣ್ಯ ಪುರುಷರ ಸ್ಮರಣೋತ್ಸವ ಮಾಡುವದರಿಂದ ಮಹಾತ್ಮರ ಸ್ಮರಣೋತ್ಸವ ಮಾಡುವದರಿಂದ ಮಹಾತ್ಮರ ವ್ಯಕ್ತಿತ್ವ ನಮ್ಮ ಜೀವನ ದಲ್ಲಿ ಅಳವಡಿಸಿಕೊಳ್ಳಬೇಕೆಂದು ತ್ರಿಪೂರಾಂತದ ಮರಿದೇವರ ಗುಡ್ಡದ ಶ್ರೀ. ಷ.ಬ್ರ. ಘನಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಇಲ್ಲಿನ ಬಿರಾದಾರ ಕಾಲೋನಿಯ ಪ್ರಾಂಗಣದಲ್ಲಿ ಲಿಂಗೈಕ್ಯ ವೇದಮೂರ್ತಿ ಶ್ರೀ ಸೋಮಶೇಖರಸ್ವಾಮಿ ಮಠಪತಿ ಅವರ ಪುಣ್ಯ ಸ್ಮರಣೋತ್ಸವ ಕಾರ್ಯ ಕ್ರಮದ ಸಾನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಮೌಲ್ಯಗಳ ಅಳಿವು-ಉಳಿವು ಮಾನವನ ಆಚರಣೆ ಯಲ್ಲಿವೆ. ನೀತಿವಂತರು ನಿರಾಶೆ ಆಗಬಾರದು. ನೋವು ನುಮಗಿ ನಲಿವನ್ನು ಹೊರ ತರಬೇಕಾಗಿದೆ. ಅಂಜದೇ ಹಿಡಿದ ಕೆಲಸವನ್ನು ಒಂದೇ ಮನಸ್ಸಿನಿಂದ ನೆರವೇರಿಸಿದರೆ, ಶ್ರೇಯಸ್ಸು ಪ್ರಾಪ್ತಿಯಾಗುವುದರಲ್ಲಿ ಅನುಮಾನವಿಲ್ಲ.

ಸೊಂತ ಗ್ರಾಮದ ಶ್ರೀ ಶಾಂತವೀರ ಶಿವಾಚಾರ್ಯರು, ಹುಡಗಿಯ ಶ್ರೀ ಚನ್ನವೀರ ಶಿವಾಚಾರ್ಯರು, ಕಮಲಾಪೂರದ ಶ್ರೀ ಶಾಂತವೀರ ದೇವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಪ್ರಭುಲಿಂಗಯ್ಯ ಟಂಕಸಾಲಿಮಠ, ರಾಷ್ಟ್ರ ಪ್ರಶಸ್ತಿ ವಿಜೇತರಾದ ಬಸಯ್ಯ ಸ್ವಾಮಿ ಕಮಠಾಣ, ಬಸವಲಿಂಗ ಶಂಕರಮಠ, ಸಿದ್ರಾಮಪ್ಪ ಆಲಗೂಡಕರ, ಉಪಸ್ಥಿತರಿದ್ದರು. ಬಸವಂತರಾವ್ ಲವಾರೆ ಸ್ವಾಗತಿಸಿದರು.

ರೇವಣಸಿದ್ದಯ್ಯ ಮಠಪತಿ ಕಾರ್ಯಕ್ರಮ ಸಂಯೋಜಿಸಿದರು. ರಮೇಶ ರಾಜೋಳ ನಿರೂಪಿಸಿದರು.

ದಿನಾಂಕ 15-2-2009 ರವಿವಾರ [illegible] ದಿನ ಪತ್ರಿಕೆ.

Scanned by CamScanner



ಬಸವಕಲ್ಯಾಣದಲ್ಲಿ ಭಾನುವಾರ ಶೀಲವಂತ ಅಕ್ಕಸಾಲಿಗ ಸಮಾಜ ಸಂಘವನ್ನು ಸರಡಗಿ ರೇವಣಸಿದ್ಧ ಶಿವಾಚಾರ್ಯರು ಉದ್ಘಾಟಿಸಿದರು. ಅಭಿನವ ರುದ್ರಮುನಿ ಶಿವಾಚಾರ್ಯರು, ಪ್ರಕಾಶ ತೂಗಾವೆ, ಸುಭಾಷ ಆಳಂದಕರ್, ಅಶೋಕ ಕೋಟೆ ಪಾಲ್ಗೊಂಡಿದ್ದರು.

# ಸಂಘಟಿತರಾಗಲು ಸಲಹೆ

ಬಸವಕಲ್ಯಾಣ: ಅಕ್ಕಸಾಲಿಗ ಕೆಲಸ ನಿರ್ವಹಿಸುವ ಶೀಲವಂತರು ಕಾಯಕ ಜೀವಿಗಳು. ಆದರೆ ಸಂಘಟಿತರಾಗಿಲ್ಲ ಸಮಾಜ ಸಂಘಟನೆ ಬಲಗೊಳಿಸುವುದು ಅವಶ್ಯಕವಾಗಿದೆ ಎಂದು ಶ್ರೀನಿವಾಸ ಸರಡಗಿ ರೇವಣಸಿದ್ಧ ಶಿವಾಚಾರ್ಯರು ಅಭಿಪ್ರಾಯ ಪಟ್ಟರು. ಇಲ್ಲಿನ ಪ್ರಭುದೇವರ ಗದ್ದುಗೆ ಮಠದಲ್ಲಿ ಭಾನುವಾರ ಶೀಲವಂತ ಅಕ್ಕಸಾಲಿಗ ಸಮಾಜ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತ್ರಿಪುರಾಂತ ಮರಿದೇವರ ಗುಡ್ಡದ ಅಭಿನವ ರುದ್ರಮುನಿ ಶಿವಾಚಾರ್ಯರು, ಸಂಘದ ತಾಲ್ಲೂಕು ಅಧ್ಯಕ್ಷ ಪ್ರಕಾಶ ತೂಗಾವೆ, ಅಖಿಲ ಭಾರತ ವೀರಶೈವ ಮಹಾಸಭೆ ತಾಲ್ಲೂಕು ಅಧ್ಯಕ್ಷ ದಯಾನಂದ ಶೀಲವಂತ, ಅಕ್ಕಮಹಾದೇವಿ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಶಿಕ್ಷಕಿ ಕಲ್ಪನಾ ಶೀಲವಂತ ಮಾತನಾಡಿದರು.

ಗುಲ್ಬರ್ಗ ಶೀಲವಂತ ಅಕ್ಕಸಾಲಿಗ ಸಮಾಜ ಸಂಘದ ಅಧ್ಯಕ್ಷ ಸುಭಾಷ ಆಳಂದಕರ್, ಸಿದ್ಧರಾಮ ಸೋಮಪುರ ಗುಲ್ಬರ್ಗ, ಸಮಾಜದ ಬೀದರ ಜಿಲ್ಲಾ ಅಧ್ಯಕ್ಷ ಅಶೋಕ ಕೋಟೆ, ಬಂಡೆಪ್ಪ ಹಾಗರಗಿ, ಪ್ರಮುಖರಾದ ಚನ್ನಪ್ಪ ರಾಜಾಪುರೆ, ಉಮೇಶ ಶೀಲವಂತ, ಬಾಬು ತೂಗಾವೆ, ಸುಭಾಷ ಶೀಲವಂತ ಪಾಲ್ಗೊಂಡಿದ್ದರು.

ಸಿದ್ರಾಮಪ್ಪ ರಾಜಾಪುರೆ ಹಾಗೂ ಶಕುಂತಲಾ ಶಿವಪೂಜೆ ಅವರಿಗೆ ಶ್ರೀಗಳಿಂದ ಗೌರವ ಶ್ರೀರಕ್ಷೆ ಪ್ರದಾನ ಮಾಡಲಾಯಿತು. ರಮೇಶ ತೂಗಾವೆ ನಿರೂಪಿಸಿದರು. ರಾಜಶೇಖರ ಶೀಲವಂತ ವಂದಿಸಿದರು.

ದಿನಾಂಕ 23-3-2009 ಸೋಮವಾರ
ಪ್ರಜಾವಾಣಿ ದಿನಪತ್ರಿಕೆ.

ಾಟನೆ

Scanned by CamScanner

# ಅಕ್ಕಸಾಲಿ ಸಮಾಜ ಸಂಘ ಉದ್ಘಾಟನೆ

ವಿಕ ಚಿತ್ರಲೋಕ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಶ್ರೀ ಶೀಲವಂತ ಅಕ್ಕಸಾಲಿ ಸಮಾಜ ಸಂಘದ ಸ್ಥಳೀಯ ಘಟಕದ ಉದ್ಘಾಟನೆ ಇಲ್ಲಿಯ ಶ್ರೀ ಅಲ್ಲಮಪ್ರಭು ದೇವರ ಮಠದಲ್ಲಿ ಭಾನುವಾರ ಜರುಗಿತು.

ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು, ತ್ರಿಪುರಾಂತದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಸಂಘ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಘಟಕದ ಅಧ್ಯಕ್ಷ ಪ್ರಕಾಶ ತೂಗಾವೆ ಅಧ್ಯಕ್ಷತೆ ವಹಿಸಿದ್ದರು. ಗುಲ್ಬರ್ಗ ಸಂಘದ ಅಧ್ಯಕ್ಷ ಸುಭಾಷ ಆಳಂದಕರ್, ಕಾರ್ಯದರ್ಶಿ ಸಿದ್ಧರಾಮ ಸೊನಪುರ, ಬೀದರ್ ಜಿಲ್ಲಾಧ್ಯಕ್ಷ ಅಶೋಕ ಕೋಟೆ, ಸುಭಾಷ ಮಟಲಕುಂಟಾ ಉಪಸ್ಥಿತರಿದ್ದರು. ಈಶ್ವರ ಶೀಲವಂತ ಹಾಗೂ ರಮೇಶ ತೂಗಾವೆ ನಿರೂಪಿಸಿದರು. ರಾಜಶೇಖರ ಶೀಲವಂತ ವಂದಿಸಿದರು.



ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಶ್ರೀ ಶೀಲವಂತ ಅಕ್ಕಸಾಲಿ ಸಮಾಜ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು, ಪ್ರಕಾಶ ತುಗಾವೆ, ಸುಭಾಷ ಆಳಂದಕರ್, ಸಿದ್ಧರಾಮ ಸೊನಪುರ, ಅಶೋಕ ಕೋಟೆ, ಈಶ್ವರ ಶೀಲವಂತ ಇತರರಿದ್ದರು.

ದಿನಾಂಕ ೨೫-೩-೨೦೦೯ ಬುಧವಾರ
ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

# ಪಂಚಾಚಾರ್ಯ ಪುಣ್ಯಾಶ್ರಮ: ಇಷ್ಟಲಿಂಗ ಪೂಜೆ, ಧರ್ಮ ಸಭೆ

**ವಿಕ ಸುದ್ದಿಲೋಕ**

**ಬೀದರ್:** ದೇಹ ದುಡಿಮೆಗೆ , ಮನಸ್ಸು ಭಗವಂತನಿಗೆ ಅರ್ಪಿಸಿ ಮುನ್ನಡೆದಾಗಲೇ ಜೀವನ ಸಾರ್ಥಕಗೊಳ್ಳಲು ಸಾಧ್ಯ ಎಂದು ರಂಭಾಪುರಿ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಪ್ರತಿಪಾದಿಸಿದರು.

ತಾಲೂಕಿನ ಕೋಳಾರ (ಕೆ) ಹೊರವಲಯದಲ್ಲಿರುವ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮದ ಆವರಣದಲ್ಲಿ ಬುಧವಾರ ನಡೆದ ಇಷ್ಟಲಿಂಗ ಮಹಾಪೂಜೆ ಮತ್ತು ಧರ್ಮ ಜಾಗೃತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ದೇಹ ದಂಡಿಸಬೇಕು. ಮನಸ್ಸು ನಿಗ್ರಹಿಸಬೇಕು. ಕಾಣುವ ನೋಟ ಮಾಡುವ ಕಾರ್ಯದಲ್ಲಿ ಮಗ್ನತೆ ಇರಲಿ ಎಂದು ನುಡಿದರು.



ಮನುಷ್ಯನ ಅಂತರಂಗ -ಬಹಿರಂಗ ಶುದ್ಧ ಗೊಳ್ಳಬೇಕು. ಮಾತು, ಮನ ಒಂದಾಗ ಬೇಕು. ಬದುಕು ಅಮೂಲ್ಯವಿದೆ. ಜೀವನ ದಲ್ಲಿ ಉತ್ತಮ ಸಂಸ್ಕಾರ ಪಡೆದರೆ ಕೊನೆಯವರೆಗೆ ಉತ್ಕರ್ಷತೆಯನ್ನುಂಟು ಮಾಡುತ್ತದೆ. ಗುರು ಕೊಟ್ಟಿರುವ ಇಷ್ಟಲಿಂಗ ಭಗವಂತನ ಪ್ರತೀಕ. ಕುರುಹಿನಿಂದ ಅರುಹು ಪಡೆದು ಜನ್ಮ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಗದ್ಗುರು ರೇಣುಕಾಚಾರ್ಯರು ಸದಾಚಾರ ಸನ್ನಡತೆಯಿಂದ ಜೀವನ ಪರಿಶುದ್ಧ ವಾಗುವುದೆಂದು ಸಾರಿದ್ದಾರೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಬಸವಾದಿ ಶರಣರು ಸಹ ಹೇಳಿದರು. ಮನುಷ್ಯ ಪ್ರತಿಯೊಂದು ಸಂದರ್ಭದಲ್ಲಿ ಇವು ಸ್ಮರಿಸಿಕೊಂಡು ಹೆಜ್ಜೆ ಇಡಬೇಕು ಎಂದರು.

ಬೇಮಳಖೇಡದ ಶ್ರೀ ಗುರುಪಾದ ಶಿವಾಚಾರ್ಯ, ತಮಲೂರಿನ ಶ್ರೀ ಶಿವಾನಂದ ಶಿವಾಚಾರ್ಯ, ತ್ರಿಪುರಾಂತದ ಶ್ರೀ ಘನಲಿಂಗ ರುದ್ರ ಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಅಖಿಲ ಭಾರತ ವೀರಶೈವ ಮಹಾಸಭೆ ಜಿಲ್ಲಾಧ್ಯಕ್ಷ ಡಾ.ಚನ್ನಬಸಪ್ಪ ಹಾಲಹಳ್ಳಿ, ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಶಿವಶರಣಪ್ಪ ಸೀರಿ ಇದ್ದರು. ಷಣ್ಮುಖಯ್ಯ ಸ್ವಾಮಿ ಸ್ವಾಗತಿಸಿ ವಂದಿಸಿದರೆ, ಗಚ್ಚಿನಮಠ ನಿರೂಪಿಸಿದರು.

ರಂಭಾಪುರಿ ಜಗದ್ಗುರು ಅವರು ಗಣ್ಯರಿಗೆ ಗೌರವ ಗುರುರಕ್ಷೆ ನೀಡಿದರು. ಗ್ರಾಮ ಸೇರಿದಂತೆ ಜಿಲ್ಲೆ ನಾನಾ ಕಡೆಯಿಂದ ಭಕ್ತಾದಿಗಳು ಪಾಲ್ಗೊಂಡಿದ್ದರು.

ದಿನಾಂಕ 5-6-2009 ಶುಕ್ರವಾರ ವಿಜಯ ಕರ್ನಾಟಕ

Scanned by CamScanner

ವಿಕ ಚಿತ್ರಲೋಕ



ಜಗದ್ಗುರು ಶ್ರೀ ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆಗೆ ಬಸವಕಲ್ಯಾಣದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯರು ಸೋಮವಾರ ಚಾಲನೆ ನೀಡಿದರು. ಶಾಂತಲಿಂಗೇಶ್ವರ ಶ್ರೀ, ಅಭಿನವ ರುದ್ರಮುನಿ ಶ್ರೀ ಭಾಗವಹಿಸಿದ್ದರು.

# ರೇಣುಕಾಚಾರ್ಯ ಜಯಂತಿ: ಭವ್ಯ ಮೆರವಣಿಗೆ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಶ್ರದ್ಧಾ ಭಕ್ತಿಯಿಂದ ಸೋಮವಾರ ಜರುಗಿತು. ಶ್ರೀ ಬಸವೇಶ್ವರ ದೇವಸ್ಥಾನದಿಂದ ಗವಿ ಮಠದವರೆಗೆ ಅಲಂಕೃತ ವಾಹನದಲ್ಲಿ ಶ್ರೀ ರೇಣುಕಾಚಾರ್ಯ ಭಾವಚಿತ್ರದ ಭವ್ಯ ಮೆರವಣಿಗೆ ನಡೆಸಲಾಯಿತು.

ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಿ, ಜಗದ್ಗುರು ರೇಣುಕಾಚಾರ್ಯರು ಸಮಾಜ ಮತ್ತು ದೇಶಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗಡಿಗೌಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ತ್ರಿಪುರಾಂತದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಸೋಮಶೇಖರ ಸ್ವಾಮಿ ವಸ್ತ್ರದ, ಶರಣಪ್ಪ ಬಿರಾದಾರ, ರೇವಣಸಿದ್ದಪ್ಪ ಪಂಚಾಕ್ಷರಿ ಹಿರೇಮಠ, ಲಿಂಗರಾಜ ಬಿರಾದಾರ, ಮಲ್ಲಯ್ಯ ಗುಂಡೂರಮಠ, ಎ.ಜಿ.ಪಾಟೀಲ್, ಮಲ್ಲಿಕಾರ್ಜುನ ಕಾಡಾದಿ, ವೀರಣ್ಣ ಶೀಲವಂತ, ಪ್ರಭುಲಿಂಗಯ್ಯ ಟಂಕಸಾಲಿಮಠ, ಶಿವಕುಮಾರ ಮಠಪತಿ, ಸದಾನಂದ ಕಣಜೆ, ರಮೇಶ ರಾಜೋಳೆ ಭಾಗವಹಿಸಿದ್ದರು.

**ಧಾರ್ಮಿಕ ಸಭೆ**

ಮೆರವಣಿಗೆ ನಂತರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀ ರಾಜೇಶ್ವರ ಶಿವಾಚಾರ್ಯರು, ಧರ್ಮದ ಕೆಲಸಕ್ಕೆ ಸಮಾಜದ ಜನರು ಸಹಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಶ್ರೀ ಶಾಂತವೀರ ಶಿವಾಚಾರ್ಯರು, ಶ್ರೀ ಹಾವಲಿಂಗೇಶ್ವರ ಶಿವಾಚಾರ್ಯರು, ತಾಬೋಳದ ಶ್ರೀ ಮುರಘೇಂದ್ರ ಮಹಾಸ್ವಾಮಿ ಆಶೀರ್ವಚನ ನೀಡಿದರು. ಆರ್‌ಟಿಒ ಸಂಜಯ ವಾಡಿಕರ್, ರಾಜಶೇಖರ ಪಾಟೀಲ್ ಸಸ್ತಾಪೂರ, ಲಿಂಗರಾಜ ಪಾಟೀಲ್ ಆಟ್ಟೂರ್, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.

ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಅಧ್ಯಕ್ಷತೆ, ಚಿದ್ರಿಯ ಶ್ರೀ ಶಿವಾನಂದ ಶಿವಾಚಾರ್ಯರು, ಸಿಂದನಕೇರಾದ ಶ್ರೀ ಹೊನ್ನಲಿಂಗೇಶ್ವರ ಮಹಾಸ್ವಾಮಿ ನೇತೃತ್ವ ವಹಿಸಿದ್ದರು. ಪಿಎಸ್‌ಐ ಸಿದ್ರಾಮಯ್ಯ ಬಿ.ಎಂ, ರಾಜಕುಮಾರ ಸುಗರೆ, ಪಂಚಾಕ್ಷರಿ ಹಿರೇಮಠ, ಚಮಾಬಾಯಿ ಮಾಳಿ, ದಾನಮ್ಮ ಸ್ವಾಮಿ ಉಪಸ್ಥಿತರಿದ್ದರು.

**ಸಿ.ಡಿ. ಬಿಡುಗಡೆ**

ಈ ಸಂದರ್ಭದಲ್ಲಿ ಜಂಗಮ ಪಾದಪೂಜಾ ಸಿ.ಡಿ.ಯನ್ನು ಶಂಕರಗೌಡ ದಾದಾಗೌಡ ಪಾಟೀಲ್ ಇಂಡಿ ಬಿಡುಗಡೆ ಮಾಡಿದರು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ಮತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು.

ದಿನಾಂಕ 10-3-2009 ಮಂಗಳವಾರ ವಿಜಯಕರ್ನಾಟಕ ದಿನಪತ್ರಿಕೆ

Scanned by CamScanner

# ರೇಣುಕಾಚಾರ್ಯರು ವೀರಶೈವ ಧರ್ಮ ಸ್ಥಾಪಕರು

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಸ್ಥಾಪಕ ರಾಗಿದ್ದಾರೆ ಈ ಬಗ್ಗೆ ಯಾವುದೇ ಸಂಶಯ ಬೇಡ ಎಂದು ತಡೋಳಾ ಮಠದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಸೋಮವಾರ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಕೃತಿ, ಪರಂಪರೆಯನ್ನು ಕಾಯ್ದುಕೊಂಡು ಹೋಗಬೇಕು ಎಂದರು. ರಂಭಾಪುರಿ ಪೀಠದ ಶಾಖಾ ಮಠವಾದ ರುದ್ರಮುನಿ ಗವಿಮಠದ ಅಭಿವೃದ್ಧಿಗೆ ಸಕಲರು ಸಹಕರಿಸಬೇಕು ಎಂದು ಕೇಳಿಕೊಂಡರು.

ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಮಾತನಾಡಿ ಯಾರೇ ಆಗಲಿ ಯಾವುದೇ ಧರ್ಮದ ವಿರುದ್ಧ ಟೀಕೆ ಮಾಡದೆ ತಮ್ಮ ಧರ್ಮದ ಒಳಿತಿಗಾಗಿ ಯೋಚಿಸಬೇಕು ಎಂದರು. ಚಿದ್ರಿ ಹಿರೇಮಠದ ಶಿವಾನಂದ ಶಿವಾಚಾರ್ಯರು ಮಾತನಾಡಿ ವೀರಶೈವರ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ ಮನುಷ್ಯನನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯುತ್ತದೆ ಎಂದರು.

ಶಿವಣಿ ಮಠದ ಹಾವಗಿಲಿಂಗೇಶ್ವರ ಶಿವಾಚಾರ್ಯರು, ತಾಂಬೋಳಾ ಮುರುಘೇಂದ್ರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮುಖಂಡರಾದ ಸಂಜಯ ವಾಡೇಕರ್, ರಾಜಶೇಖರ ಪಾಟೀಲ ಸಸ್ತಾಪುರ, ಲಿಂಗರಾಜ ಪಾಟೀಲ ಅಟ್ಟೂರ್ ಮಾತನಾಡಿದರು.

ಹೊನ್ನಲಿಂಗೇಶ್ವರ ಸ್ವಾಮಿ ಸಿಂಧನಕೆರಾ, ನಗರಸಭೆ ಮಾಜಿ ಅಧ್ಯಕ್ಷ ರಾಜೀವ ಸುಗೂರೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ಸಂಜೀವ ಸುಗೂರೆ, ಡಾ.ಬಾಲಕೃಷ್ಣ ರಾಠೋಡ, ಪಂಚಾಕ್ಷರಿ ಹಿರೇಮಠ ಪಾಲ್ಗೊಂಡಿದ್ದರು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು.

ಕಾರ್ಯಕ್ರಮಕ್ಕೆ ಮೊದಲು ಬಸವೇಶ್ವರ ದೇವಾಲಯದಿಂದ ಗವಿಮಠದ ವರೆಗೆ ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಹಾರಕೂಡ ಚನ್ನವೀರ ಶಿವಾಚಾರ್ಯರು ಡೊಳ್ಳು ಬಾರಿಸಿ ಮೆರವಣಿಗೆ ಉದ್ಘಾಟಿಸಿದರು. ನೂರಾರು ಸಮಾಜ ಬಾಂಧವರು ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಸೋಮವಾರ ನಡೆದ ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ತಡೋಳಾ ರಾಜೇಶ್ವರ ಶಿವಾಚಾರ್ಯರು ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು, ರಾಜಶೇಖರ ಪಾಟೀಲ ಸಸ್ತಾಪುರ, ಲಿಂಗರಾಜ ಪಾಟೀಲ ಅಟ್ಟೂರ್ ಪಾಲ್ಗೊಂಡಿದ್ದರು.

ದಿನಾಂಕ 10-9-2009 ಮಂಗಳವಾರ ಪ್ರಜಾವಾಣಿ ದಿನಪತ್ರಿಕೆ.

# ಕಲಾನಿಕೇತನದಲ್ಲಿ ಕಲಾ ಮಹೋತ್ಸವ
# ಕಲೆ ಸಂಸ್ಕೃತಿಯ ಆತ್ಮ: ಖಂಡೇರಾವ್

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಕಲೆಗೆ ಹೊಸ ವಿಷಯಗಳನ್ನು ಸೃಷ್ಟಿಸುವ ಶಕ್ತಿ ಇದೆ. ಕಲೆ ಸಂಸ್ಕೃತಿಯ ಆತ್ಮ. ಸೃಜನಶೀಲತೆಯಲ್ಲಿ ಕಲಾವಿದನ ಯೋಗ್ಯತೆ ಅಡಗಿದೆ ಎಂದು ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ.ಜೆ.ಎಸ್. ಖಂಡೇರಾವ್ ಹೇಳಿದರು.

ಜೈ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ 15ನೇ ಕಲಾ ಮಹೋತ್ಸವವನ್ನು ಇಲ್ಲಿನ ಕಲಾ ನಿಕೇತನದಲ್ಲಿ ಭಾನುವಾರ ಉದ್ಘಾಟಿಸಿದ ಅವರು, ಕಲೆಗೆ ಭಾವನೆ ಅಭಿವ್ಯಕ್ತ ಗೊಳಿಸುವ ಶಕ್ತಿಯೂ ಇದೆ ಎಂದರು.

ಕಲಾವಿದನಲ್ಲಿ ಸಮಾಜಪರ ಕಳಕಳಿ ಅಗತ್ಯ. ಸಾಮಾಜಿಕ ಪ್ರಜ್ಞೆಯಲ್ಲೇ ಕಲಾವಿದನ ಗೌರವ ಅಡಗಿದೆ. ಸಮಕಾಲೀನ ಸ್ಫೂರ್ತಿಯನ್ನು ಕಲೆಯಲ್ಲಿ ಬಿಂಬಿಸುವವನೇ ನಿಜವಾದ ಕಲಾವಿದ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಪ್ರೊ.ಎಂ.ಎಂ.ತಂಬಾಕೆ, ಕಲೆ ಮತ್ತು ಕಲಾವಿದರರನ್ನು ಬೆಳೆಸುತ್ತಿರುವ ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ತ್ರಿಪುರಾಂತದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಗುಲ್ಬರ್ಗದ ದಿ ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್ ಪ್ರಾಚಾರ್ಯ ಬಸವರಾಜ ಜಾನೆ, ಕಲಾವಿದ ದೇವೀಂದ್ರಪ್ಪ ತೋಟನಹಳ್ಳಿ ಮಾತನಾಡಿದರು.

ಚಿತ್ರಕಲಾ ಕಾಲೇಜು ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿ ಮಠ ಸ್ವಾಗತಿಸಿ ದರು. ನಾಗಪ್ಪ ನಿಣ್ಣೆ ವಂದಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಅನೀಲ ಕಾಂಬಳೆ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು.

ಈ ಸಂದರ್ಭದಲ್ಲಿ ಡಾ. ಗವಿಸಿದ್ದಪ್ಪ ಪಾಟೀಲ್, ಡಾ.ಸಂತೋಷ ಪವಾರ್ ಹಾಗೂ ಚಿತ್ರಕಲಾ ಕಾಲೇಜಿನ ಆದರ್ಶ ವಿದ್ಯಾರ್ಥಿನಿ ಸುಮತಿ ಮೇತ್ರೆ ಅವರನ್ನು ಸನ್ಮಾನಿಸಲಾಯಿತು. ಪ್ರೊ. ಸೂರ್ಯಕಾಂತ ಶೀಲವಂತ, ಬಸವರಾಜ ವರಕಾಲೆ, ಜವರೇಗೌಡ ಉಪ ಸ್ಥಿತರಿದ್ದರು.

ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ಡಾ.ಖಂಡೇರಾವ್ ಪ್ರಾತ್ಯಕ್ಷಿಕೆ ನೀಡಿದರು. ಕಲಾ ಮಹೋತ್ಸವ ನಿಮಿತ್ತ ಎರಡು ದಿನ ಚಿತ್ರಕಲಾ ಪ್ರದರ್ಶನ ಜರುಗಲಿದೆ.

ವಿಕ ಚಿತ್ರಲೋಕ




**ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ 15ನೇ ಕಲಾ ಮಹೋತ್ಸವವನ್ನು ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ.ಖಂಡೇರಾವ್ ಬಸವಕಲ್ಯಾಣದಲ್ಲಿ ಭಾನುವಾರ ಉದ್ಘಾಟಿಸಿದರು. ಅಭಿನವ ರುದ್ರಮುನಿ ಶ್ರೀ, ಪ್ರೊ.ಎಂ.ಎಂ.ತಂಬಾಕೆ, ಬಸವರಾಜ ಜಾನೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ರಮೇಶ ರಾಜೋಳೆ ಇದ್ದರು.**

ದಿನಾಂಕ 16-3-2009 ಸೋಮವಾರ ವಿಜಯಕರ್ನಾಟಕ ದಿನಪತ್ರಿಕೆ.

Scanned by CamScanner



**ಮೆರವಣಿಗೆ**

ಬಸವಕಲ್ಯಾಣದ ತ್ರಿಪುರಾಂತದಲ್ಲಿ ರೇಣುಕಾಚಾರ್ಯರ ಜಯಂತಿ ನಿಮಿತ್ತ ನಡೆದ ಮೆರವಣಿಗೆಗೆ ಹಾರಕೂಡ ಚನ್ನವೀರ ಶಿವಾಚಾರ್ಯರು ಡೋಲು ಬಾರಿಸುವ ಮೂಲಕ ಚಾಲನೆ ನೀಡಿದರು. ಅಭಿನವ ರುದ್ರಮುನಿ ಶಿವಾಚಾರ್ಯರು, ಲಿಂಗರಾಜ ಪಾಟೀಲ್, ರಾಜು ಪಾಟೀಲ್ ಇದ್ದರು.

**ಜಯಂತಿ**

ಬಸವಕಲ್ಯಾಣ ತ್ರಿಪುರಾಂತದಲ್ಲಿ ರೇಣುಕಾಚಾರ್ಯರ ಜಯಂತಿ ಪ್ರಯುಕ್ತನಡೆದ ಧಾರ್ಮಿಕ ಕಾರ್ಯಕ್ರಮವನ್ನು ಮೆಹರಕರ್ ಮಠದ ರಾಜೇಶ್ವರ ಶಿವಾಚಾರ್ಯ ಮಾತನಾಡಿದರು.



# 'ಮಾನವನ ಏಳ್ಗೆಗೆ ಧರ್ಮಶಾಸ್ತ್ರಗಳ ಅಧ್ಯಯನ ಅಗತ್ಯ'

**ಕನ್ನಡಪ್ರಭ ವಾರ್ತೆ, ಬಸವಕಲ್ಯಾಣ, ಮಾ.10**

ಮಾನವ ಜನಾಂಗದ ಏಳ್ಗೆಗಾಗಿ ಧರ್ಮಶಾಸ್ತ್ರಗಳ ಅಧ್ಯಯನ ನಡೆಯುವುದು ಅಗತ್ಯವಾಗಿದೆ ಎಂದು ಮೇಹಕರ ಮಠದ ರಾಜೇಶ್ವರ ಶಿವಾಚಾರ್ಯರು ನುಡಿದರು.

ಅವರು ತಾಲೂಕಿನ ತ್ರಿಪುರಾಂತದಲ್ಲಿ ರೇಣುಕಾಚಾರ್ಯರ ಜಯಂತಿ ನಿಮಿತ್ತ ನಡೆದ ಧಾರ್ಮಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರೇಣುಕಾಚಾರ್ಯರ ಜಯಂತಿಯಂಥ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದರು.

ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜಾತಿ ಭೇದ ಮರೆತು ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳ್ವೆ ನಡೆಸಿದಾಗ ಮಾತ್ರ ಶಾಂತಿ ನೆಲೆಗೊಳ್ಳಲು ಸಾಧ್ಯ. ಜತೆಗೆ ಮಹಾತ್ಮರ ಸಂದೇಶಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.

ಗಡಿಗೌಡಗಾಂವದ ಶಾಂತಲಿಂಗ ಶಿವಾಚಾರ್ಯರು, ಚಿದ್ರಿ ಶ್ರೀ, ತಾಂಬೋಳದ ಮುರಘೇಂದ್ರ ಸ್ವಾಮಿ, ಶಿವಣಿ ಹಾವಲಿಂಗೇಶ್ವರ ಶಿವಾಚಾರ್ಯರು, ಸಿಂಧನಕೇರೆ ಹೊನ್ನಲಿಂಗೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ರಾಜು ಪಾಟೀಲ ಸಸ್ತಾಪೂರ, ಲಿಂಗರಾಜ ಪಾಟೀಲ್ ಅಟ್ಟೂರ, ನಟರಾಜ ಬಿರಾದರ, ಡಾ. ಬಾಲಕೃಷ್ಣ, ಡಾ. ಬಸವರಾಜ ಸ್ವಾಮಿ, ಸಂಜಯ ವಾಡೇಕರ, ಬಕ್ಕಯ್ಯಾ ಸ್ವಾಮಿ, ಲಿಂಗರಾಜ ಬಿರಾದರ, ಜಗನ್ನಾಥ ಬಿರಾದರ, ಬಸವರಾಜ ಬಿರಾದರ, ಪ್ರಭುಲಿಂಗಯ್ಯ ಟಂಕಸಾಲಿಮಠ, ಸೋಮಶೇಖರ ವಸ್ತ್ರದ, ಸಂಜೀವ ಸೂಗರೆ, ಶಿವಕುಮಾರ ಸ್ವಾಮಿ ಮತ್ತು ಶಿವಪುತ್ರ ಕಾಡಾದಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತ ಮರಿದೇವರ ಗುಡ್ಡದಲ್ಲಿರುವ ಗವಿಮಠದವರೆಗೆ ನಡೆದ ಭವ್ಯ ಮೆರವಣಿಗೆಗೆ ಹಾರಕೂಡದ ಚನ್ನವೀರ ಶಿವಾಚಾರ್ಯರು ಚಾಲನೆ ನೀಡಿ ರೇಣುಕಾಚಾರ್ಯರ ತತ್ವ, ಸಿದ್ಧಾಂತಗಳು ಆಚರಣೆಗೆ ಬರಬೇಕು. ಎಲ್ಲರೂ ಸನ್ಮಾರ್ಗದಲ್ಲಿ ನಡೆದು ಜೀವನದಲ್ಲಿ ಶಾಂತಿ ನೆಮ್ಮದಿ ಪಡೆಯಬೇಕು ಎಂದರು.



ಬಸವಕಲ್ಯಾಣದ ತ್ರಿಪುರಾಂತದಲ್ಲಿ ರೇಣುಕಾಚಾರ್ಯರ ಜಯಂತಿ ನಿಮಿತ್ತ ನಡೆದ ಧಾರ್ಮಿಕ ಕಾರ್ಯಕ್ರಮವನ್ನು ಮೇಹಕರ್ ಮಠದ ರಾಜೇಶ್ವರ ಶಿವಾಚಾರ್ಯರು ಉದ್ಘಾಟಿಸಿದರು.

ದಿನಾಂಕ 11-03-2009 ಬುಧುವಾರ ಕನ್ನಡಪ್ರಭ ದಿನಪತ್ರಿಕೆ.

Scanned by CamScanner

# ಧರ್ಮ ಸಮ್ಮೇಳನ, ಲಕ್ಷ ದೀಪೋತ್ಸವ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ತಾಲ್ಲೂಕಿನ ಬಟಗೇರಾ ಗ್ರಾಮದಲ್ಲಿ ಮಹಾಲಕ್ಷ್ಮಿದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಮೇ 13ರಿಂದ 24ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

13ರಂದು ಮುಂಜಾನೆ 9.30ಗಂಟೆಗೆ ಗ್ರಾಮದಲ್ಲಿ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಯುತ್ತದೆ. ನಂತರ ರಾಷ್ಟ್ರೀಯ ಭಾವೈಕ್ಯ ಧರ್ಮ ಸಮ್ಮೇಳನ ನೆರವೇರಲಿದ್ದು ಜಗದ್ಗುರುಗಳು ಉದ್ಘಾಟಿಸುವರು.

ತಡೋಳಾ ರಾಜೇಶ್ವರ ಶಿವಾಚಾರ್ಯರು, ಹಳ್ಳಿಖೇಡ ಪಂಡಿ ತಾರಾಧ್ಯ ಶಿವಾಚಾರ್ಯರು, ಸಲಗರ ಸಾಂಬ ಶಿವಯೋಗಿಗಳು, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು ಪಾಲ್ಗೊಳ್ಳುವರು.

ಪಶು ಸಂಗೋಪನಾ ಖಾತೆ ಸಚಿವ ರೇವು ನಾಯಕ ಬೆಳಮಗಿ, ಶಾಸಕ ಬಸವರಾಜ ಪಾಟೀಲ ಅಟ್ಟೂರ್, ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಹುಮನಾಬಾದ, ಆಳಂದ ಶಾಸಕ ಸುಭಾಷ ಗುತ್ತೇದಾರ, ಆರ್‌ಟಿಓ ಸಂಜಯ ವಾಡೇಕರ್, ವಸಂತರಾವ ನಾಗದೆ, ಜಿಪಂ ಸದಸ್ಯ ಕಾಳಿದಾಸ ವಾಡೇಕರ್, ದತ್ತಾ ಪರಶುರಾಮ ಲಾತೂರ ಅವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಂಜೆ 5 ಗಂಟೆಗೆ ಹಾರಕೂಡ ಚನ್ನವೀರ ಶಿವಾಚಾರ್ಯರಿಂದ ಆಶೀರ್ವಚನ ನಡೆಯುತ್ತದೆ. ನಂತರ ಔಸಾ ಗುರುಬಾಬಾ ಮಹಾರಾಜರು ಚಕ್ರಿಭಜನೆ ನಡೆಸುವರು.

14ರಂದು ಮಧ್ಯಾಹ್ನ 4.30 ಗಂಟೆಗೆ ಪ್ರವಚನಕಾರ ಗುರುಲಿಂಗಯ್ಯ ಸ್ವಾಮಿ ಹೂವಿನಹಳ್ಳಿ ಅವರಿಂದ ಶಿವಾನುಭವ ಕೀರ್ತನೆಯು ನಡೆಯಲಿದೆ.

15ರಂದು ಸಂಜೆ 6.30 ಗಂಟೆಗೆ ಲಕ್ಷ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ.

22ರಂದು ಲಕ್ಷ್ಮಿ ದೇವಸ್ಥಾನದಲ್ಲಿ ಅಭಿಷೇಕ, ನೈವೇದ್ಯ ಅರ್ಪಣೆ ನಡೆಯುತ್ತದೆ. ರಾತ್ರಿ ನಾಟಕ ಪ್ರದರ್ಶಿಸಲಾಗುತ್ತದೆ.

23ರಂದು ಮಧ್ಯಾಹ್ನ ಕುಸ್ತಿ ಸ್ಪರ್ಧೆ ಏರ್ಪಡಿಸಲಾಗುತ್ತದೆ. ರಾತ್ರಿ ಪಲ್ಲಕ್ಕಿ ಮೆರವಣಿಗೆ ನಡೆಯುವುದರೊಂದಿಗೆ ಜಾತ್ರೆ ಸಮಾರೋಪಗೊಳ್ಳಲಿದೆ.

ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಕೋರಲಾಗಿದೆ.

ದಿನಾಂಕ 9-5-2009 ಶನಿವಾರ
ಪ್ರಜಾವಾಣಿ ದಿನಪತ್ರಿಕೆ.

# ಲಕ್ಷ ದೀಪೋತ್ಸವ, ಶ್ರೀ ಮಹಾಲಕ್ಷ್ಮಿ ಜಾತ್ರೆ

ವಿಕ ಸುದ್ದಿಲೋಕ

**ಬಸವಕಲ್ಯಾಣ:** ಬಟಗೇರಾದಲ್ಲಿ ಶ್ರೀ ಮಹಾಲಕ್ಷ್ಮಿ ಜಾತ್ರಾಮಹೋತ್ಸವ ನಿಮಿತ್ತ 13 ರಿಂದ 24ರವರೆಗೆ ಲಕ್ಷ ದೀಪೋತ್ಸವ, ರಾಷ್ಟ್ರೀಯ ಭಾವೈಕ್ಯತೆ ಮತ್ತು ಧರ್ಮ ಸಮ್ಮೇಳನ ನಡೆಯಲಿದೆ.

12 ದಿನಗಳ ವರೆಗೆ ನಾನಾ ಕಾರ್ಯಕ್ರಮಗಳು ಜರುಗಲಿದ್ದು ಇದಕ್ಕಾಗಿ ಗ್ರಾಮದಲ್ಲಿ ಅದ್ದೂರಿ ಸಿದ್ಧತೆ ನಡೆದಿದೆ. ಬುಧವಾರ ಬೆಳಗ್ಗೆ 9-30ಕ್ಕೆ ಗ್ರಾಮದಲ್ಲಿ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರ ಅಡ್ಡ ಪಲ್ಲಕ್ಕಿ ಮೆರವಣಿಗೆ ಮತ್ತು ಆಶೀರ್ವಚನ ನಡೆಯಲಿದೆ. ಜಗದ್ಗುರುಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಹಾರಕೂಡದ ಶ್ರೀಚನ್ನವೀರ ಶಿವಾಚಾರ್ಯರು, ಶ್ರೀ ಗುರುಬಾಬಾ ಔಸೇಕರ್ ಮಹಾರಾಜರು, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಯರಬಾಗದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಸ್ವಾಮಿಜಿ, ಬೇಲೂರಿನ ಶ್ರೀ ಗುರುಲಿಂಗ ಶಿವಾಚಾರ್ಯರು, ಸದ್ಲಾಪೂರದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಬೇಮಳಖೇಡದ ಶ್ರೀ ಗುರುಪಾದ ಶಿವಾಚಾರ್ಯರು, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಹಳ್ಳಿಖೇಡಿನ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ವಿ.ಕೆ.ಸಲಗರದ ದ್ವಿತೀಯ ಸಾಂಬಶಿವಯೋಗಿಗಳು ಉಪಸ್ಥಿತರಿರುವರು.

ಪಶುಸಂಗೋಪನಾ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ರೇವುನಾಯಕ ಬೆಳಮಗಿ, ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್, ಸುಭಾಷ ಗುತ್ತೇದಾರ, ಈಶ್ವರ ಖಂಡ್ರೆ, ಪ್ರಭು ಚವ್ಹಾಣ, ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ್, ಆರ್‌ಟಿಓ ಸಂಜಯ ವಾಡಿಕರ್, ಜಿಪಂ ಸದಸ್ಯ ಕಾಳಿದಾಸ ವಾಡೇಕರ್, ತಾಪಂ ಸದಸ್ಯೆ ಸುನೀತಾ ಸಿಂಧೆ, ವಸಂತರಾವ ನಾಗದೆ, ರಾಜಶೇಖರ ಪಾಟೀಲ್ ಸಸ್ತಾಪುರ, ದತ್ತಾ ಪರಶುರಾಮ ಭಾಗವಹಿಸುವರು.

ಗುರುವಾರ ಹೂವಿನಹಳ್ಳಿಯ ಕೀರ್ತನ ಕೇಸರಿ ಗುರುಲಿಂಗಯ್ಯ ಸ್ವಾಮಿಯವರಿಂದ ಕೀರ್ತನೆ ಮತ್ತು ಚಿಂತಗೋಷ್ಠಿ ಜರುಗಲಿದೆ. ಡಾ.ಸೋಮನಾಥ ಯಾಳವಾರ ಉಪನ್ಯಾಸ ನೀಡಲಿದ್ದಾರೆ.

**ಲಕ್ಷ ದೀಪೋತ್ಸವ**

ಶುಕ್ರವಾರ ಸಂಜೆ 6-30ಕ್ಕೆ ಲಕ್ಷದೀಪೋತ್ಸವ ನಡೆಯಲಿದ್ದು ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಉದ್ಘಾಟಿಸುವರು. ಲಾಡಮುಗಳಿಯ ಶ್ರೀ ಅಭಿನವ ಕುಮಾರ ಸ್ವಾಮಿ, ಯರಬಾಗದ ಶ್ರೀ ಬಸವಲಿಂಗ ಶಿವಾಚಾರ್ಯರು, ಹೂವಿನಹಳ್ಳಿಯ ಶ್ರೀ ಗುರುಲಿಂಗಯ್ಯ ಸ್ವಾಮಿ ಉಪಸ್ಥಿತರಿರುವರು.

ಸಚಿವ ರೇವುನಾಯಕ ಬೆಳಮಗಿ, ಶಾಸಕರಾದ ಬಸವರಾಜ ಪಾಟೀಲ್ ಅಟ್ಟೂರ್, ರಾಜಶೇಖರ ಪಾಟೀಲ್ ಹುಮನಾಬಾದ, ಸುಭಾಷ ಗುತ್ತೇದಾರ, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಚಾಳುಕ್ಯ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಶಿವಾಜಿ ದಾದಾ ಚಾಳುಕ್ಯ, ತಾಪಂ ಸದಸ್ಯೆ ಛಬುಬಾಯಿ ಚವ್ಹಾಣ ಸೇರಿದಂತೆ ಪ್ರಮುಖರು ಸಹಸ್ರಾರು ಭಕ್ತರು ಭಾಗವಹಿಸುವರು.

19ರಂದು ಬೆಳಗ್ಗೆ ಗ್ರಾಮದ ಲಕ್ಷ್ಮಿ ಮಂದಿರದಲ್ಲಿ ರಂಗೋಲಿ ಹಾಗೂ ಹಂದರ ಹಾಕುವ ಕಾರ್ಯಕ್ರಮ. 22ರಂದು ಗುಡ್ಡದ ಮೇಲಿನ ಲಕ್ಷ್ಮಿ ಮಂದಿರದಲ್ಲಿ ಹಂದರ ಹಾಕುವ ಕಾರ್ಯಕ್ರಮ ಜರುಗಲಿದ್ದು ರಾತ್ರಿ 9-30ಕ್ಕೆ ಕುಡುಕ ಕಟ್ಟಿದ ತಾಳಿ ನಾಟಕ ಪ್ರದರ್ಶನ.

23ರಂದು ಮದ್ಯಾಹ್ನ 2-30ಕ್ಕೆ ಕುಸ್ತಿ ಪ್ರದರ್ಶನ, ರಾತ್ರಿ 8ಕ್ಕೆ ಮದ್ದು ಸುಡುವ ಕಾರ್ಯಕ್ರಮ ನಂತರ ಶ್ರೀ ಮಹಾಲಕ್ಷ್ಮಿ ಪಲ್ಲಕ್ಕಿ ಮೆರವಣಿಗೆ. 24ರ ರಾತ್ರಿ 9-30ಕ್ಕೆ ನಾಟಕ ಪ್ರದರ್ಶನ ನಡೆಯಲಿದೆ ಎಂದು ಬಟಗೇರಾದ ಶ್ರೀ ಮಹಾಲಕ್ಷ್ಮಿದೇವಿ ಮತ್ತು ಮಾರುತಿ ದೇವಸ್ಥಾನ ಪಂಚ ಕಮಿಟಿ ತಿಳಿಸಿದೆ.

ದಿನಾಂಕ 10-5-2009 ರವಿವಾರ
ವಿಜಯ ಕರ್ನಾಟಕ ದಿನಪತ್ರಿಕೆ.

# ಬಸವಕಲ್ಯಾಣ: ಮಾಚಿದೇವರ ಪ್ರತಿಮೆ ಸ್ಥಾಪನೆಗೆ ಆಗ್ರಹ

**ಬಸವಕಲ್ಯಾಣ:** ಇಲ್ಲಿನ ತ್ರಿಪುರಾಂತದಲ್ಲಿ 12ನೇ ಶತಮಾನದ ಶರಣ ಮಡಿವಾಳ ಮಾಚಿದೇವರ ಕಂಚಿನ ಪ್ರತಿಮೆ ಸ್ಥಾಪಿಸಲು ಮಡಿವಾಳರ ಸಂಘದಿಂದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.

ಇಲ್ಲಿನ ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ಸೋಮವಾರ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡ ಧಾರ್ಮಿಕ ಕಾರ್ಯಕ್ರಮಕ್ಕೂ ಮೊದಲು ಮಡಿವಾಳರ ಸಂಘದ ರಾಜ್ಯ ಕಾರ್ಯದರ್ಶಿ ಹಾಗೂ ನಿವೃತ್ತ ಉಪ ತಹಸೀಲ್ದಾರರಾದ ಸಾಯಬಣ್ಣ ಮಡಿವಾಳ ಅವರ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಲಾಯಿತು.

ತಾಲ್ಲೂಕಿನ ಪ್ರತಾಪುರದಲ್ಲಿನ ಮಾಚಿದೇವರ ಮಂದಿರ ಹಾಗೂ ತ್ರಿಪುರಾಂತದಲ್ಲಿನ ಧ್ಯಾನ ಮಂಟಪದ ಅಭಿವೃದ್ಧಿ ಕೈಗೊಳ್ಳಬೇಕು. ಅಭಿನವ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಮಡಿವಾಳೇಶ್ವರ ಮುತ್ತ್ಯಾ, ಮಡಿವಾಳರ ಬಾಬುರಾವ ಬೀದರ, ಬಸವಣ್ಣೆಪ್ಪ ತಿಪ್ಪಶೆಟ್ಟಿ, ಸಿದ್ರಾಮಪ್ಪ, ಗಣಪತಿ ಸಸ್ತಾಪುರೆ, ಸಂತೋಷ ಮಡಿವಾಳ, ರಾಜಕುಮಾರ ಶಿವಣೆ, ಮಲ್ಲಪ್ಪ ಪ್ರತಾಪುರ ಇದ್ದರು.

ದಿನಾಂಕ 12-8-2009 ಬುಧವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

# ಪಂಚ ಪೀಠಗಳು ಮಾನವ ಧರ್ಮದ ಪೀಠಗಳು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪಂಚ ಪೀಠಗಳು ಮಾನವ ಧರ್ಮದ ರಾಷ್ಟ್ರೀಯ ಪೀಠಗಳಾಗಿವೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮಿ ಹೇಳಿದರು.

ತಾಲ್ಲೂಕಿನ ಬಟಗೇರಾದಲ್ಲಿ ಮಹಾಲಕ್ಷ್ಮಿದೇವಿ ಜಾತ್ರೆ ಅಂಗವಾಗಿ ಬುಧವಾರ ಹಮ್ಮಿಕೊಂಡ ಭಾವೈಕ್ಯ ಧರ್ಮ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಪೀಠಗಳು ಜಾತಿಭೇದ ಮಾಡದೆ ಸಮಾಜದ ಕೊನೆಯ ವ್ಯಕ್ತಿವರೆಗೂ ಧರ್ಮ ಮುಟ್ಟಿಸುವ ಕಾರ್ಯ ಮಾಡುತ್ತಿವೆ. ಇವುಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎಂದರು. ಗುರುವಿನ ಮಾರ್ಗದರ್ಶನ ಇಲ್ಲದೆ ದೇವರು ಕಾಣುವುದಿಲ್ಲ. ಜೀವನದಲ್ಲಿ ಮುಕ್ತಿ ದೊರೆಯಲು ಸಾಧ್ಯವಿಲ್ಲ ಎಂದರು. ಸಂತ ನಾಮದೇವ ಮಹಾರಾಜರು ಪಂಡಿತರಾಗಿದ್ದರೂ ಅವರಿಗೆ ಗುರುವಿನ ಮಾರ್ಗದರ್ಶನವಿಲ್ಲದೆ ದೇವರು ಎದುರಿಗೆ ಬಂದರೂ ಗುರುತಿಸಲಾಗಲಿಲ್ಲ ಎಂದು ಹೇಳಿದರು.

ದೇವಸ್ಥಾನಗಳಲ್ಲಿ ಪ್ರಾಣಿ ಹಿಂಸೆ ನಡೆಯಕೂಡದು ಎಂದರು. ಮತವನ್ನು ದಾನ ಮಾಡುವ ಬದಲು ಅದನ್ನು ಹಣಕ್ಕೆ ಮಾರಿಕೊಳ್ಳುತ್ತಿರುವ ಕಾರಣ ಪ್ರಜಾಪ್ರಭುತ್ವ ವ್ಯವಸ್ಥೆ ಗಂಡಾಂತರಕ್ಕೆ ಸಿಲುಕಿದೆ ಎಂದು ಸಹ ಅಭಿಪ್ರಾಯಪಟ್ಟರು.

ಡಾ.ರಾಜಶೇಖರಸ್ವಾಮಿ ಗೋರ್ಟಾ ಮಾತನಾಡಿ ಪಂಚಪೀಠಗಳ ಇತಿಹಾಸ ಹೇಳಿದರು. ತ್ರಿಪುರಾಂತ ಗವಿಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಧರ್ಮದ ಪಾಲನೆಯಾದರೆ ಮಾತ್ರ ಎಲ್ಲೆಡೆ ಸುಖ ಶಾಂತಿ ನೆಲೆಸುತ್ತದೆ ಎಂದರು.



ಬಸವಕಲ್ಯಾಣ ತಾಲ್ಲೂಕಿನ ಬಟಗೇರಾದಲ್ಲಿ ಮಹಾಲಕ್ಷ್ಮಿ ಜಾತ್ರೆ ಅಂಗವಾಗಿ ಬುಧವಾರ ನಡೆದ ಭಾವೈಕ್ಯ ಧರ್ಮ ಸಮ್ಮೇಳನದಲ್ಲಿ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮಿಯವರು ನಮ್ಮೂರ ದೇವತೆ ಕ್ಯಾಸೆಟ್ ಬಿಡುಗಡೆ ಮಾಡಿದರು. ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಡಾ.ರಾಜಶೇಖರ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ ಹೂವಿನಹಳ್ಳಿ ಪಾಲ್ಗೊಂಡಿದ್ದರು.

ಹೂವಿನಹಳ್ಳಿ ಗುರುಲಿಂಗಯ್ಯ ಸ್ವಾಮಿ ಅವರು ಹಾಡಿರುವ ನಮ್ಮೂರ ದೇವತೆ ಭಕ್ತಿಗೀತೆಗಳ ಕ್ಯಾಸೆಟ್‌ನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಹಳ್ಳಿಖೇಡ ಶಾಂತವೀರ ಶಿವಾಚಾರ್ಯರು, ದೇವಸ್ಥಾನ ಸಮಿತಿ ಅಧ್ಯಕ್ಷ ಅರವಿಂದ ಭುರೆ, ಗ್ರಾಮ ಪಂಚಾಯತಿ ಅಧ್ಯಕ್ಷೆ ನೀಲಮ್ಮ ಕೌಲಗೆ, ಉಪಾಧ್ಯಕ್ಷೆ ಹಾಲವ್ವ ಘೋಲೆ ಉಪಸ್ಥಿತರಿದ್ದರು. ಬಸವರಾಜ ಸ್ವಾಮಿ ಸ್ವಾಗತಿಸಿದರು. ಮಹೇಶ ಮುಳೆ ನಿರೂಪಿಸಿದರು, ಅಲ್ಲಾವುದ್ದೀನ್ ಪಟೇಲ್ ವಂದಿಸಿದರು.

ಕಾರ್ಯಕ್ರಮದ ಮೊದಲು ಗ್ರಾಮದಲ್ಲಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ದಿನಾಂಕ 14-5-2009 ಗುರುವಾರ ಪ್ರಜಾ ವಾಣಿ ದಿನಪತ್ರಿಕೆ.

# ಬಟಗೇರಾ ಮಹಾಲಕ್ಷ್ಮೀ ಜಾತ್ರೆಗೆ ಅದ್ದೂರಿ ಚಾಲನೆ

**ವಿಕ ಸುದ್ದಿಲೋಕ**

**ಬಟಗೇರಾ(ಬಸವಕಲ್ಯಾಣ):** ಮೇ 24ರವರೆಗೆ ನಡೆಯಲಿರುವ ಲಕ್ಷ ದೀಪೋತ್ಸವ ಮತ್ತು ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ ನಿಮಿತ್ತ ರಾಷ್ಟ್ರೀಯ ಭಾವೈಕ್ಯ ಮತ್ತು ಧರ್ಮ ಸಮ್ಮೇಳನಕ್ಕೆ ಜೈಘೋಷಗಳ ಮಧ್ಯೆ ಗ್ರಾಮದಲ್ಲಿ ಬುಧವಾರ ಅದ್ದೂರಿ ಚಾಲನೆ ನೀಡಲಾಯಿತು.

ಧರ್ಮ ಸಮ್ಮೇಳನ ಉದ್ಘಾಟಿಸಿ, ಸಾನಿಧ್ಯ ವಹಿಸಿದ್ದ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು, ಜಗತ್ತಿನಲ್ಲಿ ಎಲ್ಲ ಸಂಬಂಧಗಳು ಸಂಸಾರದಲ್ಲಿ ಬಂಧನಕ್ಕೆ ಒಳಪಡಿಸುತ್ತವೆ. ಆದರೆ ಗುರು-ಶಿಷ್ಯರ ಸಂಬಂಧ ಬಂಧಮುಕ್ತವಾಗಿದೆ. ಇದು ಜೀವನದಲ್ಲಿ ಬೆಳಕು ತೋರಿಸುತ್ತದೆ ಎಂದರು.

ಬದುಕಿನಲ್ಲಿ ಗುರು ಮತ್ತು ದೇವರ ಸಂಬಂಧ ಅಗತ್ಯ. ಇದಾದ ನಂತರ ಯಾವುದೇ ಸಂಬಂಧ ಬೆಳೆಸಬಹುದು. ಆದರೆ ಗುರು ಮತ್ತು ದೇವರ ಸಂಬಂಧ ಬಿಟ್ಟು ಇತರೆ ಸಂಬಂಧಗಳಿಂದ ಬದುಕಿನಲ್ಲಿ ಸಾರ್ಥಕತೆ ಪಡೆಯಲಾಗದು ಎಂದು ಪ್ರತಿಪಾದಿಸಿದರು.

ಪಂಚ ಪೀಠಗಳು ಮಾನವ ಧರ್ಮದ ರಾಷ್ಟ್ರೀಯ ಪೀಠಗಳು. ಪೀಠದ ಸಂದೇಶಗಳನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿವರೆಗೂ ತಲುಪಿಸುವ ಕೆಲಸವನ್ನು ಶಾಖಾ ಮಠಗಳು ಮಾಡುತ್ತಿವೆ ಎಂದ ಜಗದ್ಗುರುಗಳು, ಪ್ರಾಣಿ ಬಲಿ ಸಂಸ್ಕೃತಿ ಸರಿಯಲ್ಲ. ಯಾವುದೇ ಭಾಗದಲ್ಲೂ ಪ್ರಾಣಿ ವಧೆ ಮಾಡಬಾರದು ಎಂದರು.

ವ್ಯವಸ್ಥೆ ಕಲುಷಿತಗೊಳ್ಳುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಜಾಗೃತಿ ವಹಿಸಬೇಕು. ಉತ್ತಮ ಚಾರಿತ್ರ್ಯ ಹೊಂದಿದವರನ್ನೇ ಆಯ್ಕೆ ಮಾಡುವ ಮನೋಭಾವ ಬೆಳೆಯಬೇಕು ಎಂದರು.

ವಿಕ ಚಿತ್ರಲೋಕ



ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ ನಿಮಿತ್ತ ಬಟಗೇರಾದಲ್ಲಿ ಧರ್ಮ ಸಮ್ಮೇಳನವನ್ನು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ಬುಧವಾರ ಉದ್ಘಾಟಿಸಿದರು. ಡಾ.ರಾಜಶೇಖರ ಸ್ವಾಮಿ, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಗುರುಲಿಂಗಯ್ಯ ಶ್ರೀ, ನೀಲಾಬಾಯಿ ಸಿದ್ಧರೂಢ, ಹಾಲಾಬಾಯಿ ಉಪಸ್ಥಿತರಿದ್ದರು.

ತ್ರಿಪೂರಾಂತದ ಅಭಿನವ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಡಾ.ರಾಜಶೇಖರ ಸ್ವಾಮಿ ಗೋರ್ಟಾ ಪ್ರಾಸ್ತಾವಿಕ ಮಾತನಾಡಿದರು. ಹಳ್ಳಿಖೇಡದ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಹೂವಿನಹಳ್ಳಿಯ ಕೀರ್ತನ ಕೇಸರಿ ಶ್ರೀ ಗುರುಲಿಂಗಯ್ಯ ಸ್ವಾಮಿ, ಪಂಚ ಕಮಿಟಿ ಅಧ್ಯಕ್ಷ ಅರವಿಂದ ಭುರೆ, ಗ್ರಾಪಂ ಅಧ್ಯಕ್ಷ ನೀಲಾಬಾಯಿ ಸಿದ್ಧರೂಢ, ಉಪಾಧ್ಯಕ್ಷೆ ಹಾಲಾಬಾಯಿ ಉಪಸ್ಥಿತರಿದ್ದರು.

ಪಂಚ ಕಮಿಟಿ ಕಾರ್ಯದರ್ಶಿ ಬಸವರಾಜ ಸ್ವಾಮಿ ಸ್ವಾಗತಿಸಿದರು. ಮಹೇಶ ಮುಳೆ ನಿರೂಪಿಸಿದರು.

## ಮೊಬೈಲ್‌ನಲ್ಲಿ ಜಗದ್ಗುರು

ಜಗದ್ಗುರುಗಳ ಸನ್ನಿಧಿಗೆ ಹೋಗಿ ಆಮಂತ್ರಣ ಕೊಟ್ಟಿಲ್ಲ. ಎಲೆ-ಅಡಿಕೆ ನೀಡಿಲ್ಲ. ಕೇವಲ ಮೊಬೈಲ್‌ನಲ್ಲಿ ಸಂಪರ್ಕಿಸಿದರೂ ಶ್ರೀಮದ್ ಕಾಶಿ ಜಗದ್ಗುರುಗಳು ತಮ್ಮ ಗ್ರಾಮಕ್ಕೆ ದಯ ಮಾಡಿಸಿದ್ದಾರೆ. ಇಂದು ಗ್ರಾಮಸ್ಥರ ಪಾಲಿಗೆ ಸುದಿನ, ಭಾಗ್ಯ ಎಂದು ಡಾ.ರಾಜಶೇಖರ ಸ್ವಾಮಿ ಗೋರ್ಟಾ ವಿಶ್ಲೇಷಿಸಿದರು.

ಜಗದ್ಗುರುಗಳು ಈ ಭಾಗಕ್ಕೆ ಬಂದಾಗ ಇಲ್ಲಿಯ ಶಿವಾಚಾರ್ಯರು ಇಲ್ಲಿರಬೇಕು. ಇದು ಒಂದು ಸದಾಚಾರ. ಆದರೆ ಅನಿವಾರ್ಯ ಕಾರಣಗಳಿಂದ ಇಲ್ಲಿ ಈ ಸದಾಚಾರದ ಕೊರತೆ ಕಾಣುತ್ತಿದೆ ಎಂದರು.

ದಿನಾಂಕ 14-5-2009 ಗುರುವಾರ ವಿಜಯ ಕರ್ನಾಟಕ ದಿನಪತ್ರಿಕೆ.

Scanned by CamScanner

# ಅಕ್ಕಸಾಲಿಗ ಸಮಾಜ ಸಂಘ ಉದ್ಘಾಟನೆ

ವಿಕ ಸುದ್ದಿಲೋಕ

ಬೀದರ್: ಸಮಾಜ ಅಭಿವೃದ್ಧಿ ಹೊಂದಬೇಕಾದರೆ ಸಂಘಟನೆ ಅತ್ಯವಶ್ಯಕ. ಅಕ್ಕಸಾಲಿಗ (ಸೋನಾರ)ಸಮಾಜದಸರ್ವಾಂಗೀಣ ವಿಕಾಸಕ್ಕೆ ಸಂಘಟಿತ ಪ್ರಯತ್ನ ನಡೆಸಬೇಕಿದೆ ಎಂದು ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯ ಹೇಳಿದರು.

ನಗರದ ದೇವಿ ಕಾಲೊನಿ ಭವಾನಿ ಮಂದಿರದಲ್ಲಿ ಭಾನುವಾರ ನಡೆದ ಜಿಲ್ಲಾ ಶೀಲವಂತ ಅಕ್ಕಸಾಲಿಗ (ಸೋನಾರ) ಸಮಾಜ ಸಂಘ ಉದ್ಘಾಟಿಸಿ ಆಶೀರ್ವಚನ ನೀಡಿ, ಸಮಾಜದ ಕುಂದುಕೊರತೆ ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಎಲ್ಲರೂ ಶ್ರಮಿಸಬೇಕು.ಸಮಾಜದ ಸಂಘಟನೆ ಆಗದ ಹೊರತು ಸರಕಾರ, ಜನಪ್ರತಿನಿಧಿಗಳು ನಮ್ಮ ಗೋಳು ಕೇಳಲಾರರು. ಈ ವಾಸ್ತವ ಅರಿತು ಒಗ್ಗಟ್ಟು ಪ್ರದರ್ಶಿಸುವಂತೆ ಕರೆ ನೀಡಿದರು.

ಅಕ್ಕಸಾಲಿಗರಲ್ಲಿ ಹೆಚ್ಚಿನವರು ಕೆಳ ವರ್ಗದ ಜೀವನ ನಡೆಸುತ್ತಿದ್ದಾರೆ. ರಾಜಕೀಯವಾಗಿ ಸಮಾಜಕ್ಕೆ ಕಡೆಗಣಿಸಲಾಗಿದೆ. ಸರಕಾರ ಸಮಾಜವನ್ನು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿಸಿ ಅಭಿವೃದ್ಧಿಗೆ ನಾನಾ ಯೋಜನೆಗಳನ್ನು ಜಾರಿಗೊಳಿಸಬೇಕು. ವಸತಿ ರಹಿತರಿಗೆ ಗುರುತಿಸಿ ಉಚಿತ ಮನೆಗಳನ್ನು ಒದಗಿಸಬೇಕೆಂದು ಆಗ್ರಹಿಸಿದರು.

ಸಮಾಜದ ಹಿರಿಯ ಮುಖಂಡ ವೈಜಿನಾಥ ಶೀಲವಂತ ಹಾಲಹಿಪ್ಪರಗಾ ಅಧ್ಯಕ್ಷತೆವಹಿಸಿಮಾತನಾಡಿ,ಜಿಲ್ಲೆಯಲ್ಲಿ ಶೀಲವಂತ ಅಕ್ಕಸಾಲಿಗರು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳು ಅಕ್ಕಸಾಲಿಗರಿಗೆ ತಲುಪಿಸಿ ಆರ್ಥಿಕವಾಗಿ ಸಶಕ್ತಗೊಳಿಸಬೇಕು ಎಂದು ಹೇಳಿದರು.

ಗುಳೇದಗುಡ್ಡದ ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಸಮಾಜದ ಪ್ರಗತಿಗೆ ರಾಜಕೀಯದಲ್ಲಿ ಸೂಕ್ತ ಸ್ಥಾನಮಾನ ಪಡೆಯುವ ಅಗತ್ಯವಿದೆ. ರಾಜಕೀಯ ಶಕ್ತಿ ಸಮಾಜದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ವಿಶ್ಲೇಷಿಸಿದರು.

ಬಸವಕಲ್ಯಾಣದ ಶ್ರೀ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ರಮೇಶ ಪಾಂಡೆ, ಸಂಘದ ಗುಲ್ಬರ್ಗ ಅಧ್ಯಕ್ಷ ಸುಭಾಷ ಶೀಲವಂತ, ಪ್ರಕಾಶ ತೂಗಾವೆ ಬಸವಕಲ್ಯಾಣ, ಸಿದ್ರಾಮ ಶೀಲವಂತ, ಗುರಪ್ಪ ಶೀಲವಂತ, ನಿರಂಜನ ಶೀಲವಂತ ಇದ್ದರು. ಸಂಘದ ಜಿಲ್ಲಾಧ್ಯಕ್ಷ ಅಶೋಕ ಶೀಲವಂತ ಸ್ವಾಗತಿಸಿ, ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ಶರಣಪ್ಪ ಶೀಲವಂತ ನಿರೂಪಿಸಿದರೆ, ಗಣಪತಿ ಶೀಲವಂತ ವಂದಿಸಿದರು.

ವಿಕ ಚಿತ್ರಲೋಕ



ಬೀದರ್‌ನಲ್ಲಿ ಭಾನುವಾರ ಜಿಲ್ಲಾ ಶೀಲವಂತ ಅಕ್ಕಸಾಲಿಗ ಸಮಾಜ ಸಂಘ ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯ ಉದ್ಘಾಟಿಸಿದರು. ಶ್ರೀ ರುದ್ರಮುನಿ ಶಿವಾಚಾರ್ಯ, ವೈಜಿನಾಥ ಶೀಲವಂತ, ಅಶೋಕ ಶೀಲವಂತ, ರಾಜಶೇಖರ ಶೀಲವಂತ ಇದ್ದರು.

ದಿನಾಂಕ 21-07-2009 ಮಂಗಳವಾರ ವಿಜಯ ಕರ್ನಾಟಕ ದಿನಪತ್ರಿಕೆ.

## ಉದ್ಘಾಟನೆ

*ಬೀದರ್‌ನಲ್ಲಿ ಶೀಲವಂತ ಅಕ್ಕಸಾಲಿಗ ಸಮಾಜ ಸಂಘವನ್ನು ರೇವಣ ಸಿದ್ಧ ಶಿವಾಚಾರ್ಯರು ಉದ್ಘಾಟಿಸಿದರು. ಪೂಜ್ಯ ರುದ್ರಮುನಿ ಶಿವಾಚಾರ್ಯರು ಇದ್ದರು. ಆಯೋಗದ ಉಪಾಧ್ಯಕ್ಷ ಡಿ.ಎಚ್.ಶಂಕರಮೂರ್ತಿ ಬಿಡುಗಡೆಗೊಳಿಸಿದರು.*



ದಿನಾಂಕ 20-07-2009 ಸೋಮವಾರ ಕನ್ನಡ ಪ್ರಭಾ ದಿನಪತ್ರಿಕೆ.

Scanned by CamScanner

# ಅಕ್ಕಸಾಲಿಗ ಸಮಾಜ ಸಂಘ ಉದ್ಘಾಟನೆ

ವಿಕ ಚಿತ್ರಲೋಕ



ಬೀದರ್‌ನಲ್ಲಿ ಭಾನುವಾರ ಜಿಲ್ಲಾ ಶೀಲವಂತ ಅಕ್ಕಸಾಲಿಗ ಸಮಾಜ ಸಂಘ ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯ ಉದ್ಘಾಟಿಸಿದರು. ಶ್ರೀ ರುದ್ರಮುನಿ ಶಿವಾಚಾರ್ಯ, ವೈಜಿನಾಥ ಶೀಲವಂತ, ಅಶೋಕ ಶೀಲ ವಂತ, ರಾಜಶೇಖರ ಶೀಲವಂತ ಇದ್ದರು.

**ವಿಕ ಸುದ್ದಿಲೋಕ**

**ಬೀದರ್:** ಸಮಾಜ ಅಭಿವೃದ್ಧಿ ಹೊಂದಬೇಕಾದರೆ ಸಂಘಟನೆ ಅತ್ಯವಶ್ಯಕ. ಅಕ್ಕಸಾಲಿಗ (ಸೋನಾರ)ಸಮಾಜದ ಸರ್ವಾಂಗೀಣ ವಿಕಾಸಕ್ಕೆ ಸಂಘಟಿತ ಪ್ರಯತ್ನ ನಡೆಸಬೇಕಿದೆ ಎಂದು ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯ ಹೇಳಿದರು.

ನಗರದ ದೇವಿ ಕಾಲೊನಿ ಭವಾನಿ ಮಂದಿರದಲ್ಲಿ ಭಾನುವಾರ ನಡೆದ ಜಿಲ್ಲಾ ಶೀಲವಂತ ಅಕ್ಕಸಾಲಿಗ (ಸೋನಾರ) ಸಮಾಜ ಸಂಘ ಉದ್ಘಾಟಿಸಿ ಆಶೀರ್ವಚನ ನೀಡಿ, ಸಮಾಜದ ಕುಂದುಕೊರತೆ ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಎಲ್ಲರೂ ಶ್ರಮಿಸಬೇಕು.ಸಮಾಜದ ಸಂಘಟನೆ ಆಗದ ಹೊರತು ಸರಕಾರ, ಜನಪ್ರತಿನಿಧಿಗಳು ನಮ್ಮ ಗೋಳು ಕೇಳಲಾರರು. ಈ ವಾಸ್ತವ ಅರಿತು ಒಗ್ಗಟ್ಟು ಪ್ರದರ್ಶಿಸುವಂತೆ ಕರೆ ನೀಡಿದರು.

ಅಕ್ಕಸಾಲಿಗರಲ್ಲಿ ಹೆಚ್ಚಿನವರು ಕೆಳ ವರ್ಗದ ಜೀವನ ನಡೆಸುತ್ತಿದ್ದಾರೆ. ರಾಜಕೀಯವಾಗಿ ಸಮಾಜಕ್ಕೆ ಕಡೆಗಣಿಸಲಾಗಿದೆ. ಸರಕಾರ ಸಮಾಜವನ್ನು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿಸಿ ಅಭಿವೃದ್ಧಿಗೆ ನಾನಾ ಯೋಜನೆಗಳನ್ನು ಜಾರಿಗೊಳಿಸಬೇಕು. ವಸತಿ ರಹಿತರಿಗೆ ಗುರುತಿಸಿ ಉಚಿತ ಮನೆಗಳನ್ನು ಒದಗಿಸಬೇಕೆಂದು ಆಗ್ರಹಿಸಿದರು.

ಸಮಾಜದ ಹಿರಿಯ ಮುಖಂಡ ವೈಜಿನಾಥ ಶೀಲವಂತ ಹಾಲಹಿಪ್ಪರಗಾ ಅಧ್ಯಕ್ಷತೆ ವಹಿಸಿ ಮಾತನಾಡಿ,ಜಿಲ್ಲೆಯಲ್ಲಿ ಶೀಲವಂತ ಅಕ್ಕಸಾಲಿಗರು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳು ಅಕ್ಕಸಾಲಿಗರಿಗೆ ತಲುಪಿಸಿ ಆರ್ಥಿಕವಾಗಿ ಸಶಕ್ತಗೊಳಿಸಬೇಕು ಎಂದು ಹೇಳಿದರು.

ಗುಳೇದಗುಡ್ಡದ ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಸಮಾಜದ ಪ್ರಗತಿಗೆ ರಾಜಕೀಯದಲ್ಲಿ ಸೂಕ್ತ ಸ್ಥಾನಮಾನ ಪಡೆಯುವ ಅಗತ್ಯವಿದೆ. ರಾಜಕೀಯ ಶಕ್ತಿ ಸಮಾಜದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ವಿಶ್ಲೇಷಿಸಿದರು.

ಬಸವಕಲ್ಯಾಣದ ಶ್ರೀ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ರಮೇಶ ಪಾಂಡೆ, ಸಂಘದ ಗುಲ್ಬರ್ಗ ಅಧ್ಯಕ್ಷ ಸುಭಾಷ ಶೀಲವಂತ, ಪ್ರಕಾಶ ತೂಗಾವೆ ಬಸವಕಲ್ಯಾಣ, ಸಿದ್ರಾಮ ಶೀಲವಂತ, ಗುರಪ್ಪ ಶೀಲವಂತ, ನಿರಂಜನ ಶೀಲವಂತ ಇದ್ದರು. ಸಂಘದ ಜಿಲ್ಲಾಧ್ಯಕ್ಷ ಅಶೋಕ ಶೀಲವಂತ ಸ್ವಾಗತಿಸಿ, ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ಶರಣಪ್ಪ ಶೀಲವಂತ ನಿರೂಪಿಸಿದರೆ, ಗಣಪತಿ ಶೀಲವಂತ ವಂದಿಸಿದರು.

ದಿನಾಂಕ 23-07-2009 ಬುಧವಾರ ವಿಜಯಕರ್ನಾಟಕ ದಿನಪತ್ರಿಕೆ.




## ಉದ್ಘಾಟನೆ

ಬೀದರ್‌ನ ದೇವಿ ಕಾಲೋನಿಯ ಭವಾನಿ ಮಂದಿರದಲ್ಲಿ ಭಾನುವಾರ ನಡೆದ ಶೀಲವಂತ ಅಕ್ಕಸಾಲಿಗ ಸಮಾಜ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಶಾಸಕ ರಮೇಶಕುಮಾರ ಪಾಂಡೆ ಮಾತನಾಡಿದರು.

ದಿನಾಂಕ 24-07-2009 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ.

Scanned by CamScanner

## ಮಡಿವಾಳ ಮಾಚಿದೇವ ಮಂದಿರದಲ್ಲಿ ಶ್ರಾವಣ ಮಾಸದ ಕಾರ್ಯಕ್ರಮ



ಬಸವಕಲ್ಯಾಣ : ಆಗಸ್ಟ್ 12 ಶ್ರಾವಣದ 3ನೇ ಸೋಮವಾರ ಮಡಿವಾಳ ಮಾಚಿದೇವರ ಹೊಂಡಾ (ಮಂದಿರ) ತ್ರಿಪೂರಾಂತ ಬಸವಕಲ್ಯಾಣದಲ್ಲಿ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ತ್ರಿಪೂರಾಂತ, ಪ್ರತಾಪೂರ, ಚೌಂದೂರಿ ಭಜನ ಮಂಡಳದಿಂದ ರಾತ್ರಿ ಇಡಿ ಭಜನಾ ಕಾರ್ಯಕ್ರಮ ಜರುಗಿದ್ದವು.

ಧಾರ್ಮಿಕ ಕಾರ್ಯಕ್ರಮ

ಮಡಿವಾಳ ಮಾಚಿದೇವರ ಕಾರ್ಯ ಸಾಧನೆ, ಜೀವನ, ಪರಿಚಯ, ಕಾರ್ಯಕ್ರಮವು ಸೋಮವಾರ ಮುಂಜಾನೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಬಸವಣಪ್ಪ ತಿಪ್ಪಶೆಟ್ಟಿ, ಅನುಭವ-ಮಂಟಪ ಬಸವಕಲ್ಯಾಣ ಗುಲಬರ್ಗಾ ಜಿಲ್ಲಾ ಮಡಿವಾಳ ಸಮಾಜ ಅದ್ಯಕ್ಷ ಧರ್ಮಣ್ಣಾ, ಬೀದರ ಜಿಲ್ಲಾ ಅಧ್ಯಕ್ಷ ಸಿದ್ರಾಮಪ್ಪಾ ಸುಭಾಷ ಮಡಿವಾಳ ದಿಲೀಪ ಮಡಿವಾಳ ಭಾಲ್ಕಿ ಸತೀಶ ಮಡಿವಾಳ ಹಲಬರ್ಗಾ, ಪತ್ರಕರ್ತರಾದ ಮಾಣಿಕ ಭೂರೆ, ಧನರಾಜ ಪೂಲಾರೆ, ಮಾರ್ತಂಡ ಜೋಷಿ, ಮುಂತಾದವರು ಭಾಗವಹಿಸಿದರು.

ವಿಶೇಷ ಉಪನ್ಯಾಸಕರಾಗಿ ಸಾಯಿಬಣ್ಣಾ ಬಿ. ಮಡಿವಾಳ ನಿವೃತ್ತ ಉಪತಹಸಿಲ್ದಾರರು ಮಡಿವಾಳ ಮಾಚಿದೇವ ಶರಣ ಬದುಕ ಬರಹ ಜೀವನ ಸಾಧನೆ ಕುರಿತು ಬಹಳ ಧಾರ್ಮಿಕವಾಗಿಮಾತನಾಡಿದರು. ಪ್ರಸ್ತಾವಿಕ ಸ್ವಾಗತ ಮತ್ತು ಸಂಚಾಲನೆ ಶ್ರೀ ಗಣಪತಿ ಸಸ್ತಾಪೂರೆ, ಉಪಾದ್ಯಕ್ಷರು ಬೀದರ ಜಿಲ್ಲಾ ಮಡಿವಾಳ ಸಮಾಜ ಸಾನಿಧ್ಯ : ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವ ಮಡಿವಾಳೇಶ್ವರ ಮುತ್ಯಾ ಬಸವಕಲ್ಯಾಣ ಅನುಭಾವ ನೀಡಿದರು. ಒಟ್ಟಾರೆ ಈ ಹೊಂಡಾದಲ್ಲಿ ಸೋಮವಾರ ಕಾರ್ಯಕ್ರಮ ಜಾತ್ರೆ ರೂಪ ಪಡೆಯಿತ್ತು.

ದಿನಾಂಕ 13-8-2009 ಗುರುವಾರ
ಬಹಿರಂಗ ದಿನಪತ್ರಿಕೆ.

## ಧ್ಯಾನ ಮಂಟಪ ಕೆಲಸ ಆರಂಭಿಸಿ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ತ್ರಿಪುರಾಂತದ ಮಡಿವಾಳ ಮಾಚಿದೇವರ ವೃತ್ತದಲ್ಲಿ ಕಂಚಿನ ಮೂರ್ತಿ ಸ್ಥಾಪಿಸಬೇಕು. ಧ್ಯಾನ ಮಂಟಪದ (ಗವಿ) ಜೀರ್ಣೋದ್ಧಾರ ಕೆಲಸ ಆರಂಭಿಸಬೇಕು. ಮಡಿವಾಳ ಮಾಚಿದೇವರ ಹೊಂಡ ಅಭಿವೃದ್ಧಿಪಡಿಸಬೇಕು. ಪರ್ತಾಪುರದಲ್ಲಿರುವ ಮಾಚಿದೇವರ ಮಂದಿರ ಬಿಕೆಡಿಬಿಗೆ ಸೇರಿಸಿ ಅಭಿವೃದ್ಧಿಪಡಿಸಬೇಕೆಂದು ಕರ್ನಾಟಕ ಮಡಿವಾಳ ಸಂಘ ಮನವಿ ಮಾಡಿದೆ.

ಸಂಘದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಿಭಾಗದ ಕಾರ್ಯದರ್ಶಿಗಳಾದ ನಿವೃತ್ತ ಉಪ ತಹಸೀಲ್ದಾರ್ ಸಾಯಬಣ್ಣ ಮಡಿವಾಳ ನೇತೃತ್ವದ ನಿಯೋಗ ಬಿಕೆಡಿಬಿ ಆಯುಕ್ತರಿಗೆ ಪ್ರತ್ಯೇಕ ಮನವಿ ಪತ್ರಗಳನ್ನು ಸಲ್ಲಿಸಿ ಈ ಬೇಡಿಕೆ ಮಂಡಿಸಿದೆ.

**ಕಾರ್ಯಕ್ರಮ**

ಇದಕ್ಕೂ ಮುನ್ನ ಶ್ರಾವಣ ಮಾಸದ ನಿಮಿತ್ತ ತ್ರಿಪುರಾಂತದಲ್ಲಿನ ಮಡಿವಾಳ ಮಾಚಿದೇವ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮ ಜರುಗಿತು. ಸಾನ್ನಿಧ್ಯ ವಹಿಸಿದ್ದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಮಡಿವಾಳ ಮಾಚಿದೇವರ ಗುಂಪಾದ ಶ್ರೀ ಮಡಿವಾಳೇಶ್ವರ ಮುತ್ಯಾ ನೇತೃತ್ವ, ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ ಮಡಿವಾಳ ಅಧ್ಯಕ್ಷತೆ ವಹಿಸಿದ್ದರು. ಸಂಘದ ಜಿಲ್ಲಾ ಉಪಾಧ್ಯಕ್ಷ ಗಣಪತಿ ಸಸ್ತಾಪುರೆ, ಹಳ್ಳಿಖೇಡದ ಬಸವಣಪ್ಪ ತಿಪಶೆಟ್ಟಿ, ಗುಲ್ಬರ್ಗ ಜಿಲ್ಲಾ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಧರ್ಮಣ್ಣ ಮಡಿವಾಳ, ಸಿದ್ರಾಮಪ್ಪ ಮಡಿವಾಳ, ಸುಭಾಷ ಮಡಿವಾಳ, ನಿವೃತ್ತ ಉಪ ತಹಸೀಲ್ದಾರ್ ಸಾಯಬಣ್ಣ ಮಡಿವಾಳ, ದಿಗಂಬರ ಮಡಿವಾಳ, ಸತೀಶ ಮಡಿವಾಳ ಭಾಗವಹಿಸಿದ್ದರು.



ಬಸವಕಲ್ಯಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಯಬಣ್ಣ ಮಡಿವಾಳ ಮಾತನಾಡಿದರು. ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು, ಮಡಿವಾಳೇಶ್ವರ ಮುತ್ಯಾ, ಬಾಬುರಾವ ಮಡಿವಾಳ, ಬಸವಣಪ್ಪ ತಿಪಶೆಟ್ಟಿ, ಗಣಪತಿ ಸಸ್ತಾಪೂರೆ ಇತರರು ಇದ್ದರು.

ದಿನಾಂಕ 14-8-2009 ಶುಕ್ರವಾರ
ವಿಜಯ ಕರ್ನಾಟಕ ದಿನಪತ್ರಿಕೆ.

## ಮಂಗಲ ಮಹೋತ್ಸವ

ಬಸವಕಲ್ಯಾಣ: ತ್ರಿಪುರಾಂತನಲ್ಲಿಯ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಗವಿ (ಮರಿದೇವರ ಗುಡ್ಡ)ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಗದ್ದುಗೆ ರುದ್ರಾಭಿಷೇಕ, ತ್ರಿಕಾಲ ರುದ್ರಪೂಜೆ, ದಾಸೋಹ ನಡೆಯಿತು. ಗುರುವಾರ ಶ್ರಾವಣ ಮಾಸದ ಕಾರ್ಯಕ್ರಮದ ಮಂಗಲ ಮಹೋತ್ಸವ ನಡೆಯಿತು. ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಸಾನ್ನಿಧ್ಯದಲ್ಲಿ ಸಂಗೀತ ರುದ್ರಪೂಜೆ ಮತ್ತು ಧರ್ಮಸಭೆ ನಡೆಯಿತು. ನೂರಾರು ಭಕ್ತರು ಭಾಗವಹಿಸಿದ್ದರು. ಪ್ರಮುಖರಾದ ಶರಣಪ್ಪ ಬಿರಾದಾರ, ಸೋಮಶೇಖರ ವಸ್ತ್ರದ, ಮಲ್ಲಯ್ಯ ಹಿರೇಮಠ, ವೀರಣ್ಣ ಶೀಲವಂತ, ದಯಾನಂದ ಶೀಲವಂತ, ರಮೇಶ ರಾಜೋಳೆ ಉಪಸ್ಥಿತರಿದ್ದರು.

ದಿನಾಂಕ 23-8-09 ರವಿವಾರ
ವಿಜಯಕರ್ನಾಟಕ ದಿನಪತ್ರಿಕೆ.

## 'ಮಾಚಿದೇವರ ಕಂಚಿನ ಪ್ರತಿಮೆ ಸ್ಥಾಪಿಸಿ'



ಬೀದರ್: ಬಸವಕಲ್ಯಾಣದ ತ್ರಿಪುರಾಂತದಲ್ಲಿ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಿಂದ ಶರಣ ಮಡಿವಾಳ ಮಾಚಿದೇವರ ಕಂಚಿನ ಪ್ರತಿಮೆ ಸ್ಥಾಪಿಸುವಂತೆ ಮಡಿವಾಳ ಸಂಘ ಒತ್ತಾಯಿಸಿದೆ. ಈ ಕುರಿತು ಮಡಿವಾಳ ಸಂಘದ ರಾಜ್ಯ ಕಾರ್ಯದರ್ಶಿ ಸಾಯಬಣ್ಣ ಮಡಿವಾಳ ಅವರ ನೇತೃತ್ವದಲ್ಲಿ ಬಿಕೆಡಿಬಿ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಲಾಗಿದ್ದು, ತಾಲೂಕಿನ ತ್ರಿಪುರಾಂತದಲ್ಲಿ ಮಾಚಿದೇವರ ಮಂದಿರ ಮತ್ತು ಧ್ಯಾನ ಮಂಟಪದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

■ **ಧಾರ್ಮಿಕ ಕಾರ್ಯಕ್ರಮ:** ಬಸವಕಲ್ಯಾಣದ ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತ ಅಭಿನವ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಮಡಿವಾಳೇಶ್ವರ ಮುತ್ಯಾ, ಮಡಿವಾಳರ ಬಾಬುರಾವ್, ಬಸವಣ್ಣೆಪ್ಪ ತಿಪ್ಪಶೆಟ್ಟಿ, ಸಿದ್ರಾಮಪ್ಪ, ಗಣಪತಿ ಸಸ್ತಾಪೂರೆ, ಸಂತೋಷ ಮಡಿವಾಳ, ರಾಜಕುಮಾರ ಶಿವಣೆ ಮತ್ತು ಮಲ್ಲಪ್ಪ ಪ್ರತಾಪೂರ್ ಉಪಸ್ಥಿತರಿದ್ದರು.

ದಿನಾಂಕ 13-8-2009 ಗುರುವಾರ
ಕನ್ನಡ ಪ್ರಭ ದಿನಪತ್ರಿಕೆ.

Scanned by CamScanner

# ಜೀವನ ವ್ಯರ್ಥಮಾಡದೆ ಶರಣಜೀವಿಗಳಾಗಿ ಬಾಳಬೇಕು : ನಿಜಾನಂದ ಶ್ರೀಗಳು

ಬಸವಕಲ್ಯಾಣ 21: ಮಾನವನಾಗಿ ಹುಟ್ಟಿದ ಬಳಿಕ ವ್ಯರ್ಥ ಜೀವನ ಕಳೆಯದೇ ಶರಣ ಜೀವಿಗಳಾಗಿ ಬಾಳಬೇಕು ಎಂದು ರಾಯಚೂರ ವಿಟ್ಟ ಮಲಕಾಪೂರ ಶಾಂತಾಶ್ರಮದ ಪೂಜ್ಯ ನಿಜಾನಂದ ಮಹಾಸ್ವಾಮಿಗಳು ತಿಳಿಸಿದರು. ಅವರು ಬೇಲೂರಿನ ಶ್ರಾವಣಮಾಸದ ನಿಮಿತ್ಯವಾಗಿ ಹನುಮಾನ ಮಂದಿರದಲ್ಲಿ ಹಮ್ಮಿಕೊಂಡ ಶರಣತತ್ವ ಪ್ರವಚನದ ಮಂಗಳ ಮಹೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ಸಿಕ್ಕಿದರಲ್ಲಿಯೇ ಸಂತೃಪ್ತಿ ಜೀವನ ನಡೆಸಬೇಕು ಎಂದರು. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಬಿ. ಟಂಕಸಾಲಿಮಠ ಮಾತನಾಡಿ ಶ್ರಾವಣಮಾಸದ ನಿಮಿತ್ಯವಾಗಿ ಇಂತಹ ಒಳ್ಳೆಯ ಪ್ರವಚನ ಹಮ್ಮಿಕೊಂಡಿರುವ ಬೇಲೂರಿನ ಜನತೆಯ ಕಾರ್ಯ ಪ್ರಶಂಸನಿಯವೆಂದರ ಅವರು ಮಾತೆಯೋಗೇಶ್ವರಿಯ ಜ್ಞಾನಾಮೃತ ಸವಿದ ನಿವೆಲ್ಲ ಧನ್ಯರು ಎಂದರು ನುಡಿ.ನೈವಿದ್ಯವನ್ನು ತ್ರಿಪೂರಾಂತ ಮರಿದೇವರ ಗುಡ್ಡದ ಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚರ್ಯರು ಮಾತನಾಡಿ. ಮಾತೆ ಯೋಗೇಶ್ವರಿಯವರ ಪ್ರವಚನ ನಿಮ್ಮ ಮೇಲೆ ಪ್ರಭಾವ ಬಿರಿದೆ ಎನ್ನುವುದಕ್ಕೆ ನೆರೆದ ಭಕ್ತರೆ ಸಾಕ್ಷಿಯಾಗಿದ್ದಾರೆ ಎಂದರು. ಬಿಜಾಪೂರ ತಾಲೂಕಿನ ಬುರಣಾಪೂರದ ಪರಮ ಪೂಜ್ಯ ಮಾತೋಶ್ರೀ ಯೋಗೇಶ್ವರಿ ತಾಯಿಯವರು "ಮಂಗಲ" ಕಾರ್ಯವೇಂದರೆ ಶುಬವನ್ನುಂಟುಮಾಡುವುದು ಮರಣಕ್ಕೆ ಹಾಗೂ ಜನನಕ್ಕೆ ಎರಡಕ್ಕೂ ಮಂಗಲ ಇದೆ ಶರಣರು "ಮರಣವೇ ಮಹಾನಮಿ" ಮಾಡಿದರು ನಿರಾಶೆ ಇದ್ದವನ್ನು ಮಾತ್ರ ಸುಖಿಯಾಗಿರುತ್ತಾನೆ ಎಂದರು ಸಮ್ಮುಖ ಬೇಲೂರಿನ ಹಿರೇಮಠದ ಪೂಜ್ಯಶ್ರೀ ಗುರುಲಿಂಗ ಶಿವಚಾರ್ಯರು ಉಪಸ್ಥಿತರಿದ್ದರು. ವೇದಿಕೆಯ ಮೇಲೆ ಬುರಣಾಪೂರದ ಆರುಡಾಶ್ರಮ ಸಾಧಕಿ ಸಂಗೀತಾ, ಬಸವೇಶ್ವರ ದೇವಸ್ಥಾನ ಪಂಚಕಮೀಟಿಯ ಉಪಾಧ್ಯಕ್ಷರಾದ ರೇವಣಸಿದ್ದಪ್ಪಾ ರಾಯವಾಡೆ, ಡಾ॥ ವಿಜಯಕುಮಾರ ಅಂತಪ್ಪನೋರ, ಪತ್ರಕರ್ತ ನಾಗಪ್ಪ ನಿಣ್ಣೆ, ಇನ್ನಿತರರು ಉಪಸ್ಥಿತರಿದ್ದರು. ಸಂಗೀತ ಸೇವೆಯನ್ನು ಆಕಾಶ ವಾಣಿ ಕಲಾವಿದರಾದ ರಾಜಕುಮಾರ ಮದಕಟ್ಟಿ, ತಬಲಾ ಸಾಥ ನವಲಿಂಗ ಪಾಟೀಲ್ ಸಲ್ಲಿಸಿದರು. ಸ್ವಾಗತ ಹಾಗೂ ಪ್ರಸ್ತಾವಿಕ ಮಾತುಗಳನ್ನು ಬಸವರಾಜ ಗುಂಗೆ, ವಂದನಾರ್ಪಣೆಯನ್ನು ರೇವಣಸಿದ್ದಪ್ಪ ಪಾಟೀಲ್ ಸಲ್ಲಿಸಿದರು.

ದಿನಾಂಕ 22-8-2009 ಶನಿವಾರ ಬಹಿರಂಗ ಸುದ್ದಿ ದಿನ ಪತ್ರಿಕೆ.

# ಜೀವನ ವ್ಯರ್ಥಮಾಡದೆ ಶರಣಜೀವಿಗಳಾಗಿ ಬಾಳಬೇಕು : ನಿಜಾನಂದ ಶ್ರೀಗಳು

ಬಸವಕಲ್ಯಾಣ, ಆ. 21– ಮಾನವನಾಗಿ ಹುಟ್ಟಿದ ಬಳಿಕ ವ್ಯರ್ಥ ಜೀವನ ಕಳೆಯದೇ ಶರಣ ಜೀವಿಗಳಾಗಿ ಬಾಳಬೇಕು ಎಂದು ರಾಯಚೂರ ವಿಟ್ಟ ಮಲಕಾಪೂರ ಶಾಂತಾಶ್ರಮದ ಪೂಜ್ಯ ನಿಜಾನಂದ ಮಹಾಸ್ವಾಮಿಗಳು ತಿಳಿಸಿದರು.

ಅವರು ಬೇಲೂರಿನ ಶ್ರಾವಣ ಮಾಸದ ನಿಮಿತ್ಯವಾಗಿ ಹನುಮಾನ ಮಂದಿರದಲ್ಲಿ ಹಮ್ಮಿಕೊಂಡ ಶರಣತತ್ವ ಪ್ರವಚನದ ಮಂಗಳ ಮಹೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ಸಿಕ್ಕಿದರಲ್ಲಿಯೇ ಸಂತೃಪ್ತಿ ಜೀವನ ನಡೆಸಬೇಕು ಎಂದರು. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಬಿ. ಟಂಕಸಾಲಿಮಠ ಶ್ರಾವಣ ಮಾಸದ ನಿಮಿತ್ಯವಾಗಿ ಇಂತಹ ಒಳ್ಳೆಯ ಪ್ರವಚನ ಹಮ್ಮಿಕೊಂಡಿರುವ ಬೇಲೂರಿನ ಜನತೆಯ ಕಾರ್ಯ ಪ್ರಶಂಸನಿಯವೆಂದರ ಅವರು ಮಾತೆಯೋಗೇಶ್ವರಿಯ ಜ್ಞಾನಾಮೃತ ಸವಿದ ನಿವೆಲ್ಲ ಧನ್ಯರು ಎಂದರು ನುಡಿ.ನೈವಿದ್ಯವನ್ನು ತ್ರಿಪೂರಾಂತ ಮರಿದೇವರ ಗುಡ್ಡದ ಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚರ್ಯರು ಮಾತನಾಡಿ. ಮಾತೆ ಯೋಗೇಶ್ವರಿಯವರ ಪ್ರವಚನ ನಿಮ್ಮಮೇಲೆ ಪ್ರಭಾವ ಬಿರಿದೆ ಎನ್ನುವುದಕ್ಕೆ ನೆರೆದ ಭಕ್ತರೆ ಸಾಕ್ಷಿಯಾಗಿದ್ದಾರೆ ಎಂದರು.

ಬಿಜಾಪೂರ ತಾಲೂಕಿನ ಬುರಣಾಪೂರದ ಪರಮ ಪೂಜ್ಯ ಮಾತೋಶ್ರೀ ಯೋಗೇಶ್ವರಿ ತಾಯಿಯವರು "ಮಂಗಲ" ಕಾರ್ಯವೇಂದರೆ ಶುಬವನ್ನುಂಟುಮಾಡುವುದು ಮರಣಕ್ಕೆ ಹಾಗೂ ಜನನಕ್ಕೆ ಎರಡಕ್ಕೂ ಮಂಗಲ ಇದೆ ಶರಣರು "ಮರಣವೇ ಮಹಾನಮಿ" ಮಾಡಿದರು ನಿರಾಶೆ ಇದ್ದವನ್ನು ಮಾತ್ರ ಸುಖಿಯಾಗಿರುತ್ತಾನೆ ಎಂದರು ಸಮ್ಮುಖ ಬೇಲೂರಿನ ಹಿರೇಮಠದ ಪೂಜ್ಯಶ್ರೀ ಗುರುಲಿಂಗ ಶಿವಚಾರ್ಯರು ಉಪಸ್ಥಿತರಿದ್ದರು. ವೇದಿಕೆಯ ಮೇಲೆ ಬುರಣಾಪೂರದ ಆರುಡಾಶ್ರಮ ಸಾಧಕಿ ಸಂಗೀತಾ, ಬಸವೇಶ್ವರ ದೇವಸ್ಥಾನ ಪಂಚಕಮೀಟಿಯ ಉಪಾಧ್ಯಕ್ಷರಾದ ರೇವಣಸಿದ್ದಪ್ಪಾ ರಾಯವಾಡೆ, ಡಾ॥ ವಿಜಯಕುಮಾರ ಅಂತಪ್ಪನೋರ, ಪತ್ರಕರ್ತ ನಾಗಪ್ಪ ನಿಣ್ಣೆ, ಇನ್ನಿತರರು ಉಪಸ್ಥಿತರಿದ್ದರು. ಸಂಗೀತ ಸೇವೆಯನ್ನು ಆಕಾಶ ವಾಣಿ ಕಲಾವಿದರು, ರಾಜಕುಮಾರ ಮದಕಟ್ಟಿ, ತಬಲಾ ಸಾಥ ನವಲಿಂಗ ಪಾಟೀಲ್ ಸಲ್ಲಿಸಿದರು. ಸ್ವಾಗತ ಹಾಗೂ ಪ್ರಸ್ತಾವಿಕ ಮಾತುಗಳನ್ನು ಬಸವರಾಜ ಗುಂಗೆ, ವಂದನಾರ್ಪಣೆಯನ್ನು ರೇವಣಸಿದ್ದಪ್ಪ ಪಾಟೀಲ್ ಸಲ್ಲಿಸಿದರು.

* * *

ದಿನಾಂಕ 22-8-2009 ಶನಿವಾರ ಹಸಿರುಕ್ರಾಂತಿ ದಿನ ಪತ್ರಿಕೆ.

Scanned by CamScanner

# ಜನನಿ ಜನ್ಮಭೂಮಿ ತಾಯಿ ಭಾಷೆ ಕನ್ನಡ

## ಯಾವಾಗಲೂ ಮರೆಯಬಾರದು–ಪಿ.ಬಿ.ಟಂಕಸಾಲಿಮಠ

ಬಸವಕಲ್ಯಾಣ 11:– ಗಡಿಭಾಗವಾದ ತಾಲೂಕಿನ ಕೋಹಿನೂರ ಗ್ರಾಮದ ಸರಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತ ವತಿಯಿಂದ ಶಾಲೆಗೊಂದು ಕನ್ನಡ ಕಾರ್ಯಕ್ರಮ ಮಾಲಿಕೆ 10 ಉದ್ಘಾಟಿಸಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯಾಬಿ.ಟಂಕಸಾಲಿಮಠ ಮಾತನಾಡಿ ಜನನ ಜನ್ಮಭೂಮಿ ತಾಯಿ ಭಾಷೆ ಕನ್ನಡವನ್ನು ನಾವು ಬೆಳೆಸಬೇಕು ಭಷಾಭಿಮಾನ ಇರಬೇಕು ಎಂದರು. ಕ.ಸಾ.ಪ ಗ್ರಾಮಿಣದಿಂದ ರಾಜ್ಯದ ವರೆಗೆ ನಾಡು ನುಡಿ ಬೆಳೆಸುವ ಕೆಲಸ ಮಾಡುತ್ತಿದೆ ಎಂದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಮರಿದೇವರ ಗುಡ್ಡದ ಪುಜ್ಯಶ್ರೀ. ಅಭಿನವ ಘನಲಿಂಗ ರುದ್ರಮುನ ಶಿವಚಾರ್ಯರು ಮಾತನಾಡಿ ಶಾಲೆಯ ಮಕ್ಕಳು ಜಾಗೃತ ನಿದ್ರೆ, ಬಕ ಪಕ್ಷಿ, ಕಾಗೆಯ ನೋಟ, ಮಿತ ಆಹಾರ ಸೇವನೆ, ಮನೆ ಬಿಟ್ಟು ಹೋರಗೆ ಅಭ್ಯಾಸ ಮಾಡುವುದು ಈ ರೀತಿಯ ಪಂಚ ಸೂತ್ರವನ್ನು ಜೀವನದಲ್ಲಿ ಅಳವಳಿಸಿಕೊಂಡರೆ ದೇಶದ ಶ್ರೇಷ್ಠ ವ್ಯಕ್ತಿಯಾಗಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಅಧ್ಯಕ್ಷತೆ ವಹಿಸಿದ ಕೋಹಿನೂರ ವಲಯ ಕ.ಸಾ.ಪ ಅಧ್ಯಕ್ಷರಾದ ಅಂಬಾರಾಯ ಉಗಾಜಿ ಮಾತನಾಡಿ ಸರಕಾರ ಶಾಲೆಗಳಿಗೆ ಮಕ್ಕಳ ಸಂಖ್ಯೆ ಹೆಚಿದ್ದು ಅವರ ಜ್ಞಾನ ಅಭಿವೃದ್ಧಿಯಾಗಿ ಗ್ರಂಥಾಲಯ ತೆರದಿದ್ದು ಪರಿಷತ್ತ ವತಿಯಿಂದ ಪುಸ್ತಕ ನೀಡಬೇಕು ಅಲ್ಲದೆ ಗ್ರಾಮಿಣ ಮಕ್ಕಳಿಗೆ ಪರಿಷತ್ತ ವತಿಯಿಂದಪ್ರೋತ್ಸಾಹಿಸಬೇಕೆಂದರು. ವೇದಿಕೆಯಲ್ಲಿ ಮುಡಬಿ ವಲಯದ ಕ.ಸಾ.ಪ ಅಧ್ಯಕ್ಷರಾದ ಮಲ್ಲಿನಾಥ ಹೀರೆಮಠ, ವಲಯ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಜಗನ್ನಾಥ ಸುರ್ಯವಂಶಿ ಪ್ರೌಢ ಶಾಲೆಯ ಎಸ್ಡಿಎಂಸಿ ಅಧ್ಯಕ್ಷರಾದ ಶಿವಶರಣಪ್ಪಾ ಸಂತಾಜಿ, ಪ್ರಾಥಮಿಕ ಎಸ್ಡಿಎಂಸಿ ಅಧ್ಯಕ್ಷರಾದ ವೀರಣ್ಣಾ ಮೂಲಗೆ, ತಾಲೂಕಾ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನಾಗಪ್ಪಾ ನಿಣ್ಣೆ, ಗ್ರಾಮದ ಹಿರಿಯ ಶಿಕ್ಷಣ ಪ್ರೇಮಿಗಳಾದ ಶಾಮರಾವ ಸಂತಾಜಿ, ಸ್ವರಾಜ ಎಸ್ಡಿಎಂಸಿ ಅಧ್ಯಕ್ಷರಾದ ಸುಭಾಷ ಪರಂಡೆ ಇನ್ನತರರು ಉಪಸ್ಥಿತರಿದ್ದರು ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಸತ್ಕರಿಸಿ ಪುಸ್ತಕ ದೇಣಿಗೆ ನೀಡಲಾಯಿತು ಸ್ವಾಗತ ರತೀಕಾಂತ ಜಮಾದಾರ ನೇರೆವರಿಸಿದರೆ ನಿರೂಪಣೆ ಕಲ್ಯಾಣರಾವ ಹಾರಕೂಡೆ, ವಂದನಾರ್ಪಣೆ ವಿಜಯಕುಮಾರ ಎ.ಎಚ್ ಸಲ್ಲಿಸಿದರು ಚಿತ್ರಕಲಾ ಶಿಕ್ಷಕರಾದ ಯಲ್ಲಾಲಿಂಗ ಪೂಜಾರಿ ಓಂನಾಥ ಇಂಡೆ, ವಲಯ ಕ.ಸಾ.ಪ ಕಾರ್ಯದರ್ಶಿ ಮನೋಹರ ಕಂಟೆಕೋರೆ ಇನ್ನತರರು ಸಹಕರಿಸಿದರು. ಶಾಲೆಯ ಮಕ್ಕಳು ಅತಿ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.




ಕೋಹಿನೂರನ ಸರಕಾರಿ ಪ್ರೌಢ ಶಾಲೆಯಲ್ಲಿ ಏರ್ಪಡಿಸಿ ಶಾಲೆಗೊಂದು ಕನ್ನಡ ಕಾರ್ಯಕ್ರಮ ಉದ್ಘಾಟಿಸಿಮಾತನಾಡುತ್ತಿರುವ ಪರಿಷತ್ತ ಅಧ್ಯಕ್ಷ ಪಿ.ಬಿ. ಟಂಕಸಾಲಿಮಠ, ಗೌರವ ಕಾರ್ಯದರ್ಶಿ ನಾಗಪ್ಪಾ ನಿಣ್ಣೆ, ವೇದಿಕೆಯಲ್ಲಿ ವಲಯ ಅಧ್ಯಕ್ಷರಾದ ಅಂಬಾರಾಯ ಉಗಾಜಿ, ಮಲ್ಲಿನಾಥ ಹಿರೆಮಠ, ಘನಲಿಂಗ ರುದ್ರಮುನಿ, ಶಿವಾಚಾರ್ಯರು, ಶಿವಶರಣಪ್ಪಾ ಸಂತಾಜಿ.

ದಿನಾಂಕ 13-09-2009 ರವಿವಾರ

# ಕರ್ನಾಟಕ ಸಾಹಿತ್ಯ ಪರಿಷತ್ ಘಟಕ ಉದ್ಘಾಟನೆ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಕನ್ನಡ ಸಾಹಿತ್ಯ ಪರಿಷತ್ತು ಇಡೀ ಕನ್ನಡಿಗರ ಮಾತೃ ಸಂಸ್ಥೆ. ಇದಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ ಪರ್ಯಾಯ ಅಲ್ಲ, ಇದು ಕನ್ನಡ ಸೋದರ ಭಾಷೆಗಳ ಸಂಸ್ಕೃತಿ ಮತ್ತು ಮೌಲಿಕತೆಯನ್ನು ಪ್ರತಿಪಾದಿಸುತ್ತದೆ ಎಂದು ಕರ್ನಾಟಕ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ತಾಲೂಕು ಘಟಕ ಶುಕ್ರವಾರ ಉದ್ಘಾಟಿಸಿದ ಅವರು, ಮಹಾಕಾವ್ಯವನ್ನು ಶಾಲಾ-ಕಾಲೇಜುಗಳಿಗೆ ಒಯ್ಯುವ ಉದ್ದೇಶ ಈ ಪರಿಷತ್ ಹೊಂದಿದೆ ಎಂದರು.

ಶರಣ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಡಾ.ಎಸ್.ಬಿ.ಮಹಾಜನ್ ಮಾತನಾಡಿ, ಶಾಲಾ-ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸಲು ಶಿಕ್ಷಕರು ಶ್ರಮಿಸಬೇಕು ಎಂದರು.

ವಿಕ ಚಿತ್ರಲೋಕ



**ಬಸವಕಲ್ಯಾಣದಲ್ಲಿ ಶುಕ್ರವಾರ ನಡೆದ ಕರ್ನಾಟಕ ಸಾಹಿತ್ಯ ಪರಿಷತ್ ತಾಲೂಕು ಘಟಕದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಜಗನ್ನಾಥ ಹೆಬ್ಬಾಳೆ, ಡಾ.ಎಸ್.ಬಿ.ಮಹಾಜನ್, ಸೂಗಯ್ಯ ಹಿರೇಮಠ, ಡಾ.ಪ್ರೇಮಾ ಸಿರ್ಸೆ, ಪಂಚಾಕ್ಷರಿ ಹಿರೇಮಠ, ಡಾ.ಗವಿಸಿದ್ಧಪ್ಪ ಪಾಟೀಲ್ ಉಪಸ್ಥಿತರಿದ್ದರು.**

ಪತ್ರಕರ್ತ ಮಹಿಪಾಲರೆಡ್ಡಿ ಮುನ್ನೂರ್ ಮಾತನಾಡಿ, ಕರ್ನಾಟಕ ಸಾಹಿತ್ಯ ಪರಿಷತ್ ಸೋತವರ ಸಂಘ ಅಲ್ಲ, ಇದು ನಾಡು-ನುಡಿಗಾಗಿ ಹುಟ್ಟಿಕೊಂಡ ಸಂಘಟನಾ ಶಕ್ತಿಯಾಗಿದೆ ಎಂದು ಪ್ರತಿಪಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಪರಿಷತ್ ತಾಲೂಕಾಧ್ಯಕ್ಷ ಪಂಚಾಕ್ಷರಿ ಜಿ.ಹಿರೇಮಠ ಮಾತನಾಡಿದರು. ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪ್ರಾಚಾರ್ಯರಾದ ಡಾ.ಪ್ರೇಮಾ ಸಿರ್ಸೆ, ಡಾ.ಗವಿಸಿದ್ಧಪ್ಪ ಪಾಟೀಲ್, ಸಾಹಿತಿಗಳಾದ ಸೂಗಯ್ಯ ಹಿರೇಮಠ, ಎಂ.ಜಿ.ಗಂಗನಪಳ್ಳಿ ಮಾತನಾಡಿದರು. ಉಪನ್ಯಾಸಕ ಭೀಮಾಶಂಕರ ಬಿರಾದಾರ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರುದ್ರಮಣಿ ಮಠಪತಿ ನಿರೂಪಿಸಿದರು. ವೀರಣ್ಣ ಮಂಠಾಳಕರ್ ವಂದಿಸಿದರು.

ಪದಾಧಿಕಾರಿಗಳಾದ ನಾಗಯ್ಯ ಕೊಳ್ಳೂರ್, ಪ್ರೊ.ಸೂರ್ಯಕಾಂತ ಶೀಲವಂತ, ರುದ್ರೇಶ್ವರ ಮಠಪತಿ, ಚಿತ್ರಶೇಖರ ಚಿರಳ್ಳಿ, ಡಾ.ಜಯದೇವಿ ಗಾಯಕವಾಡ, ಶಾಂತಲಿಂಗ ಮಠಪತಿ, ನಾಗೇಂದ್ರ ಬಿರಾದಾರ, ಮಚೇಂದ್ರ ಅಣಕಲ್, ವೀರಶೆಟ್ಟಿ ಪಾಟೀಲ್, ಗೌಸೋದ್ದಿನ್ ಪಠಾಣ, ಚಂದ್ರಕಾಂತ ಅಕ್ಕಣ್ಣ, ಕವಿರಾಜ ಕಿಣಗಿ, ರಮೇಶ ರಾಜೋಳೆ, ಸರೋಜನಿ ಹಿರೇಮಠ, ಶಿವಲೀಲಾ ಮಠಪತಿ ಉಪಸ್ಥಿತರಿದ್ದರು.

ದಿನಾಂಕ 29-8-2009 ಶನಿವಾರ ವಿಜಯ ಕರ್ನಾಟಕ ದಿನ ಪತ್ರಿಕೆ.

# ಕೋಹಿನೂರದಲ್ಲಿ ಕನ್ನಡ ಕಾರ್ಯಕ್ರಮ

**ವಿಕ ಸುದ್ದಿಲೋಕ**

ಬಸವಕಲ್ಯಾಣ: ಗ್ರಾಮೀಣ ಭಾಗದಲ್ಲಿ ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ, ಕನ್ನಡಾಭಿಮಾನ ಬೆಳೆಸುವ ಕೆಲಸ ಕನ್ನಡ ಸಾಹಿತ್ಯ ಪರಿಷತ್ ಮಾಡುತ್ತಿದೆ ಎಂದು ತ್ರಿಪುರಾಂತ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗಮುನಿ ಶಿವಾಚಾರ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಶಾಲೆಗೊಂದು ಕನ್ನಡ ಕಾರ್ಯಕ್ರಮ ಮಾಲಿಕೆಯಲ್ಲಿ ಕೋಹಿನೂರ ಸರಕಾರಿ ಸಂಯುಕ್ತ ಪ್ರೌಢಶಾಲೆಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಶ್ರೀಗಳು, ವಿದ್ಯಾರ್ಥಿಗಳು ಕಠಿಣ ಶ್ರಮ ವಹಿಸಿ ಅಭ್ಯಸಿಸಬೇಕು ಎಂದರು.

ಉದ್ಘಾಟನೆ ನೆರವೇರಿಸಿದ ಪರಿಷತ್ ತಾಲೂಕಾಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಮಾತೃಭಾಷೆ ಕನ್ನಡದ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಇರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕೋಹಿನೂರ ವಲಯ ಅಧ್ಯಕ್ಷ ಅಂಬಾರಾಯ ಉಗಾಜೆ, ಸರಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದು, ಇಲ್ಲಿನ ಗ್ರಂಥಾಲಯಕ್ಕೆ ಪರಿಷತ್‌ನಿಂದ ಪುಸ್ತಕಗಳನ್ನು ನೀಡಬೇಕು ಎಂದರು.

ಮುಡಬಿ ವಲಯ ಅಧ್ಯಕ್ಷ ಮಲ್ಲಿನಾಥ ಹಿರೇಮಠ, ವಲಯ ಸಹಾಯಕ ಶಿಕ್ಷಣಾಧಿಕಾರಿ ಜಗನ್ನಾಥ ಸೂರ್ಯವಂಶಿ, ಪ್ರೌಢಶಾಲೆ ಎಸ್ಡಿಎಂಸಿ ಅಧ್ಯಕ್ಷ ಶಿವಶರಣಪ್ಪ ಸಂತಾಜಿ, ಪ್ರಾಥಮಿಕ ಶಾಲೆ ಎಸ್ಡಿಎಂಸಿ ಅಧ್ಯಕ್ಷ ವೀರಣ್ಣ ಮೂಲಗೆ, ಕಸಾಪ ಗೌರವ ಕಾರ್ಯದರ್ಶಿ ನಾಗಪ್ಪ ನಿಣ್ಣೆ, ವಲಯ ಕಾರ್ಯದರ್ಶಿ ಮನೋಹರ ಕಂಟೆಕೋರ, ಶಾಮರಾವ ಸಂತಾಜಿ, ಸುಭಾಷ ಪರಂಡೆ, ಯಲ್ಲಾಲಿಂಗ ಪೂಜಾರಿ, ಓಂನಾಥ ಇಂಡೆ ಉಪಸ್ಥಿತರಿದ್ದರು.

ರತಿಕಾಂತ ಜಮಾದಾರ ಸ್ವಾಗತಿಸಿದರು. ವಿಜಯ ಕುಮಾರ ವಂದಿಸಿದರು. ಕಲ್ಯಾಣರಾವ ಹಾರಕೂಡೆ ನಿರೂಪಿಸಿದರು. ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುಸ್ತಕ ನೀಡಿ ಪ್ರೋತ್ಸಾಹಿಸಲಾಯಿತು.

ವಿಕ ಚಿತ್ರಲೋಕ



**ಕೋಹಿನೂರದಲ್ಲಿ ಶುಕ್ರವಾರ ನಡೆದ ಕನ್ನಡ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಲ್ಲಿನಾಥ ಹಿರೇಮಠ, ನಾಗಪ್ಪ ನಿಣ್ಣೆ ಪ್ರಭುಲಿಂಗಯ್ಯ ಟಂಕಸಾಲಿಮಠ, ಅಂಬಾರಾಯ ಉಗಾಜೆ ಇದ್ದರು.**

ದಿನಾಂಕ 13-09-2009 ರವಿವಾರ ವಿಜಯ ಕರ್ನಾಟಕ ದಿನಪತ್ರಿಕೆ

# ಪ್ರತಿಯೊಬ್ಬರಿಗೂ ಮಾತೃ ಭಾಷೆ ಅಭಿಮಾನವಿರಲಿ

ಕನ್ನಡಪ್ರಭ ವಾರ್ತೆ, ಬೀದರ್, ಸೆ.12

ಬಸವಕಲ್ಯಾಣ ತಾಲೂಕಿನ ಕೋಹಿನೂರ್ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ಶಾಲೆಗೊಂದು ಕನ್ನಡ' ಕಾರ್ಯಕ್ರಮ ಜರುಗಿತು.

ಕಸಾಪ ತಾಲೂಕಾಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡ ಭಾಷೆ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ. ಎಲ್ಲರಲ್ಲಿ ಮಾತೃ ಭಾಷೆಯತ್ತ ಅಭಿಮಾನ ಮೂಡಬೇಕು. ಕನ್ನಡ ನಾಡು ನುಡಿಗಾಗಿ ಸಾಹಿತ್ಯ ಪರಿಷತ್ ಶ್ರಮಿಸುತ್ತಿದೆ ಎಂದರು.

ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವಿದ್ಯಾರ್ಥಿಗಳು ಓದಿನಲ್ಲಿ ಆಸಕ್ತಿ, ಮಿತ ಆಹಾರ ಸೇವನೆ ಸೂತ್ರಗಳನ್ನು ಅಳವಡಿಸಿಕೊಂಡರೆ ದೇಶದ ಶ್ರೇಷ್ಠ ವ್ಯಕ್ತಿಯಾಗಲು ಸಾಧ್ಯ ಎಂದರು. ಕಸಾಪ ಕೋಹಿನೂರ್ ವಲಯ ಅಧ್ಯಕ್ಷ ಅಂಬಾರಾಯ ಉಗಾಜಿ ಮಾತನಾಡಿ, ಶಾಲೆಯಲ್ಲಿ ಮಕ್ಕಳಿಗಾಗಿ ಗ್ರಂಥಾಲಯ ಆರಂಭಿಸಲಾಗಿದ್ದು ಪರಿಷತ್ ವತಿಯಿಂದ ಪುಸ್ತಕಗಳನ್ನು ವಿತರಣೆ ಮಾಡಬೇಕು ಮತ್ತು ಗ್ರಾಮೀಣ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.




*ಬಸವಕಲ್ಯಾಣ ತಾಲೂಕಿನ ಕೋಹಿನೂರ್ ಗ್ರಾಮದ ಶಾಲೆಯಲ್ಲಿ ಕಸಾಪ ಹಮ್ಮಿಕೊಂಡಿದ್ದ 'ಶಾಲೆಗೊಂದು ಕನ್ನಡ' ಕಾರ್ಯಕ್ರಮದಲ್ಲಿ ಪರಿಷತ್ ತಾಲೂಕಾಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.*

ಪರಿಷತ್ ತಾಲೂಕು ಕಾರ್ಯದರ್ಶಿ ನಾಗಪ್ಪ ನಿಣ್ಣೆ, ಮುಡಬಿ ವಲಯ ಅಧ್ಯಕ್ಷ ಮಲ್ಲಿನಾಥ ಹಿರೇಮಠ, ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಜಗನ್ನಾಥ ಸೂರ್ಯವಂಶಿ, ಎಸ್‌ಡಿಎಂಸಿ ಅಧ್ಯಕ್ಷರಾದ ಶಿವಶರಣಪ್ಪ ಸಂತಾಜಿ, ವೀರಣ್ಣ ಮೂಲಗೆ ಪ್ರಮುಖರಾದ ಶಾಮರಾವ ಸಂತಾಜಿ, ಸ್ವರಾಜ್ ಮತ್ತು ಸುಭಾಷ ಉಪಸ್ಥಿತರಿದ್ದರು. ರತಿಕಾಂತ ಜಮಾದಾರ್ ಸ್ವಾಗತಿಸಿದರೆ ಕಲ್ಯಾಣರಾವ ಹಾರಕೂಡೆ ನಿರೂಪಿಸಿ ಓಂನಾಥ ಇಂಡೆ ವಂದಿಸಿದರು.

ದಿನಾಂಕ 13-9-2009 ರವಿವಾರ ಕನ್ನಡ ಪ್ರಭ ದಿನಪತ್ರಿಕೆ.

# ಕೋಹಿನೂರು: ತಾಯಿ ಭಾಷೆ ಯಾವಾಗಲೂ ಮರೆಯಬಾರದು

ಬಸವಕಲ್ಯಾಣ ೧೨:– ತಾಲೂಕಿನ ಕೋಹಿನೂರ ಗ್ರಾಮದ ಸರಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕ್ರೊಂಡಿದ್ದ ಶಾಲೆಗೊಂದು ಕನ್ನಡ ಕಾರ್ಯಕ್ರಮ ಮಾಲಿಕೆ ೧೦ ನ್ನು ಪರಿಷತ್ತಿನ ಅಧ್ಯಕ್ಷ ಪ್ರಭುಲಿಂಗಯ್ಯಾ. ಟಂಕಸಾಲಿಮಠ ಉದ್ಘಾಟಿಸಿ ಮಾತನಾಡಿದರು.

ಜನನಿ ಜನ್ಮಭೂಮಿ ತಾಯಿ ಭಾಷೆ ಕನ್ನಡವನ್ನು ನಾವು ಬೆಳೆಸಬೇಕು ಭಾಷಾಭಿಮಾನ ಹೊಂದಿರಬೇಕು, ಕ.ಸಾ.ಪ ಗ್ರಾಮೀಣದಿಂದ ರಾಜ್ಯದವರೆಗೆ ನಾಡು ನುಡಿ ಕಟ್ಟಿ ಬೆಳೆಸುವ ಕೆಲಸ ಮಾಡುತ್ತಿದೆ ಎಂದರು. ಮರಿದೇವರ ಗುಡ್ಡದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಶಾಲೆಯ ಮಕ್ಕಳು ಜಾಗೃತ ನಿದ್ರೆ, ಬಕ ಪಕ್ಷಿ ಕಾಗೆಯ ನೋಟ, ಮಿತ ಆಹಾರ




*ಕೋಹಿನೂರನಲ್ಲಿ ಹಮ್ಮಿಕೊಂಡಿದ್ದ ಶಾಲೆಗೊಂದು ಕನ್ನಡ ಕಾರ್ಯಕ್ರಮವನ್ನು ಕ.ಸಾ.ಪ ಅಧ್ಯಕ್ಷ ಪಿ.ಬಿ. ಟಂಕ ಸಾಲಿಮಠ ಉದ್ಘಾಟಿಸಿದರು. ಅಂಬಾರಾಯ ಉಗಾಜೆ, ಮಲ್ಲಿನಾಥ ಹಿರೇಮಠ, ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಶರಣಪ್ಪಾ ಸಂತಾಜಿ ಉಪಸ್ಥಿತರಿದ್ದರು.*

ಸೇವನೆ, ಮನೆ ಬಿಟ್ಟು ಹೊರಗೆ ಅಭ್ಯಾಸ ಮಾಡುವುದು ಈ ರೀತಿಯ ಪಂಚ ಸೂತ್ರವನ್ನು ಜೀವನದಲ್ಲಿ ಅಳವಳಿಸಿಕೊಂಡರೆ ದೇಶದ ಶ್ರೇಷ್ಠ ವ್ಯಕ್ತಿಯಾಗಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ವಲಯ ಕ.ಸಾ.ಪ ಅಧ್ಯಕ್ಷ ಅಂಬಾರಾಯ ಉಗಾಜಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮುಡಬಿ ವಲಯದ ಕ.ಸಾ.ಪ ಅಧ್ಯಕ್ಷ ಮಲ್ಲಿನಾಥ ಕೆ. ಹಿರೇಮಠ, ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಜಗನ್ನಾಥ ಸೂರ್ಯವಂಶಿ ಪ್ರೌಢ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಶಿವಶರಣ್ಣಪ್ಪ ಸಂತಾಜಿ, ಪ್ರಾಥಮಿಕ ಎಸ್ಡಿಎಂಸಿ ಅಧ್ಯಕ್ಷ ವೀರಣ್ಣಾ ಮೂಲಗೆ, ತಾಲೂಕಾ ಪರಿಷತ್ತಿನ ಗೌರವ ಕಾರ್ಯದರ್ಶಿ ನಾಗಪ್ಪ ನಿಣ್ಣೆ, ಗ್ರಾಮದ ಹಿರಿಯ ಶಿಕ್ಷಣ ಪ್ರೇಮಿ ಶಾಮರಾವ ಸಂತಾಜಿ, ಸ್ವರಾಜ ಎಸ್ಡಿಎಂಸಿ ಅಧ್ಯಕ್ಷರಾದ ಸುಭಾಷ ಪರಂಡೆ ಇನ್ನಿತರರು ಉಪಸ್ಥಿತರಿದ್ದರು. ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುಸ್ತಕ ನೀಡಲಾಯಿತು. ರತೀಕಾಂತ ಜಾಮಾದಾರ, ಕಲ್ಯಾಣರಾವ ಹಾರಕೂಡೆ, ವಿಜಯಕುಮಾರ ಎ.ಎಚ್. ಚಿತ್ರಕಲಾ ಶಿಕ್ಷಕರಾದ ಯಲ್ಲಾಲಿಂಗ ಪೂಜಾರಿ ಓಂನಾಥ ಇಂಡೆ, ವಲಯ ಕ.ಸಾ.ಪ ಕಾರ್ಯದರ್ಶಿ ಮನೋಹರ ಕಂಟೆಕೋರೆ ಇನ್ನಿತರರು ಭಾಗವಹಿಸಿದ್ದರು.

ದಿನಾಂಕ 13-09-2009 ರವಿವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ
ಬೀದರ ಜಿಲ್ಲೆ.

Scanned by CamScanner

# ಬಸವಕಲ್ಯಾಣದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಘಟಕ ಉದ್ಘಾಟನೆ

## ಕರ್ನಾಟಕ ಸಾಹಿತ್ಯ ಪರಿಷತ್ತು ಕ.ಸಾ.ಪಕ್ಕೆ ಪರಿಯಾಯ ಅಲ್ಲ!! ಹೆಬ್ಬಾಳೆ



ಬಸವಕಲ್ಯಾಣದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಉದ್ಘಾಟಿಸಿ ಮಾಥನಾಡುತ್ತಿರುವ ಜಿಲ್ಲಾಧ್ಯಕ್ಷರಾದ ಜಗನ್ನಾಥ ಹೆಬ್ಬಾಳೆ ವೇದಿಕೆಯಲ್ಲಿ ಇನ್ನಿತರ ಅತಿಥಿಗಳು

ಬಸವಕಲ್ಯಾಣ 28 :- ಕನ್ನಡದ ಕೆಲಸಕ್ಕೆ ಎಷ್ಟು ಜನ ಆದರು ಸಾಲ್ಲದು ಅದಕ್ಕಾಗಿಯೆ ಕರ್ನಾಟಕ ಸಾಹಿತ್ಯ ಪರಿಷತ್ತು ಹುಟ್ಟು ಹಾಕಲಾಗಿದೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದು ಪರಿಯ್ಯಾಯು ಸಂಸ್ಥೆ ಅಲ್ಲ ಸ.ಸಾ.ಪ. ದೊಡ್ಡಮ್ಮಾ ಇದಹಾಗೆ ಅಲ್ಲದೆ ಮಾತ್ರ ಸಂಸ್ಥೆಯಾಗಿದೆ ಎಂದ ಅವರು ಕನ್ನಡದ ಕೆಲಸ ಇದ್ದಾಗ, ಕನ್ನಡಕ್ಕೆ ಕುತ್ತು ಬಂದಾಗ ಎಲ್ಲಾಕನ್ನಡ ಪರ ಸಂಘಗಳು ಒಂದಾಗಿ ಕೆಲಸ ಮಾಡಬೇಕು, ಡಾ॥ ಸಿ ವೀರಣ್ಣಾ ಹುಟ್ಟುಹಾಕಿದ ಕರ್ನಾಟಕ ಸಾಹಿತ್ಯ ಪರಿಷತ್ತು ಮೌಲಿಕ 24 ಗ್ರಂಥಗಳನ್ನು ಪ್ರಕಟಿಸಿದೆ ಎಂದರು ಬಸವಕಲ್ಯಾಣ ತಾಲೂಕ ಘಟಕ ಉದ್ಘಾಟಿಸಿ ಸರಕಕಾರಿ ಪ್ರಾಥಮ ದರ್ಜೆಕಾಲೇಜಿನಲ್ಲಿ ಎರ್ಪಡಿಸಿದ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ದಿವ್ಯಸ್ಸಾನಿಧ್ಯ ವಹಿಸಿದ ತ್ರಿಪುರಾಂತದ ಮರಿ ದೇವರ ಗುಡ್ಡದ ಪೂಜ್ಯ ಶ್ರೀ ಅಭಿನವ ಘನಲಿಂಗ [illegible]ದ್ರಮುನಿ ಶಿವಾಚಾಯ[illegible]ಹಿಸಿದರು. ಮುಖ್ಯ ಅತಿಥಿಗಳಾಗಿ ಶರಣ ಸಾಹಿತ್ಯ ಪರಿಷತ್ತ ಅಧ್ಯಕ್ಷರಾದ ಡಾ॥ ಎಸ್ ಬಿ ಮಹಾಜನ ಮಾತನಾಡಿದರು, ವೇದಿಕೆಯಲ್ಲಿ ಶ್ರೀಮತಿ ಡಾ ಪ್ರೇಮಾ ಸಿರ್ಸೆ, ಮಹಿ ಪಾಲ ರೆಡ್ಡಿ ಮಣ್ಣೂರ ಸೂಗಯ್ಯಾ ಹಿರೇಮಠ, ಡಾ। ಗವಿಸಿದ್ದಪ್ಪಾ ಪಾಟೀಲ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಾತನಾಡಿದ ಪಂಚಾಕ್ಷರಿ ಜಿ ಹಿರೇಮಠ, ರವರು ಈ ಭಾಗದಲ್ಲಿ ಪುಸ್ತಕ ಪ್ರಕಟಣೆಗೆ ಒತ್ತು ನಿಡಬೇಕು ಕನ್ನಡದ ಜಾಗೃತ ನಡಯಬೇಕಾಗಿದೆ ಎಂದರು. ಇದೇ ಸಂಧರ್ಭದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ನೇಮಕ ಮಾಡಿ ಸತ್ಕರಿಸಲಾಯಿತು, ಕಾರ್ಯಾಧ್ಯಕ್ಷರಾದ ಶಾಂತಲಿಂಗ ಮಠಪತಿ, ಗೌ. ಸಲಹೆಗಾರರಾದ ನಾಗಯ್ಯಾ ಕೊಳ್ಳೂರ, ರಮೇಶ ರಾಜೋಳೆ, ಕವಿರಾಜ ಕಿಣಗಿ, ವೀರಶೆಟಿ ಪಾಟೀಲ್, ಚಂದ್ರಕಾಂತ ಅಕ್ಕಣ್ಣಾ, ಅಂಜನಾ ದೇವರಾಯ, ವಲಯ ಅಧ್ಯಕ್ಷರಾದ ಗೌಸೊದ್ದೀನ್ ಪಠಾಣ, ಮಚೇಂದ್ರ ಅಣಕಲ, ಕಾರ್ಯಕ್ರಮದ ನಿರೂಪಣೆ, ರುದ್ರಮಣಿ ವ್ಹಿ ಮಠಪತಿ, ನಡೆಸಿಕೊಟ್ಟರು ಗೌರವಕಾರ್ಯದರ್ಶಿ ಸ್ವಾಗತ ಭಿಮಾಶಂಕರ ಬಿರಾದಾರ ವೀರಣ್ಣಾ, ಮಂಠಾಳಕರ ವಂದಿಸಿದರು.

ದಿನಾಂಕ 29-8-2009 ಶುಕ್ರವಾರ ಉತ್ತರ ಕರ್ನಾಟಕ ದಿನಪತ್ರಿಕೆ.

# ಪುಸ್ತಕ ಪ್ರಕಟಣೆಗೆ ಕಸಾಪ ನೆರವು

ಬಸವಕಲ್ಯಾಣ: ಅಮೂಲ್ಯ ಹಸ್ತಪ್ರತಿಗಳ ಹಾಗೂ ಸಂಶೋಧನಾತ್ಮಕ ವಿಷಯಗಳ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲಾಗುತ್ತದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ ತಿಳಿಸಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಪರಿಷತ್ತಿನ ತಾಲ್ಲೂಕು ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಚಿತ್ರಕಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಡಿ.ಜವರೇಗೌಡ ಸ್ವಾಗತಿಸಿದರು. ಮಲ್ಲಿಕಾರ್ಜುನ ಬೆನಕಟ್ಟಿ ವಂದಿಸಿದರು. ಶಿವಲೀಲಾ ಮಠಪತಿ ನಿರೂಪಿಸಿದರು. ಶಾಂತಿನಿಕೇತನ ಶಾಲೆ ಮಕ್ಕಳಿಂದ ಪ್ರಾರ್ಥಿಸಿದರೆ, ಶಿವಯೋಗಿ ಶಾಸ್ತ್ರಿ ಶಾಲೆ ಮಕ್ಕಳು ನಾಡಗೀತೆ ಹಾಡಿದರು. ಸಂಘದ ಕಾರ್ಯ ದರ್ಶಿ ವಿಶ್ವನಾಥ ಬನಸೂಡೆ ಭಾಗವಹಿಸಿದ್ದರು.

ಚಿತ್ರಕಲಾ ಪ್ರದರ್ಶನ: ಸಮ್ಮೇಳನ ನಿಮಿತ್ತ ಚಿತ್ರಕಲಾ ಶಿಕ್ಷಕರು ಮತ್ತು ಬಸವೇಶ್ವರ ಚಿತ್ರಕಲಾ ಕಾಲೇಜು ವಿದ್ಯಾರ್ಥಿಗಳಿಂದ ಚಿತ್ರಕಲಾ ಪ್ರದರ್ಶನ ನಡೆಯಿತು. ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

### ತಾಲೂಕಿಗೊಂದು ಕಲಾ ಗ್ಯಾಲರಿ ನಿರ್ಮಾಣವಾಗಲಿ



ಕಲಾವಿದರ ಚಿತ್ರ ಪ್ರದರ್ಶನಕ್ಕಾಗಿ ತಾಲೂಕಿಗೊಂದು ಕಲಾ ಗ್ಯಾಲರಿ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ಶಾಸಕರು ಸರಕಾರದ ಮಟ್ಟದಲ್ಲಿ ಪ್ರಯತ್ನಿಸಬೇಕು ಎಂದು ಚಿತ್ರಕಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನಾಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಸರಕಾರಕ್ಕೆ ಮನವಿ ಮಾಡಿದರು. ಶಾಲೆ ಉತ್ತಮವಾಗಿ ಕಾಣುವಂತೆ ಮಾಡುವಲ್ಲಿ ಚಿತ್ರಕಲಾ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಚಿತ್ರಕಲಾ ಶಿಕ್ಷಕರಿಗೆ ಸರಕಾರದಿಂದ ಅಗತ್ಯ ಸೌಲಭ್ಯ ಸಿಗಬೇಕು. ಚಿತ್ರಕಲಾ ಶಿಕ್ಷಕರ ನೇಮಕ ನಡೆಯಬೇಕು. ವೇತನ ತಾರತಮ್ಯ ಸರಿಪಡಿಸಬೇಕು. ಚಿತ್ರಕಲಾ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಕೋರಿದರು.



ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಚಿತ್ರಕಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನವನ್ನು ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಉದ್ಘಾಟಿಸಿದರು. ಡಾ.ಬಸವಲಿಂಗ ಪಟ್ಟದ್ದೇವರು, ಶ್ರೀ ಚನ್ನವೀರ ಶಿವಾಚಾರ್ಯರು, ಶ್ರೀ ಶಿವಾನಂದ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶಿವಾನಂದ ದೇವರು, ಪ್ರಭುಲಿಂಗಯ್ಯ ಟಂಕಸಾಲಿಮಠ, ಡಾ.ಗವಿಸಿದ್ಧಪ್ಪ, ಜವರೇಗೌಡ ಇದ್ದರು.

ದಿನಾಂಕ 15-3-2010 ಸೋಮವಾರ ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

## ಉದ್ಘಾಟನೆ

ಬಸವಕಲ್ಯಾಣದ ಸಾರ್ವಜನಿಕ ಆಸ್ಪತ್ರೆ ಎದುರು ಕರ್ನಾಟಕ ರಕ್ಷಣಾ ವೇದಿಕೆಯಿಂದ ಆರಂಭಿಸಲಾದ ಕುಡಿಯುವ ನೀರಿನ ಸೌಲಭ್ಯ ವನ್ನು (ಅರವಟಿಗೆ) ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಧನರಾಜ ರಾಜೋಳೆ ಉಪಸ್ಥಿತರಿದ್ದರು.



ದಿನಾಂಕ 20-3-2010 ಶನಿವಾರ ಪ್ರಜಾವಾಣಿ ದಿನಪತ್ರಿಕೆ

ಶ್ರೀ ರಂಭಾಪುರಿ ಜಗದ್ಗುರು ಸಾನಿಧ್ಯದಲ್ಲಿ

## 25 ರಂದು ಜಗದ್ಗು ರೇಣುಕಾಚಾರ್ಯರ ಜಯಂತಿ

ಬಸವಕಲ್ಯಾಣ – 23 ತ್ರಿಪ್ರರಾಂತದ ಮರಿದೇವರ ಗುಡ್ಡದಲ್ಲಿರುವ ಗವಿಮಠದಲ್ಲಿ ಇದೆ ದಿನಾಂಕ 25 ರಂದು ಶ್ರೀ ಜಗದ್ಗುರುಗಳಾದ ಪ್ರಸನ್ನ ರೇಣುಕಾ ವೀರಸೋಮೇಶ್ವರ ಶಿವಾಚಾರ್ಯರರು ಬಾಳೆಹೊನ್ನರು ಇವರ ದಿವ್ಯ ಸಾನಿಧ್ಯದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದು ಬೆಳೆಗ್ಗೆ ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಗವಿ ಮಠದ ಶ್ರೀಗಳಾದ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಹಾರುದ್ರಾಭಿಷೇಕ ನಡೆಯಲಿದ್ದು ನಂತರ ಬಸವೇಶ್ವರ ದೇವಸ್ಥಾನದಿಂದ ಗವಿಮಠದವರೆಗೆ ಮೇರವಣೆಗೆಗೆ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿಗಳು ಚಾಲನೆ ನೀಡಲಿದ್ದು ಶ್ರೀ ಶಾಂತಲಿಂಗ ಶಿವಾಚಾರ್ಯರು ಗಡಿಗೌಂಡಗಾಂವ, ಶ್ರೀ ಗುರುಲಿಂಗ ಶಿವಾಚಾರ್ಯ ಬೇಲೂರ, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ರಾಜೇಶ್ವರ, ಶ್ರೀ ವಿಶ್ವರಾಧ್ಯ ಮಳೇಂದ್ರ ಶ್ರೀಗಳು ಅಫಜಲಪೂರ, ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಠಾಣಾ ಕುಸನೂರ, ಪಂಡೀತಾ ರಾಧ್ಯ ಶಿವಾಚಾರ್ಯರು ಹಳ್ಳಿಖೇಡ ರವರು ಮೇರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದು 11 : 00 ಗಂಟೆಗೆ ನಡೆಯುವ ಧರ್ಮಸಭೆಯಲ್ಲಿ ಶ್ರೀ ಜಗದ್ಗುರು ಪ್ರಸನ್ನ ರೇಣುಕಾ ವೀರ ಸೋಮೇಶ್ವರ ಶಿವಾಚಾರ್ಯರು ಬಾಳೆಹೊನ್ನುರ, ಇವರ ದಿವ್ಯ ಸಾನಿದ್ಯದಲ್ಲಿ ವಿಧಾನ ಪರಿಷದ ಸದಸ್ಯರಾದ ಬಸವರಾಜ ಪಾಟೀಲ ಹುಮನಾಬಾದ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವಕಲ್ಯಾಣ ಶಾಸಕರಾದ ಶ್ರೀ ಬಸವರಾಜ ಪಾಟೀಲ ಅಟ್ಟೂರ ವಹಿಸಲಿದ್ದು, ಶ್ರೀ ವಿರುಪಾಕ್ಷ ಶಿವಾಚಾರ್ಯರು ಹುಡಗಿ, ಶ್ರೀ ರಾಜೇಶ್ವರ ಶಿವಾಚಾರ್ಯರು ತಡೋಳಾ, ಶ್ರೀ ಜಯಶಾಂತಲಿಂಗ ಸ್ವಾಮಿಗಳು ಹೀರನಗಾಂವ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತ್ರಿಪೂರಾಂತರವರು ನೇತೃತ್ವ ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಮಾಜಿಶಾಸಕ ಮಲ್ಲಿಕಾರ್ಜುನ ಖೂಬಾ, ಜಿ.ಪಂ.ಅಧ್ಯಕ್ಷ ನಸಿಮೊದ್ದಿನ ಪಟೇಲ್, ನಗರ ಸಭೆ ಅಧ್ಯಕ್ಷರಾಧ ಗುರುರಾಜ ಶಾಶೆಟ್ಟೆ, ತಾ.ಪಂ. ಅಧ್ಯಕ್ಷೆ ಶಶಿಕಲಾ ತಾಂಬಳೆ, ಭಾ.ಜ.ಪಾ. ಮುಖಂಡರಾದ ಸುನೀಲ ಪಾಟೀಲ, ರವಿಚಂದನಕೇರೆ ಬಿ.ಕೆ.ಡಿ.ಬಿ.ಬಿ. ಆಯುಕ್ತ, ಕಾಶಿನಾಥ ಗೋಕಲೆ ಸೇರಿದಂತೆ ಅನೇಕ ಪ್ರಮುಖರು ಪಾಲಗೋಳ್ಳಲಿದ್ದಾರೆ. ಇದೆ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗ್ಣಣನಿಯ ಸೇವೆಸಲ್ಲಿಸಿದ ಗಣ್ಯರಿಗೆ ಶ್ರೀ ಮಠದವತಿಯಿಂದ ಗೌರವ ಸತ್ಕಾರ ನಡೆಯಲಿದೆ.

ದಿನಾಂಕ 23-3-2010 ಮಂಗಳವಾರ ಸಂಜೆವಾಣಿ ದಿನಪತ್ರಿಕೆ

## ಶ್ರಾವಣಮಾಸದ ವಿಶೇಷ ಪೂಜಾ–ಶ್ರೀಗಳಿಂದ ಆಶಿರ್ವಚನ

ಬಸವಕಲ್ಯಾಣ.ಸೆ07,ಬಸವಕಲ್ಯಾಣ ತ್ರಿಪೂರಾಂತದಲ್ಲಿನ ಮರಿದೇವರ ಗುಡ್ಡದಲ್ಲಿ ಪ್ರತಿ ವರ್ಷದಂತೆ ಈವರ್ಷವು ಕೂಡಾ ಶ್ರಾವಣ ಮಾಸದ ನಿಮಿತ್ಯ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಹಾಗೂ ಕ್ಷೇತ್ರದ ದೇವರಾದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಪ್ರತಿನಿತ್ಯ ಬೆಲಿಗ್ಗೆ ಬ್ರಹ್ಮೀಮೂರ್ತ ಸಮಯದಲ್ಲಿ ಮಹಾರುದ್ರಾಭಿಶೇಕ ಹಾಗೂ ಮಹಾ ಮಂಗಳಾರುತಿನಡೆಯುತ್ತಿದೆ.

ಸದ್ಭಕ್ತರಾದ ಮಲ್ಲಿಕಾರ್ಜುನ ರಾಜೋಳೆ,ಜಗನ್ನಾಥ ಬಿರಾದಾರ,ಮಡಿವಾಳಪ್ಪಾ ಹುಣಸಗೇರಾ,ಶರಣಪ್ಪಾಬಿರಾದಾರ ಪಲ್ಲೋಂಡಿದ್ದರು ಪ್ರತಿದಿನ ಅಕ್ಕನಬಳಗ ಭಜನಾ ಮಂಡಳಿಂದ ಕಾರ್ಯಕ್ರಮ ಜರುಗಿದವು.

ದಿನಾಂಕ 8-9-2010 ಬುಧವಾರ
ಹಸಿರು ಕ್ರಾಂತಿ ದಿನ ಪತ್ರಿಕೆ.

## ಬಸವಮುಕ್ತಿನಾಥ ಶರಣರ ಮೂರ್ತಿ ಉದ್ಘಾಟನೆ

ಬಸವಕಲ್ಯಾಣ, ೧೫– ಇಲ್ಲಿನ ಈಶ್ವರ ನಗರದ ಮುಕ್ತಾನಾಥ ದೇವಸ್ಥಾನ ಹೆಳವರ ಗಲ್ಲಿಯಲ್ಲಿ ದಿ.೧೮ ರಂದು ಬೆಳಿಗ್ಗೆ ೧೧ ಗಂಟೆಗೆ, ಬಸವಮುಕ್ತಿನಾಥ ಶರಣರ ಮೂರ್ತಿ ಉದ್ಘಾಟನೆ ಮತ್ತು ತಾಲೂಕಾ ಮಟ್ಟದ ಹೆಳವ ಸಮಾಜದ ಸಮಾವೇಶ ನಡೆಯಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧಾನ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಡಾ. ಬಸವಲಿಂಗ ಪಟ್ಟದೇವರು ಹಾಗೂ ಹಾರಕೂಡ ಹಿರೇಮಠ ಸಂಸ್ಥಾನ ಪೂಜ್ಯ ಶ್ರೀ ಷ.ಬ್ರ. ಚನ್ನವೀರ ಶಿವಾರ್ಯರು ವಹಿಸಲಿದ್ದಾರೆ. ಕಾರ್ಯಕ್ರಮದ ನೇತೃತ್ವ ಬಸವ ಮುಕ್ತಿನಾಥಯ್ಯ ಜನಕಲ್ಯಾಣ ಟ್ರಸ್ಟ ಅಧ್ಯಕ್ಷರಾದ ಪೂಜ್ಯ ಶ್ರೀ ಶಂಕರಲಿಂಗ ಸ್ವಾಮಿಗಳು ವಹಿಸಲಿದ್ದಾರೆ. ಪೂಜ್ಯ ಶ್ರೀ ಸಿದ್ದರಾಮೇಶ್ವರ ಬೆಲ್ದಾಳ ಶರಣರು, ಪೂಜ್ಯ ಶ್ರೀ ಷ.ಬ್ರ.ಅಭಿನವ ಘನಲಿಂಗರುದ್ರಮುನಿ ಶಿವಚಾರ್ಯರು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಜಿ ಭಾಗವಹಿಸಲಿದ್ದಾರೆ. ಉದ್ಘಾಟನೆ ಬೆಂಗಳೂರು ಅ.ಕ.ಹೆಳವ ಸಮಾಜ ಸಂಘದ ಅಧ್ಯಕ್ಷ ಈ. ಕೃಷ್ಣಪ್ಪ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ಶಾಸಕ ಬಸವರಾಜ ಪಾಟೀಲ ಅಟ್ಟೂರ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಎನ್, ಧರ್ಮಸಿಂಗ್, ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್. ಖುಬಾ, ನಗರ ಸಭೆ ಅಧ್ಯಕ್ಷ ಮಂಗಲಾಬಾಯಿ ಉದ್ರೆ, ಜಿಲ್ಲಾ ಹೆಳವ ಸಮಾಜದ ಅಧ್ಯಕ್ಷ ದಶರಥ ಅಂದಿಕುಳ ಆಗಮಿಸಲಿದ್ದಾರೆ. ವಿಶೇಷ ಉಪನ್ಯಾಸ ಭಾಲ್ಕಿ ಶರಣ ಸಾಹಿತ್ಯ ಪರಿಷತ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ನೀಡಲಿದ್ದಾರೆ. ಶಿವಾನಂದ ಗವಾಯಿಗಳು ಮತ್ತು ಲೋಕನಾಥ ಚಾಂಗ್ಲೇರ ವಚನ ಸಂಗೀತ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದ ಸಂಚಾಲನೆ ವೈದ್ಯ ಬಸವರಾಜ ಪಂಡಿತ ಮಾಡಲಿದ್ದಾರೆ ಎಂದು ದೇವಸ್ಥಾನದ ಅಧ್ಯಕ್ಷ ನಾಗಪ್ಪ ಜಿ. ಹೆಳವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ 16-9-2011 ಸ. ಕರ್ನಾಟಕ

Scanned by CamScanner

# ಜಗದ್ಗುರು ರೇಣುಕಾಚಾರ್ಯ ಜಯಂತಿ

▪ ವಿಕ ಸುದ್ದಿಲೋಕ, ಬಸವಕಲ್ಯಾಣ



ತ್ರಿಪುರಾಂತ ಗವಿಮಠದಲ್ಲಿ ಗುರುವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಎಂಎಲ್ಸಿ ಬಸವರಾಜ ಪಾಟೀಲ್ ಹುಮನಾಬಾದ್ ಉದ್ಘಾಟಿಸಿದರು. ಶ್ರೀ ರಂಭಾಪುರಿ ಜಗದ್ಗುರುಗಳು, ಶಾಸಕ ಬಸವರಾಜ ಪಾಟೀಲ್ ಅಟ್ಟೂರ್, ತಡೋಳಾ ಶ್ರೀಗಳು, ತ್ರಿಪುರಾಂತ ಶ್ರೀಗಳು, ಗುರುರಾಜ ಶಾಶೆಟ್ಟಿ ಇತರರಿದ್ದರು.

ವೈಜ್ಞಾನಿಕ ಯುಗದಲ್ಲಿ ಮನುಷ್ಯ ಬೆಳದಂತೆ. ಧರ್ಮ-ಸಂಸ್ಕೃತಿ ಬೆಳೆಯುತ್ತಿಲ್ಲ. ಪೂರ್ವಜರು ಹಾಕಿ ಕೊಟ್ಟಿರುವ ಮಾರ್ಗದರ್ಶನದಲ್ಲಿ ನಡೆದರೆ ವೀರಶೈವ ಧರ್ಮ ಬೆಳೆಯಲು ಸಾಧ್ಯವಿದೆ ಎಂದು ಶ್ರೀ ರಂಭಾಪುರಿ ಜಗದುರು ಪ್ರಸನ್ನ ರೇಣುಕಾ ವೀರಸೋಮೇಶ್ವರ ಭಗವತ್ಪಾದರು ಹೇಳಿದರು.

ತ್ರಿಪುರಾಂತ ಗವಿಮಠ (ಮರಿದೇವರಗುಡ್ಡ) ದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ನಿಮಿತ್ತ ನಡೆದ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಇಲ್ಲಿ ಸಮುದಾಯ ಭವನದ ಅವಶ್ಯಕತೆ ಇದೆ. ಇದಕ್ಕೆ ಶಾಸಕರು, ವಿಧಾನ ಪರಿಷತ್ ಸದಸ್ಯರು ಅನುದಾನ ಕಲ್ಪಿಸುವದಾಗಿ ಘೋಷಿಸಿದ್ದಾರೆ. ವ್ಯವಸ್ಥಿತವಾದ ಸಭಾಭವನ ನಿರ್ಮಾಣಗೊಂಡರೆ ಶ್ರೀಗಳ ಧರ್ಮ ಕಾರ್ಯ, ಭಕ್ತರ ಧರ್ಮ ಕಾರ್ಯಕ್ಕೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ ಎಂದರು. ಕೆಲವರು ವೀರಶೈವ ಧರ್ಮದ ತತ್ತ್ವದ ಬಗ್ಗೆ ತಪ್ಪು ವ್ಯಾಖ್ಯಾನ ಮಾಡುತ್ತಾರೆ. ಧರ್ಮದ ಮೂಲವನ್ನು ತಪ್ಪು ತಪ್ಪಾಗಿ ಜನರಿಗೆ ಹೇಳುವ ಸಾಹಸ ಸಾಕಾರಗೊಳ್ಳುವದಿಲ್ಲ ಎಂದು ಹೇಳಿದರು. ಉದ್ಘಾಟನೆ ನೇರವೇರಿಸಿದ ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ ಮಾತನಾಡಿ, ಗವಿಮಠದಲ್ಲಿ ಸಮುದಾಯ ಭವನಕ್ಕಾಗಿ 5 ಲಕ್ಷ ರೂ. ಅನುದಾನ ಕಲ್ಪಿಸುವದಾಗಿ ಹೇಳಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಸಮಾಜದ ಸಂಘಟನೆ ಬಲಗೊಳ್ಳಬೇಕು ಎಂದ ಖೂಬಾ ಗವಿಮಠದ ಪರಿಸರದಲ್ಲಿ ಸಮುದಾಯ ಭವನಕ್ಕಾಗಿ ಶಾಸಕ ಅಟ್ಟೂರ ಅವರು ಹೆಚ್ಚಿನ ಅನುದಾನ ನೀಡಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್, ಗವಿಮಠದಲ್ಲಿ ಸಮುದಾಯ ಭವನಕ್ಕಾಗಿ ಎಚ್‌ಕೆಡಿಬಿಯಲ್ಲಿ 10 ಲಕ್ಷ ರೂ. ಅನುದಾನವನ್ನು ಬರುವ ಸಾಲಿನಲ್ಲಿ ಕಲ್ಪಿಸಿಕೊಡುವದಾಗಿ ಭರವಸೆ ನೀಡಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಡೋಳಾದ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಹುಡಗಿಯ ಶ್ರೀ ವಿರೂಪಾಕ್ಷಶಿವಾಚಾರ್ಯರು, ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟಿ, ತಾಪಂ ಅಧ್ಯಕ್ಷೆ ಶಶಿಕಲಾ ತಾಂಬೋಳೆ, ಉಪಸ್ಥಿತರಿದ್ದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೆರೆ, ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿ ಅಧ್ಯಕ್ಷ ಗುರುನಾಥ ಲಾತೂರೆ, ಕಸಾಪ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಸಂಜುಕುಮಾರ ಸುಗರೆ ಇತರ ಪ್ರಮುಖರಿಗೆ ಗುರುರಕ್ಷೆ ನೀಡಲಾಯಿತು.

ಶರಣಪ್ಪ ಬಿರಾದಾರ ಸ್ವಾಗತಿಸಿದರೆ, ರಮೇಶ ರಾಜೋಳೆ ನಿರೂಪಿಸಿದರು. ಜಗನ್ನಾಥ ಬಿರಾದಾರ, ಮಲ್ಲಿಕಾರ್ಜುನ ರಾಜೋಳೆ, ಮಲ್ಲಪ್ಪ ಪೊಲೀಸ್ ಪಾಟೀಲ್, ಮಡೋಳಪ್ಪ ಹುಣಸಗೇರಾ, ಮಲ್ಲಯ್ಯ ಸ್ವಾಮಿ ಹಿರೇಮಠ ಸೇರಿದಂತೆ ಪ್ರಮುಖರಿದ್ದರು.

ದಿನಾಂಕ 26-3-2010 ಶುಕ್ರವಾರ ವಿಜಯ ಕರ್ನಾಟಕ ದಿನಪತ್ರಿಕೆ

ಸಂಯುಕ್ತ ಕರ್ನಾಟಕ
ಕಲಬುರ್ಗಿ | 26-3-2010 12

# ರೇಣುಕಾಚಾರ್ಯ ಜಯಂತಿ

ಬಸವಕಲ್ಯಾಣ, 25- ಮಾನವೀಯ ಧರ್ಮ, ಸಂಸ್ಕೃತಿಯನ್ನು ಉಳಿಸಿ-ಬೆಳೆಸುವುದು ನಮ್ಮೆಲ್ಲರ ಧರ್ಮವಾಗಿದೆ ಎಂದು ರಂಭಾಪುರ ಜಗದ್ಗುರುಗಳಾದ ವೀರ ಸೋಮೇಶ್ವರ ಶಿವಾಚಾರ್ಯರು ಕರೆ ನೀಡಿದರು.

ಮರಿದೇವರ ಗುಡ್ಡದಲ್ಲಿನ ಘನಲಿಂಗ ರುದ್ರಮುನಿ ಮಂದಿರದಲ್ಲಿ ಆಯೋಜಿಸಿದ್ದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು ವೀರಶೈವ ಧರ್ಮ ಸಂಸ್ಕೃತಿಯನ್ನು ಬೆಳೆಸುವಲ್ಲಿ ಆದಿ ರೇಣುಕಾರ್ಯರು ಅಡಿಪಾಯ ಹಾಕಿದರೆ, ಬಸವಾದಿ ಶಿವಶರಣರು ವಚನ ಸಾಹಿತ್ಯ, ಜ್ಞಾನ ಮೂಲಕ ವೀರಶೈವ ಪರಂಪರೆ ತತ್ವ ಜ್ಞಾನಕ್ಕೆ ಬೆಳಕಾಗಿ ಬೆಳೆಸಿದರು ಎಂದರು.

ಲಿಂಗವಂತ ವೀರಶೈವರಿಗೆ ಎರಡು ಪಂತಗಳು ಬೇಕು. ಎರಡರಲ್ಲಿ ವಿಶಾಲ ಭಾವನೆಯಿಂದ ಮುಂದೆ ಹೋಗುವುದು ಸಮಾಜದ ಹಿತದೃಷ್ಟಿ ಅಡಗಿದೆ ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಅವರು ಮಾತನಾಡಿ ಶ್ರೀ ಮಠದ ಅಭಿವೃದ್ಧಿಗೆ ತಮ್ಮ ನಿಧಿಯಿಂದ 5 ಲಕ್ಷ ರೂ.ಗಳ ನೀಡುವ ಭರವಸೆ ನೀಡಿದರು. ಶಾಸಕ ಬಸವರಾಜ ಪಾಟೀಲ ಅಟ್ಟೂರ ಅಧ್ಯಕ್ಷತೆ ವಹಿಸಿ, ಎಚ್‌ಕೆಡಿಬಿ ಅನುದಾನದಲ್ಲಿ 10 ಲಕ್ಷ ರೂ.ಗಳ ಅನುದಾನ ನೀಡುವ ಭರವಸೆ ಕೊಟ್ಟರು.

ತಡೋಳಾ ರಾಜೇಶ್ವರ ಶ್ರೀಗಳು, ಅಫಜಲಪುರದ ಮುಳೇಂದ್ರ ಶ್ರೀಗಳು, ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖುಬಾ ಮೊದಲಾದವರು ಉಪಸ್ಥಿತರಿದ್ದರು. ಎಪಿಎಂಸಿ ಅಧ್ಯಕ್ಷ ಸಿದ್ರಾಮ ಗುದಗೆ, ರವಿ ಚಂದರನಕೆರೆ ಮೊದಲಾದವರು ಉಪಸ್ಥಿತರಿದ್ದರು.

ಬಸವಕಲ್ಯಾಣ

# ಸಂಗೀತ ನುಡಿ ನಮನ ನಾಳೆ



ಪಂ.ಪಂಚಾಕ್ಷರಿ ಗವಾಯಿಗಳ ಸಂಗೀತ ವಿದ್ಯಾಲಯ ಹಾಗೂ ಗಾನಯೋಗಿ ಡಾ.ಪಂ.ಪುಟ್ಟರಾಜ ಗವಾಯಿಗಳ ಸಂಗೀತ ಕಲಾ ತಂಡದಿಂದ ಡಾ.ಪಂ.ಪುಟ್ಟರಾಜ ಗವಾಯಿಗಳ ಸ್ಮರಣಾರ್ಥ ಭಾವಪೂರ್ಣ ಸಂಗೀತ ನುಡಿನಮನ ಕಾರ್ಯಕ್ರಮ ನಗರದ ಬಿಕೆಡಿಬಿ ನೂತನ ಗ್ರಂಥಾಲಯ ಕಟ್ಟಡದಲ್ಲಿ ಸೋಮವಾರ ಸಂಜೆ 4.30ಕ್ಕೆಜಗುಗಲಿದೆ. ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಅಧ್ಯಕ್ಷತೆ ವಹಿಸುವರು. ಸಹಾಯಕ ಆಯುಕ್ತ ಎಚ್.ಪ್ರಸನ್ನ ಬಿಕೆಡಿಬಿ ಆಯುಕ್ತ ಕಾಶೀನಾಥ ಗೋಖಲೆ ಮುಖ್ಯ ಅತಿಥಿ, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಬೀದರ್ ಗಾನಯೋಗಿ ಪಂಚಾಕ್ಷರಿ ಸೇವಾ ಸಂಘದ ಅಧ್ಯಕ್ಷ ಎಸ್.ವಿ.ಕಲ್ಮಠ ಅತಿಥಿಗಳಾಗಿ ಭಾಗವಹಿಸುವರು.

ದಿನಾಂಕ 26-9-10 ರವಿವಾರ ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

# ಆಚಾರ್ಯರ ಕೊಡುಗೆ ಅಪಾರ: ರಂಭಾಪುರಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಸಮಾಜಕ್ಕೆ ರೇಣುಕಾದಿ ಆಚಾರ್ಯರ ಕೊಡುಗೆ ಅಪಾರವಾಗಿದೆ ಎಂದು ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಇಲ್ಲಿನ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಗುರುವಾರ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ವೀರಶೈವ ಧರ್ಮದ ಮೂಲ ಅರಿಯದವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಕೆಲ ಸಂಶೋಧಕರು ವಾಸ್ತವಿಕತೆಯನ್ನು ಎತ್ತಿ ಹಿಡಿಯದೆ ಬರೆಯುತ್ತಿದ್ದಾರೆ ಎಂದು ಅತೃಪ್ತಿ ವ್ಯಕ್ತಪಡಿಸಿದರು. ನಮ್ಮಲ್ಲಿಯೇ ಕೆಲವರು ಶತ್ರುಗಳಂತೆ ವರ್ತಿಸುತ್ತಿದ್ದಾರೆ ಎಂದು ಕಿಡಿ ಕಾರಿದರು. ಸಂಸ್ಕೃತಿ ಮತ್ತು ಪರಂಪರೆಯಂತೆ ಎಲ್ಲರೂ ನಡೆದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಎಂದರು.

ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಮಾತನಾಡಿ ಗವಿಮಠದಿಂದ ಕಲ್ಯಾಣ ಮಂಟಪದ ನಿರ್ಮಾಣಕ್ಕೆ ಶಾಸಕರ ಅನುದಾನದಲ್ಲಿ 10 ಲಕ್ಷ ರೂ. ದೇಣಿಗೆ ಕೊಡುವುದಾಗಿ ಭರವಸೆ ಕೊಟ್ಟರು. ಬಸವಾದಿ ಶರಣರ ತತ್ವಗಳನ್ನು ಪಾಲಿಸಬೇಕು ಎಂದು ಹೇಳಿದರು.



ಬಸವಕಲ್ಯಾಣದಲ್ಲಿ ಗುರುವಾರ ನಡೆದ ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಹುಮನಾಬಾದ ಉದ್ಘಾಟಿಸಿದರು. ರಂಭಾಪುರಿ ಜಗದ್ಗುರು, ಶಾಸಕ ಬಸವರಾಜ ಪಾಟೀಲ ಅಟ್ಟೂರ್, ಘನಲಿಂಗ ರುದ್ರಮುನಿ ಶಿವಾಚಾರ್ಯ ಇದ್ದರು.

ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಹುಮನಾಬಾದ ಉದ್ಘಾಟಿಸಿದರು. ತಡೋಳಾ ರಾಜೇಶ್ವರ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯ ಮಾತನಾಡಿದರು.

ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟೆ, ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಪ್ರಮುಖರಾದ ರವಿ ಚಂದನಕೆರೆ, ಜಯದ್ರತ್ ಮಾಡಜೆ, ವೀರಣ್ಣ ಪಾಟೀಲ ಇದ್ದರು. ರಮೇಶ ರಾಜೋಳೆ ನಿರೂಪಿಸಿದರು. ನಗರದ ಮುಖ್ಯ ರಸ್ತೆಯಲ್ಲಿ ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ನಡೆಯಿತು.

ದಿನಾಂಕ 26-3-2010 ಶುಕ್ರವಾರ ಪ್ರಜಾವಾಣಿ ದಿನಪತ್ರಿಕೆ

# ಕಾಯಕ ಸನ್ಮಾನ ಸಮಾರಂಭ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ವಚನ ಸಾಹಿತ್ಯ ಎಲ್ಲೆಡೆ ಪ್ರಚಾರ, ಪ್ರಸಾರವಾಗಬೇಕಾದ ಅಗತ್ಯವಿದೆ. ಬಸವತತ್ವ ಮನೆ-ಮನಗಳಿಗೆ ಮುಟ್ಟಿಸುವ ಕೆಲಸ ನಡೆಯಬೇಕಿದೆ ಎಂದು ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಬಸವ ಕಿರಣ ಫೋಟೊ ಲ್ಯಾಮಿನೇಷನ್‌ನಿಂದ ನಗರದ ಬಸವೇಶ್ವರ ದೇವಸ್ಥಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಯಕ ಸನ್ಮಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಶ್ರೀ, ಬಸವತತ್ವ ಪ್ರಚಾರದಲ್ಲಿ ತೊಡಗಿರುವ ಬಸವಲಿಂಗ ಸುಬೇದಾರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಹೆಸರಿನಲ್ಲಿ ಅಗಾಧ ಶಕ್ತಿ ಅಡಗಿದ್ದು ಮಕ್ಕಳಿಗೆ ಶರಣರ ಹೆಸರಿಡುವುದು ಸೂಕ್ತ ಎಂದರು.

ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಬಸವತತ್ವ ಪ್ರಚಾರಕ್ಕೆ ಪೂರಕವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಧೋತರಗಾಂವದ ಶ್ರೀ ಕೋಣೇಶ್ವರ ಮಹಾಸ್ವಾಮಿ ಸಮ್ಮುಖ, ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಉಪಾಧ್ಯಕ್ಷ ರೇವಣಪ್ಪ ರಾಯವಾಡೆ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಛಾಯಾ ಚಿತ್ರಕಾರ ವೆಂಕಟೇಶ ವೈ.ಗೊಂಟಲ್ ದಂಪತಿಯನ್ನು ಗೌರವಿಸಲಾಯಿತು. ಬಸವಕಿರಣ ಫೋಟೊ ಲ್ಯಾಮಿನೇಷನ್‌ನ ಬಸವಲಿಂಗ ಸುಬೇದಾರ ಸ್ವಾಗತಿಸಿದರು. ಸಿದ್ರಾಮ ಯಳವಂತಗಿ ನಿರೂಪಿಸಿದರು.



ಚಿತ್ರ ಕಲಾವಿದ ವೆಂಕಟೇಶ ಗೊಂಟಲ್ ಅವರನ್ನು ಬಸವಕಲ್ಯಾಣದಲ್ಲಿ ಸನ್ಮಾನಿಸಲಾಯಿತು. ಡಾ.ಬಸವಲಿಂಗ ಪಟ್ಟದ್ದೇವರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಕೋರಣೇಶ್ವರ ಮಹಾಸ್ವಾಮಿ, ಟಂಕಸಾಲಿಮಠ, ಬಸವಲಿಂಗ ಸುಬೇದಾರ ಇದ್ದರು.

Scanned by CamScanner

● ವೈಜ್ಞಾನಿಕವಾಗಿ ಬೆಳೆಯುತ್ತಿದ್ದೇವೆ ● ವೀರಶೈವ ಮೂಲ ಅರಿಯದವರು ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ: ರಂಭಾಪುರಿ ಜಗದ್ಗುರು

# ನಮ್ಮಲ್ಲಿಯೇ ಕೆಲವರು ಶತ್ರುಗಳಂತೆ ವರ್ತಿಸುತ್ತಿರುವುದು ಅಸಮಾಧಾನಕರ

**ಬೀದರ್:** ವೀರಶೈವ ಧರ್ಮದ ಮೂಲ ಅರಿಯದವರು ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಎಂದು ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅತೃಪ್ತಿ ವ್ಯಕ್ತಪಡಿಸಿದರು.

ಅವರು ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ (ಮರಿದೇವರಗುಡ್ಡ) ಶ್ರೀ ಜಗದ್ಗುರು ರೇಣುಕಾಚಾರ್ಯರರ ಜಯಂತಿ ಮಹೋತ್ಸವ ನಿಮಿತ್ತ ನಡೆದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಕೆಲ ಸಂಶೋಧಕರು ವಾಸ್ತವಿಕತೆಯನ್ನು ಎತ್ತಿ ಹಿಡಿಯದೇ ವೀರಶೈವ ಧರ್ಮದ ತಪ್ಪು ವ್ಯಾಖ್ಯಾನ ಮಾಡುತ್ತಿದ್ದಾರೆ. ನಮ್ಮಲ್ಲಿಯೇ ಕೆಲವರು ಶತ್ರುಗಳಂತೆ ವರ್ತಿಸುತ್ತಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದರು.

**ಧರ್ಮ-ಸಂಸ್ಕೃತಿ ಬೆಳೆಯುತ್ತಿಲ್ಲ:** ವೈಜ್ಞಾನಿಕ ಯುಗದಲ್ಲಿ ಸಾಕಷ್ಟು ಬೆಳೆಯುತ್ತಿದ್ದೇವೆ. ಇದರ ಜೊತೆಗೆ ಧರ್ಮ-ಸಂಸ್ಕೃತಿ ಬೆಳೆಯುತ್ತಿಲ್ಲ. ಸಮಾಜಕ್ಕೆ ರೇಣುಕಾಚಾರ್ಯರ ಕೊಡುಗೆ ಅಪಾರವಾಗಿದೆ. ನಮ್ಮ ಪೂರ್ವಜರು ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ನಡೆದರೆ ಧರ್ಮ ಬೆಳೆಯಲು ಸಾಧ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಮಾತನಾಡಿ, ಅಧಿಕಾರ ಶಾಶ್ವತವಲ್ಲ. ಅಧಿಕಾರವಿದ್ದಾಗ, ಜನಪರವಾಧ ಕಾರ್ಯಮಾಡಬೇಕಷ್ಟೆ ಎಂದ ಅವರು, ಗವಿಮಠದಲ್ಲಿ ಕಲ್ಯಾಣ ಭವನ ನಿರ್ಮಾಣಕ್ಕಾಗಿ ಶಾಸಕರ ಅನುದಾನದಲ್ಲಿ 10 ಲಕ್ಷ ರು. ದೇಣಿಗೆ ನೀಡಲಾಗುವುದು ಎಂದು ಆಶ್ವಾಸನೆ ನೀಡಿದರು.

**ಸಂಘಟನೆ ಬಲಗೊಳ್ಳಬೇಕು:** ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉದ್ದೇಶಿತ ಕಲ್ಯಾಣ ಮಂಟಪ ನಿರ್ಮಾಣಕ್ಕೆ 2 ಲಕ್ಷ ರು. ಅನುದಾನ ನೀಡುವುದಾಗಿ ತಿಳಿಸಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಸಮಾಜದ ಸಂಘಟನೆ ಬಲಗೊಳ್ಳಬೇಕು ಎಂದರು. ಗವಿಮಠದ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಡೋಳಾದ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಹುಡಗಿಯ ವಿರೂಪಾಕ್ಷ ಶಿವಾಚಾರ್ಯರು, ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟಿ, ತಾಪಂ ಅಧ್ಯಕ್ಷೆ ಶಶಿಕಲಾ ತಾಂಬೋಳೆ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೆರೆ, ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ಗುರುನಾಥ ಲಾತೂರೆ, ಕಸಾಪ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಸಂಜುಕುಮಾರ ಸುಗರೆ ಪಾಲ್ಗೊಂಡಿದ್ದರು.

ಶರಣಪ್ಪ ಬಿರಾದಾರ ಸ್ವಾಗತಿಸಿದರೆ ರಮೇಶ ರಾಜೋಳೆ ನಿರೂಪಿಸಿದರು. ನಗರದ ಬಸವೇಶ್ವರ ದೇವಸ್ಥಾನದಿಂದ ತ್ರಿಪ್ಪುರಾಂತ ಗವಿಮಠದ ವರೆಗೆ ರೇಣುಕಾಚಾರ್ಯರರ ಭಾವಚಿತ್ರದ ಭವ್ಯ ಮರವಣಿಗೆ ನಡೆಸಲಾಯಿತು ಹುಲಸೂರಿನ ಶಿವಾನಂದ ಸ್ವಾಮಿಜಿ ಚಾಲನೆ ನೀಡಿದರು.




*ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ (ಮರಿದೇವರಗುಡ್ಡ) ಶ್ರೀ ಜಗದ್ಗುರು ರೇಣುಕಾಚಾರ್ಯರರ ಜಯಂತಿ ಮಹೋತ್ಸವ ನಿಮಿತ್ತ ನಡೆದ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಆಶೀರ್ವಚನ ನೀಡಿದರು.*

ದಿನಾಂಕ 27-3-2010 ಶನಿವಾರ ಕನ್ನಡ ಪ್ರಭಾ ದಿನಪತ್ರಿಕೆ

Scanned by CamScanner




ಜದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸದ ದಿವ್ಯ ಸಾನಿದ್ಯ ವಹಿಸಿ ಆಶಿರ್ವಚನ ನಿಡುತ್ತಿರುವ ರಂಭಾಪುರಿ ಜದ್ಗುರುಗಳು ಎಮ್.ಎಲ್.ಸಿ.ಬಸವರಾಜ ಪಾಟೀಲ್ ಹುಮನಾಬಾದ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್, ತಡೋಳಾ ಶ್ರೀಗಳು ಅಬಿನವ ಘನಲಿಂಗ ರುದ್ರಮನಿ ಶಿವಾರ್ಯರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಗುರುರಾಜ ಶಾಶೆಟ್ಟೆ ಉಪಸ್ಥಿತರಿದರು.

# ವೈಭವದ ಮೆರವಣಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ

ಬಸವಕಲ್ಯಾಣ 26 ತ್ರಿಪುರಾಂತ ಗವಿಮಠದಲ್ಲಿ (ಮರಿ ದೇವರ ಗುಡ್ಡ)ದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರರ ಜಯಂತಿ ಮಹೋತ್ಸವದ ನಿಮಿತ್ತ ನಡೆದ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀ ರಂಭಾ ಪುರಿ ಜಗದ್ಗುರು ಪ್ರಸನ್ನ ರೇಣುಕಾ ವೀರಸೋಮೇಶ್ವರ ಭಗವತ್ಪಾದರು ಸಂತಸ ವ್ಯಕ್ತಪಡಿಸಿದರು. ಸಮಾ ರಂಭದ ಬಗ್ಗೆ ಮೆಚ್ಚುಗೆ ವೈಜ್ಞಾನಿಕ ಯುಗದಲ್ಲಿ ಸಾಕಷ್ಟು ಬೆಳೆಯುತ್ತಿದ್ದೇವೆ. ಬೆಳೆಯಬೇಕು. ಇದು ಅವಶ್ಯಕವು ಆಗಿದೆ. ಆದರೆ ಮನುಷ್ಯ ಬೆಳದಂತೆ. ಧರ್ಮ-ಸಂಸ್ಕೃತಿ ಹಾಗೂ ಪೂರ್ವಜರು ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ನಡೆದರೆ ವೀರಶೈವ ಧರ್ಮ ಬೆಳೆಯಲು ಸಾಧ್ಯವಿದೆ ಎಂದು ಹೇಳಿದರು .ತ್ರಿಪು ರಾಂತಕ ಪವಿತ್ರ ಪುಣ್ಯ ಕ್ಷೇತ್ರ, ತಪೋ ಭುಮಿಯಲ್ಲಿ ಶ್ರೀ ಜಗದ್ಗುರು ರೇಣು ಕಾಚಾರ್ಯರ ಜಯಂತಿ ಮಹೋತ್ಸವ ಸಮಾರಂಭ ಅದ್ದೂರಿಯಾಗಿ ಹಮ್ಮಿಕೊಳ್ಳುವ ಮೂಲಕ ತ್ರಿಪುರಾಂತ ಶ್ರೀಗಳು, ವೀರಶೈವ ಧರ್ಮದ ಸಂಘಟನೆ ಮತ್ತು ಸಮುದಾಯಕ್ಕೆ ಕೊಡಬೇಕಾಂದಂತಹ ಧಾರ್ಮಿಕಚಟುವಟಿಕೆ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು ಈ ಪರಿಸರದಲ್ಲಿ ಮದುವೆ- ಮಂಗಲ ಸಮಾರಂಭ, ಸಾಮಾಜಿಕ ಧರ್ಮ ಕಾರ್ಯಗಳನ್ನು ಸಾರ್ವಜನಿಕರು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿ ಸಮುದಾಯ ಭವನದ ಅತ್ಯಾವಶ್ಯಕತೆ ಇದೆ. ಇದಕ್ಕೆ ಶಾಸಕ ಅಟ್ಟೂರ್, ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ ಅನುದಾನ ಕಲ್ಪಿಸುವದಾಗಿ ಭರವಸೆ ನೀಡಿದ್ದಾರೆ. ಇದರಿಂದ ವ್ಯವಸ್ಥಿತವಾದ ಸಭಾಭವನ ನಿರ್ಮಾಣಗೊಂಡರೆ ಭಕ್ತರ ಧರ್ಮಕಾರ್ಯಕ್ಕೆ ಅವಕಾಶ ಮಾಡಿಕೊಟ್ಟ ಪುಣ್ಯ ಸಿಗುತ್ತದೆ ಎಂದರು.ಉದ್ಘಾಟನೆ ನೇರವೇರಿಸಿದ ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಹುಮನಾಬಾದ ಮಾತನಾಡಿ, ಗವಿಮಠದಲ್ಲಿ ಸಮೂದಾಯ ಭವನಕ್ಕಾಗಿ 2 ಲಕ್ಷ ರೂ. ಅನುದಾನ ಕಲ್ಪಿಸುವದಾಗಿ ಹೇಳಿದರು.ಅಧ್ಯಕ್ಷತೆ ವಹಿಸಿದ ಶಾಸಕ ಬಸವರಾಜ ಪಾಟೀಲ್ ಅಟ್ಟೂರ್ ಮಾತನಾಡಿ, ಅಧಿಕಾರ ಶಾಸ್ವತವಲ್ಲ. ಅಧಿಕಾರ ವಿದ್ವಾಗಜನ ಪರವಾದ ಕಾರ್ಯ ಮಾಡಬೇಕು ಎಂದ ಅವರು, ಗವಿಮಠದಲ್ಲಿ ಸಮುದಾಯ ಭವನಕ್ಕಾಗಿ ಎಚ್‌ಕೆಡಿಬಿಯಲ್ಲಿ 10 ಲಕ್ಷ ರೂ. ಅನುದಾನವನ್ನು ಕಲ್ಪಿಸಿಕೊಡುವ ದಾಗಿ ಅಶ್ವಾಸನೆ ನೀಡಿದರು. ನೇತ್ರತ್ವ ವಹಿಸಿದ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಡೋಳಾದ ರಾಜೇಶ್ವರ ಶಿವಾಚಾರ್ಯರು ಆಶೀ ರ್ವಚನ ನೀಡಿದರು. ಹುಡಗಿಯ ವಿರೂಪಾಕ್ಷ ಶಿವಾಚಾರ್ಯರು, ನಗರಸಭೆ ಅಧ್ಯಕ್ಷ ಗುರುರಾಜ ಶಾಶೆಟ್ಟೆ, ತಾಪಂ ಅಧ್ಯಕ್ಷೆ ಶಶಿಕಲಾ ತಾಂಬೋಳೆ ಹಾಗೂ ಶ್ರೀಗಳು ಉಪಸ್ಥಿತರಿದ್ದರು. ನಗರ ಯೋಜನಾ ಪ್ರಾಧಿಕಾ ರದ ಅಧ್ಯಕ್ಷ ರವಿ ಚಂದನಕೆರೆ, ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿ ಅಧ್ಯಕ್ಷ ಗುರುನಾಥ ಲಾತೂರೆ, ಕಸಾಪ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಸಂಜುಕುಮಾರ ಸುಗರೆ ಹಾಗೂ ಇತರರಿಗೆ ಗುರುರಕ್ಷೆ ನೀಡಲಾಯಿತು. ಶರಣಪ್ಪ ಬಿರಾದಾರ ಸ್ವಾಗತಿಸಿದರೆ, ರಮೇಶ ರಾಜೋಳೆ ನಿರೂಪಿಸಿದರು. ಜಗನ್ನಾಥ ಬಿರಾದಾರ, ಮಲ್ಲಿಕಾರ್ಜುನ ರಾಜೋ ಳೆ,ಮಲ್ಲಪ್ಪ ಪೊಲೀಸ್ ಪಾಟೀಲ್, ಮಡೋಳಪ್ಪ ಹುಣಸಗೇರಾ, ರೇವಣಸಿದ್ಧಯ್ಯ ವಸ್ತ್ರದ, ಮಲ್ಲಯ್ಯ ಸ್ವಾಮಿ ಹಿರೇಮಠ ಸದಾನಂದ ಕಣಜಿ, ಪ್ರಮುಖರಿ ದ್ದರು .ಮುನ್ನ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯಮಾರ್ಗವಾಗಿ ತ್ರಿಪುರಾಂತ ಗವಿಮಠದವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರರ ಭಾವ ಚಿತ್ರದ ಭವ್ಯ ಮರವಣಿಗೆ ನಡೆ ಯಿತು. ಹುಲಸೂರನ ಶ್ರೀಶಿವಾನಂದಸ್ವಾಮಿಜಿ ಮೆರವಣಿಗೆಗೆ ಚಾಲನೆ ನೀಡಿದರು.

ದಿನಾಂಕ 27-3-2010 ಶನಿವಾರ ಹುಲಿರುಕ್ರಾಂತಿ ದಿನಪತ್ರಿಕೆ.

Scanned by CamScanner

# ‘ಯೋಗದಿಂದ ನೋವು ನಿವಾರಣೆ’

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ನೋವನ್ನು ನಗುವಾಗಿ ಪರಿವರ್ತಿಸುವ ಶಕ್ತಿ ಯೋಗಕ್ಕೆ ಇದೆ ಎಂದು ಶಿವಯೋಗಿ ಸಿದ್ಧರಾಮೇಶ್ವರ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಬಿ.ಮಹಾಜನ ಅಭಿಪ್ರಾಯಪಟ್ಟರು.

ಭಾರತ ಸ್ವಾಭಿಮಾನ ಟ್ರಸ್ಟ್‌ದಿಂದ ಇಲ್ಲಿನ ಸತ್ಯಾನುಭವ ಆಶ್ರಮದಲ್ಲಿ ಈಚೆಗೆ ಹಮ್ಮಿಕೊಂಡ ಯೋಗ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಯೋಗ ಸಾಧನೆಯಿಂದ ಕೆಟ್ಟ ಭಾವನೆಗಳು ದೂರವಾಗಿ ಮಾನವೀಯ ಮೌಲ್ಯಗಳನ್ನು ಗೌರವಿಸುವಂತಾಗುತ್ತದೆ. ಸಾದಾ ಜೀವನ ರೂಢಿಯಾಗಿ ಉನ್ನತ ವಿಚಾರಗಳು ಹೊಳೆಯುತ್ತವೆ ಎಂದರು.

ಯೋಗ ಶಿಕ್ಷಕ ಡಾ.ಬಸವರಾಜ ಸ್ವಾಮಿ ಮಾತನಾಡಿ ಸಹಕಾರ, ಸಹಬಾಳ್ವೆಯಿಂದ ಜೀವಿಸಿ ಸಾತ್ವಿಕ ಆಹಾರ ಸೇವಿಸುವವನ ಆಯುಷ್ಯ ವೃದ್ಧಿಸುತ್ತದೆ ಎಂದರು. ಯೋಗ ಸಾಧನೆಯ ವಿಧಾನಗಳನ್ನು ಹೇಳಿ ಕೊಟ್ಟರು.

ನೇತೃತ್ವ ವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಇಂದಿನ ಒತ್ತಡದ ಜೀವನದಲ್ಲಿ ಆರೋಗ್ಯ ಕಾಪಾಡಲು ಯೋಗ ಮತ್ತು ದೇಶಿ ಔಷಧಿಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಫಾದರ ಬೆಂಜಮಿನ್ ಡಿಸೋಜಾ, ಬಸವಣ್ಣೆಪ್ಪ ತಿಪ್ಪಶೆಟ್ಟಿ ಮಾತನಾಡಿದರು. ಸುಭಾಷ ಪಂಚಾಳ ಉಪಸ್ಥಿತರಿದ್ದರು. ಚನ್ನಬಸವ ಬಿರಾದಾರ ಸ್ವಾಗತಿಸಿದರು. ರುದ್ರಮಣಿ ಮಠಪತಿ ನಿರೂಪಿಸಿದರು. ಸಿಸ್ಟರ್ ವೆಲ್ಲೇರಿ ವಂದಿಸಿದರು.



ಬಸವಕಲ್ಯಾಣದ ಸತ್ಯಾನುಭವ ಆಶ್ರಮದಲ್ಲಿ ಈಚೆಗೆ ನಡೆದ ಯೋಗಯಾತ್ರೆ ಸಮಾರೋಪದಲ್ಲಿ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿದರು. ಡಾ.ಎಸ್.ಬಿ.ಮಹಾಜನ, ಫಾದರ ಬೆಂಜಮಿನ್ ಡಿಸೋಜಾ, ಡಾ.ಬಸವರಾಜ ಸ್ವಾಮಿ, ಚನ್ನಬಸವ ಬಿರಾದಾರ ಪಾಲ್ಗೊಂಡಿದ್ದರು.

ದಿನಾಂಕ 20-8-2010 ಪ್ರಜಾವಾಣಿ ದಿನ ಪತ್ರಿಕೆ

# ‘ಗಣಾಚಾರಿಯಾಗಿದ್ದ ಮಾಚಿದೇವರು’

**ಬಸವಕಲ್ಯಾಣ:** ಶರಣ ಮಡಿವಾಳ ಮಾಚಿದೇವರು 12ನೇ ಶತಮಾನದಲ್ಲಿ ವೀರತನದಿಂದ ವಚನಗಳ ಸಂರಕ್ಷಣೆ ಮಾಡಿ ಗಣಾಚಾರವನ್ನು ಮೆರೆದಿದ್ದಾರೆ ಎಂದು ಮಾತೆ ತೇಜಸ್ವಿನಿ ಅಭಿಪ್ರಾಯ ಪಟ್ಟರು.

ಇಲ್ಲಿನ ಮಾಚಿದೇವ ಮಂದಿರದಲ್ಲಿ ಮಂಗಳವಾರ ಮಡಿವಾಳ ಸಮಾಜದ ಸಮಾವೇಶ ಮತ್ತು ಶ್ರಾವಣ ಮಾಸದ ಧರ್ಮಸಭೆ ಉದ್ಘಾಟಿಸಿ ಮಾತನಾಡಿದರು.

ಮರಿದೇವರ ಗುಡ್ಡದ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ‘ಎಲ್ಲರೂ ಶರಣರ ವಚನಗಳನ್ನು ನಿತ್ಯ ಪಠಿಸಬೇಕು’ ಎಂದರು.

ಮಡಿವಾಳ ಸಮಾಜದ ಗುಲ್ಬರ್ಗ ಜಿಲ್ಲಾಧ್ಯಕ್ಷ ಶಿವಕುಮಾರ ಮಡಿವಾಳ, ಅನುಭವ ಮಂಟಪದ ಬಸವಣ್ಣಪ್ಪ ತಿಪ್ಪಶೆಟ್ಟಿ, ಡಾ.ಬಸವರಾಜ ಪಂಡಿತ್, ಗಣಪತಿ ಸಸ್ತಾಪುರ ಮಾತನಾಡಿದರು.

ಮಡಿವಾಳ ಮುತ್ಯಾ ಗುಂಪಾ ನೇತೃತ್ವ ವಹಿಸಿದ್ದರು. ಸಮಾಜದ ಜಿಲ್ಲಾಧ್ಯಕ್ಷ ಬಾಬುರಾವ ಮಡಿವಾಳ, ತಾಲ್ಲೂಕು ಯುವ ಘಟಕದ ಅಧ್ಯಕ್ಷ ಸಂತೋಷ ಮಡಿವಾಳ, ದಿಲೀಪ ಕುಮಾರ, ಅಶೋಕ ಮಡಿವಾಳ, ಅಂಬಾರಾಯ ಮಡಿವಾಳ, ದಿಗಂಬರ ಮಡಿವಾಳ ಉಪಸ್ಥಿತರಿದ್ದರು. ಬಕ್ಕಯ್ಯ ಸ್ವಾಮಿ ಸ್ವಾಗತಿಸಿದರು.

ನಾರಾಯಣ ಮಡಿವಾಳ ನಿರೂಪಿಸಿದರು. ನಂತರ ಪ್ರಸಾದ ವಿತರಣೆ ನಡೆಯಿತು. ತಾಲ್ಲೂಕಿನ ಮಡಿವಾಳ ಸಮಾಜ ಬಾಂಧವರು ಪಾಲ್ಗೊಂಡಿದ್ದರು.



ಬಸವಕಲ್ಯಾಣದ ಶರಣ ಮಾಚಿದೇವರ ಮಂದಿರದಲ್ಲಿ ಮಂಗಳವಾರ ನಡೆದ ಮಡಿವಾಳ ಸಮಾಜದ ಸಮಾವೇಶ ಮತ್ತು ಧರ್ಮಸಭೆಯನ್ನು ಮಾತೆ ತೇಜಸ್ವಿನಿ ಉದ್ಘಾಟಿಸಿದರು. ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಣಪತಿ ಸಸ್ತಾಪುರ ಪಾಲ್ಗೊಂಡಿದ್ದರು.

ದಿನಾಂಕ 4-9-2010 ಶನಿವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಗುರಿ ಇಟ್ಟುಕೊಳ್ಳಿ, ಸಾಧನೆಗೆ ಪ್ರಯತ್ನಿಸಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಮಾನವರಾಗಿ ಹುಟ್ಟಿದ ಮೇಲೆ ಸಾರ್ಥಕ ಬದುಕಿಗಾಗಿ ಒಂದು ಸ್ಪಷ್ಟ ಗುರಿ ಇಟ್ಟುಕೊಳ್ಳಿ. ದೇಶಭಕ್ತರಾಗಿ ಸೇವೆ ಮಾಡಿ ಇಲ್ಲವೇ ದೇವರಿಗಾಗಿ ಸಾಧನೆ ಮಾಡಿ ಎಂದು ಅಂಬಿಗರ ಚೌಡಯ್ಯ ಗವಿ ಮಠದ ಮಾತಾಜಿ ತೇಜಸ್ವಿನಿ ತಾಯಿ ಹೇಳಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀ ಮಡಿವಾಳ ಮಾಚಿದೇವರ ಮಂದಿರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಗುರುಗಳು ದೀಕ್ಷೆ ನೀಡಲು ಬರುತ್ತಾರೆ ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಮಾಜದ ಪ್ರತಿಯೊಬ್ಬರು ಮಡಿವಾಳ ಮಾಚಿದೇವರ ವಚನ ಪಠಣ ಮಾಡಬೇಕು ಎಂದರು.



ಶ್ರಾವಣ ಮಾಸ ನಿಮಿತ್ತ ಮಡಿವಾಳ ಮಾಚಿದೇವರ ಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಮಾತೆ ತೇಜಸ್ವಿನಿ ತಾಯಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಮಡಿವಾಳ ಮುತ್ತ್ಯಾ, ಬಾಬುರಾವ ಮಡಿವಾಳ, ಶಿವಕುಮಾರ ಮಡಿವಾಳ, ಗಣಪತಿ ಸಸ್ತಾಪೂರೆ ಇತರರಿದ್ದರು.

ಮಡಿವಾಳ ಸಮಾಜದ ಗುಲ್ಬರ್ಗ ಜಿಲ್ಲಾಧ್ಯಕ್ಷ ಶಿವಕುಮಾರ ಮಡಿವಾಳ ಮಾತನಾಡಿ, ಸಮಾಜದ ಜನರು ಸಂಘಟಿತರಾಗಬೇಕು. ಸಂಘಟನೆ ಬಲಗೊಂಡರೆ ಸರಕಾರದ ಸೌಲಭ್ಯ ಪಡೆಯಲು ಅನುಕೂಲವಾಗುತ್ತದೆ ಎಂದರು.

ಗಣಪತಿ ಸಸ್ತಾಪೂರೆ, ಬಸವಣಪ್ಪ ತಿಪಶೆಟ್ಟಿ ಬಸವರಾಜ ಪಂಡಿತ ಮಾತನಾಡಿದರು. ಸಮಾಜದ ಜಿಲ್ಲಾಧ್ಯಕ್ಷ ಬಾಬುರಾವ ಮಡಿವಾಳ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮಡಿವಾಳ ಮುತ್ತ್ಯಾ ನೇತೃತ್ವ ವಹಿಸಿದ್ದರು. ಬಕ್ಕಯ್ಯ ಸ್ವಾಮಿ ಸ್ವಾಗತಿಸಿದರು. ನಿವೃತ್ತ ಉಪ ತಹಸೀಲ್ದಾರ್ ಸಾಯಬಣ್ಣ ಮಡಿವಾಳ ನಿರೂಪಿಸಿದರು. ಪ್ರಮುಖರಾದ ಸಂತೋಷ ಮಡಿವಾಳ, ದಿಲೀಪ ಮಡಿವಾಳ, ಬಾಬು ರಾವ, ಉಮೇಶ ಶೀಲವಂತ, ರಾಜಶೇಖರ ಶೀಲವಂತ, ಅಂಬಾರಾಯ ಮಡಿವಾಳ ಪಾಲ್ಗೊಂಡಿದ್ದರು. ಶ್ರಾವಣ ಮಾಸದ ನಿಮಿತ್ತ ನಾನಾ ಕಾರ್ಯಕ್ರಮಗಳು ಜರುಗಿದವು.

ದಿನಾಂಕ 2-9-2010 ಗುರುವಾರ ಉದಯ ಕರ್ನಾಟಕ ದಿನಪತ್ರಿಕೆ

# ಶ್ರಾವಣಮಾಸದ ವಿಶೇಷ ಪೂಜಾ-ಶ್ರೀಗಳಿಂದ ಆಶಿರ್ವಚನ

ಬಸವಕಲ್ಯಾಣ.ಸೆ೦೭ ,ಬಸವ ಕಲ್ಯಾಣ ತ್ರಿಪೂರಾಂತದಲ್ಲಿನ ಮರಿದೇವರ ಗುಡ್ಡದಲ್ಲಿ ಪ್ರತಿ ವರ್ಷದಂತೆ ಈವರ್ಷವು ಕೂಡಾ ಶ್ರಾವಣ ಮಾಸದ ನಿಮಿತ್ಯ ಜಗದ್ಗುರು ರೇಣು ಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಹಾಗೂ ಕ್ಷೇತ್ರದ ದೇವರಾದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಪ್ರತಿನಿತ್ಯ ಬೆಲಿಗೆ ಬ್ರಹ್ಮೀಮೂರ್ತ ಸಮಯದಲ್ಲಿ ಮಹಾರುದ್ರಾಭಿಶೇಕ ಹಾಗೂ ಮಹಾ ಮಂಗಳಾರುತಿ ನಡೆಯುತ್ತಿದೆ. ಸದ್ಭಕ್ತರಾದ ಮಲ್ಲಿಕಾರ್ಜುನ ರಾಜೋಳೆ, ಜಗನ್ನಾಥ ಬಿರಾದಾರ,ಮಡಿವಾಳಪ್ಪಾ ಹುಣಸಗೇರಾ,ಶರಣಪ್ಪಾ ಪಾದಾರ ಪಲ್ಗೋಂಡಿದ್ದರು ಪ್ರತಿದಿನ ಅಕ್ಕನಬಳಗ ಭಜನಾ ಮಂಡಳಿಯಿಂದ ಕಾರ್ಯಕ್ರಮ ಜರುಗಿದವು.

ದಿನಾಂಕ 8-9-2010 ಬುಧವಾರ ಉತ್ತರ ಕರ್ನಾಟಕ ದಿನಪತ್ರಿಕೆ.

Scanned by CamScanner

# ಶರಣ ಸಂಸ್ಕೃತಿಯ ಪ್ರತಿಬಿಂಬ ಪುಟ್ಟರಾಜ ಗವಾಯಿ: ಹಾರಕೂಡಶ್ರೀ

ಬಸವಕಲ್ಯಾಣ, 28- ನಾಡಿನ ಶ್ರೇಷ್ಠ ಸಂಗೀತಗಾರರಾಗಿ, ಶರಣ ಸಂಸ್ಕೃತಿಯ ಪ್ರತಿಬಿಂಬವಾಗಿ, ನಾಡಿಗೆ ಅನಂತ ಸೇವೆಯನ್ನು ಪಂಡಿತ ಪುಟ್ಟ ರಾಜ ಗವಾಯಿಗಳು ಸಲ್ಲಿಸಿದ್ದಾರೆ ಎಂದು ಹಾರಕೂಡ ಹಿರೇಮಠದ ಪೀಠಾಧಿಪತಿ ಚನ್ನವೀರ ಶಿವಾಚಾ ರ್ಯರು ಹೇಳಿದರು.

ನಗರದಲ್ಲಿ ಪಂ.ಪುಟ್ಟರಾಜ ಗವಾ ಯಿಗಳಿಗೆ ಹಮ್ಮಿಕೊಳ್ಳಲಾಗಿದ್ದ ನುಡಿ ನಮನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಪುಟ್ಟರಾಜ ಗವಾಯಿಗಳು ಹುಟ್ಟು ಕುರುಡರಾಗಿ ದ್ದರೂ, ಬಸವಣ್ಣನವರ ಕುರಿತು ಚರಿತ್ರೆ ಬರೆದು ಶ್ರೇಷ್ಠ ಪುರಷರೆನಿಸಿದ್ದಾರೆ. ಇಂತಹ ಪುಣ್ಯ ಪುರುಷರು ನಾಡಿನಲ್ಲಿ ಪುನಃ ಹುಟ್ಟಿಬರಬೇಕೆಂದರು.

ಅನುಭವ ಮಂಟಪ ಸಂಚಾಲಕ ಶರಣ ವಿ.ಸಿದ್ಧರಾಮಣ್ಣ ಅವರು ಮಾತ ನಾಡಿ ಪುಟ್ಟರಾಜ ಗವಾಯಿಗಳು ಶ್ರೇಷ್ಠ ಸಂಗೀತಗಾರರಾಗಿದ್ದರು ಎಂದರು.

ಬೀದರನ ಎ.ಬಿ.ಕಲ್ಮಠ ಸಂಗೀತ ಗಾರ ಅವರು ಪಂಡಿತ ಪುಟ್ಟರಾಜ ಗವಾ ಯಿಗಳ ಕುರಿತು ನಾಡಿಗೆ ಸಲ್ಲಿಸಿದ ಸೇವೆಯ ಕುರಿತು ಮಾತನಾಡಿದರು.

ಮರದೇವರ ಗುಡ್ಡದ ಪೂಜ್ಯ ಅಭಿ ನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರು ನೇತೃತ್ವ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಿಕೆಡಿಬಿ ಆಯುಕ್ತ ಕಾಶಿ ನಾಥ ಗೋಖಲೆ ಮಾತನಾಡಿದರು. ಕಸಾಪ ಅಧ್ಯಕ್ಷ ಪ್ರಭುಲಿಂಗ ಟಂಕಸಾ ಲಿಮಠ ಉಪಸ್ಥಿತರಿದ್ದರು. ಪಂಚಾಕ್ಷರಿ ಗವಾಯಿಗಳು ಸಂಗೀತ ವಿದ್ಯಾಲಯ, ಪುಟ್ಟರಾಜ ಗವಾಯಿಗಳ ಸಂಗೀತ ಕಲಾ ತಂಡ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು.

ಶಾಂತಯ್ಯ ಮಠಪತಿ ಕಾರ್ಯಕ್ರಮ ನಿರೂಪಿಸಿದರು. ಶಶಿಧರ ಬಿ.ಪಾಟೀಲ ವಂದಿಸಿದರು.

ದಿನಾಂಕ 29-9-2010
ಬುಧವಾರ ಸಂಯುಕ್ತ ಕರ್ನಾಟಕ
ದಿನಪತ್ರಿಕೆ.

Scanned by CamScanner

# ಯೋಗದಿಂದ ಆರೋಗ್ಯ ವೃದ್ಧಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಯೋಗ ಮತ್ತು ಧ್ಯಾನದಿಂದ ಆರೋಗ್ಯ ವೃದ್ಧಿ ಸಾಧ್ಯ. ಯೋಗ ಮಾತಿಗಿಂತ ಕ್ರಿಯೆಯಲ್ಲಿ ಬಂದರೆ, ಅದರ ಮಹತ್ವ ಅನುಭವಕ್ಕೆ ಬರುತ್ತದೆ ಎಂದು ನಗರ ಪೊಲೀಸ್ ಠಾಣೆ ಪಿಎಸ್ಐ ನಂದೀಶ್ವರ ಹೇಳಿದರು.

ಪತಂಜಲಿ ಯೋಗ ಸಮಿತಿಯಿಂದ ನಗರದ ಸಮುದಾಯ ಭವನದಲ್ಲಿ ಬುಧವಾರ ನಡೆದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮನುಷ್ಯ ವೈಜ್ಞಾನಿಕವಾಗಿ ಪ್ರಗತಿ ಕಂಡರೂ ಮಾನಸಿಕ ಒತ್ತಡದಿಂದ ಮುಕ್ತವಾಗಿಲ್ಲ ಎಂದರು.

ಶರಣ ಸಾಹಿತ್ಯ ಪರಿಷತ್ ಭಾಲ್ಕಿ ತಾಲೂಕಾಧ್ಯಕ್ಷ ಶಂಭುಲಿಂಗ ಕಾಮಣ್ಣ ಮಾತನಾಡಿ, ಮನಸು ಮತ್ತು ಇಂದ್ರೀಯಗಳನ್ನು ನಿಯಂತ್ರಿಸುವ ಶಕ್ತಿ ಯೋಗಕ್ಕಿದೆ. ಯೋಗ ಕಾಲದ ಬೇಡಿಕೆಯಾಗಿದೆ. ಅಧ್ಯಾತ್ಮ ಮತ್ತು ಭೌತಿಕ ಆನಂದಗಳನ್ನು ಯೋಗ ಸಾಧನೆಯಿಂದ ಪಡೆಯಲು ಸಾಧ್ಯ ಎಂದರು.

ಹುಮನಾಬಾದ್‌ನ ಆರ್.ವಿ.ಪದವಿ ಕಾಲೇಜು ಪ್ರಾಚಾರ್ಯ ಭೀಮರಾವ ಕುಲಕರ್ಣಿ ಮಾತನಾಡಿದರು. ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಸಮಿತಿ ಅಧ್ಯಕ್ಷ ಡಾ.ಬಸವರಾಜ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶಾಂತಲಿಂಗ ಮಠಪತಿ, ಚನ್ನಬಸವ ಬಿರಾದಾರ ಅವರು 21 ದಿನ ಶಿಬಿರದ ಕುರಿತು ಅನುಭವ ಹಂಚಿಕೊಂಡರು. ಉಪನ್ಯಾಸಕ ಭೀಮಾಶಂಕರ ಬಿರಾದಾರ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ರುದ್ರಮಣಿ ಮಠಪತಿ ನಿರೂಪಿಸಿದರೆ, ಐ.ಜಿ.ನಾಗರಾಜ ವಂದಿಸಿದರು.



ಪತಂಜಲಿ ಯೋಗ ಸಮಿತಿಯಿಂದ ಬಸವಕಲ್ಯಾಣದಲ್ಲಿ ನಡೆದ ಯೋಗ ಶಿಬಿರ ಸಮಾರೋಪ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪಿಎಸ್ಐ ನಂದೀಶ್ವರ, ಶಂಭುಲಿಂಗ ಕಾಮಣ್ಣ ಭೀಮರಾವ ಕುಲಕರ್ಣಿ, ಡಾ.ಬಸವರಾಜ ಸ್ವಾಮಿ ಇದ್ದರು.

ದಿನಾಂಕ 17-9-2010 ಶುಕ್ರವಾರ ಉದಯ ಕರ್ನಾಟಕ ದಿನಪತ್ರಿಕೆ.

# ವ್ಯಕ್ತಿ ಬದುಕಿಗೆ ಅನ್ನಕ್ಕಿಂತಲೂ ನೀರಿಗಿಂತ ಶುದ್ಧ ಗಾಳಿ ಅವಶ್ಯಕ – ಕಾಶಿಜಗದ್ಗುರು

(ವರದಿ:ನಾಗಪ್ಪ ನಿಣ್ಣೆ)

ಬಸವಕಲ್ಯಾಣ,ಆಗಸ್ಟ್27–ವ್ಯಕ್ತಿ ಬದುಕಿಗೆ ಅನ್ನಕ್ಕಿಂತ ನೀರಿಗಿಂತ ಶುದ್ಧ ಗಾಳಿ ಅವಶ್ಯಕವಾಗಿದೆ ವಿವಿಧಕಾರಣಾಗಳಿಂದ ಇಂದು ವಾಂಯು ಮಾಲಿನ್ಯ ಕಲುಷಿತ ವಾಗಿದೆ. ಒಳ್ಳೆಯ ವಾತಾವರಣ ದಲ್ಲಿ ಬುದಕುವುದೇ ದುಸ್ತರ ವಾಗಿದೆ ಎಂದು 1009 ಶ್ರೀ ಶ್ರೀ ಶ್ರೀ ಕಾಶಿಯ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಖೇದ್ಯ ವ್ಯಕ್ತಪಡಿಸಿದರು.

ಅವರು ಹುಮನಾಬಾದಿನ ಸುಕ್ಷೇತ್ರ ವೀರಭದ್ರೇಶ್ವರ ದೇವಸ್ಥಾನದ ಭವ್ಯ ಮಂಟಪ ದಲ್ಲಿ ತಮ್ಮ 64ನೇ ಜನ್ಮ ದಿನೋತ್ಸವದ ನಿಮಿತ್ಯವಾಗಿ 64 ವೃಷಾರೋಪಣಾವನ್ನು ಹಾಗೂ 64 ದೀಪಗಳನ್ನು ಬೆಳಗಿಸಿ ಮಾತನಾಡಿದ ಜಗದ್ಗುರುಗಳು ಪರಿಸರ ಮತ್ತು ಪ್ರತಿಭೆಗಳು ಸಂರಕ್ಷಿಸಬೇಕಾಗಿದೆ.

ಸಮಾರಂಭವನ್ನು ಹುಮನಾಬಾದಿನ ಹಿರಿಯ ಧುರಿಣರು ಹಾಗೂ ವಿಧಾನ ಪರಿಷತ್ ಸದಸ್ಯರಾಧ ಬಸವರಾಜ ಪಾಟೀಲ ಉದ್ಘಾಟನೆ ನೆರವೇರಿಸಿ ಕಾಶಿ ಜಗದ್ಗುರುಗಳು ಪಾದ ಯಾತ್ರೆ ಮಾಡಿ ಸದ್ಭಾವನೆ ರಾಷ್ಟ್ರೀಯ ಏಕ್ಯತೆ ಮೂಡಿಸುವ ಕಾರ್ಯ ಮಾಡಿದ್ದಾರೆ. ವೈಚಾರಿಕ ಪರಂಪರೆಗೆ ನಾಂದಿ ಹಾಕಿದ್ದಾರೆ ಎಂದರು. ಮಾಣಿಕ ಪ್ರಭು ಸಂಸ್ಥಾನದ ಆನಂದರಾಜ ಮಹಾಪ್ರಭು ಇನ್ನಿತರರು ಜಗದ್ಗುರುಗಳ ಜನ್ಮದಿನಕ್ಕೆ ಶುಭಾಶಯ ಕೋರಿ ಅವರ ಸೇವೆ ಭಕ್ತಕುಲಕ್ಕೆ ನಿರಂತರ ಸಿಗಲಿ ಎಂದರು.

ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ, ಶಾಸಕ ಬಸವರಾಜ ಪಾಟೀಲ ಅಟ್ಟೂರ, ಪತ್ರಕರ್ತ ನಾಗಪ್ಪ ನಿಣ್ಣೆ ಇನ್ನಿತರರು ಶಿವಾಚಾರ್ಯರು [illegible] ರಾಜ್ಯ [illegible] ಇಂದ [illegible]ರಶೈವ [illegible] ಧುರಿಣರು, ಕಲಾವಿದರು, ಭಾಗ ವಹಿಸಿದ್ದರು. ಸ್ವಾಗತವನ್ನು ಶಾಸಕರಾದ ರಾಜಶೇಖರ ಪಾಟೀಲ ಉತ್ತಮ ರೀತಿಯ ಸಂಚಾಲನೆ ಹಾಗೂ ಸಂಘಟನೆಂಯ [illegible]ಶಿವಾರಿ ಡಾ.ರಾಜಶೇಖರ ಸ್ವಾಮಿ ಗೋರ್ಟಾ, ವಂದನಾರ್ಪಣೆಯನ್ನು ವೀರಣ್ಣಾ ಪಾಟೀಲ ಸಲ್ಲಿಸಿದ್ದರು.

ಪಾದಯಾತ್ರೆ:ಅಗ್ನಿ ಕುಂಡದಿಂದ ಜಗದ್ಗುರುಗಳು ಪಾದ ಯಾತ್ರೆ ಮೂಲಕ ದೇವಸ್ಥಾನಕ್ಕೆ ಆಗಮಿಸಿದ ಪೂಜ್ಯರು ಐಕ್ಯತೆ, ಸರಳತೆಗೆ ಅಲ್ಲದೇ ವೈಭಾವಿಕರಿಸುವುದಕ್ಕೆ ನಿರಾಕರಿಸಿ, ಈ ರೀತಿಯ ಪಾದಯಾತ್ರೆ ಮಾಡಿ ಅನೇಕರ ಪ್ರಗತಿಪರ ಸಂಘಟನೆಗಳ ನ್ಯಾಗರಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ತಿಳಿದು ಬಂದಿದೆ.

ಕನ್ನಡ ನಲಿ–ಕಲಿ

ದಿನಾಂಕ 28-8-10 ಕ್ರಾನಿಕಲ್ ದಿನಪತ್ರಿಕೆ

Scanned by CamScanner

June 29 - 2010

# ಬಸವಕಲ್ಯಾಣದಲ್ಲಿ ಕಾಯಕ ಸನ್ಮಾನ ಸಮಾರಂಭ



ಬಸವಕಲ್ಯಾಣ28;ಶರಣೆಲಕ್ಷ್ಮೀ ಬಸವರಾಜ ಸುಬೇದಾರ ಪರಿವಾರದಿಂದ ಏರ್ಪಡಿಸಿದ ನಾಮಕರಣ ಹಾಗೂ ಕಾಯಕಸನ್ಮಾನ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯಶ್ರೀಮ ಫ ಚ ಡಾ.ಬಸವಲಿಂಗ

ಪಟ್ಟದೇವರು ಮಾತನಾಡಿ ಆಡಂಬರದ ಸಮಾರಂಭಗಳು ಮಾಡುವಬದಲು ಬಸವಮಯ [illegible] ಕಾರ್ಯಕ್ರಮ [illegible] ಬಸವಲಿಂಗ ಸುಬೇದಾರ ಅವರು [illegible] ಬಸವ ತತ್ತ್ವನಿಷ್ಠ [illegible]ಗಳಾಗಿ ಬದುಕುನಡೆಸುತ್ತಿರುವದು

ಇತರರಿಗೂ ಮಾದರಿಯಾಗಲಿ ಬಸವಣ್ಣಾ ಇವರಿಗೆ ಸರ್ವಸ ನೀಡಿ ಕಾಪಾಡಲೆಂದು ಶುಭಹಾರೈಸಿದರು.ಘೂತರದಾಂವನ ಪೂಜ್ಯ ಶ್ರೀಕೋರಣೇಶ್ವರ ಮಹಾ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿದರು. ಸಮುಖವಹಿಸಿ ಮಾತನಾಡಿದ ತ್ರಿಪುರಾಂತ [illegible] ಪೂಜ್ಯ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಮಕ್ಕಳ ಹೆಸರು [illegible] ಅರ್ಥಪೂರ್ಣವಾಗಿ ವಚನಶ್ರೀ" ಎಂಬ ಹೆಸರು ಶರಣ ಸಂಸ್ಕೃತಿ [illegible]ಬಿಂಬಿಸುತ್ತದೆ ಎಂದರು. [illegible] ಅತಿಥಿಗಳಾಗಿ ಮಾತನಾಡಿದ ತಾಲೂಕಾ ಕನ್ನಡ

ಸಾಹಿತ್ಯ ಪರಿಷತ್ತನ ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಬಿ ಟಂಕಸಾಲಿಮಠ ಮಾತನಾಡಿ ಕಾಯಕಂ[illegible] ಸಿ ವಿಂತ ವಾದ ಂತ ಹ

ಕಾರ್ಯಕ್ರಮ ಸಾರ್ವತ್ರಿಕವಾಗಿ ಮಾಡಿ ಅದರಲ್ಲು ಬಸವ ತತ್ವ ಚಿಂತನೆ ಹಮ್ಮಿಕೊಂಡ ಸುಬೇದಾರ ಅವರ ಕಾರ್ಯ

ಶ್ಲಾಘನೀಯವಾಗಿದೆ ಎಂದರು.

ದೇವಸ್ಥಾನ ಪಂಚ ಕಮೀಟಿಯ ಉಪಾಧ್ಯಕ್ಷರಾದ ರೇವಣಪ್ಪಾರಾಯವಡೆ ಅಧ್ಯಕ್ಷತೆ ವಹಿಸಿದ್ದರು.ವೇದಿಕೆಯಲ್ಲಿ ಶರಣ ಗುರುಬಸವ ನವರ ಸನಾಯಕ ನವಲಿಂಗಪಾಟೀಲ್ ಉಪಸ್ಥಿತರಿದ್ದರು.

ಇದೆ ಸಂದರ್ಭದಲ್ಲಿ ಕಾಯಕಯೋಗಿ ಶರಣ ವೆಂಕಟೇಶ ವಾಯ್.ಗೊಂಟಲ ಅವರನ್ನು ಗೌರವಿಸಿ ಸತ್ಕರಿಸಲಾಯಿತು.

ಬಸವಲಿಂಗ ಸುಬೇದಾರ,ಸ್ವಾಗತಿಸಿದರು, ಸಿಧರಾಮ ಎಸ ಎಳವಂತಗಿಕಾರ್ಯಕ್ರಮ ನಿರೂಪಿಸಿದರು,ಕಾರ್ಯಕ್ರಮದಲ್ಲಿ

ಗದಗಿನ ಚನ್ನಪ್ಪ ಅಂಗಡಿ ಗೀಗೀಪದ ಹಾಡಿ ರಂಜಿಸಿದರು .ಬಸವರಾಜ ಕಾಮಶೇಟ್ಟಿ, ಪತ್ರಕರ್ತ ನಾಗಪ್ಪಾ ನಿಣ್ಣೆ, ರಾಜಕುಮಾರ ಹುಗಾರ ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಶರಣ ವೆಂಕಟೇಶ ಗೊಂಟಲ ದಂಪತಿಗಳಿಗೆ ಕಾಯಕಯೋಗಿ ಎಂ ಗೌರವಿಸಿ ಸತ್ಕರಿಸಿದರು ಪೂಜ್ಯ ಬಸವಲಿಂಗ ಪಟ್ಟದೇವರು,ಪೂಜ್ಯ ಕೋರಣೇಶ್ವರ ಶ್ರೀಗಳು,ತ್ರಿಪುರಾಂತನ ಪೂಜ್ಯಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು,ಬಸವಲಿಂಗ ಸುಬೇದಾರ, ಪಿಬಿಟಂಕಸಾಲಿಮಠ ಉಪಸ್ಥಿತರಿದ್ದರು.

# ಮಕ್ಕಳಿಗೆ ನೈತಿಕ ಶಿಕ್ಷಣ ಸಿಗುತ್ತಿಲ್ಲ; ಎಂ.ಆರ್.ಗಾದಾ

ಬಸವಕಲ್ಯಾಣ, ನಗರದ ಕಲ್ಪತರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಅಡಿಯಲ್ಲಿ ಅಲ್ಲಮಪ್ರಭು ಸ್ವತಂತ್ರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಮತ್ತು ವ್ಯಕ್ತಿತ್ವ ವಿಕಸನ ಸಮಾರಂಭ ಸೋಮವಾರ ಜರುಗಿತು.

ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್.ಗಾದಾ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇವತ್ತಿನ ದಿನಗಳಲ್ಲಿ ಮಕ್ಕಳಿಗೆ ನೈತಕ ಶಿಕ್ಷಣವನ್ನು ಸಿಗುತ್ತಿಲ್ಲ. ಒಳ್ಳೆಯ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷರು ಪ್ರಮುಖ ಪಾತ್ರ ವಹಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಸಹ ಗುರುಗಳ ಮಾರ್ಗದರ್ಶನದಲ್ಲಿ ನಡೆದು ತಮ್ಮ ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದ್ದು ಇಂದಿನ ಯುವಜನಾಂಗದ ಹೊಣೆಯಾಗಿದೆ ಎಂದು ನುಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ನಗರಾಭಿವೃದ್ಧಿ ಪ್ರಧಿಕಾರದ ಅಧ್ಯಕ್ಷ ರವಿ ಚಂದನಕೇರೆ ಮಾತನಾಡಿ, ತಂದೆ–ತಾಯಿ, ಗುರುಗಳಿಂದ ಮಕ್ಕಳು ಒಳ್ಳೆಯವರಾಗಿ ಕಾಣಿಸಿಕೊಳ್ಳಬೇಕಾದರೆ ಉನ್ನತವಾದ ವ್ಯಾಸಂಗವನ್ನು ಮಾಡಿ, ಉತ್ತಮವಾದ ಗುರಿಗಳನ್ನು ಇಟ್ಟು, ಸಾಧನೆಯ ಶಿಖರವನ್ನು ಏರಿದಾಗಲೇ ಪ್ರತಿಯೊಬ್ಬ ಗುರು ಮತ್ತು ತಂದೆ ತಾಯಿಗಳು ಹೆಮ್ಮೆ ಪಡುತ್ತಾರೆ. ಎಲ್ಲರನ್ನು ಹೆಮ್ಮೆ ಪಡಿಸುವಂಥ ಕಾರ್ಯ ವಿದ್ಯಾರ್ಥಿಗಳು ಮಾಡಬೇಕಾಗಿದೆ. ಶೈಕ್ಷಣಿ ವಿದ್ಯಾಭ್ಯಾಸದೊಂದಿಗೆ ದೊಡ್ಡ ದೊಡ್ಡ ಕನಸುಗಳನ್ನು ಇಟ್ಟು ಕೊಳ್ಳಬೇಕು. ಕನಸುಗಳಿಲ್ಲದೆ ಏನೊಂದು ಸಾಧಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಪ್ರಾಚಾರ್ಯರಾದ ವ್ಹಿ.ಎಚ್.ಅಯ್ಯಣ್ಣನವರ್ ಕಾರ್ಯಕ್ರಮದ ಅಧಯಕ್ಷತೆ ವಹಿಸಿ ಮಾತನಾಡಿ, ಯಾವುದೇ ತತ್ವ, ಪಾಠ ತಮ್ಮ ಕಲಿಯಬೇಕಾದರೆ ಜೀವನದಲ್ಲಿ ಮಾನವೀಯ ಮೌಲ್ಯಗಳು ಅಳವಡಿಸಿಕೊಳ್ಳಬೇಕು. ಆ ಮೌಲ್ಯಗಳು ಯಾವುವೆಂದರೆ, ನಯ, ವಿನಯ, ಸ್ವಾಭಿಮಾನ, ಪ್ರೀತಿ, ತ್ಯಾಗ ಇವುಗಳನ್ನು ವಿದ್ಯಾರ್ಥಿಗಳು ತಮ್ಮ ಗುಣಗಳಲ್ಲಿ ಅಳವಡಿಸಿಕೊಂಡಿದ್ದಲ್ಲಿ ವ್ಯಕ್ತಿತ್ವ ವಿಕಸನವಾಗುತ್ತದೆ. ವ್ಯಕ್ತಿತ್ವ ವಿಕಸನಕ್ಕಾಗಿ ವಿನಯವನ್ನು ಪ್ರಮುಖವಾಗಿ ಬೇಕಾಗಿದೆ. ಯಾವ ವ್ಯಕ್ತಿ ಮಾನವೀಯ ಮೌಲ್ಯಗಳು ಅಳವಡಿಸಿಕೊಳ್ಳುತ್ತಾನೋ ಅವನೇ ಸಂತನಾಗುತ್ತಾನೆ. ಮೌಲ್ಯಗಳು ಪ್ರತಿಪಾದಿಸದೇ ಜೀವನದಲ್ಲಿ ಆಚರಣೆಗೆ ತರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದ ಪೂಜ್ಯ ಅಭಿನವ ಘನಲಿಂಗ ರುದ್ರಮನಿ ಮಾತನಾಡಿ, ಇಂದಿನ ಯುವ ಜನಾಂಗ ಕೇವಲ ಕಾಲಹರಣ ಮಾಡುತ್ತಿದೆ. ಸಮಯ ವ್ಯರ್ಥ ಮಾಡುವುದರಿಂದ ಏನೇನೂ ಸಾಧಿಸಲಾಗುವುದಿಲ್ಲ. ಸಾಧಿಸಲು ಸಾಕಷ್ಟು ಅವಕಾಶಗಳು ಇರುವಾಗ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕು. ಉತ್ತಮವಾದ ಮಾರ್ಗಗಳಲ್ಲಿ ನಡೆದರೆ ಅತ್ಯುತ್ತಮವಾದ ಪ್ರತಿಫಲವೇ ಸಿಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ತಮ್ಮ ಸತತ ಓದಿನೊಂದಿಗೆ ಸುಂದರವಾದ ಕನಸು, ಯೋಜನೆಗಳನ್ನು ಇಟ್ಟುಕೊಂಡು ಮಹತ್ವವಾದ ಜೀವನದ ಗುರಿ ತಲುಪಬೇಕು ಎಂದು ಹೇಳಿದರು.

ಕಲ್ಪತರು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕ್ರಾಂತಿಕುಮಾರ ಪಾಂಚಾಳ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು, ಉನ್ನತವಾದ ಶೈಕ್ಷಣಿಕ ಹುದ್ದೆಗಳಲ್ಲಿ ಸ್ಥಾನವನ್ನು ಪಡೆದ ಅಲ್ಲಮಪ್ರಭು ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಸತ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಚಂದ್ರಕಾಂತ ಅಕ್ಕಣ್ಣ, ರವೀಂದ್ರ ಶಾಯೆಪ್ಪ ಸೇರಿದಂತೆ ಸಾಹಿತಿ ವೀರಣ್ಣ ಮಂತಾಳಕರ್, ವೀರಶೆಟ್ಟಿ ಪಾಟೀಲ, ಮಚ್ಚೇಂದ್ರ ಅಣಕಲ್ ಹಾಗೂ ಸಿಬ್ಬಂದಿ ವರ್ಗದವರೆಲ್ಲ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನೂರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಸ್ವಾತಿ ಭೋಸ್ಲೆ ಹಾಗೂ ಶೃತಿ ಪಾಂಚಾಳ ಕಾರ್ಯಕ್ರಮ ನಿರೂಪಿಸಿದರು.



ಬಸವಕಲ್ಯಾಣ ನಗರದ ಕಲ್ಪತರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಅಡಿಯಲ್ಲಿ ಅಲ್ಲಮಪ್ರಭು ಸ್ವತಂತ್ರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗೆ ಪೂಜ್ಯ ಅಭಿನವ ಘನಲಿಂಗ ರುದ್ರಮನಿ ಸನ್ಮಾನಿಸುತ್ತಿರುವುದು.

ದಿನಾಂಕ 28-9-2010 ಮಂಗಳವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ.

Scanned by CamScanner

**ಗಾನಯೋಗಿಗೆ ಸಂಗೀತ ನುಡಿ ನಮನ**

# ಸಂಗೀತ ಜ್ಯೋತಿ ಬೆಳಗಿದ ಚೈತನ್ಯ ಶಕ್ತಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಡಾ.ಪಂಡಿತ್ ಪುಟ್ಟರಾಜ ಗವಾಯಿಗಳು ಭೌತಿಕವಾಗಿ ಅಗಲಿದರೂ, ಅದ್ಭುತ ಸಾಧನೆ ಮೂಲಕ ಎಲ್ಲರ ಹೃದಯ ಮಂದಿರದಲ್ಲಿ ನೆಲೆಸಿದ್ದಾರೆ ಎಂದು ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ನುಡಿದರು.

ಪಂ.ಪಂಚಾಕ್ಷರಿ ಗವಾಯಿಗಳ ಸಂಗೀತ ವಿದ್ಯಾಲಯ, ಗಾನಯೋಗಿ ಡಾ.ಪಂ.ಪುಟ್ಟರಾಜ ಗವಾಯಿಗಳ ಸಂಗೀತ ಕಲಾ ತಂಡದಿಂದ ಡಾ.ಪಂ.ಪುಟ್ಟರಾಜ ಗವಾಯಿಗಳ ಸ್ಮರಣಾರ್ಥ ನಗರದ ಬಿಕೆಡಿಬಿ ನೂತನ ಗ್ರಂಥಾಲಯ ಕಟ್ಟಡದಲ್ಲಿ ಸೋಮವಾರ ಸಂಜೆ ನಡೆದ ಭಾವಪೂರ್ಣ ಸಂಗೀತ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಅದ್ಭುತವಾದ ಚೈತನ್ಯ ಶಕ್ತಿ ಗವಾಯಿಗಳ ವ್ಯಕ್ತಿತ್ವದಲ್ಲಿ ತುಂಬಿತ್ತು. ಕಣ್ಣಿಲ್ಲದಿದ್ದರೂ ಮೂರು ಕಣ್ಣುಗಳನ್ನು ಹೊಂದಿದ್ದರು. ಸಾಹಿತ್ಯ, ಸಂಗೀತ, ಅಧ್ಯಾತ್ಮದ ಕಣ್ಣು ಪಡೆದಿದ್ದರು. ಆಚಾರ-ವಿಚಾರ ಒಂದಾಗಿಸಿ ಆಚರಣೆಗೆ ತಂದ ಅಗಾಧ ಶಕ್ತಿ ಅವರಲ್ಲಿತ್ತು. ನಮ್ಮ ಮಧ್ಯೆ ಇಲ್ಲದಿದ್ದರೂ ಅಪಾರ ಸಂಖ್ಯೆಯಲ್ಲಿ ಸಂಗೀತ ಜ್ಯೋತಿಗಳನ್ನು ಹೊತ್ತಿಸಿದ್ದಾರೆ ಎಂದರು.

ಬಸವೇಶ್ವರ ಬಗ್ಗೆ ಹಿಂದಿಯಲ್ಲಿ ಬಸವ ಪುರಾಣ ಬರೆದು ರಾಷ್ಟ್ರಪತಿಗಳಿಗೆ ಅರ್ಪಿಸಿದ ಗವಾಯಿಗಳು, ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳ ಬಗ್ಗೆ ಪದ್ಯ ಬರೆದಿದ್ದಾರೆ ಎಂದು ಸ್ಮರಿಸಿದ ಶ್ರೀಗಳು, ಡಾ.ಪುಟ್ಟರಾಜ ಗವಾಯಿಗಳು ವಿಶ್ವ ರತ್ನವಾಗಿದ್ದಾರೆ ಎಂದು ಬಣ್ಣಿಸಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಬಿಕೆಡಿಬಿ ಆಯುಕ್ತ ಕಾಶೀನಾಥ ಗೋಖಲೆ, ಬೀದರ್ ಗಾನಯೋಗಿ ಪಂಚಾಕ್ಷರಿ ಸೇವಾ ಸಂಘದ ಅಧ್ಯಕ್ಷ ಎಸ್.ವಿ.ಕಲ್ಮಠ ಮಾತನಾಡಿದರು. ಅನುಭವ ಮಂಟಪ ಸಂಚಾಲಕ ಶ್ರೀ ವಿ.ಸಿದ್ದರಾಮಣ್ಣ, ಫಾದರ್ ಬೆಂಜಮಿನ್ ಡಿಸೋಜ, ಕಸಾಪ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಉಪಸ್ಥಿತರಿದ್ದರು.

ಸಂಗೀತ ವಿದ್ಯಾಲಯದ ಪ್ರಾಚಾರ್ಯ ರಾಜಕುಮಾರ ಹೂಗಾರ ಮದಕಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಶಶಿಧರ್ ಪಾಟೀಲ್ ವಂದಿಸಿದರು. ಶಾಂತಯ್ಯ ಮಠಪತಿ ನಿರೂಪಿಸಿದರು.

ಕಾರ್ಯಕ್ರಮದ ನಂತರ ನಾನಾ ಭಾಗದಿಂದ ಆಗಮಿಸಿದ ಗಾಯಕರು, ಕಲಾವಿದರಿಂದ ತಡರಾತ್ರಿವರೆಗೆ ಸಂಗೀತ-ಗಾಯನದ ಮೂಲಕ ಪುಟ್ಟರಾಜ ಗವಾಯಿಗಳಿಗೆ ಭಾವಪೂರ್ಣ ಸಂಗೀತ ನುಡಿ ನಮನ ಸಲ್ಲಿಸಲಾಯಿತು.

ಸಂಗೀತಗಾರರು, ಗಾಯಕರು ಕಲಾವಿದರಾದ ಶೇಖ ಹಸ್ನುಮಿಯಾ, ಕೇಶವರಾವ ಸೂರ್ಯವಂಶಿ, ರಾಜೇಂದ್ರಸಿಂಗ್ ಪವಾರ್, ಜಗನ್ನಾಥ ನಾನಕೇರಿ, ರೇವಣಸಿದ್ದಯ್ಯ ಹಿರೇಮಠ, ಶಿವಾಜಿ ಸಾಗರ, ರಮೇಶ ಕೋಳಾರ, ಎಎಸ್‌ಐ ಹಣಮಂತಪ್ಪ ಚಿದ್ರಿ, ಪ್ರವೀಣ ದಾಂಡೇಕರ್, ಅರಣವೀರಯ್ಯ ಲಿಂಗದಳ್ಳಿ, ಅಂಬಾದಾಸ ಸೂರ್ಯವಂಶಿ, ಅಣವೀರಯ್ಯ ಸ್ವಾಮಿ ಬೆಳಕೋಟಾ, ವಿನಾಯಕ ಚೌಧರಿ, ಈಶ್ವರಪ್ಪ ಪಂಚಾಳ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ವಿಕ ಚಿತ್ರಲೋಕ




ಪಂ.ಪುಟ್ಟರಾಜ ಗವಾಯಿಗಳ ಸ್ಮರಣಾರ್ಥ ಬಸವಕಲ್ಯಾಣದಲ್ಲಿ ಸೋಮವಾರ ಸಂಜೆ ನಡೆದ ಸಂಗೀತ ನುಡಿ ನಮನ ಕಾರ್ಯಕ್ರಮ ಶ್ರೀ ಚನ್ನವೀರ ಶಿವಾಚಾರ್ಯರು ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ, ವಿ.ಸಿದ್ದರಾಮಣ್ಣ, ಫಾ.ಬೆಂಜಮಿನ್ ಡಿಸೋಜಾ, ಕಾಶೀನಾಥ ಗೋಖಲೆ, ಕಲ್ಮಠ, ಪ್ರಭುಲಿಂಗಯ್ಯ, ರಾಜಕುಮಾರ ಹೂಗಾರ ಇತರರಿದ್ದರು.

ದಿನಾಂಕ 28-9-2010 ಮಂಗಳವಾರ ವಿಜಯ ಕರ್ನಾಟಕ ದಿನಪತ್ರಿಕೆ.

Scanned by CamScanner

■ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ವ್ಯಕ್ತಿತ್ವ ವಿಕಸನ ಸಮಾರಂಭ ■

# ನೈತಿಕ ಶಿಕ್ಷಣದಿಂದ ಮಕ್ಕಳ ಭವಿಷ್ಯ ಬೆಳಗಿಸಿ: ಗಾದಾ




ಬೀದರ್: ಮಕ್ಕಳಿಗೆ ನೈತಿಕ ಶಿಕ್ಷಣ ಕಲ್ಪಿಸುವ ಮೂಲಕ ಅವರ ಭವಿಷ್ಯ ಉಜ್ವಲಗೊಳಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್ ಗಾದಾ ನುಡಿದರು.

ಅವರು ಬಸವಕಲ್ಯಾಣದಲ್ಲಿ ಕಲ್ಪತರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಅಡಿಯಲ್ಲಿ ಅಲ್ಲಮಪ್ರಭು ಸ್ವತಂತ್ರ ಪಪೂ ಕಾಲೇಜು ಹಮ್ಮಿಕೊಂಡಿದ್ದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಮತ್ತು ವ್ಯಕ್ತಿತ್ವ ವಿಕಸನ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಗುರುಗಳ ಮಾರ್ಗದರ್ಶನ ಪಡೆದುಕೊಳ್ಳಬೇಕು. ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದ್ದು ಯುವ ಜನಾಂಗದ ಹೊಣೆಯಾಗಿದೆ ಎಂದು ನುಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೇರೆ ಮಾತನಾಡಿ, ಕಠಿಣ ಶ್ರಮ, ನಿರಂತರ ಅಧ್ಯಯನದಿಂದ ಜೀವನದಲ್ಲಿ ಉನ್ನತ ಗುರಿ ಸಾಧಿಸಲು ಸಾಧ್ಯ. ಕನಸುಗಳನ್ನು ಕಾಣದವರು ಏನನ್ನೂ ಸಾಧಿಸಲಾರರು ಎಂದರು. ಪ್ರಾಚಾರ್ಯ ವ್ಹಿ.ಎಚ್. ಅಯ್ಯಣ್ಣನವರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಸಾನ್ನಿಧ್ಯ ವಹಿಸಿದ್ದರು. ಕಲ್ಪತರು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕ್ರಾಂತಿಕುಮಾರ ಪಾಂಚಾಳ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸತ್ಕರಿಸಲಾಯಿತು. ಉಪನ್ಯಾಸಕರಾದ ಚಂದ್ರಕಾಂತ ಅಕ್ಕಣ್ಣ, ರವೀಂದ್ರ ಶಾಯೆಪ್ಪ, ಪ್ರಮುಖರಾದ ವೀರಣ್ಣ ಮಂಠಾಳಕರ್, ವೀರಶೆಟ್ಟಿ ಪಾಟೀಲ್, ಮಚ್ಚೇಂದ್ರ ಅಣಕಲ್ ಮತ್ತಿತರರು ಉಪಸ್ಥಿತರಿದ್ದರು. ಸ್ವಾತಿ ಭೋಸ್ಲೆ ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ 28-9-2010 ಮಂಗಳವಾರ ಕನ್ನಡ ಪ್ರಭಾ ದಿನಪತ್ರಿಕೆ.

# ಶ್ರಾವಣಮಾಸದ ವಿಶೇಷ ಪೂಜಾ



ಬಸವಕಲ್ಯಾಣ.ಅ,25–ಬಸವಕಲ್ಯಾಣ ತ್ರಿಪೂರಾಂತದಲ್ಲಿನ ಮರಿದೇವರ ಗುಡ್ಡದಲ್ಲಿ ಪ್ರತಿವರ್ಷದಂತೆ ಈವರ್ಷವು ಕೂಡಾ ಶ್ರಾವಣ ಮಾಸದ ನಿಮಿತ್ಯ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಹಾಗೂ ಕ್ಷೇತ್ರದ ದೇವರಾದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಪ್ರತಿನಿತ್ಯ ಬೆಳಿಗ್ಗೆ ಬ್ರಹ್ಮೀಮೂರ್ತ ಸಮಯದಲ್ಲಿ ಮಹಾರುದ್ರಾಭಿಶೇಕ ಹಾಗೂ ಮಹಾ ಮಂಗಳಾರುತಿ, ಅಕ್ಕಮಹಾದೇವಿ ಭಜನಾ ಮಂಡಳಿಯಿಂದ ಭಜನೆ, ಹಾಗೂ ಶ್ರೀಮಠದ ಪಟ್ಟಾಧ್ಯಕ್ಷರಾದ ಪೂಜ್ಯ ಶ್ರೀ ಷ.ಬ್ರ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶ್ರಾವಣ ಮಾಸದ ನಿಮಿತ್ಯ ಲೋಕ ಕಲ್ಯಾಣಕ್ಕಾಗಿ ಅನುಷ್ಠಾನ ಕೈಗೊಂಡಿದ್ದು, ಪ್ರತಿದಿನ ಭಕ್ತ ಮಮ್ಮೋಹ ದರ್ಶನ ಪಡೇದು ಪುನಿತರಾಗುತ್ತಿದ್ದಾರೆಂದು ಶ್ರೀಮಠದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ 26-8-2010 [illegible] ದಿನಪತ್ರಿಕೆ.

Scanned by CamScanner

# ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಅವಶ್ಯಕ

* ವಿಕ ಸುದ್ದಿಲೋಕ ಬಸವಕಲ್ಯಾಣ

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಕಂಡರೂ ನೈತಿಕ ಶಿಕ್ಷಣದ ಕೊರತೆ ಸಮಾಜವನ್ನು ಕಾಡುತ್ತಿದೆ. ಇದನ್ನು ಹೋಗಲಾಡಿಸಲು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡುವುದು ಅಗತ್ಯವಾಗಿದೆ ಎಂದು ಹುಮನಾಬಾದ್ ವಿವೇಕಾನಂದ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಆರ್.ಗಾದಾ ಅಭಿಪ್ರಾಯಪಟ್ಟರು.

ಕಲ್ಪತರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್‌ನ ಅಲ್ಲಮಪ್ರಭು ಪಿಯು ಕಾಲೇಜಿನಿಂದ ಸರಕಾರಿ ಸಮುದಾಯ ಭವನದಲ್ಲಿ ಸೋಮವಾರ ನಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸನ್ಮಾನ ಮತ್ತು ವ್ಯಕ್ತಿತ್ವ ವಿಕಸನ ಸಮಾರಂಭ ಉದ್ಘಾಟಿಸಿದ ಅವರು, ಶೈಕ್ಷಣಿಕ ಪ್ರಗತಿಯಲ್ಲಿ ದೇಶದ ಅಭಿವೃದ್ಧಿ ಅಡಗಿದೆ ಎಂದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರವಿ ಚಂದನಕೆರೆ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟ ಗುರಿಯೊಂದಿಗೆ ಸರಿಯಾದ ದಿಕ್ಕಿನಲ್ಲಿ ನಿರಂತರ ಶ್ರಮಪಟ್ಟರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.



ಬಸವಕಲ್ಯಾಣದ ಅಲ್ಲಮಪ್ರಭು ಪಿಯು ಕಾಲೇಜಿನಿಂದ ನಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸನ್ಮಾನ ಮತ್ತು ವ್ಯಕ್ತಿತ್ವವಿಕಸನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು, ಎಂ.ಆರ್.ಗಾದಾ, ರವಿ ಚಂದನಕೆರೆ, ಕ್ರಾಂತಿಕುಮಾರ ಪಂಚಾಳ, ಪ್ರಾ.ವಿ.ಎಸ್. ಅಯ್ಯಣ್ಣನವರ್ ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ವಿ.ಎಚ್.ಅಯ್ಯಣ್ಣನವರ್, ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ನಯ-ವಿನಯ, ಪರಸ್ಪರ ಪ್ರೀತಿ-ವಿಶ್ವಾಸ ಮತ್ತು ಸಹಕಾರ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ವಿದ್ಯಾರ್ಥಿಗಳು ಸಾಧಿಸಲು ಇರುವ ಅವಕಾಶಗಳ ಸದುಪಯೋಗ ಪಡೆದುಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಲು ಪ್ರಯತ್ನಿಸಬೇಕು ಎಂದರು.

ಕಲ್ಪತರು ಶಿಕ್ಷಣ ಸಂಸ್ಥೆ ಅಧ್ಯಕ್ಷ ಕ್ರಾಂತಿಕುಮಾರ ಪಂಚಾಳ, ಉಪನ್ಯಾಸಕ ಚಂದ್ರಕಾಂತ ಅಕ್ಕಣ್ಣ, ರವೀಂದ್ರ ಶಾಯಪ್ಪ, ಸಾಹಿತಿ ವೀರಣ್ಣ ಮಂಠಾಳಕರ್, ಮಚೇಂದ್ರ ಅಣಕಲ್, ವಿರಶೆಟ್ಟಿ ಪಾಟೀಲ್ ಉಪಸ್ಥಿತರಿದ್ದರು.

ಸ್ವಾತಿ ಭೋಸ್ಲೆ ಹಾಗೂ ಶ್ರುತಿ ಪಂಚಾಳ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಅಂಕ ಪಡೆದ ಅಲ್ಲಮಪ್ರಭು ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ದಿನಾಂಕ 29-9-2010 ಬುಧವಾರ ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner

# ಶ್ರಾವಣಮಾಸದ ವಿಶೇಷ ಪೂಜಾ-ಶ್ರೀಗಳಿಂದ ಆಶೀರ್ವಚನ.



[illegible] ತ್ರಿಪೂರಾಂತದಲ್ಲಿನ ಮರಿದೇವರ ಗುಡ್ಡದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಶ್ರಾವಣ ಮಾಸದ ನಿಮಿತ್ಯ ಜಗದ್ಗುರುರೇಣುಕಾ ಚಾರ್ಯರ ಲಿಂಗೋದ್ಭವ ಮೂರ್ತಿಗೆ ಹಾಗೂ ಕ್ಷೇತ್ರದ ದೇವರಾದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗದ್ದುಗೆಗೆ ಪ್ರತಿನಿತ್ಯ ಬೆಳಿಗ್ಗೆಬ್ರಹ್ಮೀಮೂರ್ತ ಸಮಯದಲ್ಲಿ ಮಹಾರುದ್ರಾಭಿಶೇಕ ಹಾಗೂ ಮಹಾ ಮಂಗಳಾರುತಿ,ಅಕ್ಕ ಮಹಾದೇವಿ ಭಜನಾ ಮಂಡಳಿಯೀಂದ ಭಜನೆ, ಹಾಗೂ ಶ್ರೀಮಠದ ಪಟ್ಟಾಧ್ಯಕ್ಷರಾದ ಪೂಜ್ಯ ಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶ್ರಾವಣ ಮಾಸದ ನಿಮಿತ್ಯ ಲೋಕ ಕಲ್ಯಾಣ ಕ್ಕಾಗಿಅನುಷ್ಟಾನ ಕೈಗೊಂಡಿದ್ದು, ಪ್ರತಿದಿನ ಭಕ್ತ ಮಮ್ಮೋಹ ದರ್ಶನ ಪಡೇದು ಪುನಿತರಾಗುತ್ತಿದ್ದಾರೆಂದು ಶ್ರೀಮಠದ ಕಾರ್ಯ ದರ್ಶಿಗಳು ಪ್ರಕಟ ಣೆಯಲ್ಲಿಘಳಿಸಿದ್ದಾರೆ.

ದಿನಾಂಕ 26-8-2010 [illegible] ದಿನ ಪತ್ರಿಕೆ

Scanned by CamScanner

ಲಿಂ. ಪುಟ್ಟರಾಜ ಗವಾಯಿಗಳಿಗೆ ಸಂಗೀತದ ಮೂಲಕ ಶ್ರದ್ಧಾಂಜಲಿ

# 'ನಮ್ಮ ದೇವರು.. ಪುಣ್ಯಾಶ್ರಮದ ಒಡೆಯರು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಇವರು ನಮ್ಮ ದೇವರು. ಪುಣ್ಯಾಶ್ರಮಪೀಠದೊಡೆಯರು' ಎಂದು ಪ್ರಸಿದ್ಧ ಸಂಗೀತಗಾರ ರೇವಣಸಿದ್ಧಯ್ಯ ಹಿರೇಮಠ ಭಾವುಕರಾಗಿ ಹಾಡುತ್ತಿದ್ದರೆ ಶ್ರೋತೃಗಳು ಮಂತ್ರಮುಗ್ಧರಾಗಿ ಕೇಳಿದರು.

ಇಲ್ಲಿನ ಬಿಕೆಡಿಬಿ ಸಭಾಂಗಣದಲ್ಲಿ ಸೋಮವಾರ ರಾತ್ರಿ ಪಂಚಾಕ್ಷರಿ ಗವಾಯಿ ಸಂಗೀತ ವಿದ್ಯಾಲಯ ಮತ್ತು ಸಂಗೀತ ಕಲಾ ತಂಡದಿಂದ ಲಿಂ.ಪುಟ್ಟರಾಜ ಗವಾಯಿ ಅವರಿಗೆ ಸಂಗೀತದ ಮೂಲಕ ಶ್ರದ್ಧಾಂಜಲಿ ಸಲ್ಲಿಸುವ ಅಪರೂಪದ ಕಾರ್ಯಕ್ರಮ ನಡೆಯಿತು. ಜಿಲ್ಲೆಯ ಅನೇಕ ಹಿರಿಯ ಮತ್ತು ಕಿರಿಯ ಸಂಗೀತಗಾರರು ಹಾಜರಿ ಹಾಕಿದರು.

ಹಣಮಂತಪ್ಪ ಚಿದ್ರಿ ಅವರ ರಾಗ ಬಿಹಾರಿಯಲ್ಲಿ ನುಡಿಸಿದ ಕೊಳಲು ವಾದನ, ರಾಜೇಂದ್ರಸಿಂಗ್ ಪವಾರ ಅವರ ಹಾರ್ಮೋನಿಯಂ ಸೋಲೋ ಎಂಥವರೂ ತಲೆಯಾಡಿಸುವಂತಿತ್ತು. ಜಗನ್ನಾಥ ನಾನಕೇರಿ ಅವರು 'ಜಗವ ಕಾಯೋ ಗುರುವೇ' ಎಂದು ಹಾಡುವ ಮೂಲಕ ಗುರುವಿಗೆ ಶ್ರದ್ಧಾಂಜಲಿ ಸಲ್ಲಿಸಿದರು. 'ಮಾನವ, ಮೂಳೆ ಮಾಂಸದ ತುಡಿಕೆ' 'ಉಳ್ಳವರು ಶಿವಾಲಯ ಮಾಡುವರು..''ಎನ್ನ ಚಿತ್ತವು ಹತ್ತಿಯ ಹಣ್ಣು ನೋಡಯ್ಯ' ಎನ್ನುವ ವಚನಗಳನ್ನು ರಾಗ ಚಂದ್ರಕಂಸದಲ್ಲಿ ಹೃದಯಸ್ಪರ್ಶಿಯಾಗಿ ಹಾಡಿದರು.



ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ಸೋಮವಾರ ರಾತ್ರಿ ಗಾನಯೋಗಿ ಲಿಂ.ಪುಟ್ಟರಾಜ ಗವಾಯಿ ಅವರಿಗೆ ಸಂಗೀತದ ಮೂಲಕ ಸಲ್ಲಿಸಲಾದ ಸ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ರಾಜಕುಮಾರ ಹೂಗಾರ ಹಾಡಿದರು.

ರಾಮುಲು ಗಾದಗಿ ಶಾಸ್ತ್ರೀಯ ಸಂಗೀತ ನುಡಿದರು. ಈ ಸಂದರ್ಭದಲ್ಲಿ ಅಭಂಗ, ಭಜನೆ ಪದ, ಭಾವಗೀತೆ, ಗೌಳಣಗಳನ್ನು ಸಹ ಹಾಡಲಾಯಿತು.

ಸಂಗೀತಗಾರರಾದ ರಾಜಕುಮಾರ ಹೂಗಾರ, ಬಸವರಾಜ ಗಬ್ಬೂರ್, ಕಿಶನಪುರಿ ಮಹಾರಾಜ, ಜಗನ್ನಾಥ ಬೇಂದ್ರೆ, ಶೇಖ ಹನ್ನುಮಿಯ್ಯಾ, ಶಿವಾಜಿ ಸಗರ, ರವೀಶ ಕೋಳಾರ್, ಧೂಳಪ್ಪ ಮುಡಬಿ ತಬಲಾ ವಾದಕರಾದ ಜನಾರ್ದನ ವಾಘಮಾರೆ, ರಾಮಚಂದ್ರ ಕಲ್ಲಹಿಪ್ಪರ್ಗಿ, ಪ್ರವೀಣ ದಾಂಡೇಕರ್, ಕೇಶವರಾವ ಸೂರ್ಯವಂಶಿ, ಕರಣಕುಮಾರ ಚಂದನ್ ಪಾಲ್ಗೊಂಡಿದ್ದರು.

ಹಾರಕೂಡ ಚನ್ನವೀರ ಶಿವಾಚಾರ್ಯರು ಉದ್ಘಾಟಿಸಿ ಮಾತನಾಡಿ ಲಿಂ.ಪುಟ್ಟರಾಜ ಗವಾಯಿಗಳ ಎರಡು ಕಣ್ಣುಗಳಿಗೆ ಏನೂ ಕಾಣದಿದ್ದರೂ ಸಂಗೀತ ಎಂಬ ಮೂರನೇ ಕಣ್ಣು ತೆರೆದಿತ್ತು ಎಂದರು. ಪಂಚಾಕ್ಷರಿ ಸೇವಾ ಸಂಘ ಬೀದರನ ಎಸ್.ವಿ. ಕಲ್ಮಠ, ಬಿಕೆಡಿಬಿ ಆಯುಕ್ತ ಕಾಶಿನಾಥ ಗೋಕಳೆ ಮಾತನಾಡಿದರು. ಅನುಭವ ಮಂಟಪ ಸಂಚಾಲಕ ವಿ.ಸಿದ್ಧರಾಮಣ್ಣ, ಪ್ರಭುಲಿಂಗಯ್ಯ ಟಂಕಸಾಲಿಮಠ, ಫಾದರ ಬೆಂಜಮಿನ್ ಡಿಸೋಜಾ ಇದ್ದರು. ರಾಜಕುಮಾರ ಮದಕಟ್ಟಿ ಸ್ವಾಗತಿಸಿದರು. ಶಾಂತಯ್ಯ ಮಠಪತಿ ನಿರೂಪಿಸಿದರು.

ದಿನಾಂಕ 29-9-2010 ಬುಧುವಾರ ಪ್ರಜಾವಾಣಿ ದಿನಪತ್ರಿಕೆ.

ತ್ರಿಪುರಾಂತ ಶ್ರೀಗಳ ಗುರು ಪಟ್ಟಾಭಿಷೇಕದ

# 5ನೇ ವರ್ಷದ ವರ್ಧಂತಿ

• ವಿಕ ಸುದ್ದಿಲೋಕ ಬಸವಕಲ್ಯಾಣ

ತ್ರಿಪುರಾಂತ ಪತ್ರಿ ವನದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗುರು ಪಟ್ಟಾಭಿಷೇಕದ 5ನೇ ವರ್ಧಂತಿ ಹಾಗೂ 25ನೇ ಜನ್ಮ ದಿನೋತ್ಸವ ಶ್ರೀಮಠದಲ್ಲಿ ಮಂಗಳವಾರ ಜರುಗಿತು.

ಸಮಾರಂಭ ಉದ್ಘಾಟಿಸಿದ ಬಿಕೆಡಿಬಿ ಆಯುಕ್ತ ಕಾಶೀನಾಥ ಗೋಖಲೆ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕಾರ್ಯಗಳನ್ನು ಶ್ಲಾಘಿಸಿದರು.

ಬಿಕೆಡಿಬಿಯಿಂದ ಶರಣರ ಸ್ಮಾರಕಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಮಂಡಳಿಯಿಂದ ಪಾರಂಪರಿಕ ಮಠಗಳ ಅಭಿವೃದ್ಧಿಪಡಿಸುವ ಯೋಜನೆ ಇದೆ. ಪುರಾತನವಾದ ಶ್ರೀಮಠದ ಅಭಿವೃದ್ಧಿ ಅಗಬೇಕು. ಧರ್ಮ ಕಾರ್ಯಗಳ ಶಿಕ್ಷಣ ಸಂಸ್ಥೆ ಮಠದಿಂದ ಆರಂಭಿಸಿದರೆ ಉತ್ತಮ ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಹಿರನಾಗಾಂವದ ಶ್ರೀ ಜೈಶಾಂತಲಿಂಗ ಮಹಾಸ್ವಾಮಿ, ಶ್ರೀಗಳ ವಯಸ್ಸು 25 ಆದರೂ 75 ವರ್ಷದ ಅನುಭವ ಹೊಂದಿದವರಾಗಿದ್ದಾರೆ. ಧರ್ಮದ ಪ್ರಚಾರದ ಜತೆಗೆ ಮಠದ ಪ್ರಗತಿ ಅವಶ್ಯಕವಾಗಿದ್ದು, ಇದಕ್ಕೆ ಭಕ್ತರ ಸಹಕಾರ ಮುಖ್ಯ ಎಂದರು.

ಭಕ್ತರಿಂದ ಸನ್ಮಾನ ಸ್ವೀಕರಿಸಿದ ಶ್ರೀ ರುದ್ರಮುನಿ ಶಿವಾಚಾರ್ಯರು, ಧರ್ಮ ಪ್ರಚಾರ-ಪ್ರಸಾರ ಮುಖ್ಯವಾಗಿದೆ. ಮಠದ ಪ್ರಗತಿ ಕಾರ್ಯಗಳಲ್ಲಿ ಭಕ್ತರ ಪಾತ್ರ ಮಹತ್ವದ್ದು ಎಂದರು.

ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿಗೆ ಆಯ್ಕೆಯಾಗಿರುವ ಮಲ್ಲಯ್ಯ ಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು. ಹಿರಿಯರಾದ ಶರಣಪ್ಪ ಬಿರಾದಾರ, ಡಾ.ಜಗದೀಶ ಪೂಜಾರಿ ಹಾಗೂ ಪ್ರಮುಖರು ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಮಂಗಳವಾರ ನಡೆದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗುರು ಪಟ್ಟಾಭಿಷೇಕದ 5ನೇ ವರ್ಧಂತಿ ಹಾಗೂ 25ನೇ ಜನ್ಮ ದಿನಾಚರಣೆಯಲ್ಲಿ ಶ್ರೀ ಜೈಶಾಂತವೀರ ಮಹಾಸ್ವಾಮಿ, ಕಾಶೀನಾಥ ಗೋಖಲೆ, ಮಲ್ಲಯ್ಯ ಸ್ವಾಮಿ, ಪ್ರಭುಲಿಂಗಯ್ಯ ಉಪಸ್ಥಿತರಿದ್ದರು.

ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದ ಡಾ.ಬಸವರಾಜ ಸ್ವಾಮಿ, ತ್ರಿಪುರಾಂತ ಕೆರೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಹೆಸರು ನಾಮಕರಣ ಮಾಡಬೇಕೆಂದು ಕೋರಿದರು.

ರಮೇಶ ರಾಜೋಳೆ ನಿರೂಪಿಸಿದರು. ಈ ಸಂದರ್ಭದಲ್ಲಿ ಬೇಲೂರದ ನಾಗಲಿಂಗೇಶ್ವರ ಭಜನಾ ಮಂಡಳಿಯಿಂದ ಕಾರ್ಯಕ್ರಮ ಜರುಗಿತು.

ದಿನಾಂಕ 29-9-2010 ಬುಧುವಾರ ವಿಜಯ ಕರ್ನಾಟಕ ದಿನಪತ್ರಿಕೆ

Scanned by CamScanner



ಬಸವಕಲ್ಯಾಣ ಇಲ್ಲಿನ ಮರಿದೇವರ ಗುಡ್ಡದ ಪೀಠಾಧಿಪತಿಗಳಾದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ 25ನೇ ಹುಟ್ಟು ಹಬ್ಬ ಹಾಗೂ ಪಟ್ಟಾಧಿಕಾರದ 5ನೇ ವರ್ಧಂತಿ ಮಹೋತ್ಸವ ಕಾರ್ಯಕ್ರಮ ಅತಂತ ವಿಜೃಂಭಣೆಯಿಂದ ಜರುಗಿತು.ಈ ಸಂದರ್ಭದಲ್ಲಿ ಬೇಲೂರಿನ ಶ್ರೀ ನಾಗಲಿಂಗೇಶ್ವರ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ ನಡೆಯಿತು.

ದಿನಾಂಕ 2-10-2010 ಶನಿವಾರ ಸಿಂಚೆವಾಣಿ ದಿನಪತ್ರಿಕೆ.

# ಮನೆಗೊಂದು ಸಂಗೀತ ಸಂಜೆ ದೇಶಿಯ ಸಂಸ್ಕೃತಿ ಮಕ್ಕಳಮನದಲ್ಲಿ ತುಂಬುವದು ಅವಶ್ಯಕ–ಶೀಲವಂತ

ಬಸವಕಲ್ಯಾಣ ನ.8.ದೇಶಿ ಸಂಸ್ಕೃತಿ ನಮ್ಮ ಮಕ್ಕಳಲ್ಲಿ ತುಂಬುವುದು ಅತಿ ಅವಶ್ಯಕ ವಾಗಿದ್ದು.ಇಂದಿನ ಮಕ್ಕಳು ವಿದೇಶಿ ಸಂಸ್ಕೃತಿಗೆ ಮಾರುಹೋಗುತ್ತಿದ್ದಾರೆ ಎಂದು ಅಕ್ಕಮಹಾದೇವಿ ಮಹಿಳಾಮಹಾವಿದ್ಯಾಲಯ ಪ್ರಾಚಾರ್ಯರಾದ ಸೂರ್ಯಕಾಂತ ಶಿಲವಂತ ಕಳವಳವೆಕ್ತಪಡಿಸಿದರು. ಅವರು ಗಂಗಾಕಲೋನಿಯ ಶಿವಶರಣಪ್ಪ ಸಜ್ಜನ ಶೆಟ್ಟಿ ಯವರ ನಿವಾಸದಲ್ಲಿ ಕುಮಾರಿ ಕಿರ್ತಿಮಾಲಾಳ ಹುಟ್ಟು ಹಬ್ಬದ ನಿಮಿತ್ಯ ಹಮ್ಮಿಕೋಂಡ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.ಇನ್ನೋರ್ವ ಅತಿಥಿ ಪತ್ರಕರ್ತ ಕಲ್ಯಾಣರಾವ ಯರಬಾಗ ಮಾತನಾಡಿ ಪ್ರತಿ ಮನೆ ಮನೆಯಲ್ಲಿ ಸಂಗೀತ ಕಾರ್ಯಕ್ರಮ ನಡೆಸುವದರಿಂದ ಮಕ್ಕಳಲ್ಲಿ ಸಂಗೀತದ ಅಭಿರುಚಿ ಹೆಚ್ಚುತ್ತದೆ.ಅಲ್ಲದೆ ಎಲ್ಲರಿಗೂ ನೇಮ್ಮದಿ ನಿಡುವ ಶಕ್ತಿ ಸಂಗಿತಕ್ಕದೆ ಎಂದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ತಾಲುಕಾ ಕನ್ನಡ ಸಾಹಿತ್ಯ



ಪರಿಷತ್ತಿನ ಅಧ್ಯಕ್ಷ ಪ್ರಭುಲಿಂಗಯ್ಯಾ ಟಂಕಸಾಲಿಮಠ ಮಾತನಾಡಿ ಹಲವಾರು ರೋಗಗಳನ್ನು ನಿವಾರಿಸುವ ಶಕ್ತಿ ಸಂಗೀತಕ್ಕಿದೆ ಹೃದಯ ರೋಗದಂತಹ ಕಾಯಿಲೆ ಸಂಗೀತದಿಂದ ನಿವಾರಿಸಬಹುದೆಂದು ಶಂಶೋದನೆಯಿಂದ ಸಾಬಿತಾಗಿದೆ ಎಂದರು. ಸಾನಿಧ್ಯ ವಹಿಸಿದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮಣಿ ಶಿವಾಚಾರ್ಯರು ಆಶಿರ್ವಚನ ನಿಡಿದರು, ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಳ ಕಲಾ ತಂಡದ ಅಧ್ಯಕ್ಷ ರಾಜಕುಮಾರ ಹೂಗಾರ ವಚನ ಗಾಂಯುನ ನಡೆಸಿಕೋಟ್ಟರು.ತಬಲಾ ಸಾಥ ಪ್ರವೀಣ ದಾಂಡೆಕರ ನಿಡಿದರು ಸಿದ್ದಲಿಂಗ ನೇಟೆ ಭಕ್ತಿಗೀತೆ ಹಾಡಿ ನೆರೆದ ಜನರಿಗೆ ಸಂಗೀತದ ರಸದೌತಣ ನಿಡಿದರು.

ಹಿರಿಯರಾದ ಸಂಗಪ್ಪಾ ಸಜ್ಜನಶೇಟ್ಟ ಮಹಾಂತೇಶ ಸಜ್ಜನಶೆಟ್ಟಿ,ಉಪಸ್ಥಿತರಿದ್ದರು.ನಿರೂಪಣೆ ಶಾಂತಯ್ಯಾ ಮಠಪತಿ.ಸ್ವಾಗತ ಶಿಧರ ಪಾಟೀಲ ನೆರವೆರಿಸಿದರು.

ದಿನಾಂಕ 9-11-2010 ಮಂಗಳವಾರ ಹಸಿರು ಕ್ರಾಂತಿ ದಿನಪತ್ರಿಕೆ.

Scanned by CamScanner

## ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ೫ನೇ ವರ್ದಂತಿ ಮಹೋತ್ಸವ,

# ಮರಿದೇವರ ಗುಡ್ಡದ ಮಠ ಅಭಿವೃದ್ಧಿಗಾಗಿ ಬಿಕೆಡಿಬಿ ವ್ಯಾಪ್ತಿಗೆ–ಗೋಖಲೆ




ತ್ರಿಪುರಾಂತದ ಮರಿದೇವರ ಗುಡ್ಡದ [illegible] ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ೨೫ ಹುಟ್ಟು ಹಬ್ಬ,೫ನೇ ವರ್ದಂತಿ [illegible] ಕಾಶಿನಾಥ ಗೋಖಲೆ,ವೇದಿಕೆಯಲ್ಲಿ ಶರಣಪ್ಪ ಬಿ[illegible] ಶ್ರೀಗಳು [illegible] ಹಿರೇಮಠ,ಟಂಕಸಾಲಿಮಠ ಉಪಸ್ಥಿತರಿದ್ದರು

ಬಸವಕಲ್ಯಾಣ ಸೆ ೨೮. ತ್ರಿಪುರಾಂತ ಕೆರೆಯ ಪಕ್ಕದ [illegible] ಪರಿಸರದಲ್ಲಿರುವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮಠವು ಅಭಿವೃದ್ಧಿ ಪಡಿಸಲು ಬಿಕೆಡಿಬಿ ವ್ಯಾಪ್ತಿಗೆ ತೆಗೆದು ಕೋಳುವುದಾಗಿ ಆಯುಕ್ತರಾದ ಕಾಶಿನಾಥ ಗೋಖಲೆ ನುಡಿದರು, ಅವರು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು,ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬದ ಬೆಳ್ಳಿ ಹಬ್ಬ,ಹಾಗೂ ೫ನೇ ವರ್ದಂತಿ ಮಹೋತ್ಸವ ಉದ್ಘಾಟಿಸಿ ಮಾತನಾಡಿ [illegible] ಶ್ರೀಗಳ ಅಭಿವೃದ್ಧಿ [illegible]ರದಿಂದ ಸಾಗಿದ್ದು ಟ್ರಸ್ಟ್ ನಿರ್ದೇಶಕರು ಸರಕಾ ರಕ್ಕೆ ವಿನಂತಿಸಿದರೆ ಶ್ರೀಮಠವು ಪ್ರಾಧಿಕಾರದಿಂದ ಅಭಿವೃಧಿ ಪಡಿಸಲಾಗುವುದೆಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಟಂಕಸಾಲಿ ಮಠ ಶ್ರೀಗಳ ಆಧ್ಯಾತ್ಮಿಕ ಚಿಂತನೆ ಸಾಮಾಜಿಕ ಕಾಳಜಿ ಉಳ್ಳವರಾಗಿದ್ದು,ಮಠದ ಸದ್ಭಕ್ತರ ಅಭಿವೃದ್ಧಿಯಲ್ಲಿ ಶ್ರೀಗಳು ಆನಂದ ಕಂಡು ಕೊಳ್ಳುವರಾಗಿದ್ದಾರೆಂದರು. ಬ.ದೇ. ಪಂಚ ಕಮಿಟಿಯ ನಿರ್ದೇಶಕರಾದ ಮಲ್ಲಯ್ಯಾ ಸ್ವಾಮಿ ಮಾತನಾಡಿ ಮಠದ ಅಭಿವೃಧಿಗಾಗಿ ಸದ್ಭಕ್ತರೆಲ್ಲಾ ಕೈಜೋಡಿಸಬೇಕು, ಶ್ರೀಗಳ ಅಖಂಡ ಆಶಿರ್ವಾದ ನಮ್ಮ ಮೇಲಿರಲಿ ಎಂದರು. ಡಾ.ಬಸವರಾಜಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ವಾಗಿ ಮಾತನಾಡಿದರು. ವೇದಿಕೆಯಲ್ಲಿ ಶರಣಪ್ಪ ಬಿರಾದಾರ, ಡಾ.ಜಗದೀಶ ಪೂಜಾರಿ, ಸಂಜುಕುಮಾರ ಸೂಗರೆ,ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ರಾಜೋಳೆ, ಮಡಿವಾಳಪ್ಪಾ ಹುಣಸಗೇರಾ, ಜಗನ್ನಾಥ ಬಿರಾದಾರ, ಗೋವಿಂದ ಚಾಮಲ್ಲೇ,ಸಂಗಮೇಶ ಮುಚಳಂಬೆ ಪರಿವಾರದವರು ಪಾಲ್ಗೊಂಡಿದ್ದರು.ನಿರೂಪಣೆ ರಮೇಶ ರಾಜೋಳೆನಡೆಸಿ ಕೊಟ್ಟರು, ಶ್ರೀಮಠ,ಹಾಗೂ ಬಾಬು ಬಿರಾದಾರ ಅವರಿಂದ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.ಇದೇ ಸಂದರ್ಭದಲ್ಲಿ ಬೇಲುರಿನ ನಾಗಲಿಂಗೇಶ್ವರ ಭಜನಾಮಂಡಳಿ ವತಿಯಿಂದ ಭಜನೆ ನೇರೆದ ಜನಸಮೂಹಕ್ಕೆ ಭಕ್ತಿ ಸಾಗರದಲ್ಲಿ ಮುಳುಗಿಸಿದ್ದರು.

ದಿನಾಂಕ 29-9-2010 ಬುಧುವಾರ ಉತ್ತರಕರ್ನಾಟಕ ದಿನಪತ್ರಿಕೆ

Scanned by CamScanner

# ಚಿತ್ರಕಲೆ ಭಾವನೆಗಳ ಅಭಿವ್ಯಕ್ತಿ: ಖಂಡೇರಾವ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಚಿತ್ರಕಲೆ ಭಾವನೆಗಳ ಅಭಿವ್ಯಕ್ತಿಯಾಗಿದೆ ಎಂದು ಹಿರಿಯ ಕಲಾವಿದ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಜಿ.ಎಸ್.ಖಂಡೇರಾವ ಅಭಿಪ್ರಾಯಪಟ್ಟರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ಸಂಜೆ ನಡೆದ 15ನೇ ಕಲಾ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಈಚೆಗೆ ಕರಕುಶಲ ವಸ್ತುಗಳನ್ನು ತಯಾರಿಸುವವರು ಸಹ ಚಿತ್ರಕಲಾವಿದರು ಎಂದು ಹೇಳಿಕೊಳ್ಳುತ್ತಿರುವುದು ಸರಿಯಲ್ಲ ಎಂದರು. ಕಲೆ ಸಮಾಜದ ಒಳಿತಿಗಾಗಿ ಇರಬೇಕು. ಚಿತ್ರಕಲಾವಿದ ದಿನನಿತ್ಯದ ಆಗುಹೋಗುಗಳಿಗೆ ಸದಾ ಸ್ಪಂದಿಸುತ್ತಿರಬೇಕು ಎಂದರು.

ಕಲಾವಿದ ಬಸವರಾಜ ಜಾನೆ ಮಾತನಾಡಿ ಬಣ್ಣ, ಗೆರೆ, ನೆರಳು ಬೆಳಕಿನ ಉತ್ತಮ ಸಂಯೋಜನೆ ಕಲಾಕೃತಿಗೆ ಬೆಲೆ ತಂದುಕೊಡುತ್ತದೆ ಎಂದರು.

ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಕಲೆ ಹಾಗೂ ಕಲಾವಿದರನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸಮಾಜದ ಮೇಲಿದೆ ಎಂದರು. ಎಂ.ಎಂ.ತಂಬಾಕೆ, ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿದರು.

ಈ ಸಂದರ್ಭದಲ್ಲಿ ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಲ ಹಾಗೂ ಲಂಬಾಣಿ ಭಾಷೆ ಕುರಿತು ಪಿಎಚ್‌ಡಿ ಪಡೆದ ಡಾ.ಸಂತೋಷ ಪವಾರ ಗೌರ್ ಇವರಿಗೆ 'ಸಾಹಿತ್ಯ ರತ್ನ'ಪ್ರಶಸ್ತಿ ಕೊಟ್ಟು ಸನ್ಮಾನಿಸಲಾಯಿತು. ಸುಮತಿ ಮೇತ್ರೆಗೆ ವರ್ಷದ ಆದರ್ಶ ವಿದ್ಯಾರ್ಥಿ ಎಂದು ಆಯ್ಕೆ ಮಾಡಿ ಬಹುಮಾನ ವಿತರಿಸಲಾಯಿತು.

ಅಕ್ಕಮಹಾದೇವಿ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಬಸವರಾಜ ವರಕಾಲೆ, ರೇವಣಸಿದ್ಧ ಡೊಂಗರೆ, ನಾಗಪ್ಪ ನಿಣ್ಣೆ, ಚಂದ್ರಕಾಂತ ಸ್ವಾಮಿ, ಪಾರ್ವತಿ ಟಂಕಸಾಲಿಮಠ ಪಾಲ್ಗೊಂಡಿದ್ದರು. ರಮೇಶ ರಾಜೋಳೆ ನಿರೂಪಿಸಿದರು.




ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ಸಂಜೆ ನಡೆದ ಕಲಾಮಹೋತ್ಸವದಲ್ಲಿ ಹಿರಿಯ ಚಿತ್ರಕಲಾವಿದ ಜಿ.ಎಸ್.ಖಂಡೇರಾವ, ಅಭಿನವ ರುದ್ರಮುನಿ ಶಿವಾಚಾರ್ಯರು, ಎಂ.ಎಂ.ತಂಬಾಕೆ, ಪ್ರಭುಲಿಂಗಯ್ಯ ಪಾಲ್ಗೊಂಡಿದ್ದರು.

ದಿನಾಂಕ 17-3-2009 ಮಂಗಳವಾರ ಪ್ರಜಾವಾಣಿ ದಿನಪತ್ರಿಕೆ.

# ಕುಂಚದಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿ ಬರಲಿ: ಡಾ.ಖಂಡೆರಾವ

ಬಸವಕಲ್ಯಾಣ, 16- ನಿಜವಾದ ಪ್ರತಿಭೆಯುಳ್ಳ ಚಿತ್ರಕಲಾವಿದನಲ್ಲಿ ಸಮಾಜಿಕ ಪ್ರಜ್ಞೆಯ ದಿಟ್ಟ ಪ್ರತಿಭೆ ಅವನ ಕುಂಚದಲ್ಲಿ ಮೂಡಿ ನಿಂತಾಗ ಮಾತ್ರ ಕಲಾವಿದನಿಗೂ ಗೌರವ, ಆತನ ಕಲಾ ಪ್ರತಿಭೆಗೂ ಗೌರವ ಎಂದು ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷ ಡಾ. ಜೆ.ಎಸ್. ಖಂಡೆರಾವ ಹೇಳಿದರು.

ನಗರದ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಕಲಾ ಮಹೊತ್ಸವದ ಅತಿಥಿಗಳಾಗಿ ಮಾತನಾಡುತ್ತ, ಚಿತ್ರಕಲಾವಿದರಿಗೆ ಅವರದೇ ಆದ ಸಾಮಾಜಿಕ ಜವಾಬ್ದಾರಿಗಳಿವೆ. ಅದರಂತೆ ಬದುಕುವದು ಅವರ ಕಲಾ ಧರ್ಮವಾಗಬೇಕೆಂದು ಕಾರ್ಯಕ್ರಮ ಸಾನಿಧ್ಯವಹಿಸಿದ ತಿಪ್ರಾಂತಿ ಮರಿದೇವರ ಗುಡ್ಡದ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಲಾವಂತಿಕೆಯಲ್ಲಿ ಧರ್ಮ ಪರಂಪರೆ ಬೆಳೆಸಿಕೊಳ್ಳಬೇಕೆಂದರು. ಕಾರ್ಯಕ್ರಮದಲ್ಲಿ ಪ್ರೊ.ಎಂ.ಎಂ.ತಂಬಾಕೆ, ಡಾ. ಗವಿಸಿದ್ದಪ್ಪಾ ಪಾಟೀಲ, ಡಾ.ಸಂತೋಷ ಪವಾರ ಅವರನ್ನು ಸತ್ಕರಿಸಲಾಯಿತು. ಸೂರ್ಯಕಾಂತ ಶೀಲವಂತ ಬಸವರಾಜು ಮರ್ಕಾಲೆ, ಅಶೋಕ ಎಂ.ಬಿ., ರೇವಣಸಿದ್ದ ಡೊಂಗರಕೆ ಮುಂತಾದವರು ಪಾಲ್ಗೊಂಡಿದ್ದರು. ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಚಾರ್ಯ ಪ್ರಭುಲಿಂಗ ಟೆಂಕಸಾಲಮಠ ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು. ನಾಗಪ್ಪಾ ನಿಣ್ಣ ವಂದಿಸಿದರು. ಕಲಾನಿಕೇತನದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕರಿಸಲಾಯಿತು.

ದಿನಾಂಕ 17-3-2009 ಮಂಗಳವಾರ
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ.

# ಕಲೆಗೆ ಭಾವನೆ ಅಭಿವ್ಯಕ್ತಗೊಳಿಸುವ ಶಕ್ತಿಯಿದೆ: ಖಂಡೇರಾವ್

ಬಸವಕಲ್ಯಾಣ: ಕಲೆಗೆ ಭಾವನೆ ಅಭಿವ್ಯಕ್ತಗೊಳಿಸುವ ಮತ್ತು ಹೊಸ ವಿಷಯಗಳನ್ನು ಸೃಷ್ಟಿಸುವ ಶಕ್ತಿ ಇದೆ ಎಂದು ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ. ಜೆ.ಎಸ್. ಖಂಡೇರಾವ್ ಅಭಿಪ್ರಾಯಪಟ್ಟರು.

ಅವರು ನಗರದ ಕಲಾ ನಿಕೇತನದಲ್ಲಿ ಜೈ ಕರ್ನಾಟಕ ಶಿಕ್ಷಣ ಸಂಸ್ಥೆ ಶ್ರೀ ಬಸವೇಶ್ವರ ಚಿತ್ರಕಲಾ ಕಾಲೇಜಿನ ಕಲಾ ಮಹೋತ್ಸವ ಉದ್ಘಾಟಿಸಿ ಮಾತನಾಡಿ, ಕಲೆ ಸಂಸ್ಕೃತಿಯ ಆತ್ಮ. ಸೃಜನಶೀಲತೆಯಲ್ಲಿ ಕಲಾವಿದರ ಯೋಗ್ಯತೆ ಅಡಗಿದೆ ಎಂದರು. ಕಲಾವಿದನಲ್ಲಿ ಸಮಾಜ ಪರ ಕಳಕಳಿ ಅಗತ್ಯ. ಸಮಕಾಲೀನ ಸ್ಫೂರ್ತಿಯನ್ನು ಕಲೆಯಲ್ಲಿ ಬಿಂಬಿಸುವವನೇ ನಿಜವಾದ ಕಲಾವಿದ. ಈ ನಿಟ್ಟಿನಲ್ಲಿ ಯುವ ಕಲಾವಿದರು ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಎಂ ತಂಬಾಕೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆ ಮತ್ತು ಕಲಾವಿದರನ್ನು ಬೆಳೆಸಿ ಪ್ರೋತ್ಸಾಹಿಸುವ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತ್ರಿಪುರಾಂತದ ಪೂಜ್ಯ ಅಭಿನವ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರೆ, ರಮೇಶ ರಾಜೋಳೆ ನಿರೂಪಿಸಿ, ನಾಗಪ್ಪ ನಿಣ್ಣೆ ವಂದಿಸಿದರು.

ಕಾರ್ಯಕ್ರಮದಲ್ಲಿ ಬಸವರಾಜ ಜಾನೆ, ದೇವಿಂದ್ರಪ್ಪ ತೋಟನಹಳ್ಳಿ, ಪ್ರೊ. ಸೂರ್ಯಕಾಂತ ಶೀಲವಂತ, ಬಸವರಾಜ ವರಕಾಲೆ ಮತ್ತು ಜವರೇಗೌಡ ಉಪಸ್ಥಿತರಿದ್ದರು. ಕಲಾ ಮಹೋತ್ಸವ ನಿಮಿತ್ತ ಕಾಲೇಜಿನಲ್ಲಿ ಎರಡು ದಿನಗಳ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿತ್ತು.

ದಿನಾಂಕ 17-3-2009 ಮಂಗಳವಾರ ಕನ್ನಡ ಪ್ರಭಾ ದಿನಪತ್ರಿಕೆ.

Scanned by CamScanner



ದೀಪಾವಳಿ ನಿಮಿತ್ತ ಬಸವಕಲ್ಯಾಣದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠ (ಮರಿದೇವರ ಗುಡ್ಡ)ದಲ್ಲಿ ತ್ರಿಪುರಾಂತ ಅಕ್ಕಮಹಾದೇವಿ ಭಜನಾ ಮಂಡಳದಿಂದ ಭಾನುವಾರ ಸಂಜೆ ನಡೆದ ದೀಪೋತ್ಸವ ಗಮನ ಸೆಳೆಯಿತು.

ದಿನಾಂಕ 8-11-2010 ಸೋಮವಾರ ವಿಜಯ ಕರ್ನಾಟಕ



ಬಸವಕಲ್ಯಾಣದ ಶ್ರೀ ಜಗದ್ಗುರು ಘನಲಿಂಗ ರುದ್ರಮಣಿ ಶಿವಾಚಾರ್ಯ ಗವಿ ಮಠ (ಮರಿದೇವರ ಗುಡ್ಡ) ದಲ್ಲಿ ತ್ರೀಪುರಾಂತದ ಅಕ್ಕ ಮಹಾದೇವಿ ಭಜನಾ ಮಂಡಳದಿಂದ ನಡೆದ ದೀಪೋತ್ಸವ ಗಮನ ಸೆಳೆಯಿತು. ಮಠದ ಪೂಜ್ಯರಾದ ಶ್ರೀ. ಷ.ಭ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಭಕ್ತರನ್ನು ಕಾಣಬಹುದು.

ದಿನಾಂಕ 12-11-2010 ಶುಕ್ರವಾರ ಪ್ರಜಾವಾಣಿ

Scanned by CamScanner

ಪಂ.ಪುಟ್ಟರಾಜ ಗವಾಗಳಿಗೆ ಸಂಗೀತದ ನುಡಿನಮನ,

# ಗವಾಯಿಗಳಿಗೆ ಸಾಹಿತ್ಯ ,ಸಂಗೀತ ,ಅಧ್ಯಾತ್ಮದ ಕಣ್ಣುಗಳಿದ್ದವು-ಹಾರಕೂಡಶ್ರೀಗಳು



ಬಸವಕಲ್ಯಾಣ ಸೆ.30: ಅಂಧ,ಅನಾಥರಬಾಳಿನ ಜ್ಯೋತಿಯಾಗಿ ಬಾಳಿ ಬೆಳಗಿದ ಗಾನ'ಯೋಗಿ ಪಂ.ಪುಟ್ಟರಾಜ ಗವಾಯಿ ಗಳಿಗೆ ಸಾಹಿತ್ಯ ಸಂಗೀತ ಆದ್ಯಾತ್ಮದ ಮೂರು ಕಣ್ಣುಗಳಿದ್ದವು ಎಂದು ಸುಕ್ಷೇತ್ರ ಹಾರಕೂಡದ ಪೂಜ್ಯಶ್ರೀ ಚನ್ನವೀರ ಶಿವಾಚಾರ್ಯರು ನುಡಿದರು ಅವರು, ನಗರದ ಬಿಕೆಡಿಬಿ ಗ್ರಂಥಾಲಯದಲ್ಲಿ ಎರ್ಪಡಿಸಿದ ಪಂ.ಪುಟ್ಟರಾಜ ಗವಾಯಿಗಳ ನುಡಿನಮನ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿ ದರು.ತ್ರಿಪೂರಾಂತದ ಪೂಜ್ಯಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತ್ರತ್ವ ವಹಿಸಿ ಮಾತನಾಡಿದರು, ಕಾರ್ಯಕ್ರಮದ ಅಧ್ಯಕ್ಷತೆ ಬಿಕೆಡಿಬಿ ಆಯುಕ್ತರಾದ ಕಾಶಿನಾಥ ಗೋಖಲೆ ವಹಿಸಿ ದ್ದರು,ಮುಖ್ಯಅತಿಥಿಗಳಾಗಿ ಗಾನಯೋಗಿ ಪಂಚಾಕ್ಷರಿ ಸೇವಾ ಸಂಘದ ಅಧ್ಯಕ್ಷರಾದ ಎಸ್.ವಿ.ಕಲ್ಮಠ, ಮಾತನಾಡಿದರು ತಾಲೂಕಾ ಕ.ಸಾ.ಪ.ಅಧ್ಯಕ್ಷರಾದ ಪ್ರಭುಲಿಂಗಯ್ಯಾ ಟಂಕಸಾಲಿಮಠ, ಸತ್ಯಾನುಭವ ಆಶ್ರಮದ ನಿರ್ದೇಶಕರಾದ ಫಾದರ ಬೇಂಜಮೀನ್ ಡಿಸೋಜಾ,ಸಂಗೀತಕಲಾವಿದ ಹನುಮೀಂಯಾ, ವೇದಿಕೆಯಲಿ ದ್ದರು.ಕಲಾವಿದರಾದ ರೇವಣಸಿದ್ದಯ್ಯಾ ಮಠಪತಿಜನಪದಗೀತೆ ,ರಾಜೇಂದ್ರ ಪವಾರ ಹಾರ್ಮೂನಿಯಂ ಸೋಲೋ,ಕೋಳಲು ಎ.ಎಸ್.ಐ.ಹಣಮಂತಪ್ಪ ಚಿದ್ರಿ ಹಿಂದುಸ್ಥಾನಿಗಾಯನ ರಾಮಲೂ ಗಾದಗಿ,ಬಸವರಾಜ ಗಬ್ಬೂರ ,ಅಲ್ಲದೆ ಜಿಲ್ಲೆಯ ಎಲ್ಲಾ ಕಲಾವಿದರು ತಮ್ಮ ಸಂಗೀತ ಸೇವೆ ನಡೆಸಿಕೋಟ್ಟರು.

ಸ್ವಾಗತ ರಾಜಕುಮಾರ ಮದಕಟ್ಟಿ,ಸಂಚಾಲನೆ ಶಾಂತಯ್ಯಾ ಮಠಪತಿ,ವಂದನಾರ್ಪಣೆ ಶಶಿಧರ ಪಾಟೀಲ್ ನೇರವೇರಿಸಿದರು. ಪಂ.ಪುಟ್ಟರಾಜ ಗವಾಗಳ ಕಲಾತಂಡದಿಂದ ವಚನ ಗಾಯನ ,ಜನಪದಗೀತೆ,ಭಕ್ತಿಗೀತೆ ಹಾಡಿ ನೇರೆದ ಜನಸ್ತೋಮಕ್ಕೆ ಸಂಗೀತದ ರಸದೌತಣ ನೀಡಿದರು. ಪ್ರಾಚಾರ್ಯರಾದ ಸೂರ್ಯಕಾಂತ ಶಿಲವಂತ, ವಕಿಲರಾದ ಎಂ ಆರ್. ಕಾಟೆ, ಬಸವರಾಜ ನಂದಿ, ರೇವಣಸಿದ್ದಯ್ಯಾ ಮಠಪತಿ,ಹಾವಯ್ಯಾ ಸ್ವಾಮಿ,ಪಂಡಿತ ಬಸವರಾಜ ವೈದ್ದರು, ಜನಾರ್ಧನ ವಾಘ್ಮೋರೆ,ಪ್ರವೀಣ ದಾಂಡೆಕರ್, ಸಿದ್ದಲಿಂಗ ನೇಟೆ,ಬಸವರಾಜ ರಗಟೆ, ಪಂಚಾಕ್ಷರಿ ಜಿ ಹಿರೇಮಠ, ಡಾ.ಬಸವರಾಜ ಸ್ವಾಮಿ,ಉಪಸ್ಥಿತರಿ ದ್ದರು.

ದಿನಾಂಕ 1-10-10 ಶುಕ್ರವಾರ ಹಸಿರು ಕ್ರಾಂತಿ ದಿನಪತ್ರಿಕೆ.

Scanned by CamScanner

# 'ಪಾದಯಾತ್ರೆ ಸದ್ಭಾವನೆ ಮೂಡಿಸುತ್ತದೆ'

## ಸದ್ಭಾವನಾ ಯಾತ್ರೆ 26ರಿಂದ

ಬಸವತತ್ತ್ವ ಪ್ರಚಾರ- ಪ್ರಸಾರಕ್ಕಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಜನವರಿ 26ರಿಂದ ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆ ನಡೆಸುವುದಾಗಿ ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿ ಪ್ರಕಟಿಸಿದರು. ದೇಶಾದ್ಯಂತ ಸಂಚರಿಸಿ ಬಸವತತ್ತ್ವ ಸಂದೇಶ ಎಲ್ಲ ಜನರಿಗೆ ಮುಟ್ಟಿಸಬೇಕೆಂಬ ಉದ್ದೇಶ ಹೊಂದಲಾಗಿದೆ. ಪೋಸ್ಟ್‌ಮನ್ ಮಾದರಿಯಲ್ಲಿ ಈ ಪ್ರಯತ್ನವನ್ನು ಸಾಧ್ಯವಾದ ಮಟ್ಟಿಗೆ ಮಾಡುವುದಾಗಿ ಹೇಳಿದರು. ಜಗತ್ತಿಗೆ ಮಾರ್ಗದರ್ಶನ ಮಾಡಿದ ಪವಿತ್ರ ಕ್ಷೇತ್ರ ಬಸವಕಲ್ಯಾಣ. ಈ ಕ್ಷೇತ್ರದಿಂದ 26ರಿಂದ ಆರಂಭಿಸುತ್ತಿರುವ ಪಾದಯಾತ್ರೆ ಸುಮಾರು ಒಂಬತ್ತು ತಿಂಗಳು ನಡೆಯುವ ಸಾಧ್ಯತೆ ಇದೆ ಎಂದರು.

* ವಿಕ ಸುದ್ದಿಲೋಕ ಬಸವಕಲ್ಯಾಣ

ಪಾದಯಾತ್ರೆಗಳು ಸದ್ಭಾವನೆ ಮೂಡಿಸುತ್ತವೆ ಎಂದು ಧಾರವಾಡದ ಶ್ರೀ ಚನ್ನಬಸವ ಸ್ವಾಮೀಜಿ ನುಡಿದರು.

ಹುಲಸೂರಿನಲ್ಲಿ ಜನವರಿ 15ರಿಂದ ನಡೆಯುವ ಶ್ರೀ ಜಗದ್ಗುರು ಬಸವಕುಮಾರ ಶಿವಯೋಗಿಗಳ ಸ್ಮರಣೋತ್ಸವ ನಿಮಿತ್ತ ಶ್ರೀ ಶಿವಾನಂದ ಮಹಾಸ್ವಾಮಿ ನೇತೃತ್ವದ ಬಸವಜ್ಯೋತಿ ರಥ ಸದ್ಭಾವನಾ ಪಾದಯಾತ್ರೆಗೆ ಶನಿವಾರ ಚಾಲನೆ ನೀಡಿದ ವೇಳೆ ಶ್ರೀಗಳು ಮಾತನಾಡಿದರು.

ಪಾದಯಾತ್ರೆಯಿಂದ ಗ್ರಾಮಗಳು ಪವಿತ್ರವಾಗುತ್ತವೆ. ಶರಣರ ವಚನಗಳಿಂದ ಮನಸುಗಳು ಸ್ವಚ್ಛಗೊಳ್ಳುತ್ತವೆ. ದುರ್ಭಾವನೆ, ದುಶ್ಚಟ ಓಡಿಸಿ, ಸದ್ಭಾವನೆ ಮೂಡಿಸುವ ಉದ್ದೇಶದಿಂದ ಶ್ರೀಗಳು ಪಾದಯಾತ್ರೆ ಹಮ್ಮಿಕೊಂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಧರ್ಮದ ಮಾರ್ಗದಿಂದ ಬದುಕಿನಲ್ಲಿ ನೆಮ್ಮದಿ ಸಾಧ್ಯ ಎಂದರು.

ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿ ಸದಸ್ಯ ಬಾಬು ಹೊನ್ನಾನಾಯಕ ಮಾತನಾಡಿ, ಬಸವತತ್ತ್ವ ಪ್ರಚಾರ-ಪ್ರಸಾರದಲ್ಲಿ ತೊಡಗಿರುವ ಹುಲಸೂರ ಶ್ರೀಗಳು, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಶ್ರೀ ಶಿವಾನಂದ ಮಹಾಸ್ವಾಮಿ, ಪಾದಯಾತ್ರೆಯ ಉದ್ದೇಶ ತಿಳಿಸಿದರು. ಸಾಯಗಾಂವದ ಶ್ರೀ ಶಿವಾನಂದ ದೇವರು, ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ಅನೀಲಕುಮಾರ ರಗಟೆ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಬಾಬುರಾವ ಪಟ್ನೆ, ಪ್ರಮುಖರಾದ ಜಗನ್ನಾಥ ಚಿಲ್ಲಾಬಟ್ಟೆ, ಸುಧೀರ ಕಾಡಾದೆ, ಬಾಬುರಾವ ಗೌಡಗಾಂವೆ ಉಪಸ್ಥಿತರಿದ್ದರು. ವೈದ್ಯ ಬಸವರಾಜ ಪಂಡಿತ ಸ್ವಾಗತಿಸಿ ನಿರೂಪಿಸಿದರೆ, ಕಾಶೀನಾಥ ಕಾಶಪ್ಪನವರ ವಂದಿಸಿದರು.



ಬಸವಕಲ್ಯಾಣದಿಂದ ಶನಿವಾರ ಆರಂಭವಾದ ಬಸವಜ್ಯೋತಿ ರಥ ಸದ್ಭಾವನಾ ಪಾದಯಾತ್ರೆಯಲ್ಲಿ ಶ್ರೀ ಶಿವಾನಂದ ಮಹಾಸ್ವಾಮಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶಿವಾನಂದ ದೇವರು ಭಾಗವಹಿಸಿದ್ದರು.

ದಿನಾಂಕ 2-1-2011 ರ ವಿಜಯ ಕರ್ನಾಟಕ ಪತ್ರಿಕೆ

Scanned by CamScanner



ಬಸವಕಲ್ಯಾಣ ತಾಲೂಕಿನ ಬೇಲೂರ ಗ್ರಾಮದಲ್ಲ ಕಲ್ಯಾಣ ಕಟ್ಟಿಮನಿ ಹಿರೆತನ ಮಠದಲ್ಲಿ ಲಿಂ. ಶ್ರೀ ಸಿದ್ದಲಿಂಗ ಶಿವಾಚಾರ್ಯರ ೨೬ ಪುಣ್ಯ ಸ್ಮರಣೆ ನಿಮಿತ್ಯವಾಗಿ ಮಾತನಾಡುತ್ತಿರುವ ಪೂಜ್ಯ ಶ್ರೀ ಘನಲಿಂಗ ರುದ್ರಮನಿ ಶಿವಾಚಾರ್ಯರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶರಣಯ್ಯಾ ಸ್ವಾಮಿ, ರೇವಣಸಿದ್ದಪ್ಪಾ ಪಾಟೀಲ ಉಪಸ್ಥಿತರನ್ನು ಕಾಣಬಹುದು.

# ಗುರುವಿನ ಮಾರ್ಗದರ್ಶನದಂತೆ ನಡೆದರೆ ಶಿಷ್ಯನ ಉದ್ಧಾರ: ಘನಲಿಂಗ ರುದ್ರಮುನಿ ಶ್ರೀ

ಹುಲಸೂರ, ೩೦– ಶಿಷ್ಯನ ಏಳಿಗೆ ಗುರುವಿನ ಅಗತ್ಯವಿದೆ. ಗುರುವಿನ ಮಾರ್ಗದರ್ಶನದಂತ್ತೆ ನಡೆದರೆ ಶಿಷ್ಯ ಉದ್ಧಾರಾಗುತ್ತಾನೆ. ಮಠಗಳಿಂದ ಊರುಗಳು ಉದ್ಧಾರವಾಗುತ್ತವೆ. ಶಿಷ್ಯರಿದ್ದಾಗ ಮಠಗಳಲ್ಲಿ ಶಿಷ್ಯರೆ ಇಲ್ಲದಿದ್ದರೆ ಮಠಗಳೆ ಅಸ್ಥಿತ್ವ ಇಲ್ಲ ಎಂದು ಶ್ರೀ ಪೂ. ಘನಲಿಂಗ ರುದ್ರಮನಿ ಶಿವಾಚಾರ್ಯರು ಹೇಳಿದರು.

ಹುಲಸೂರ ವ್ಯಾಪ್ತಿಯಲ್ಲಿ ಬರುವ ಬೇಲೂರ ಗ್ರಾಮದ ಕಲ್ಯಾಣ ಕಟ್ಟಿಮನೆ ಹಿರೆತನ ಮಠದಲ್ಲಿ ಲಿಂ.ಪರಮ ಪೂಜ್ಯ ಪಟದಸ್ಥಲ ಭೂಮೆ ಶ್ರೀ ಸಿದ್ದಲಿಂಗ ಶಿವಾಚಾರ್ಯರು ೨೬ ಪುಣ್ಯ ಸ್ಮರಣೆಯ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದ್ದರು. ಮಠಗಳಲ್ಲಿ ಶಿಷ್ಯರಿಗಾಗಿ ಶಿಷ್ಯರ ಮಾರ್ಗದರ್ಶನಕ್ಕಾಗಿದೆ. ಅಧರ್ಮದ ದಾರಿಯಲ್ಲಿ ಹೋಗುವವರನ್ನು ತಡೆದು ಧರ್ಮದ ದಾರಿಗೆ ತರುವ ಕೇಂದ್ರಗಳು ಮಠಗಳಾಗಿವೆ ಎಂದರು. ಹೀಗೆ ಪೂಜ್ಯ ಹಿರಿಯ ಸ್ಮರಣೆ ಮಾಡುವ ಮೂಲಕ ಅವರು ಸಮಾಜಕ್ಕಾಗಿ ಕೊಟ್ಟ ಕೊಡುಗೆ ಮಾಡಿದ ತ್ಯಾಗ ಕುರಿತು ಚಿಂತನೆಯಾಗುತ್ತದೆ. ಅವರ ಬದುಕೆ ಬದುಕಿನ ಪರಿಯಲ್ಲಿ ನಮ್ಗೆ ಸ್ಪೂರ್ತಿ ನೀಡುತ್ತದೆ ಎಂದು ಅಭಿಪ್ರಾಯ ಪಟ್ಟರು. ಬೇಲೂರ ಕಲ್ಯಾಣ ಕಟ್ಟಿ ಮನೆಯ ಹಿರೆತನ ಮಠದ ಶ್ರೀ ಪೀಠಾಧ್ಯಕ್ಷರಾದ ಪೂಜ್ಯ ಷ. ಬ್ರ. ಗುರುಲಿಂಗ ಶಿವಾಚಾರ್ಯರರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ವೇದಿಕೆಯ ಮೇಲೆ ಶ್ರೀ ಶರಣಯ್ಯಾ ಸ್ವಾಮಿ ಕಾರ್ಯಕ್ರಮದ ಕುರಿತು ಪ್ರಸ್ತಾವಿಕ ಮಾತನಾಡಿದ್ದರು. ಶ್ರೀ ರೇವಣಸಿದ್ಧ ಪಾಟೀಲ ಕಾರ್ಯಕ್ರಮವನ್ನು ನಿರೂಪಿಸಿದ್ದರು. ಗ್ರಾಮದ ಭಕ್ತರೆಲ್ಲರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಭಜನಾ ಮಂಡಳಿಯ ಸದಸ್ಯರು ಹಾಗೂ ಸಂಗೀತ ಕಾರ್ಯಕ್ರಮ ನೇರವೆರಿಸಿಕೊಟ್ಟರು.

ದಿನಾಂಕ 31-12-2010 ಶುಕ್ರವಾರ ಸಂಯುಕ್ತ ಕರ್ನಾಟಕ ದಿನ ಪತ್ರಿಕೆ.

Scanned by CamScanner

ಬಸವಕಲ್ಯಾಣದಲ್ಲಿ ಮಡಿವಾಳ ಮಾಚಿದೇವರ ಜಾತ್ರಾ ಮಹೋತ್ಸವ

# ಮನಸ್ಸು ಚಂಚಲತೆಗೊಳಿಸ. ಬೇಡಿ–ತ್ರಿಪುರಾಂತ ಶ್ರೀಗಳು.

ಬಸವಕಲ್ಯಾಣ ಡಿ.13.ಯಾವತ್ತು ಮನಸ್ಸು ಚಂಚಲತೆ ಗೋಳಿಸಬೇಡಿ ಮನಸ್ಸಿಗೆ ಶಾಂತಿ ಸಮಾಧಾನ ಸಿಗಬೇಕಾದರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅಧ್ಯಾತ್ಮದ ಚಿಂತನಗಳನ್ನು ಆಲಿಸುವದರೊಂದಿಗೆ ಶರಣರ ಕೃಪೆಗೆ ಪಾತ್ರರಾಗಬೇಕೆಂದು ತ್ರಿಪುರಾಂತದ ಮರಿದೇವರ ಗುಡ್ಡದ ಪೂಜ್ಯಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ನುಡಿದರು.ಅವರು ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವದ ನಿಮಿತ್ಯ ತ್ರಿಪುರಾಂತದಲ್ಲಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು.ಪ್ರವಚನ ವನ್ನು ಶರಣಕುಮಾರ ಶಾಸ್ತ್ರೀಗಳು ಹಿತ್ತಲಸಿರೂರ ಭಗವಂತನಿಗೆ ಶುದ್ಧ ಮನಸ್ಸು ಹಾಗೂ ಭಕ್ತಿಯಿಂದ ನೆನೆಯಬೇಕು ಎಂದರು. ಗ್ರಾಮದ ಮುಖಂಡರಾದ ಮಡಿವಾಳಪ್ಪಾ ಪೋಲಿಸ ಪಾಟೀಲ,ಜಗನ್ನಾಥ ಬಿರಾದಾರ,ಬಾಬು ಸ್ವಾಮಿ, ಶಿವಬಸಪ್ಪಾ ಚಾಮಲ್ಲೆ, ಹಾಸೆಪ್ಪಾ ಉದರೆ,ಅಶೋಕ ರಾಜೋಳೆ,ಸಂಗಮೇಶ ಬೆಲ್ಲೆ,ಹಣಮಂತ ಬೋಕ್ಕೆ, ಇನ್ನಿತರರು ಉಪಸ್ಥಿತರಿದ್ದರು. ಸಂಗೀತಸೇವೆ ಶಿವಲಿಂಗಯ್ಯಾ ಚಿಣಿಮಗೇರಾ,ತಬಲಾವಾದಕರಾಗಿ ರವಿಸ್ವಾಮಿ ಗೋಟುರ ಸಲ್ಲಿಸಿದರು ಸ್ವಾಗತ ಬಕ್ಕಯ್ಯಾ ಸ್ವಾಮಿ ನೆರವೇರಿಸಿದರು.

ಇಂದಿನಿಂದ ಜಾತ್ರಾ ಮಹೋತ್ಸವ 8 ಗಂಟೆಗೆ ಪಲ್ಲಕಿ ಮೇರವಣಿಗೆ 11.ಗಂಟೆಗೆ ಸಾಮಾಜಿಕನಾಟಕ ಮಿಂಚಿನ ಮಿಡಿನಾಗರ ಅರ್ಥಾತ ಸ್ನೇಹಲೋಕ, 15 ರಂದು ಶನಿವಾರ ಸ್ನೇಹಲೋಕ ನಾಟಕ,16 ರಂದು ಪ್ರಾತಃಕಾಲ 4 ಗಂಟೆಗೆ ಪಲ್ಲಕಿ ಮೇರವಣಿಗೆ ಹಾಗೂ ಬೆಳಿಗ್ಗೆ 8ಗಂಟೆಗೆ ಅಗ್ನಿಪೂಜೆ ಮತ್ತು ಪ್ರವೇಶ.ಎಂದು ಶ್ರೀ ಮಡಿವಾಳ ಮಾಚಿದೇವರ ಜಾತ್ರಾಕಮೀಟಿ ಪ್ರಕಟಣೆಯಲ್ಲಿ ತಿಳಿಸಿದೆ.

ದಿನಾಂಕ 14-1-2011 ಶುಕ್ರವಾರ [illegible] ದಿನಪತ್ರಿಕೆ.



ಶ್ರೀ ವೀರಭದ್ರೇಶ್ವರ ಜಾತ್ರಾ ಸಂದರ್ಭದಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆ ಹೊರತಂದಿರುವ ಕಲ್ಯಾಣ ಕರ್ನಾಟಕ ವಿಶೇಷ ಪುರವಣಿಯನ್ನು ಸಚಿವ ರೇವೂ ನಾಯಕ ಬೆಳಮಗಿ ಅವರು ಉದ್ಘಾಟಿಸಿದರು. ಮಾಜಿ ಶಾಸಕ ಸುಭಾಷ ಕಲ್ಲೂರ, ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ತ್ರಿಪುರಾಂತ ಶ್ರೀಗಳು ಹಾಗೂ ಶೈಲೇಂದ್ರ ಕಾವಡಿ ಇದ್ದಾರೆ.

## ಭಕ್ತರ ಭಾಗ್ಯನಿಧಿ ಚಾಂಗ್ಲೇರಾ ಉದ್ಭವ ಶ್ರೀ ವೀರಭದ್ರೇಶ್ವರ

ದಿನಾಂಕ 16-11-2010 ಮಂಗಳವಾರ ಸಂಯುಕ್ತ ಕರ್ನಾಟಕದಲ್ಲಿ ಕಲ್ಯಾಣ ಕರ್ನಾಟಕ ದಿನ ಪತ್ರಿಕೆ

Scanned by CamScanner

# ವಿದೇಶದಲ್ಲಿನ ಹಣ ವಾಪಸು: ಆಗ್ರಹ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ರಾಜಕೀಯ ಮುಖಂಡರು ವಿದೇಶಿ ಬ್ಯಾಂಕುಗಳಲ್ಲಿ ಇಟ್ಟಿರುವ ಕೋಟಿಗಟ್ಟಲೇ ಕಪ್ಪು ಹಣವನ್ನು ವಾಪಸ್ಸು ತರಲು ಒತ್ತಾಯಿಸಿ ಭಾನುವಾರ ಭಾರತ ಸ್ವಾಭಿಮಾನಿ ಟ್ರಸ್ಟ್ ವತಿಯಿಂದ ರ್‍ಯಾಲಿ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು.

ಮಹಾತ್ಮಾಗಾಂಧಿ ವೃತ್ತದಿಂದ ಹಳೆಯ ತಹಸೀಲ ಕಚೇರಿವರೆಗೆ ರ್‍ಯಾಲಿ ನಡೆಯಿತು. ತಹಸೀಲ ಕಚೇರಿ ಎದುರು ನಡೆದ ಸಭೆಯಲ್ಲಿ ಟ್ರಸ್ಟ್‌ನ ತಾಲ್ಲೂಕು ಅಧ್ಯಕ್ಷ ಡಾ.ಬಸವರಾಜ ಸ್ವಾಮಿ ಹಾಗೂ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ರಾಜಕೀಯ ವ್ಯಕ್ತಿಗಳು ಇಲ್ಲಿ ಕೊಳ್ಳೆಹೊಡೆದ ಹಣವನ್ನು ಸ್ವಿಸ್ ಬ್ಯಾಂಕಿನಲ್ಲಿ ಇಟ್ಟಿದ್ದಾರೆ.



ಬಸವಕಲ್ಯಾಣದಲ್ಲಿ ಭಾನುವಾರ ಭಾರತ ಸ್ವಾಭಿಮಾನಿ ಟ್ರಸ್ಟ್‌ದಿಂದ ರ್‍ಯಾಲಿ ನಡೆಸಿ ವಿದೇಶದಲ್ಲಿನ ಕಪ್ಪು ಹಣ ವಾಪಸ್ಸು ತರಲು ಆಗ್ರಹಿಸಿ ಸಂಗ್ರಹಿಸಿದ ಸಹಿಗಳ ಪಟ್ಟಿಯನ್ನು ತಹಸೀಲ ಕಚೇರಿ ಶಿರಸ್ತೆದಾರರಿಗೆ ಸಲ್ಲಿಸಲಾಯಿತು. ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಸ್ವಾಮಿ, ಸುಭಾಷ ಸುತ್ರಾವೆ, ಶಿವಕುಮಾರ ಮಠಪತಿ ಪಾಲ್ಗೊಂಡಿದ್ದರು.

ಅದನ್ನು ದೇಶಕ್ಕೆ ತಂದರೆ ಇಲ್ಲಿನ ಜನರ ಬಡತನ ಹೊಗಲಾಡಿಸಬಹುದು ಎಂದು ಅಭಿಪ್ರಾಯಪಟ್ಟರು.

ಯೋಗಗುರು ರಾಮದೇವಬಾಬಾ ಅವರು ಈ ಬಗ್ಗೆ ದೇಶದಾದ್ಯಂತ ಚಳವಳಿ ನಡೆಸುತ್ತಿದ್ದಾರೆ. ನಾವೆಲ್ಲ ಅವರ ಬೆಂಬಲಕ್ಕೆ ನಿಲ್ಲಬೇಕಾಗಿದೆ ಎಂದೂ ಮನವಿ ಮಾಡಿಕೊಂಡರು.

ಆರ್ಯ ಸಮಾಜ ಸಂಘದ ಅಧ್ಯಕ್ಷ ಸುಭಾಷ ಸುತ್ರಾವೆ, ಶಿವಕುಮಾರ ಮಠಪತಿ, ಸಂಜೀವ ಜಾಧವ, ನಾರಾಯಣ ಬುನ್ನಾ, ಧನರಾಜ ಫುಲಾರೆ, ಸುಭಾಷ ಪತಂಗೆ ಮುಂತಾದವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕಪ್ಪು ಹಣ ವಾಪಸ್ಸು ತರುವ ಸಂಬಂಧ ನಾಗರಿಕರಿಂದ ಸಂಗ್ರಹಿಸಿದ ಸಹಿಗಳ ಪಟ್ಟಿ ಸಹ ರಾಷ್ಟ್ರಪತಿಗಳಿಗೆ ಕಳುಹಿಸಲಾಯಿತು.

ದಿನಾಂಕ 28-2-2011 ಸೋಮವಾರ ವಿಜಯ ಕರ್ನಾಟಕ ದಿನಪತ್ರಿಕೆ.

Scanned by CamScanner




ಬಸವಕಲ್ಯಾಣ ಸದ್ಗುರು ಶ್ರೀ ಮೌನೇಶ್ವರ ಪ್ರಥಮ ಜಾತ್ರಾ ಮೋಹೊತ್ಸವ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಕುಮಾರ ಸ್ವಾಮಿ, ಹುಬಳಿ ಮಠದ ಬ್ರಹ್ಮ ಮುಕ್ತದ ಆಚಾರ್ಯರ ನೇತೃತ್ವದಲ್ಲಿ ಜರುಗಿತು. ತಾ. ಪಂ. ಅಧ್ಯಕ್ಷರಾದ ಗುರುಲಿಂಗಪ್ಪಾ ಸೈದಾಪುರೆ, ಕೃಷಿ ಅಧಿಕಾರಿ ಭೀಮಷಾ ಪಾಂಚಾಳ ಹುಮನಾಬಾದ, ಮೌನೇಶ್ವರ ಪಂಚ ಕಮಿಟಿ ಅಧ್ಯಕ್ಷ ತಿಪ್ಪಣ್ಣ ಪಂಚಾಳ, ವಿಜಯಕುಮಾರ ಪಂಚಾಳ, ಮಹಾದೇವ ಪಂಚಾಳ, ಜಗನ್ನಾಥ ಪಂಚಾಳ, ಭೀಮಷಾ ಪಂಚಾಳ ಹಾಗೂ ಆನೇಕರು ಭಾಗವಹಿಸಿದರು.

ದಿನಾಂಕ 4-3-2011 ಶುಕ್ರವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ.

# ಸದ್ಗುರು ಮೌನೇಶ್ವರ ಜಾತ್ರಾ ಮಹೋತ್ಸವ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಸದ್ಗುರು ಶ್ರೀ ಮೌನೇಶ್ವರರ ಪ್ರಥಮ ವರ್ಷದ ಜಾತ್ರಾ ಮಹೋತ್ಸವ ನಿಮಿತ್ತ ಬುಧವಾರ ನಗರದಲ್ಲಿ ಶ್ರೀ ಮೌನೇಶ್ವರ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆಸಾಂಸ್ಕೃತಿಕವೈಭವದೊಂದಿಗೆ ಜರುಗಿತು.

ಶ್ರೀ ಮೌನೇಶ್ವರ ದೇವಸ್ಥಾನದಿಂದ ಅಲ್ಲಮಪ್ರಭು ದೇವರ ಗದ್ದುಗೆ ರಥ ಮೈದಾನ, ಬಸವ ವೃತ್ತದ ಮೂಲಕ ಮುಖ್ಯ ಮಾರ್ಗವಾಗಿ ದೇವಸ್ಥಾನದ ವರೆಗೆ ನಡೆದ ಮೆರವಣಿಗೆಯಲ್ಲಿ ಪುರವಂತರಿಂದ ನಡೆದ ಸೇವೆ ಗಮನ ಸೆಳೆಯಿತು.

ಸೇವಾ ಸಮಿತಿ ಅಧ್ಯಕ್ಷ ತಿಪ್ಪಣ್ಣ ಪಂಚಾಳ, ಹರಿಶ್ಚಂದ್ರ ಪಂಚಾಳ, ವಿಜಯಕುಮಾರ ಪಂಚಾಳ, ಕಾಶಿನಾಥ ಪಂಚಾಳ, ವೀರಭದ್ರ ಪಂಚಾಳ, ಮಹಾದೇವ ಪೊದ್ದಾರ, ನರೇಂದ್ರ ಪಂಚಾಳ ಹಾಗೂ ಸಮಾಜದ ಗಣ್ಯರು ಭಾಗವಹಿಸಿದ್ದರು.

**ಧರ್ಮ ಸಭೆ:** ಜಾತ್ರೆ ನಿಮಿತ್ತ ನಡೆದ ಧರ್ಮಸಭೆ ಸಾನ್ನಿಧ್ಯ ವಹಿಸಿದ್ದ ತ್ರಿಪೂರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಧಾರ್ಮಿಕ ಕಾರ್ಯಕ್ರಮಗಳು ಮನಸ್ಸನ್ನು ಶುದ್ಧಿಗೊಳಿಸಲು ಸಹಕಾರಿಯಾಗುತ್ತವೆ ಎಂದರು.



ಶ್ರೀ ಸದ್ಗುರು ಮೌನೇಶ್ವರ ಜಾತ್ರೆ ನಿಮಿತ್ತ ಬುಧವಾರ ಬಸವಕಲ್ಯಾಣದಲ್ಲಿ ನಡೆದ ಧರ್ಮ ಸಭೆಯಲ್ಲಿ ಯಾದಗಿರನ ಶ್ರೀ ಕುಮಾರ ಸ್ವಾಮಿಜಿ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಭೀಮೇಶ ಪಂಚಾಳ ಇದ್ದರು.

ಸಾನ್ನಿಧ್ಯ ವಹಿಸಿದ್ದ ಯಾದಗಿರಿಯ ಶ್ರೀ ಕುಮಾರ ಸ್ವಾಮಿಜಿ ಆಶೀರ್ವಚನ ನೀಡಿದರು. ಶ್ರೀ ಮುಕುಂದಾರ್ಯ, ತಾಪಂ ಅಧ್ಯಕ್ಷ ಗುರುಲಿಂಗಪ್ಪ ಸೈದಾಪೂರೆ, ಹುಮನಾಬಾದನ ಭೀಮೇಶ ಪಂಚಾಳ, ಶಿವರಾಜ ಪಾಟೀಲ್ ಯಳವಂತಗಿ ಉಪಸ್ಥಿತರಿದ್ದರು. ವಿಜಯಕುಮಾರ ಪಂಚಾಳ ಸ್ವಾಗತಿಸಿ, ನಿರೂಪಿಸಿದರು. ಶ್ರೀ ಮೌನೇಶ್ವರ ಸೇವಾ ಸಮಿತಿ ಪದಾಧಿಕಾರಿಗಳು, ಪ್ರಮುಖರು ಭಾಗವಹಿಸಿದ್ದರು.

ದಿನಾಂಕ 3-3-2011 ಗುರುವಾರ ವಿಜಯ ಕರ್ನಾಟಕ ದಿನಪತ್ರಿಕೆ.

Scanned by CamScanner

# ಬಸವಕಲ್ಯಾಣದಿಂದ ಆರಂಭವಾದ ಪಯಣ

▪ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವ ತತ್ತ್ವ ಪ್ರಚಾರ ಮತ್ತು ಪ್ರಸಾರದ ಉದ್ದೇಶದಿಂದ ಹುಲಸೂರಿನ ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠದ ಶ್ರೀ ಶಿವಾನಂದ ಮಹಾಸ್ವಾಮಿ ನಡೆಸುತ್ತಿರುವ 7000 ಕಿಮೀ ಬಸವ ಜ್ಯೋತಿ ಸದ್ಭಾವನಾ ಪಾದಯಾತ್ರೆ ಕಲ್ಯಾಣದಿಂದ ಸೋಮವಾರ ಆರಂಭವಾಯಿತು.

ಇಲ್ಲಿಂದ ಕಾಶ್ಮೀರ, ಕಾಶ್ಮೀರದಿಂದ ಕನ್ಯಾಕುಮಾರಿ, ಕನ್ಯಾಕುಮಾರಿಯಿಂದ ಬಸವಕಲ್ಯಾಣ ವರೆಗೆ ನಡೆವ ಪಾದಯಾತ್ರೆಗೆ ಭಾನುವಾರ ಚಾಲನೆ ದೊರೆತಿದ್ದು, ಸೋಮವಾರ ಶ್ರೀ ಗಳು ಮಹಾರಾಷ್ಟ್ರದ ಕಡೆಗೆ ಪಯಣ ಬೆಳೆಸಿದರು.

ಭಾರತೀಯರೆಲ್ಲರೂ ಒಂದು ಎನ್ನುವ ರಾಷ್ಟ್ರೀಯತೆಯ ಭಾವನೆ ಮೂಡಿಸುವ ಮಹತ್ವದ ಉದ್ದೇಶದಿಂದ ಹುಲಸೂರಿನ ಶ್ರೀ ಗಳು ಹಮ್ಮಿಕೊಂಡಿರುವ ಪಾದಯಾತ್ರೆ ಯಶಸ್ವಿಯಾಗಲಿ ಎಂದು ವಿಜಾಪುರದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಹಾರೈಸಿದರು.

ಮುಚಳಂಬನ ಶ್ರೀ ಪ್ರಣವಾನಂದ ಮಹಾಸ್ವಾಮೀಜಿಯೂ ಶುಭ ಕೋರಿದರು.

ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮೀಟಿಯಿಂದ ಶ್ರೀ ಗಳನ್ನು ಸನ್ಮಾನಿಸಲಾಯಿತು.ಬಿಡಿಪಿಸಿ ಅಧ್ಯಕ್ಷ ಅನಿಲಕುಮಾರ ರಗಟೆ, ಗದಗೆಪ್ಪ ಹಲಶೆಟ್ಟಿ, ಕಾರ್ಯದರ್ಶಿ ನಾಗಯ್ಯ ಸ್ವಾಮಿ, ಮಲ್ಲಪ್ಪ ಚಿರಡೆ, ಸುಭಾಷ ಹೊಳಕುಂದೆ, ಬಸವರಾಜ ಬಾಲಕಿಲೆ ಉಪಸ್ಥಿತರಿದ್ದರು.

ಕಾಲೇಜ್ ಮೈದಾನದಿಂದ ಆರಂಭವಾದ ಪಾದಯಾತ್ರೆ ಮುಖ್ಯಮಾರ್ಗವಾಗಿ ಶ್ರೀ ಬಸವೇಶ್ವರ ದೇವಸ್ಥಾನ ತಲುಪಿದ ನಂತರ ಪೂಜೆ ಸಲ್ಲಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಾಯಗಾಂವನ ಶ್ರೀ ಶಿವಾನಂದ ದೇವರು, ಮಾತೆ ಬಸವರಾಜೇಶ್ವರಿ, ಪ್ರಮುಖರಾದ ಬಾಬುರಾವ ಪಟ್ನೆ, ವಿಶ್ವನಾಥ ಕಾಡಾದಿ, ಕಾಶಪ್ಪ ಬೀರಗೆ, ಮನೋಹರ ಮೈಸೆ, ಸೂರ ಕಾಡಾದಿ, ಸಂಗಮೇಶ ಕೊಡಂಬಲೆ, ಸುಧಾಕರ ಫುಲಾರೆ ಉಪಸ್ಥಿತರಿದ್ದರು.

ಪಾದಯಾತ್ರೆಗೆ ಗೌರ , ಗುತ್ತಿ, ಮಿರಕಲ್ ಮತ್ತಿತರ ಗ್ರಾಮಗಳಲ್ಲಿ ಪಾದಯಾತ್ರೆಗೆ ಸ್ವಾಗತಿಸಲಾಯಿತು. ರಾತ್ರಿ ವೇಳೆಗೆ ಮಹಾರಾಷ್ಟ್ರದ ಶಾಹಾನಿ ಔರಾದ ತಲುಪಿತು.

ದಿನಾಂಕ 8-3-2011 ಮಂಗಳವಾರ ವಿಜಯಕರ್ನಾಟಕ ದಿನಪತ್ರಿಕೆ.

# ವಚನ ಸಾಹಿತ್ಯ ಅಕಡೆಮಿ ಉದ್ಘಾಟನೆ



ಬಸವಕಲ್ಯಾಣ, ೭– ಬಸವಣ್ಣನ ಸಮಾಜದ ನಿರ್ಮಾಣದಿಂದ ಸಮಾನತೆ ನಿರ್ಮಾಣವಾಗಿದೆ. ಜಾತಿಗೆ ಶರಣರನ್ನು ಮೀಸಲಿಡಲಾಗಿದೆ. ಬಸವಾದಿ ಶರಣರ ಜ್ಯಾತ್ಯಾತೀತ ಮನೋಭಾವನೆ ಹೊಂದಿದ ಸಮಾಜ ಸುಧಾರಕರು, ವಚನ ಅಕಾಡೆಮಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಶಾಖೆ ಪ್ರಾರಂಭವಾಗಿವೆ. ಇದರ ಉತ್ತಮ ಫಲಿತಾಂಶ ಈ ನಾಡಿಗೆ ಸಲ್ಲಬೇಕು. ವಿಶ್ವಕ್ಕೆ ವಚನ ಮಾದರಿಯಾಗಿದೆ. ಇದು ಇಂದಿಗೂ ಪ್ರಸ್ತುವೆಂದು ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ ರಾಜ್ಯಾಧ್ಯಕ್ಷರಾದ ಎಲ್.ಎ.ಗೌಡಾ ಬೇಸಗರಹಳ್ಳಿ ಅವರು ಮಾತನಾಡಿದರು.

ಸರ್ಕಾರಿ ಪ್ರಥಮ ದರ್ಜೇ ಕಾಲೇಜಿನಲ್ಲಿ ಏರ್ಪಡಿಸಿದ್ದ ತಾಲೂಕ ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ ಘಟಕವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶರಣರ ಅನುಭವ ಮಂಟಪ ಅಧ್ಭುತ ಕೊಡುಗೆ ನೀಡಿದೆ. ವಚನ ಸಾಹಿತ್ಯದಲ್ಲಿ ಎಲ್ಲಾ ಅಡಗಿದೆ. ಇಂದು ಎಂದೆಂದಿಗಿಂತ ಹಚ್ಚು ಅವಶ್ಯವಿದೆ ಎಂದು ನುಡಿದರು. ಮಖ್ಯ ಅಥಿತಿಗಳಾಗಿ ಶಿವಮೊಗ್ಗದ ಹಿರಿಯ ಸಾಹಿತಿ ಜಯದೇವ ಪ್ರಚನ್ನಕೇರಿಯವರು ಮಾತನಾಡಿದರು. ಬೆಂಗಳೂರಿನ ಖ್ಯಾತ ಎ.ಜಿ ರತ್ನ ಕಾಳೇಗೌಡ ಅವರು ಮಾತನಾಡಿ ವಚನಗಳು ವಯಕ್ತಿತ್ವ ರೂಪಿಸುವ ಸಂಜೀವಿನಿಗಳು. ಮನೆ ಮನ ಪರಿಸರದಲ್ಲಿ ವಚನ ಬೆಳೆಯುಬೇಕು ಎಂದರು. ಅತಿಥಿಯಾಗಿ ಪ್ರಖ್ಯಾತ ಪ್ರವಚನಕಾರರು ಯೆಡೆಯೂರು ಮೂಡಲಗಿರಿ ಮಾತನಾಡಿ, ಬಸವಣ್ಣನ ಹರಳ್ಳಯನ ಸಂಭಾಷಣೆ ಪ್ರವಚನ ನೀಡಿದರು.

ಜಿಲ್ಲಾ ವಚನ ಅಕಾಡಮಿ ಸಂಚಾಲಕ ಹರೀಶ ಕವಿ.ಭಾರತಿ ಮಲ್ಲಿಬಾದಿ ನಿರಾಂಕಾರ ಬಂಡಿ ಅಗ್ರಸಾಹೆಬ ಅಲಿಬಾದಿ ಆಧುನಿಕ ವಚನ ವಾಚಿಸಿದರು. ಅದ್ಯಕ್ಷತೆಯನ್ನು ವಹಿಸಿ ಕಾಲೇಜಿನ ಪ್ರಾಧ್ಯಾಪಕ, ಸಾಹಿತಿ ಡಾ. ಗವಿಸಿದ್ದಪ್ಪ ಪಾಟೀಲ ಮಾತನಡಿದರು. ಸಂಗನ ಬಸವ ಪ್ರಾರ್ಥನೆ ಸ್ವಾಗತ ಮತ್ತು ಪ್ರಾಸ್ಥಾವಿಕ ನುಡಿ ವಚನ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಚಿತ್ರಶೇಖರ ಚಿರಳ್ಳಿ ಶಿವಲೀಲಾ ಮಠಪತಿ ಕಾರ್ಯಕ್ರಮ ನಿರೂಪಿಸಿದರು. ಬಸಂತ ಬಂಡೆಪ್ಪ ವಂದಿಸಿದರು.

ದಿನಾಂಕ 8-3-2011 ಮಂಗಳವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ.

Scanned by CamScanner



ಬಸವಕಲ್ಯಾಣದಲ್ಲಿ ಸೋಮವಾರ ನಡೆದ ಜನಪದ ಸಾಹಿತ್ಯ ಪರಿಷತ್‌ನ ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಹಿಳೆಯರು ಬೀಸುವ ಕಲ್ಲಿನಿಂದ ಜೋಳ ಬೀಸುತ್ತ ಹಾಡು ಹಾಡಿದರು. ಪರಿಷತ್ ಜಿಲ್ಲಾಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ, ಡಾ.ಎಸ್.ಬಿ. ಮಹಾಜನ, ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಾಲ್ಗೊಂಡಿದ್ದರು.

# ಜಾನಪದ ಹಾಡಿನ ಮೋಡಿ

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ಕೆಲವರು ಬೀಸುವ ಕಲ್ಲನ್ನು ಎದುರಿಗಿಟ್ಟು ಬೀಸುತ್ತ ಹಾಡು ಹಾಡಿದರು. ಇನ್ನೂ ಕೆಲ ಮಹಿಳೆಯರು ಇಳಕಲ್ ಸೀರೆ ಯುಟ್ಟು ಅಪ್ಪಟ ಹಳ್ಳಿಗರಂತೆ ಜಾನಪದ ಗೀತೆ ಹಾಡಿದ್ದರಿಂದ ಸೋಮವಾರ ಇಲ್ಲಿನ ಏಕಲವ್ಯ ಡಿ.ಇಡಿ ಕಾಲೇಜಿನಲ್ಲಿ ನಡೆದ ಜನಪದ ಸಾಹಿತ್ಯ ಪರಿಷತ್‌ನ ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭ ರಂಗು ಪಡೆದುಕೊಂಡಿತ್ತು.

ಚಂಪಾಬಾಯಿ ಪಂಚಾಳ, ದ್ರುಪದಬಾಯಿ, ಶಿಲ್ಪಾ ಘಾಳೆ, ಭಾಗ್ಯಜ್ಯೋತಿ, ಶಿವಲೀಲಾ ಮಠಪತಿ, ಸರೋಜನಿ ಹಿರೇಮಠ ಅವರು ಜನಪದ ಗೀತೆಗಳನ್ನು ಹಾಡಿದರು.

ಪರಿಷತ್‌ನ ಜಿಲ್ಲಾಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ ಮಾತನಾಡಿ ಕಣ್ಮರೆ ಆಗುತ್ತಿರುವ ಜನಪದ ಕಲೆಗಳನ್ನು ಉಳಿಸಲು ಪ್ರಯತ್ನಿಸುವುದು. ಕಲಾವಿದರನ್ನು ಪ್ರೋತ್ಸಾಹಿಸುವುದು ಪರಿಷತ್‌ನ ಉದ್ದೇಶವಾಗಿದೆ. ಜನಪದ ಸಾಹಿತ್ಯ ನೀತಿ ತತ್ವಗಳಿಂದ ಕೂಡಿದ್ದು ಪರಸ್ಪರರ ಮನಸ್ಸು ಕಟ್ಟುವ ಕೆಲಸ ಮಾಡುತ್ತದೆ ಎಂದರು.

ಬಿಕೆಡಿಬಿ ಆಯುಕ್ತ ಕಾಶಿನಾಥ ಗೋಕಳೆ ಉದ್ಘಾಟನೆ ನೆರವೇರಿಸಿದರು. ನಂತರ ಮಾತನಾಡಿದ ಅವರು ಮಹಿಳೆಯರು ಹಾಡಿನ ಮೂಲಕ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ ಎಂದು ಅಭಿಪ್ರಾಯಪಟ್ಟರು. ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ತಿಕೋಟಾ ಚನ್ನಮಲ್ಲಿಕಾರ್ಜುನ ಸ್ವಾಮಿ, ಪ್ರೊ.ಎಸ್.ಬಿ.ಬಿರಾದಾರ, ಬಿಇಒ ಶಿವರಾಚಪ್ಪ ವಾಲಿ, ವೆಂಕಣ್ಣ ದೊಣ್ಣೆಗೌಡ ಮಾತನಾಡಿದರು.

ಡಾ.ಎಸ್.ಬಿ.ಮಹಾಜನ, ಪ್ರಭುಲಿಂಗಯ್ಯ ಟಂಕಸಾಲಿಮಠ, ಪಂಚಾಕ್ಷರಿ ಹಿರೇಮಠ, ಶಿವಶರಣಪ್ಪ ಮಲ್ಲಾಡೆ, ಡಾ.ಗವಿಸಿದ್ಧಪ್ಪ ಪಾಟೀಲ, ಭೀಮಾಶಂಕರ ಬಿರಾದಾರ, ನಾಗೇಂದ್ರ ಬಿರಾದಾರ, ರುದ್ರಮಣಿ ಮಠಪತಿ ಉಪಸ್ಥಿತರಿದ್ದರು. ಪರಿಷತ್‌ನ ತಾಲ್ಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿದರು. ಸೂರ್ಯಕಾಂತ ಶೀಲವಂತ ನಿರೂಪಿಸಿದರು. ಬಕ್ಕಯ್ಯಸ್ವಾಮಿ ವಂದಿಸಿದರು.

ದಿನಾಂಕ 8-3-2011 ಮಂಗಳವಾರ
ಪ್ರಜಾವಾಣಿ ದಿನಪತ್ರಿಕೆ

# ಜಾನಪದ ಜೀವನದ ಜೀವಾಳ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನ ದಿನ ನಿತ್ಯದ ಆಗು-ಹೋಗುಗಳಲ್ಲಿ ಜಾನಪದ ಹಾಸುಹೊಕ್ಕಾಗಿದೆ. ಇದು ಸಂಸ್ಕೃತಿಯಷ್ಟೇ ಅಲ್ಲ, ನಮ್ಮ ಜೀವನದ ಜೀವಾಳವಾಗಿದೆ ಎಂದು ಬಿಕೆಡಿಬಿ ಆಯುಕ್ತ ಕಾಶಿನಾಥ ಗೋಖಲೆ ಪ್ರತಿಪಾದಿಸಿದರು.

ಏಕಲವ್ಯ ಡಿಇಡಿ ಕಾಲೇಜಿನಲ್ಲಿ ಸೋಮವಾರ ಜಾನಪದ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದವು ಎಲ್ಲರ ಹೃದಯದಿಂದ ಬರುವ ಸಹಜ ಭಾವನೆ, ಈ ಕಾಲದ ಮಹಿಳೆಯರಲ್ಲಿ ಜನಪದ ಹಾಡುವ ಕಲೆ ಕಡಿಮೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಜನಪದ ಹಾಡುಗಳನ್ನು ಸಂಗ್ರಹ ಮಾಡುವ ತಾಳ್ಮೆಯ ಜವಾಬ್ದಾರಿ ಅಕ್ಷರಸ್ಥರಲ್ಲಿ ಬರಲಿ ಎಂದರು.

ನೇತೃತ್ವ ವಹಿಸಿದ ತಿಕೋಟಾದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿ ಆಶೀರ್ವಚನ ನೀಡಿದರು. ತ್ರಿಪುರಾಂತನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಅಧ್ಯಕ್ಷತೆ ವಹಿಸಿದ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ.ಜಗನ್ನಾಥ ಹೆಬ್ಬಾಳೆ, ಶರಣ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ಡಾ.ಎಸ್.ಬಿ.ಮಹಾಜನ್, ಬಿಇಒ ಶಿವರಾಚಪ್ಪ ವಾಲಿ, ಬೀದರ್‌ನ ಪ್ರೊ.ಎಸ್. ಬಿ. ಬಿರಾದಾರ ಮಾತನಾಡಿದರು.

ಕಾಲೇಜ್ ಪ್ರಾಚಾರ್ಯ ರುದ್ರಮಣಿ ಮಠಪತಿ, ಪ್ರಮುಖರಾದ ಪ್ರಭುಲಿಂಗಯ್ಯ ಟಂಕಸಾಲಿಮಠ, ಪಂಚಾಕ್ಷರಿ ಹಿರೇಮಠ, ಡಾ.ಗವಿಸಿದ್ಧಪ್ಪ ಪಾಟೀಲ್, ಭೀಮಾಶಂಕರ ಬಿರಾದಾರ, ನಾಗೇಂದ್ರ ಬಿರಾದಾರ ಉಪಸ್ಥಿತರಿದ್ದರು. ಪರಿಷತ್ತು ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿದರು. ಪ್ರೊ.ವೆಂಕಣ್ಣ ದೊಣ್ಣೆಗೌಡರ್ ಪ್ರಸ್ತಾವಿಕ ಮಾತನಾಡಿದರು. ಬಕ್ಕಯ್ಯ ಸ್ವಾಮಿ ವಂದಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ ನಿರೂಪಿಸಿದರು.

ಜಾನಪದ ಕಲಾವಿದೆಯರಾದ ಚಂಪಾಬಾಯಿ ಪಂಚಾಳ, ದ್ರುಪದಾಬಾಯಿ ಪಂಚಾಳ, ಶಿವಮೊಗ್ಗದ ಭಾಗ್ಯಜ್ಯೋತಿ, ಹಾಗೂ ಶಿಲ್ಪಾ ಘಾಳೆ ಜನಪದ ಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಸೊಬಗು ತಂದರು.



ಬಸವಕಲ್ಯಾಣ ತಾಲೂಕು ಜಾನಪದ ಸಾಹಿತ್ಯ ಪರಿಷತ್ತಿನ ಉದ್ಘಾಟನಾ ಸಮಾರಂಭದಲ್ಲಿ ಚಂಪಾಬಾಯಿ ಪಂಚಾಳ, ದ್ರುಪದಾಬಾಯಿ ಪಂಚಾಳ ಜಾನಪದ ಗೀತೆ ಹಾಡಿದರು. ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಜಿ, ತ್ರಿಪುರಾಂತ ಶ್ರೀಗಳು, ಕಾಶಿನಾಥ ಗೋಖಲೆ, ಡಾ.ಮಹಾಜನ್, ಡಾ.ಹೆಬ್ಬಾಳೆ ಉಪಸ್ಥಿತರಿದ್ದರು.

ದಿನಾಂಕ 10-3-2011 ಗುರುವಾರ ವಿಜಯ
ಕರ್ನಾಟಕ ದಿನಪತ್ರಿಕೆ.



ಬಸವಕಲ್ಯಾಣದ ಶ್ರೀ ಗುರುಲಿಂಗೇಶ್ವರ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀ, ವಿಶ್ವನಾಥ ಬಿರಾದಾರ, ಶಿವಶರಣ ಬಿರಾದಾರ, ಸುನೀಲ ಪಾಟೀಲ್, ಶಶಿಕಾಂತ ದುರ್ಗೆ, ಭದ್ರಿನಾಥ ಪಾಟೀಲ್, ಬಸವಂತಪ್ಪ ಲವಾರೆ, ರಮೇಶ ಸ್ವಾಮಿ ಉಪಸ್ಥಿತರಿದ್ದರು

ದಿನಾಂಕ 10-3-2011 ಗುರುವಾರ ವಿಜಯ
ಕರ್ನಾಟಕ ದಿನಪತ್ರಿಕೆ.

Scanned by CamScanner

# ಕಲಾವಿದನ ಕಲ್ಪನೆ ಕಲಾಕೃತಿಗೆ ಪ್ರೇರಣೆ: ಡಾ.ಬೆಟದೂರು

▪ ವಿಕ ಸುದ್ದಿಲೋಕ ಬಸವಕಲ್ಯಾಣ

ತಾಂತ್ರಿಕತೆ ಎಷ್ಟೇ ಮುಂದುವರೆದರೂ ಕಲಾವಿದನ ಕಲ್ಪನೆಗೆ ಮೀರಿಸಲಾಗದು. ಕಲಾವಿದ ತನ್ನ ಕಲ್ಪನೆಯಿಂದಲೆ ಅದ್ಭುತವಾದ ಕಲಾಕೃತಿಯನ್ನು ರಚಿಸಬಲ್ಲ ಎಂದು ರಾಯಚೂರಿನ ಹಿರಿಯ ಚಿತ್ರ ಕಲಾವಿದ ಡಾ.ಶಂಕರಗೌಡ ಬೆಟದೂರು ಹೇಳಿದರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ 17ನೇ ಕಲಾ ಮಹೋತ್ಸವ ಉದ್ಘಾಟಿಸಿದ ಅವರು, ಇಲ್ಲಿಯ ಕಾಲೇಜ್ ವಿದ್ಯಾರ್ಥಿಗಳು ಉತ್ತಮವಾದ ಕಲಾಕೃತಿಗಳನ್ನು ರಚಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಹಿತಿ ಮಹಾಂತೇಶ ನವಲಕಲ್ ಮಾತನಾಡಿ, ಕಲಾ ವಿದ್ಯಾರ್ಥಿಗಳು ಶ್ರೇಷ್ಠ ಕಲಾವಿದರ ಕಲಾ ಕೃತಿಗಳ ಬಗ್ಗೆ ಅಧ್ಯಯನ ಮಾಡಬೇಕು. ಕಲಾವೃತ್ತಿಗೆ ಪೂರಕವಾದ ಶಿಕ್ಷಣದ ಇಲ್ಲಿ ನೀಡಲಾಗುತ್ತಿದೆ ಎಂದು ಕಾಲೇಜಿನ ಪ್ರಗತಿ ಶ್ಲಾಘಿಸಿದರು.

ಜವಾಹರ ನವೋದಯ ಪ್ರಾಚಾರ್ಯ ಕೆ.ಎಸ್. ದತ್ತಾತ್ರಿ, ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ತ್ರಿಪೂರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಜಿಪಂ ಸದಸ್ಯ ಸಂಜು ಕಾಳೆಕರ್, ರೇವಣಸಿದ್ಧ ಡೋಂಗರೆ, ಮಲ್ಲಿಕಾರ್ಜುನ ಹಲಿಂಗೆ ಉಪಸ್ಥಿತರಿದ್ದರು.

ಕಾಲೇಜ್ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಸ್ವಾಗತಿಸಿದರು. ನಾಗಪ್ಪ ನಿಣ್ಣೆ ವಂದಿಸಿದರು. ಅಶೋಕಕುಮಾರ ಎಂ.ಬಿ ನಿರೂಪಿಸಿದರು. ರಾಜಕುಮಾರ ಹೂಗಾರ ಪ್ರಾರ್ಥನೆ ನಡೆಸಿಕೊಟ್ಟರು.

ಈ ಸಾಲಿನ ಆದರ್ಶ ವಿದ್ಯಾರ್ಥಿಗಳಾದ ಗೀತಾ ಪಂಚಯ್ಯ ಸ್ವಾಮಿ, ವಿಲಾಸ ಬಾಬು ಮೇಕಾಲೆ ಅವರನ್ನು ಗೌರವ ಪ್ರಶಸ್ತಿ ಪತ್ರ ನೀಡಿ ಪ್ರೋ ಕಲಾವಿದ ರಾಮಶೆಟ್ಟಿ ಸೂಗೂರ, ಪತ್ರಕರ್ತರಾದ ಕಲ್ಯಾಣರಾವ ಮದರಗಾಂವಕರ್, ಪ್ರಶಸ್ತಿ ಪತ್ರ ನೀಡಿ ಸತ್ಕರಿಸಲಾಯಿತು.



ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ನಡೆದ ಕಲಾ ಮಹೋತ್ಸವ ಡಾ.ಶಂಕರಗೌಡ ಬೆಟದೂರು ಮಾತನಾಡಿದರು. ತ್ರಿಪುರಾಂತ ಶ್ರೀ, ಪ್ರಭುಲಿಂಗಯ್ಯ ಟಂಕಸಾಲಿಮಠ, ಎಂಜಿ.ಮುಳೆ, ಮಹಾಂತೇಶ ನವಲಕಲ್, ಕೆ.ಎಸ್.ದತ್ತಾತ್ರಿ ಇದ್ದರು.

ದಿನಾಂಕ 12-3-2011 ಶನಿವಾರ ವಿಜಯ ಕರ್ನಾಟಕ ದಿನಪತ್ರಿಕೆ.

# ‘ಕುಂಚದಿಂದ ಅರಳಿದ ಚಿತ್ರವೇ ಮೇಲು’

ಪ್ರಜಾವಾಣಿ ವಾರ್ತೆ

**ಬಸವಕಲ್ಯಾಣ:** ತಾಂತ್ರಿಕತೆ ಎಷ್ಟೇ ಮುಂದುವರಿದರೂ ಕುಂಚದಿಂದ ಅರಳಿದ ಚಿತ್ರವೇ ಮೇಲು ಎಂದು ಖ್ಯಾತ ಚಿತ್ರಕಲಾವಿದ ಶಂಕರಗೌಡ ಬೆಟ್ಟದೂರು ಅಭಿಪ್ರಾಯಪಟ್ಟರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ 17 ನೇ ಕಲಾ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಕುಂಚ, ಬಣ್ಣ ಬಳಸಿ ತೆಗೆದ ಚಿತ್ರ ಶ್ರೇಷ್ಠ, ಕಲಾವಿದನ ಕಲ್ಪನೆ ಅದರಲ್ಲಿ ಅದ್ಭುತ ರೂಪು ಪಡೆದುಕೊಂಡಿರುತ್ತದೆ. ಜೀವಂತಿಕೆ ಇರುತ್ತದೆ. ಲಲಿತಕಲೆಗೆ ಭಾರತ ವಿಶ್ವದಲ್ಲಿಯೇ ಹೆಸರು ಪಡೆದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ ಕಲೆಗೆ ಪ್ರೋತ್ಸಾಹಿಸುವ ಸಂಸ್ಥೆಗಳು ಬೆಳೆಯಬೇಕು. ಬಸವೇಶ್ವರ ಕಾಲೇಜು ಕಳೆದ 16 ವರ್ಷಗಳಿಂದ ಚಿತ್ರಕಲಾವಿದರನ್ನು ಬೆಳೆಸುತ್ತಿದೆ ಎಂದು ಮೆಚ್ಚುಗೆ ಸೂಚಿಸಿದರು.

ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜಿಮಾಸ್ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ನವಲಕಲ್, ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯ ಕೆ.ಎಸ್. ದತ್ತಾತ್ರಿ ಮಾತನಾಡಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಕಲ್ಯಾಣರಾವ ಮದರಗಾಂವಕರ್, ರಾಮಶೆಟ್ಟೆಪ್ಪ ಸೂಗೂರ, ಪ್ರವೀಣ ದಾಂಡೇಕರ್ ಅವರನ್ನು ಸತ್ಕರಿಸಲಾಯಿತು. ಗೀತಾ ಪಂಚಯ್ಯಾ, ವಿಲಾಸ ಬಾಬು ಇವರನ್ನು ಆದರ್ಶ ವಿದ್ಯಾರ್ಥಿಗಳೆಂದು ಪ್ರಶಸ್ತಿಪತ್ರ ಕೊಟ್ಟು ಸನ್ಮಾನಿಸಲಾಯಿತು.

ಜಿಪಂ ಸದಸ್ಯ ಸಂಜೀವ ಕಾಳೇಕರ್, ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ, ರೇವಣಸಿದ್ಧ ಡೊಂಗರೆ, ಮಲ್ಲಿಕಾರ್ಜುನ ಹಲಿಂಗೆ ಉಪಸ್ಥಿತರಿದ್ದರು.

ಎಂ.ಬಿ.ಅಶೋಕಕುಮಾರ ನಿರೂಪಿಸಿದರು. ನಾಗಪ್ಪ ನಿಣ್ಣೆ ವಂದಿಸಿದರು. ರಾಜಕುಮಾರ ಹೂಗಾರ ಸಂಗೀತ ಹಾಡಿದರು.

ಎರಡು ದಿನ ಕಾಲೇಜಿನ ವಿದ್ಯಾರ್ಥಿಗಳಿಂದ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು.



ಬಸವಕಲ್ಯಾಣದ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಎರಡು ದಿನ ಏರ್ಪಡಿಸಲಾದ ಚಿತ್ರಕಲಾ ಪ್ರದರ್ಶನವನ್ನು ಖ್ಯಾತ ಚಿತ್ರಕಲಾವಿದ ಶಂಕರಗೌಡ ಬೆಟ್ಟದೂರ ವೀಕ್ಷಿಸಿದರು. ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರಭುಲಿಂಗಯ್ಯ ಉಪಸ್ಥಿತರಿದ್ದರು.

ದಿನಾಂಕ 12-3-2011 ಶನಿವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner






■ ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿ ಜರುಗಿದ ಜಗದ್ಗುರು ರೇಣುಕಾಚಾರ್ಯ ಜಯಂತಿಮಹೋತ್ಸವ ಧರ್ಮ ಸಭೆಯ ಉದ್ಘಾಟಿಸಿ ಮಾತನಾಡುತ್ತಿರುವ ಭೀಮಣ್ಣಾ ಖಂಡ್ರೆ. ವೇದಿಕೆಯಲ್ಲಿ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಹಾವಲಿಂಗ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜಿಯಾ ಉಲ್ ಹುಸೇನ್ ಜಾಗಿರದಾರ, ಇನ್ನಿತರರು ಉಪಸ್ಥಿತರಿದ್ದರು.

■ ಜಗದ್ಗುರು ರೇಣುಕಾಚಾರ್ಯ ಜಯಂತಿಯ ಭವ್ಯ ಮೇರವಣಿಗೆಗೆ ಶ್ರೀಮನ ಮಹಾರಾಜ ನಿರಂಜನ ಜಗದ್ಗುರು ಶಿವಯೋಗೇಶ್ವರ ಮಹಾ ಸ್ವಾಮಿಗಳು ಚಾಲನೆ ನೀಡಿದರು. ಗಡಿಗೌಂಡಗಾಂವ, ಶಾಂತವೀರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಲ್ಲಯ್ಯಾ ಹಿರೆಮಠ, ಡಾ ಬಸವರಾಜ ಸ್ವಾಮಿ, ಪಿ.ಬಿ. ಟಂಕ ಸಾಲಿಮಠ ಉಪಸ್ಥಿತರಿದ್ದರು. ಬಸವಕಲ್ಯಾಣ ರಾಜ ಬೀದಿಗಳಲ್ಲಿ ಜರುಗಿತ್ತು.

# ಸಂಸ್ಕಾರದಿಂದ ಮನುಷ್ಯನಾಗುತ್ತಾನೆ : ಭೀಮಣ್ಣಾ ಖಂಡ್ರೆ

ಬಸವಕಲ್ಯಾಣ, ೧೮- ಸಂಸ್ಕಾರದಿಂದ ಮನುಷ್ಯನಾಗುತ್ತಾನೆ ಎಂದು ಅಖಿಲ ಭಾರತ ವೀರಶೈವ ಮಹಾ ಸಭಾ ಅಧ್ಯಕ್ಷ ಭೀಮಣ್ಣಾ ಖಂಡ್ರೆಯವರು ಹೇಳಿದರು.

ಎಲ್ಲಾ ಧರ್ಮದಲ್ಲು ಸಮಾನತೆ ಹಾಗೂ ಏಕತೆಗೆ ಮಹತ್ವ ನೀಡಿದ್ದು, ಈ ರೇಣುಕಾಚಾರ್ಯರ ಜಯಂತಿ ಆಚರಿಸಿರುವುದು, ಅರ್ಥಪೂರ್ಣವಾಗಿದೆ. ಶರಣರ ಹಾಗೂ ಶಿವಾಚಾರ್ಯರ ಸಂದೇಶಗಳು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳಬೇಕು ಎಂದ ಅವರು ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿ ಜರುಗಿದ ರೇಣುಕಾಚಾರ್ಯ ಜಯಂತಿಯ ಧರ್ಮ ಸಭೆಯ ಉದ್ಘಾಟಿಸಿ ಮಾತನಾಡಿದರು.

ಮಠದ ಸದ್ಭಕ್ತರೆ ಗವಿ ಮಠಕ್ಕೆ ಆಸ್ತಿ ಎಂದು ರಾಜೇಶ್ವರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಮಾತನಾಡಿ ಶರಣರ ಪುಣ್ಯ ಭೂಮಿಯಲ್ಲಿ ಆಚಾರ್ಯರು ಬಸವ ಭಕ್ತರೆಂಬ ಭೇದ ಭಾವಬೇಡ, ಸರ್ವರಿಗೂ ಸಮಬಾಳು ಸಮಪಾಲು ಎಂಬ ಭಾವನೆ ಮನದಲ್ಲಿ ಮೂಡಿಸಿಕೊಂಡು ಜೀವಿಸಿದ್ದೆ ಆದರೆ ದೇವರ ಕೃಪೆಗೆ ಪಾತ್ರರಾಗುವಿರಿ ಸದ್ಭಕ್ತರು ಉದಾರ ಮನಸ್ಸಿನಿಂದ ದೇಣಿಗೆ ನೀಡಿ ಘನಲಿಂಗ ರುದ್ರಮುನಿ ಶಿವಚಾರ್ಯರರ ಮಠದ ಜೀರ್ಣೋದ್ಧಾರಕ್ಕೆ ಸಹಕರಿಸಬೇಕು ಎಂದರು. ನೇತೃತ್ವ ವಹಿಸಿದ ಶಿವಣಿಯ ಶ್ರೀ ಹಾವಲಿಂಗ ಶಿವಾಚಾರ್ಯರು, ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ನಿರ್ದೇಶಕರಾದ ಬಿ.ಕೆ. ಬಸವರಾಜ ರಾಜಋಷಿ, ಅಫಲಪುರಿನ ವಿಶ್ವರಾಧ್ಯ ಮಳೆಂದ್ರ ಶಿವಾಚಾರ್ಯರು, ರಾಜಾ ಬಾಗ ಸವಾರ ದರ್ಗಾದ ಖಾಜಾ ಜಿಯಾ ಉಲ್ ಹುಸೇನ್ ಜಾಗಿರದಾರ ಮಾತನಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಹಿಸಿದ್ದರು. ವೇದಿಕೆಯಲ್ಲಿ ನಗರ ಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ಸದಸ್ಯ ಚಮಾಬಾಯಿ, ಬಿ.ಡಿ.ಪಿ.ಸಿ. ಅಧ್ಯಕ್ಷ ಅನೀಲ ರಗಟೆ, ವೀರಶೈವ ಮಹಾ ಸಭಾ ತಾಲೂಕಾ ಘಟಕದ ಅಧ್ಯಕ್ಷ ಶಶಿಕಾಂತ ದುರ್ಗೆ ಉಪಸ್ಥಿತರಿದ್ದರು.

ಸ್ವಾಗತ ರಮೇಶ ರಾಜೋಳೆ, ಸಂಚಾಲನೆ ರುದ್ರಮುನಿ ಮಠಪತಿ, ರುದ್ರೇಶ ಮಠಪತಿ ವಂದಿಸಿದರು. ಶರಣಪ್ಪಾ ಬಿರಾದಾರ ಮಡೋಳಪ್ಪಾ ಹುಣಸಗೇರಾ, ಮಲ್ಲಿಕಾರ್ಜುನ ಚೆನ್ನಮಲ್ಲೆ, ಮರೆಪ್ಪಾ ಪೊಲೀಸ ಪಾಟೀಲ, ಗೋವಿಂದ್ಧ ಚಾಪುಲ್ಲೆ, ಮಂಜುನಾಥ ಪೂಜಾರಿ, ಶಿವಕುಮಾರ ಸ್ವಾಮಿ, ಮಲ್ಲಯ್ಯಾ ಹಿರೆಮಠ, ಇರಣ್ಣ ಶೀಲವಂತ, ಸದಾನಂದ ಕಣಜೆ, ಪಿ.ಬಿ. ಟಂಕ ಸಾಲಿಮಠ ಪಾಲ್ಗೊಂಡಿದ್ದರು. ಇದಕ್ಕು ಮುನ್ನ ಬಸವೇಶ್ವರ ದೇವಸ್ಥಾನದಿಂದ ಜಗದ್ಗುರು ಶ್ರೀ ರೇಣುಕಾಚಾರ್ಯರ ಭಾವಚಿತ್ರ ಭವ್ಯ ಮೇರವಣಿಗೆ ಗಾಂಧಿ ವೃತ್ತದಿಂದ ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಹರಳಯ್ಯಾ ವೃತ್ತ, ಶಿವಾಜಿ ವೃತ್ತ ತ್ರಿಪುರಾಂತದ ಮರಿದೇವರ ಗುಡ್ಡದವರೆಗೆ ವಿವಿಧ ವಾದ್ಯಗಳೊಂದಿಗೆ ವೈಭವ ಪೂರ್ಣವಾಗಿ ಜರುಗಿತ್ತು.

ದಿನಾಂಕ 19-3-2011 ಶನಿವಾರ ಸಂಯುಕ್ತ ಕರ್ನಾಟಕ ದಿನ ಪತ್ರಿಕೆ.

Scanned by CamScanner



ಬಸವಕಲ್ಯಾಣದ ಮರಿದೇವರ ಗುಡ್ಡದ ಗವಿಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ತಡೋಳಾ ರಾಜೇಶ್ವರ ಶಿವಾಚಾರ್ಯರು, ಗಡಿಗೌಂಡಗಾಂವ ಶಾಂತವೀರ ಶಿವಾಚಾರ್ಯರು, ಮಾಜಿ ಸಚಿವ ಭೀಮಣ್ಣ ಖಂಡ್ರೆ, ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಸ್ವಾಮಿ ಪಾಲ್ಗೊಂಡಿದ್ದರು.

# 'ಗುರು-ವಿರಕ್ತ ಎಂಬ ಭೇದ ಬೇಡ'

ಬಸವಕಲ್ಯಾಣ: ಮಠಗಳಲ್ಲಿ ಗುರು ವಿರಕ್ತರೆಂಬ ಭೇದಭಾವ ಮಾಡುವುದರಿಂದ ಸಮಾಜ ಒಡಕಿನತ್ತ ಸಾಗುತ್ತಿದೆ. ಆದ್ದರಿಂದ ಯಾವುದೇ ವಾದ ವಿವಾದಕ್ಕೆ ಆಸ್ಪದ ಕೊಡದೆ ಒಗ್ಗಟ್ಟಿನಿಂದ ಇರಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಭೀಮಣ್ಣ ಖಂಡ್ರೆ ಕಿವಿಮಾತು ಹೇಳಿದರು.

ಇಲ್ಲಿನ ಮರಿದೇವರ ಗುಡ್ಡದ ಗವಿಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ತಾವು ವೀರಶೈವ ಮಹಾಸಭೆ ಅಧ್ಯಕ್ಷ ಸ್ಥಾನ ವಹಿಸಿದಂದಿನಿಂದ ಎಲ್ಲ ಮಠಾಧೀಶರು ಒಂದೇ ವೇದಿಕೆಯ ಮೇಲೆ ಕುಳಿತುಕೊಳ್ಳುವಂತೆ ಮಾಡಿದ್ದೇನೆ. ಯಾರೂ ದೊಡ್ಡವರಲ್ಲ ಯಾರೂ ಸಣ್ಣವರಲ್ಲ ಎಂಬುದನ್ನು ತಿಳಿದು ನಡೆದರೆ ಜಗಳ ಹುಟ್ಟುವುದಿಲ್ಲ ಎಂದರು. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಘೋಷವಾಕ್ಯದಂತೆ ಎಲ್ಲರೂ ನಡೆಯಬೇಕಾಗಿದೆ ಎಂದರು.

ಡಾ.ಬಸವರಾಜ ಸ್ವಾಮಿ ಮಾತನಾಡಿ 12 ನೇ ಶತಮಾನದಲ್ಲಿ ಶರಣರ ವಚನಗಳನ್ನು ಸಂರಕ್ಷಿಸಿದ ಘನಲಿಂಗ ರುದ್ರಮುನಿ ದೇವರು ವಾಸಿಸುತ್ತಿದ್ದ ಪವಿತ್ರ ಸ್ಥಾನವೇ ಮರಿದೇವರ ಗುಡ್ಡ ಆಗಿದೆ ಎಂದರು. ಸಮೀಪದಲ್ಲಿನ ಪತ್ರಿವನ ಅಭಿವೃದ್ಧಿಪಡಿಸಬೇಕು. ತ್ರಿಪುರಾಂತ ಕೆರೆಗೆ ರೇವಣಸಿದ್ಧರ ಹೆಸರು ಇಡಬೇಕು ಎಂದು ಒತ್ತಾಯಿಸಿದರು.

ಗಡಿಗೌಂಡಗಾಂವ ಶಾಂತವೀರ ಶಿವಾಚಾರ್ಯರು ಮಾತನಾಡಿ ರೇಣುಕಾಚಾರ್ಯರು ವೀರಶೈವ ಧರ್ಮ ಸ್ಥಾಪಕರಾಗಿದ್ದಾರೆ ಎಂದರು. ಭಾತಂಬ್ರಾ ಶಿವಯೋಗೇಶ್ವರ ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಸಾಯಗಾಂವ ಶಿವಾನಂದ ದೇವರು, ರಾಜಾಬಾಗಸವಾರ ದರ್ಗಾ ಮುಖ್ಯಸ್ಥ ಜಿಯಾ ಉಲ್ ಹಸನ್ ಜಾಗೀರದಾರ, ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದ್ರೆ, ಮುಖಂಡರಾದ ಅನಿಲಕುಮಾರ ರಗಟೆ, ಶಶಿಕಾಂತ ದುರ್ಗೆ ಉಪಸ್ಥಿತರಿದ್ದರು. ರಮೇಶ ರಾಜೋಳೆ ನಿರೂಪಿಸಿದರು. ಕಾರ್ಯಕ್ರಮದ ಮೊದಲು ಬಸವೇಶ್ವರ ದೇವಸ್ಥಾನದಿಂದ ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

ದಿನಾಂಕ 19-3-2011 ಶನಿವಾರ
ಪ್ರಜಾವಾಣಿ ದಿನಪತ್ರಿಕೆ.

# ಜಗದ್ಗುರು ರೇಣುಕಾಚಾರ್ಯ ಜಯಂತಿ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವದ ನಿಮಿತ್ತ ಶುಕ್ರವಾರ ಅಲಂಕೃತ ವಾಹನದಲ್ಲಿ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ಮತ್ತು ತ್ರಿಪುರಾಂತನ ಶ್ರೀ ಘನಲಿಂಗ ರುದ್ರಮುನಿ ಗವಿ ಮಠದಲ್ಲಿ ಧರ್ಮಸಭೆ ಜರುಗಿತು.

ಧರ್ಮಸಭೆ ಉದ್ಘಾಟಿಸಿದ ವೀರಶೈವ ಮಹಾಸಭೆ ಅಧ್ಯಕ್ಷ ಭೀಮಣ್ಣ ಖಂಡ್ರೆ ಮಾತನಾಡಿ, ವೀರಶೈವ-ಲಿಂಗಾಯತ ಬೇರೆ ಅಲ್ಲ, ಜಾತಿ ಪಂಗಡಗಳು ಹೋಗಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ನೇತೃತ್ವ ವಹಿಸಿದ್ದ ರಾಜಾ ಬಾಗ ಸಮಾರ ದರ್ಗಾದ ಶ್ರೀ ಖಾಜಾ ಅಬ್ದುಲ್ ಹಸನ್ ಜಾಗೀರದಾರ ಮಾತನಾಡಿದರು. ನೇತೃತ್ವ ವಹಿಸಿದ್ದ ಶಿವಣಿಯ ಶ್ರೀ ಹಾವಲಿಂಗ ಶಿವಾಚಾರ್ಯರು, ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಡಾ. ಬಸವರಾಜ ರಾಜಋಷಿ, ಆಶೀರ್ವಚನ ನೀಡಿದರು. ಚಿಂಚೋಳಿಯ ಶ್ರೀ ಶಾಂತವೀರ ಶಿವಾಚಾರ್ಯರು, ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಅಫಜಲಪುರನ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು, ಸಾಯಗಾಂವನ ಶ್ರೀ ಶಿವಾನಂದ ದೇವರು ನೇತೃತ್ವ ವಹಿಸಿದ್ದರು.

ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದರೆ ಇದ್ದರು. ಬಿಡಿಪಿಸಿ ಅಧ್ಯಕ್ಷ ಅನೀಲ ಕುಮಾರ ರಗಟೆ, ವೀರಶೈವ ಮಹಾಸಭೆ ತಾಲೂಕು ಅಧ್ಯಕ್ಷ ಶಶಿಕಾಂತ ದುರ್ಗೆರನ್ನು ಸನ್ಮಾನಿಸಲಾಯಿತು. ಡಾ.ಬಸವರಾಜ ಸ್ವಾಮಿ ಪ್ರಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ಸ್ವಾಗತಿಸಿದರು. ರುದ್ರೇಶ ಸ್ವಾಮಿ ಗೋರ್ಟಾ ವಂದಿಸಿದರು. ರುದ್ರಮಣಿ ಮಠಪತಿ ನಿರೂಪಿಸಿದರು.

**ಮೆರವಣಿಗೆ:** ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆ ಮಾರ್ಗವಾಗಿ ತ್ರಿಪುರಾಂತ ಗವಿ ಮಠದ ವರೆಗೆ ಸಾಂಸ್ಕೃತಿಕ ವೈಭವದೊಂದಿಗೆ ಅಲಂಕೃತ ವಾಹನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರರ ಭಾವಚಿತ್ರದ ಮೆರವಣಿಗೆ ಜರುಗಿತು.



ಗವಿಮಠದಲ್ಲಿ ನಡೆದ ಜಯಂತಿ ಮಹೋತ್ಸವ ಮಾಜಿ ಸಚಿವ ಭೀಮಣ್ಣ ಖಂಡ್ರೆ ಉದ್ಘಾಟಿಸಿದರು. ರಾಜೇಶ್ವರ ಶಿವಾಚಾರ್ಯರು, ಶಾಂತವೀರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಸ್ವಾಮಿ ಇತರರಿದ್ದರು.

ದಿನಾಂಕ 19-3-2011 ಶನಿವಾರ ವಿಜಯ ಕರ್ನಾಟಕ
ದಿನಪತ್ರಿಕೆ.

Scanned by CamScanner

# ಮನುಷ್ಯನಲ್ಲಿ ನೈತಿಕತೆ ಅಗತ್ಯ...

ಬಸವಕಲ್ಯಾಣ, ೩೧– ನೈತಿಕತೆ ಇದ್ದಾಗಲೇ ಜೀವನದಲ್ಲಿ ಯಶಸ್ಸು ಪಡೆಯಬಹುದು ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ತಾಲ್ಲೂಕಿನ ಜಾಫರವಾಡಿಯಲ್ಲಿ ಮಳಖೇಡದ ಲಿಂ. ಕಾರ್ತಿಕೇಶ್ವರ ಶಿವಾಚಾರ್ಯರ ಸ್ಮರಣೋತ್ಸವ ನಿಮಿತ್ಯ ಮುಳೆ ಪರಿವಾರ ಹಮ್ಮಿಕೊಂಡಿದ್ದ ಸಮಾರಂಭದ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದರು. ಧರ್ಮದ ಮೇಲೆ ನಂಬಿಕೆ ಇಡಬೇಕು. ನೈತಿಕೆಯ ದಾರಿಯಲ್ಲಿ ಸಾಗಬೇಕು. ಅಂದಾಗಲೇ ಬದುಕು ಸುಖಿಯಾಗುತ್ತದೆ ಎಂದು ಹೇಳಿದರು.

ಖ್ಯಾತ ಪ್ರವಚನಕಾರ ಗುರುಲಿಂಗಯ್ಯಸ್ವಾಮಿ ಹೂವಿನಹಳ್ಳಿ ಹಾಗೂ ರೇವಣಸಿದ್ದ ನೌನಳ್ಳಿ, ಬಸವರಾಜ ಶಾಸ್ತ್ರಿ, ಬಾಬುರಾವ ಪಾಟೀಲ ಮುಂತಾದವರಿಂದ ಭಜನೆ ನಡೆಯಿತು. ಭಜನಾ ತಂಡಗಳೂ ಪಾಲ್ಗೊಂಡಿದ್ದವು.

ಮಹಾರಾಜಪ್ಪ ಮುಳೆ, ಚೆನ್ನಪ್ಪ ಅಂಬಾಡೆ, ಶರಣಪ್ಪ ತಿಪ್ಪನೂರ, ಶಾಂತವಿಜಯ ಪಾಟೀಲ, ವೀರಣ್ಣ ಮುಳೆ, ಶಿವರಾಜ ಪಾಟೀಲ ಬೆಳಕೋಟಾ, ಕಾರ್ತಿಕಯ್ಯ ಸ್ವಾಮಿ, ಹಾರಕೂಡದ ಚೆನ್ನವೀರ ಶಿವಾಚಾರ್ಯರು ಪಾಲ್ಗೊಂಡಿದ್ದರು.

1-4-2011 ಶುಕ್ರವಾರ
ಸಂಯುಕ್ತ ಕರ್ನಾಟಕ

Scanned by CamScanner

ಕಲ್ಬುರ್ಗಿ ಸೋಮವಾರ 21 ಮಾರ್ಚ್ 2011




ಬಸವಕಲ್ಯಾಣ: ಇಲ್ಲಿನ ತ್ರೀಪುರಾಂತ ಮರಿದೇವರ ಗುಡ್ಡದಲ್ಲಿರುವ ಗವಿ ಮಠದಲ್ಲಿ ನಡೆದ ರೇಣುಕಾಚಾರ್ಯರ ಜಯಂತಿಯ ಧರ್ಮ ಸಭೆಯಲ್ಲಿ ಮಾಜಿ ಸಚಿವ ಹಾಗೂ ಅಖೀಲ ಭಾರತ ಮಹಾ ಸಭಾ ಅಧ್ಯಕ್ಷರಾದ ಭೀಮಣ್ಣಾ ಖಂಡ್ರೆ ಮಾತನಾಡಿದರು. ವೇದಿಕೆಯಮೇಲೆ ಶ್ರೀ ಅಭೀಮನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಸೇರಿದಂತೆ ಮತ್ತಿತ್ತರು ಉಪಸ್ಥಿತರಿದ್ದರು.

ದಿನಾಂಕ 21-3-2011 ಸೋಮವಾರ ಸಂಜೆ ವಾಣಿ ದಿನ ಪತ್ರಿಕೆ.

## ಮುಸ್ತರಿಯಲ್ಲಿ ಜಾತ್ರಾ ಮಹೋತ್ಸವ

ಬೀದರ, ೨೪– ಹುಮನಾಬಾದ ತಾಲೂಕಿನ ಮುಸ್ತರಿ ಗ್ರಾಮದ ಪಾರ್ವತಿ ಪರಮೇಶ್ವರ ದೇವಾಲಯದಲ್ಲಿ ದಿ. ೨೬ ರಿಂದ ಜಾತ್ರಾ ಮಹೋತ್ಸವ ನಡೆಯಲಿದೆ.

ದಿ. ೨೬ ರಂದು ಬೆಳಿಗೆ ೮ ಗಂಟೆಗೆ ಪಲ್ಲಕ್ಕಿ ಉತ್ಸವದೊಂದಿಗೆ ಜಾತ್ರೆ ಆರಂಭವಾಗಲಿದೆ. ಸಂಜೆ ೬ ಗಂಟೆಗೆ ಧರ್ಮಸಭೆ ನಡೆಯಲಿದೆ. ಇಟಗಾದ ಚೆನ್ನಮಲ್ಲೇಶ್ವರ ತ್ಯಾಗಿ ಸಾನಿಧ್ಯ ವಹಿಸುವರು. ಬಸವಕಲ್ಯಾಣ ಗವಿಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಲೋಕಸಭಾ ಸದಸ್ಯ ಧರ್ಮಸಿಂಗ್ ಉದ್ಘಾಟಿಸುವರು.

ಬಿಎಸ್‌ಎಸ್‌ಕೆ ಅಧ್ಯಕ್ಷ ಸುಭಾಷ ಕಲ್ಲೂರ್, ಹಟಯೋಗಿ ಕೃಷ್ಣಾನಂದ ಸರಸ್ವತಿ ಸ್ವಾಮಿಜಿ, ಜಿಲ್ಲಾ ಪಂಚಾಯತಿ ಸದಸ್ಯೆ ಜಗದೇವಿ ರುರಣಪ್ಪ ಚಾಂಗಲೇರಾ, ತಾಲೂಕು ಪಂಚಾಯತಿ ಸದಸ್ಯ ಜಗನ್ನಾಥರೆಡ್ಡಿ ಬಳಗಾರ, ಗ್ರಾಮ ಪಂಚಾಯತಿ ಅಧ್ಯಕ್ಷೆ ಸರಸ್ವತಿ ಪ್ರಭು ಹಾಶಣ್ಣನೋರ್, ಉಪಾಧ್ಯಕ್ಷ ಮಹಾರುದ್ರಯ್ಯ ಬಸಯ್ಯ ಮಳ್ಳಿ ಅತಿಥಿಯಾಗಿ ಪಾಲ್ಗೊಳ್ಳುವರು.

೨೭ ರಂದು ಬೆಳಿಗ್ಗೆ ೮ ಗಂಟೆಗೆ ಪಾರ್ವತಿ ಪರಮೇಶ್ವರರ ಅಭಿಷೇಕ, ಅಗ್ನಿಪ್ರವೇಶ ನಡೆಯುವುದು. ನಂತರ ಮಹಾಪ್ರಸಾದ ನಡೆಯುತ್ತದೆ. ಸಂಜೆ ೫ ಗಂಟೆಗೆ ಹಾಸ್ಯ ಕಾರ್ಯಕ್ರಮ ನಡೆಯುತ್ತದೆ. ೨೮ ರಂದು ಬೆಳಿಗ್ಗೆ ೮ ಗಂಟೆಗೆ ಕುಸ್ತಿ ನಡೆಯುತ್ತದೆ. ಸುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವಸ್ಥಾನ ಸಮಿತಿ ಪ್ರಮುಖರು ಕೋರಿದ್ದಾರೆ.

ದಿನಾಂಕ 25-10-11 ವಿ.ಕರ್ನಾಟಕ

# ಅಹಂಭಾವನೆ ಅಳಿಯಲಿ: ಶಿವರುದ್ರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಅಹಂಭಾವನೆ ಅಳಿಯದೆ ತತ್ವದ ಉಳಿವು ಅಸಾಧ್ಯವಾಗಿದೆ ಎಂದು ಬೆಂಗಳೂರು ಬೇಲಿ ಮಠದ ಶಿವರುದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಇಲ್ಲಿನ ಅಕ್ಕಮಹಾದೇವಿ ಕಾಲೇಜು ಮೈದಾನದಲ್ಲಿ ಭಾನುವಾರ ಬಸವ ಉತ್ಸವದ ಮೂರನೇ ದಿನ ಬೆಳಿಗ್ಗೆ ನಡೆದ 'ಬಸವಾದಿ ಶರಣರಿತ್ತ ಜೀವನ ಮೌಲ್ಯಗಳು' ವಿಷಯದ ಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಕಲ್ಯಾಣದಲ್ಲಿ ಹುತಾತ್ಮ ಶರಣರಾದ ಹರಳಯ್ಯ ಮತ್ತು ಮಧುವಯ್ಯನವರ ಸ್ಮಾರಕ ನಿರ್ಮಾಣ ಆಗಬೇಕು. ಇಸ್ಲಾಂ ಧರ್ಮೀಯರ ಮಕ್ಕಾದಂತೆ ಇದು ಧಾರ್ಮಿಕ ಕೇಂದ್ರ ಆಗುವುದು ಅವಶ್ಯಕವಿದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಡಾ.ಜಯಶ್ರೀ ದಂಡೆಯವರು ಆಚಾರವೇ ಸ್ವರ್ಗ ಅನಾಚಾರವೇ ನರಕ ವಿಷಯದ ಬಗ್ಗೆ ಹಾಗೂ ಕೌತಾ ಸತ್ಯದೇವಿತಾಯಿ ಅವರು ಬಸವಾದಿ ಶರಣರಿತ್ತ ಶಿವಯೋಗ ಸುಖ ವಿಷಯ ಕುರಿತು ಉಪನ್ಯಾಸ ಕೊಟ್ಟರು. ಬೀದರ ಚಿದಂಬರಾಶ್ರಮದ ಶಿವಕುಮಾರ ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯರು, ಶಂಕರ ದೇವನೂರ ಮಾತನಾಡಿದರು.

ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಾಗಸಂದ್ರ ಸಿದ್ಧಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು. ತಹಸೀಲ್ದಾರ ಎಚ್.ಆರ್.ಪಾಟೀಲ ಸ್ವಾಗತಿಸಿದರು. ವಿಜಯಲಕ್ಷ್ಮಿ ಗಡ್ಡೆ ನಿರೂಪಿಸಿದರು. ರಾಜಕುಮಾರ ಹೂಗಾರ ಮದಕಟ್ಟಿ ಹಾಗೂ ಶ್ರೀದೇವಿ ಖಂಡಾಳೆ ವಚನ ಸಂಗೀತ ಹಾಡಿದರು.



ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಬಸವ ಉತ್ಸವದ ಗೋಷ್ಠಿಯಲ್ಲಿ ಬೆಂಗಳೂರು ಬೇಲಿಮಠದ ಶಿವರುದ್ರ ಸ್ವಾಮೀಜಿ, ಬೀದರ ಶಿವಕುಮಾರ ಸ್ವಾಮೀಜಿ, ಭಾತಂಬ್ರಾ ಶಿವಯೋಗೇಶ್ವರ ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಜಯಶ್ರೀ ದಂಡೆ ಪಾಲ್ಗೊಂಡಿದ್ದರು.

ದಿನಾಂಕ 28-3-2011 ಸೋಮವಾರ ಪ್ರಜಾವಾಣಿ ದಿನಪತ್ರಿಕೆ.




## ಸ್ಮರಣೋತ್ಸವ

ಬಸವಕಲ್ಯಾಣ: ತಾಲೂಕಿನ ಜಾಫರವಾಡಿ ಗ್ರಾಮದಲ್ಲಿ ಲಿಂ. ಕಾರ್ತಿಕೇಶ್ವರ ಶಿವಾಚಾರ್ಯರ ಸ್ಮರಣೋತ್ಸವ ಸಮಾರಂಭದಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ದಿನಾಂಕ 31-3-2011 ಗುರುವಾರ ಉದಯವಾಣಿ ದಿನಪತ್ರಿಕೆ.

Scanned by CamScanner



ಬೆಂಗಳೂರಿನ ಬೇಲಿಮಠದ ಪೂಜ್ಯ ಶಿವರುದ್ರ ಸ್ವಾಮಿಗಳು ದೀಪ ಬೆಳಗಿಸುತ್ತಿರುವುದು. ಶಿವಯೋಗೀಶ್ವರ ಸ್ವಾಮಿಜಿ, ರಾಜೇಶ್ವರ ಶಿವಾಚಾರ್ಯರು ಇದ್ದರು.

# ವಚನಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ...

ಬಸವಕಲ್ಯಾಣ, ೨೭– ವಚನಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬೆಂಗಳೂರಿನ ಬೇಲಿಮಠದ ಪೂಜ್ಯ ಶಿವರುದ್ರ ಸ್ವಾಮಿಗಳು ನುಡಿದರು.

ಬಸವ ಉತ್ಸವ ನಿಮಿತ್ಯ ನಡೆದ ಗೋಷ್ಠಿ ಉದ್ಘಾಟಿಸಿ ಪೂಜ್ಯರು ಆಶೀರ್ವಚನ ನೀಡಿದರು. ಮನಸ್ಸನ್ನು ಪರಿಶುದ್ಧಗೊಳಿಸುವ ಅದ್ಭುತ ಶಕ್ತಿ ವಚನಗಳಲ್ಲಿದೆ ಎಂದು ಹೇಳಿದರು. ವಚನಗಳು ಅಂತರಂಗವನ್ನು ಸಹ ಶುದ್ಧಗೊಳಿಸುತ್ತವೆ ಎಂದರು.

ಬಸವಾದಿ ಶರಣರ ಕಾರ್ಯಕ್ಷೇತ್ರದಲ್ಲಿ ಬಸವ ಉತ್ಸವ ನಡೆಯುತ್ತಿರುವುದು ಸಂತಸದ ಸಂಗತಿ. ಶರಣರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ಇಂದಿನ ಸಮಾಜವನ್ನು ಅತಿಯಾಗಿ ಕಾಡುತ್ತಿರುವ ಎಲ್ಲ ಸಮಸ್ಯೆಗಳನ್ನು ವಚನ ಪಾಲನೆಯ ಮೂಲಕ ಪರಿಹರಿಸಿಕೊಳ್ಳಲು ಸಾಧ್ಯವಿದೆ ಎಂದು ಪೂಜ್ಯರು ಹೇಳಿದರು.

ಕಲಬುರ್ಗಿ ವಿಶ್ವವಿದ್ಯಾಲಯದ ಡಾ. ಜಯಶ್ರೀ ದಂಡೆ ಅವರು ಉಪನ್ಯಾಸ ನೀಡಿದರು. ಬೀದರಿನ ಚಿದಂಬರಾಶ್ರಮದ ಪೂಜ್ಯ ಶಿವಕುಮಾರ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಚಿತ್ರದುರ್ಗ ಮೇದಾರ ಗುರುಪೀಠದ ಬಸವಪ್ರಭು ಕೇತೇಶ್ವರ ಸ್ವಾಮಿಗಳು ನೇತೃತ್ವ ವಹಿಸಿದ್ದರು. ತಡೋಳಾದ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತದ ಘನಲಿಂಗ ರುದ್ರಮುನಿ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಯೋಗೀಶ್ವರ ಸ್ವಾಮಿಜಿ ಉಪಸ್ಥಿತರಿದ್ದರು.

ಕಲ್ಯಾಣನಾಡಿನ ಶರಣರ ಪರಿಷತ್ ಅಧ್ಯಕ್ಷ ರಂಜಾನ್ ದರ್ಗಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಎಂಜಿನಿಯರ್ ಗಣೇಶ ಗುಡಿ, ಶಂಕರ ದೇವನೂರ ಮುಖ್ಯ ಅತಿಥಿಯಾಗಿದ್ದರು. ತಹಸೀಲ್ದಾರ್ ಎಸ್.ಆರ್. ಪಾಟೀಲ ಸ್ವಾಗತಿಸಿದರು. ವಿಜಯಲಕ್ಷ್ಮಿ ಗಡ್ಡೆ ನಿರೂಪಿಸಿದರು. ಜಿಲ್ಲಾಧಿಕಾರಿ ಸಮೀರ್ ಶುಕ್ಲಾ, ಬಸವಕಲ್ಯಾಣ ಸಹಾಯಕ ಆಯುಕ್ತ ಎಚ್.ಪ್ರಸನ್ನಕುಮಾರ, ಬಿಕೆಡಿಬಿ ಆಯುಕ್ತ ಕಾಶಿನಾಥ ಗೋಖಲೆ, ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಚಪ್ಪ ವಾಲಿ, ಪೂಜ್ಯ ಸಿದ್ಧರಾಮ ಶರಣರು ಬೆಲ್ದಾಳ್, ಮುಚಳಂಬದ ಪ್ರಣವಾನಂದ ಸ್ವಾಮಿಜಿ ಉಪಸ್ಥಿತರಿದ್ದರು.

ದಿನಾಂಕ 28-3-2011 ಸೋಮವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ



ಹುಲಸೂರ ಕ್ಷೇತ್ರದ ಬೇಲೂರ ಗ್ರಾಮದ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಆಧ್ಯಾತ್ಮಿಕ ಪ್ರವಚನ ಚಾಲನೆ ನೀಡಿದರು. ತಾಂಬೋಳಾದ ವೀರಕ್ತ ಮಠದ ಶ್ರೀ ವಿಜಯಕುಮಾರ ಮಹಾಸ್ವಾಮಿಗಳು. ತ್ರೀಪುರಾಂತ ಮರಿದೇವರ ಗುಡ್ಡದ ಅಭೀನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರವಚನಕಾರರಾದ ಯಶವಂತ ಶಾಸ್ತ್ರಿ ಜೇವರ್ಗಿ, ಬಸವರಾಜ, ಚನ್ನಬಸವ ಸ್ವಾಮಿ, ಮಹಾರುದ್ರಪ್ಪಾ ಹೊಳ್ಳೆ ಉಪಸ್ಥಿತರಿದ್ದರು.

ದಿನಾಂಕ 3-4-2011 ರವಿವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ



ಹುಲಸೂರ ವ್ಯಾಪ್ತಿಯಲ್ಲಿ ಬರುವ ಬೇಲೂರ ಗ್ರಾಮದ ಶ್ರೀ ಸಿದ್ದೇಶ್ವರ ಜಾತ್ರಾ ನಿಮಿತ್ಯವಾಗಿ ಪಲ್ಲಕ್ಕಿ ಮೇರವಣಿ ವಿಜೃಭಣೆಯಿಂದ ನಡೆಸಲಾಯಿತು. ಮೇರವಣಿಗೆಯಲ್ಲಿ ತ್ರೀಪುರಾಂತದ ಶ್ರೀ ಅಭೀನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಅನೇಕ ಭಕ್ತರನ್ನು ಕಾಣಬಹುದು.

# ಬೇಲೂರಲ್ಲಿ ಅದ್ದೂರಿ ಸಿದ್ದೇಶ್ವರ ರಥೋತ್ಸವ

ಹುಲಸೂರ, ೧೦- ಗ್ರಾಮದ ವ್ಯಾಪ್ತಿಯಲ್ಲಿ ಬರುವ ಬೇಲೂರ ಗ್ರಾಮದಲ್ಲಿ ಶ್ರೀ ಸಿದ್ದೇಶ್ವರ ಜಾತ್ರಾ ನಿಮಿತ್ಯವಾಗಿ ಸಸ್ರಾರು ಭಕ್ತರ ಜೈ ಘೋಷಣೆಗಳ ಮಧ್ಯ ಅದ್ದೂರಿಯಿಂದ ರಥೋತ್ಸವ ಜರುಗಿತು. ತ್ರಿಪುರಾಂತದ ಶ್ರೀ ಅಭೀನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ರಥೋತ್ಸವಕ್ಕೆ ಚಾಲನೆ ನೀಡಿದರು. ಸುತ್ತ ಮುತ್ತಲಿನ ಗ್ರಾಮಗಳಿಂದ ಅಪಾರ ಸಂಖ್ಯೆಲ್ಲಿ ಭಕ್ತರು ಭಾಗವಹಿಸಿದರು. ಜಾತ್ರೆಯ ನಿಮಿತ್ಯ ನಡೆದ ಧರ್ಮ ಸಭೆಯಲ್ಲಿ ಡಾ. ಬಸವರಾಜ ಸ್ವಾಮಿಯರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕೀರ್ತನ ಶ್ರೀ ಯಶವಂತ ಶಾಸ್ತ್ರಿ ಜೇವರ್ಗಿ, ಹಾಗೂ ಚನ್ನುಸ್ವಾಮಿ, ಶಿವಕುಮಾರ ಪಾಟೀಲ, ರೇ[illegible]ಸಿದ್ಧ ಪಾಟೀಲ, ಜಗದ್ದಿಶ ಉದಾನೆ, ಅನೇಕ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದಿನಾಂಕ 11-4-2011 ಸೋಮವಾರ ಹೊಸಂಯುಕ್ತ ಕರ್ನಾಟಕ

# ಮನುಷ್ಯನಲ್ಲಿ ನೈತಿಕತೆ ಇರಬೇಕು



ಬಸವಕಲ್ಯಾಣ : ೫, ಮನುಷ್ಯನಲ್ಲಿ ನೈತಿಕತೆ ಇರಬೇಕು ಅಂದಾಗಲೆ ಜೀವನದಲ್ಲಿ ಯಶಸ್ವಿ ಸಾಧಿಸಲು ಸಾದ್ಯ ಎಂದು ತ್ರಿಪೂರಾಂತ ಗವಿ ಮಂಠದ ಶ್ರೀ ಅಭಿನವಘ'ನಲಿಂಗ ರುದ್ರಮುನಿ ಶಿವಾರ್ಚಾಯರು ತಿಳಿಸಿದರು, ತಾಲೂಕಿನ ಜಾಫರವಾಡಿಯಲ್ಲಿ ಮಳಖೇಡದ ಲಿಂಗೈಕ್ಯ ಶ್ರೀ ಕಾರ್ತಿಕೇಶ್ವರ ಶಿವಾರ್ಚಾಯರ ಸ್ಮರಣೋತ್ಸವ ನಿಮಿತ್ಯ ಮುಳೆ ಪರಿವಾರದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸಾನಿದ್ಯ ವಹಿಸಿ ಮಾತನಾಡಿದ ಅವರು ಮಾನವನು ಯಾವಗಲು ಧರ್ಮದ ಮೇಲೆ ನಂಬಿಕೆ ಇಟ್ಟು ನೈತಿಕತೆಯಿಂದ ನಡೆದರೆ ಸುಖಿ ಜೀವನ ನಡೆಸಲು ಸಾಧ್ಯವಾಗುತ್ತದೆ. ಎಂದು ನುಡಿದರು. ಖ್ಯಾತ ಪ್ರವಚನಕಾರ ಗುರುಲಿಂಗಯ್ಯಾ ಸ್ವಾಮಿ ಹೂವಿನ ಹಳ್ಳಿ ಹಾಗೂ ರೇವಣಸಿದ್ದ ನೌನಳ್ಳಿ, ಬಸವರಾಜ ಶಾಸ್ತ್ರಿ ಉಡಬಾಳ, ಬಾಬುರಾವ . ಪಾಟೀಲ ಕಣಮುಸ ಹಾಗೂ ಇತರ ಭಜನಾ ತಂಡಗಳಿಂದ ಥಾಂತ್ರಿಯಿಡಿ ವಿವಿಧ ಸಂಗೀತ ಸಂಜೆ ಕಾರ್ಯಕ್ರಮಗಳು ಜರುಗಿದವು ಪ್ರಮುಖರಾದ ಶ್ರೀ ಮಹಾರಾಜಪ್ಪಾ ಮುಳೆ, ಚೆನ್ನಪ್ಪಾ ಅಂಬಾಡೆ ಶರಣಪ್ಪಾ ತಿಪ್ಪನೂರ ಶಾಂತವಿಜಯ ಪಾಟೀಲ್ ವೀರಣ್ಣಾ ಮುಳೆ ಶಿವರಾಜ ಪಾಟೀಲ್ ಬೆಳಕೋಟಾ ಕಾರ್ತಿಕಯ್ಯಾ ಸ್ವಾಮಿ ಶಾಸ್ತ್ರಿ ಬಿರಾದಾರ ಉಪಸ್ಥಿರಿದರು ಸ್ಮರಣೋತ್ಸವ ನಿಮಿತ್ಯ ಹಾರಕೂಡದ ಶ್ರೀ ಚೆನ್ನವೀರ ಶಿವಾರ್ಚಾಯರು ಭಾಗವಹಿಸಿದರು ಗುಂಡುರು ಎಕಲೂರು ಘಾಟಹಿಪ್ಪರಗಾ ಗ್ರಾಮಸ್ಥರು ಸೇರಿದಂತೆ ವಿವಿಧ ಗ್ರಾಮದ ಭಕ್ತದಿಗಳು ಭಾಗವಹಿಸಿದರು

ದಿನಾಂಕ 5-4-2011 ಮಂಗಳವಾರ ಸಂಜೆವಾಣಿ ದಿನಪತ್ರಿಕೆ

Scanned by CamScanner



ಬೀದರ್ ತಾಲೂ
ಶ್ರೀ ರಾಜೇಶ್ವರ

# ಪಂಚಾಚಾರ್ಯ ಮಠಗಳಿಗೇಕೆ ಕಡೆಗಣನೆ: ರಂಭಾಪುರಿ ಶ್ರೀ

▪ ವಿಕ ಸುದ್ದಿಲೋಕ ಔರಾದ್

ಬಸವಕಲ್ಯಾಣ ತ್ರಿಪುರಾಂತದಲ್ಲಿರುವ ಪಂಚಾಚಾರ್ಯ ಮಠದ ಅಭಿವೃದ್ಧಿಗೆ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಕಡೆಗಣನೆ ಮಾಡಿದೆ ಎಂದು ಬಾಳೆಹೊನ್ನೂರಿನ ರಂಭಾಪುರಿ ವೀರಸೋಮೇಶ್ವರ ಜಗದ್ಗುರುಗಳು ಆರೋಪಿಸಿದ್ದಾರೆ.

ರಂಭಾಪುರಿ ಪೀಠದ ಶಾಖಾ ಮಠ ಬಸವಕಲ್ಯಾಣದ ತ್ರಿಪುರಾಂತದಲ್ಲಿ 25 ಎಕರೆ ಪ್ರದೇಶದಲ್ಲಿ ಮರಿ ದೇವರ ಗುಡ್ಡ ಇದೆ. ಅಲ್ಲೊಬ್ಬ ಸ್ವಾಮೀಜಿ ಇದ್ದಾರೆ. ಅಭಿವೃದ್ಧಿಯ ಪಟ್ಟಿಯಲ್ಲಿ ಸೇರಿಸಿಲ್ಲ, ಅದನ್ನು ಏಕೆ ಅಭಿವೃದ್ಧಿಗೆ ಪರಿಗಣಿಸಬಾರದು ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಔರಾದ್‌ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮರಿದೇವರ ಗುಡ್ಡ ಅಭಿವೃದ್ಧಿ ಕುರಿತು ಮುಖ್ಯಮಂತ್ರಿಯವರೊಂದಿಗೆ ಮಾತನಾಡಿದ್ದೇನೆ. ಸಿಎಂ ಅವರು ಅದನ್ನು ಪ್ರಾಧಿಕಾರ ಯೋಜನೆಯಲ್ಲಿ ಸೇರಿಸಲು ಒಪ್ಪಿರುವುದಾಗಿ ತಿಳಿಸಿದ್ದಾರೆ.

ಅದೇ ರೀತಿ ಕೂಡಲ ಸಂಗಮದಲ್ಲಿ ಜಾತವೇದ ಮುನಿಗಳ ಪುರಾತನ ಸ್ಮಾರಕವನ್ನೂ ಕಡೆಗಣಿಸಲಾಗಿದೆ. ಕೆಲ ಹಿತಾಸಕ್ತರು ಪುರಾತನ ಸಂಸ್ಕೃತಿ ನಾಶ ಮಾಡುವ ಹುನ್ನಾರ ನಡೆಸಿದ್ದಾರೆ. ಅದು ಸರಿಯಾದ ಕ್ರಮವಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

**ಅಡ್ಡಪಲ್ಲಕ್ಕಿ** : ಔರಾದ್‌ನಲ್ಲಿ ಮಂಗಳವಾರ ರಾತ್ರಿ ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನೆರವೇರಿತು. ತಾಪಂ ಕಚೇರಿಯಿಂದ ಅಮರೇಶ್ವರ ದೇವಾಲಯ ವರೆಗೆ ಸಾಂಸ್ಕೃತಿಕ ವೈಭವದೊಂದಿಗೆ ಉತ್ಸವ ನಡೆದಿದೆ.

ಅಡ್ಡಪಲ್ಲಕ್ಕಿ ಉತ್ಸವದ ನಂತರ ಅಮರೇಶ್ವರ ದೇವಾಲಯದಲ್ಲಿ ಮಂಗಳವಾರ ರಾತ್ರಿ ಸಭೆ ನಡೆಯಿತು. ವೈಚಾರಿಕತೆ ಹೆಸರಲ್ಲಿ ಭಾರತೀಯ ಪುರಾತನ ಸಂಸ್ಕೃತಿಯ ನಾಶ ಸಲ್ಲದು ಎಂದು ರಂಭಾಪುರಿ ಶ್ರೀ ಎಚ್ಚರಿಕೆ ನೀಡಿದ್ದಾರೆ.

ಇಲ್ಲಿಯ ಅಮರೇಶ್ವರ ದೇವಾಲಯದಲ್ಲಿ ಪ್ರತಿ ವರ್ಷ ನಡೆಯುವ ಒಂದು ಕೋಟಿ ಓಂ ನಮ ಶಿವಾಯ ಜಪದ ಬೆಳ್ಳಿ ಹಬ್ಬ ಬುಧವಾರ ಬೆಳಗ್ಗೆ ನೆರವೇರಿತು. ರಂಭಾಪುರಿ ಶ್ರೀ ಸಾನ್ನಿಧ್ಯ ವಹಿಸಿದ್ದರು. ಮೆಹಕರ್‌ಶ್ರೀ ನೇತೃತ್ವ ವಹಿಸಿದ್ದರು.

ಹೆಡಗಾಪುರ, ಚಾಂಬೋಳ, ರಾಜೇಶ್ವರ, ಹಣೆಗಾಂವ್, ವಡಗಾಂವ್, ಸೊಂತ ಶ್ರೀಗಳಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಬಸವರಾಜ ದೇಶಮುಖ ಪ್ರಾಸ್ತಾವಿಕ ಮತುಗಳನ್ನಾಡಿದರು. ಡಾ.ಕಲ್ಲಪ್ಪ ಉಪ್ಪೆ ಅಧ್ಯಕ್ಷತೆ ವಹಿಸಿದ್ದರು. ಬೀದರ್ ಜಿಲ್ಲಾ ವೀರಶೈವ ಮಹಾಸಭೆ ಅಧ್ಯಕ್ಷ ವೈಜಿನಾಥ ಕಮಠಾಣೆ, ಶಿವರಾಜ ಅಲ್ಮಾಜೆ ಇದ್ದರು.

ದಿನಾಂಕ 29-4-2011 ಶುಕ್ರವಾರ ವಿಜಯ ಕರ್ನಾಟಕ ದಿನಪತ್ರಿಕೆ



ಬಸವಕಲ್ಯಾಣ ರಾಷ್ಟ್ರಕವಿ ಕುವೆಂಪು ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರೋತ್ಸವ ಕಾರ್ಯಕ್ರಮದ ಧ್ವಜಾರೋಹಣ ನೇರವೇರಿಸಿ ಮಾತನಾಡುತ್ತಿರುವ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ವೇದಿಕೆಯ ಮೇಲೆ ಪ್ರಕಾಶ ಮಂಡೋಳೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದಿನಾಂಕ
17-8-11
ಬುಧವಾರ
ಸಂಯುಕ್ತ
ಕರ್ನಾಟಕ
ದಿನ ಪತ್ರಿಕೆ

# ಕುವೆಂಪು ಶಾಲೆಯಲ್ಲಿ ವಿಜೃಂಭಣೆಯ ಸ್ವಾತಂತ್ರೋತ್ಸವ

ಬಸವಕಲ್ಯಾಣ, ೧೬– ನಗರ ರಾಷ್ಟ್ರಕವಿ ಕುವೆಂಪು ಶಾಲೆಯಲ್ಲಿ ೬೫ನೇ ಸ್ವಾತಂತ್ರೋತ್ಸವ ಅತಿ ವಿಜೃಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಧ್ವಜಾರೋಹಣ ತ್ರೀಪುರಾಂತ ಮರಿದೇವರ ಗುಡ್ಡದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇರವೇರಿಸಿ ರಾಷ್ಟ್ರಭಕ್ತಿ, ದೇಶಪ್ರೇಮ ಬೆಳಸಿಕೊಂಡು ವಿದ್ಯಾವಂತರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಎ.ಪಿ.ಎಂ.ಸಿ ಅಧ್ಯಕ್ಷರಾದ ಪ್ರಕಾಶ ಮಂಡೋಳೆ, ಸಂಪನ್ಮೂಲ ವ್ಯಕ್ತಿಗಳಾದ ಬಿ.ಆರ್.ಸಿ ಮೊನಪ್ಪಾ ಪಂಚಾಳ ಆಗಮಿಸಿದರು. ಸಂಸ್ಥೆಯ ಅಧ್ಯಕ್ಷ ಪ್ರಕಾಶ ಬಿರಾದಾರ ಮಾತನಾಡಿ ಸ್ವಾತಂತ್ರ್ಯ ವೀರರ ತ್ಯಾಗ ಬಲಿದಾನ ಕುರಿತು ಮಾತನಾಡಿದರು.

ಸ್ವಾಗತವನ್ನು ಮುಖ್ಯ ಗುರುಗಳಾದ ವಿದ್ಯಾರಾಣಿ ಬಿರಾದಾರ, ನಿರೂಪಣೆ ಸಂಜುಕುಮಾರ ಸಿಂಗ್ರೆ, ವಂದನಾರ್ಪಣೆ ಕು. ವಿಜಯಲಕ್ಷ್ಮೀ ನೇರಟ್ಲೆ ವಹಿಸಿದರು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮುಗಳನ್ನು ನಡೆದವು.

Scanned by CamScanner

ಪ್ರಜಾವಾಣಿ

ಗುರುವಾರ

11ನೇ ಆಗಸ್ಟ್ 2011

**2 G***



## ಉದ್ಘಾಟನೆ

ಹುಮನಾಬಾದ್ ತಾಲ್ಲೂಕು ಸುಲ್ತಾನ ಬಾದವಾಡಿ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನ ಕಳಸಾರೋಹಣ ಬಳಿಕ ನಡೆದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ರಾಜಶೇಖರ ಪಾಟೀಲ, ಬಿ.ಎಸ್.ಎಸ್.ಕೆ ಅಧ್ಯಕ್ಷ ಸುಭಾಷ ಕಲ್ಲೂರ, ಹಾರಕೂಡಶ್ರೀ ಇದ್ದರು.

Scanned by CamScanner

# ಬಸವಣ್ಣನವರು ಕಾಯಕದಂತ್ತೆ ನಡೆಯುಬೇಕು : ಕಲ್ಲೂರ

ಬಸವಕಲ್ಯಾಣ, ೨– ಈ ಯುಗದಲ್ಲಿ ನಾವೆಲ್ಲ ಧಾರ್ಮಿಕ ರೀತಿಯಲ್ಲಿ ಧರ್ಮಪಾಲನೆ ಮಾಡಿದರೆ ಸಾಲದು. ಬಸವಣ್ಣನವರು ೧೨ನೇ ಶತಮಾನದಲ್ಲಿ ಮಾಡಿರುವ ಕಾಯಕದಂತೆ ನಡೆಯಬೇಕು ಎಂದು ಬಿ.ಎಸ್.ಎಸ್.ಕೆ. ಅಧ್ಯಕ್ಷರಾದ ಸುಭಾಷ ಕಲ್ಲೂರ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಸಮಾನಥೆ ಭಕ್ತಸಾರ ಮಹಾ ಪೂರಾಣ ಕಾರ್ಯಕ್ರಮದ ಮುಕ್ತಾಯ ಸಮಾರಂಭದಲ್ಲಿ ಯುರಬಾಗ ಜ್ಯೋತಿರ್ಲಿಂಗ ಆಶ್ರಮದಲ್ಲಿ ಭಾಗವಹಿಸಿ ಮಾತನಾಡುತ್ತ, ಕಾಯಕ ಮಾಡದೆ ನಾವೆಲ್ಲ ಸೋಮಾರಿತನಕ್ಕೆ ಬಲಿಯಾಗುತ್ತಿದ್ದೇವೆ. ಜೀವನದಲ್ಲಿ ಬದಲಾವಣೆ ಕಂಡುಕೊಳ್ಳಬೇಕಾಗಿದೆ ಎಂದರು. ಮುಖ್ಯ ಅತಿಥಿ ಸ್ಥಾನವಹಿಸಿ ಮಾತನಾಡಿದ ಶಾಸಕ ಬಸವರಾಜ ಪಾಟೀಲ ಅಟ್ಟೂರ ರವರು ಈ ಕ್ಷೇತ್ರದಲ್ಲಿ ಯರಬಾಗ ಜ್ಯೋತಿರ್ಲಿಂಗ ಆಶ್ರಮದ ಸ್ವಾಮಿಗಳು ಸಾಮಾಜಿಕ ಬದುಕಿನಲ್ಲಿ ಒಳ್ಳೆಯ ರೀತಿಯಿಂದ ಜನ ಸೇವೆ ಮಾಡಲು ಮುಂದಾಗಿರುವುದು ಸಂತಸ ತಂದಿದೆ ಎಂದ ಅಟ್ಟೂರ ರವರು ನಾವೆಲ್ಲರು ಬಸವೇಶ್ವರರ ತತ್ವಗಳ ಆಚರಣೆಯಲ್ಲಿ ತರಬೇಕಾಗಿದೆ. ದೇಶದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆ ಚುನಾವಣೆ ಬಂದರೇ ಹಣ ಕೋಟಿ ಕೋಟಿ ಖರ್ಚು ಆಗುತ್ತಿದೆ. ಜನರಲ್ಲಿ ಜಾಗೃತಿ ಬಂದಾಗ ಮಾತ್ರ ಭ್ರಷ್ಟಾಚಾರ ಹೋಗಲು ಸಾಧ್ಯ ಎಂದರು.

ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಚಾರ್ಯರು, ಎಲ್ಲಾ ಮಠಾಧೀಶರು ಸಮಾಜದಲ್ಲಿ ಜನರಲ್ಲಿ ತಿಳುವಳಿಕೆ ಮೂಡಿಸುವಂಥ ಮಹತ್ವದ ಕೆಲಸ ಮಠಾಧೀಶರು ಮಾಡುತ್ತಿದ್ದಾರೆ. ಇದಕ್ಕೆ ಜನರು ಸಹಕಾರ ನೀಡಿದ್ದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜನ ಸೇವೆ ಮಾಡಬಹುದು ಎಂದರು. ತಡೋಳಾದ ರಾಜೇಶ್ವರಿ ಶಿವಾಚರ್ಯರು ಆಶಿರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ತಾ. ಪಂ. ಅಧ್ಯಕ್ಷ ಗುರುಲಿಂಗಪ್ಪಾ ಸೈದಾಪುರೆ, ರೇವಣಸಿದ್ದಪ್ಪಾ, ಮಹಾಲಿಂಗಯ್ಯಾ ಸ್ವಾಮಿ ಹಿರಣಗಾಂವ, ವೇ.ಮೂ. ಚನ್ನವೀರಯ್ಯಾ ಸ್ವಾಮಿ ಯರಬಾಗ ಉಪಸ್ಥಿತರಿದ್ದರು. ಕಾರ್ಯಕ್ರಮದ ನೇತೃತ್ವ ಬಸವಲಿಂಗೇಶ್ವರ ಸ್ವಾಮಿ ವಹಿಸಿದರು.

ಭೀಮರೆಡ್ಡಿ ಪಟೀಲ ಯರಬಾಗ, ಸಿದ್ರಾಮಯ್ಯಾ ಸ್ವಾಮಿ, ಮನೋಹರ ಪಾಟೀಲ, ಸಂಜುರೆಡ್ಡಿ ಯರಬಾಗ, ಪ್ರಭಾಕರ ಗರಜೆ, ಬಸವಣಪ್ಪಾ ಹಾರಕೂಡೆ, ಪ್ರಭು ನಾಗರಾಳೆ, ರಮೇಶ ಪಾಟೀಲ ರಾಜೇಶ್ವರ ಬಸವರಾಜ ಗವನಿ, ಸೇರಿದಂತ್ತೆ ಅನೇಕ ಭಕ್ತರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸ್ವಾಮಿಗಳಿಂದ ಅನೇಕ ಭಕ್ತರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದ ಸ್ವಾಗತ ಹಾಗೂ ಸಂಚಾಲನೆ ಮಹಾಂತಯ್ಯಾ ಸ್ವಾಮಿ, ವಂದನಾರ್ಪಣೆ ಸಂಜೀವರೆಡ್ಡಿ ನೇರವೇರಿಸಿದರು. ಸಮಾರಂಭದಲ್ಲಿ ಸುತ್ತ ಮುತ್ತಲಿನ ಅನೇಕ ಹಳ್ಳಿಗಳ ೫೦೦ಕ್ಕು ಹೆಚ್ಚು ಭಕ್ತರು ಭಾಗವಹಿಸಿದ್ದರು.

ದಿನಾಂಕ 3-9-2011 ಶನಿವಾರ
ಸೆಂಚುರಿ ಕರ್ನಾಟಕ.



ಭ್ರಷ್ಟಾಚಾರ ನಿರ್ಮೂಲನೆಗೆ ಆಗ್ರಹಿಸಿ ಬಸವಕಲ್ಯಾಣದಲ್ಲಿ ಪ್ರತಿಭಟನೆ ನಡೆಸಲಾಯಿತು.

# ಬಸವಕಲ್ಯಾಣದಲ್ಲಿ ಭಾರತ ಸ್ವಾಭಿಮಾನಿ ಟ್ರಸ್ಟ್ ಸತ್ಯಾಗ್ರಹ

ಬಸವಕಲ್ಯಾಣ, ೪– ಭ್ರಷ್ಟಾಚಾರ ನಿರ್ಮೂಲನೆಗೆ ಆಗ್ರಹಿಸಿ ಯೋಗಋಷಿ ಸ್ವಾಮಿ ರಾಮದೇವ್ ಅವರು ದೆಹಲಿಯಲ್ಲಿ ನಡೆಸುತ್ತಿರುವ ಉಪವಾಸ ಸತ್ಯಾಗ್ರಹವನ್ನು ಬೆಂಬಲಿಸಿ ಪತಂಜಲಿ ಯೋಗ ಸಮಿತಿ ಮತ್ತು ಭಾರತ ಸ್ವಾಭಿಮಾನಿ ಟ್ರಸ್ಟ್ ಪ್ರಮುಖರು ಪಟ್ಟಣದಲ್ಲಿ ಸತ್ಯಾಗ್ರಹ ನಡೆಸಿದರು.

ಪಟ್ಟಣದಲ್ಲಿ ಬೃಹತ್ ರ‍್ಯಾಲಿ ನಡೆಸಲಾಯಿತು. ಕಾರ್ಯಕರ್ತರು ಭ್ರಷ್ಟಾಚಾರದ ವಿರುದ್ಧ ಘೋಷಣೆ ಕೂಗಿದರು. ವಿದೇಶಗಳಲ್ಲಿ ಇಡಲಾಗಿರುವ ಕಪ್ಪುಹಣವನ್ನು ದೇಶಕ್ಕೆ ಮರಳಿ ತರುವಂತೆ ಆಗ್ರಹಿಸಿದರು. ರಾಷ್ಟ್ರಪತಿಗಳಿಗೆ ಬರೆದಿರುವ ಮನವಿಯನ್ನು ತಹಸೀಲ್ದಾರರಿಗೆ ಸಲ್ಲಿಸಿದರು.

ವಿದೇಶಿ ಬ್ಯಾಂಕುಗಳಲ್ಲಿ ಇಡಲಾಗಿರುವ ಕಪ್ಪು ಹಣವನ್ನು ವಾಪಸ್ ತರುವುದು, ಭ್ರಷ್ಟಾಚಾರದ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳುವುದು ಪ್ರತಿಭಟನಾಕಾರರ ಪ್ರಮುಖ ಬೇಡಿಕೆಯಲ್ಲಿ ಸೇರಿವೆ. ಕಪ್ಪು ಹಣ ವಾಪಸ್ ತರುವ ಕುರಿತು ದೀರ್ಘ ಕಾಲದಿಂದ ಚರ್ಚೆ ನಡೆಯುತ್ತಿದ್ದರೂ ಕ್ರಮ ಕೈಗೊಳ್ಳದಿರುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಭಾರತ ಸ್ವಾಭಿಮಾನಿ ಟ್ರಸ್ಟ್ ಅಧ್ಯಕ್ಷ ಡಾ. ಬಸವರಾಜ ಸ್ವಾಮಿ, ಮುಚಳಂಬದ ಪೂಜ್ಯ ಪ್ರಣವಾನಂದ ಸ್ವಾಮಿಗಳು, ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಹಾಮನೆಯ ಬಸವಪ್ರಭು ಸ್ವಾಮಿಜಿ, ಆರ್ಯ ಸಮಾಜದ ಮುಖಂಡ ಸುಭಾಷ ಸುತ್ರಾವೆ, ಎಂಜಿನಿಯರರ ಸಂಘದ ಅಧ್ಯಕ್ಷ ನಾರಾಯಣ ಬುನ್ನಾ, ಕಸಾಪ ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ, ಕರವೇ ಅಧ್ಯಕ್ಷ ಧನರಾಜ ರಾಜೋಳೆ, ಬಸವ ಸೈನ್ಯ ಅಧ್ಯಕ್ಷ ಶಿವಕುಮಾರ ಮಠಪತಿ ಮುಂತಾದವರು ಪಾಲ್ಗೊಂಡಿದ್ದರು.

## ಬೆಂಬಲ

ಯೋಗಗುರು ರಾಮದೇವ್ ಅವರ ಉಪವಾಸ ಸತ್ಯಾಗ್ರಹಕ್ಕೆ ವೀರಶೈವ ರಕ್ಷಣಾ ವೇದಿಕೆ ಸಂಸ್ಥಾಪಕರಾದ ಪೂಜ್ಯ ಡಾ. ರಾಜಶೇಖರ ಸ್ವಾಮಿ ಬೆಂಬಲ ವ್ಯಕ್ತಪಡಿಸಿದ್ದಾರೆ. ವಿದೇಶಗಳಲ್ಲಿ ಇಡಲಾಗಿರುವ ಕಪ್ಪುಧನವನ್ನು ದೇಶಕ್ಕೆ ಮರಳಿ ತರಬೇಕು ಎಂದು ಆಗ್ರಹಿಸಿದ್ದಾರೆ. ಕೇಂದ್ರ ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಯಾವುದೇ ರೀತಿಯ ವಿಳಂಬ ಮಾಡದೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ದಿನಾಂಕ 5-6-2011 ರವಿವಾರ ಸೆಂಚುರಿ ಕರ್ನಾಟಕ



ಡಾ.ಪಂ.ಪುಟ್ಟರಾಜ ಗವಾಯಿಗಳ ಪ್ರಥಮ ಪುಣ್ಯ ಸ್ಮರಣೋತ್ಸವದ ನಿಮಿತ್ತ ಬಸವಕಲ್ಯಾಣದಲ್ಲಿ ಭಾನುವಾರ ಸಂಜೆ ನಡೆದ ಸಂಗೀತ ಸಮ್ಮೇಳನವನ್ನು ಸಚಿವ ರೇವೂನಾಯಕ ಬೆಳಮಗಿ ಉದ್ಘಾಟಿಸಿದರು. ಡಾ.ಬಸವಲಿಂಗ ಪಟ್ಟದ್ದೇವರು, ತ್ರಿಪುರಾಂತ ಶ್ರೀ, ಪ್ರೊ.ಸಿದ್ರಾಮಯ್ಯ ಮಠಪತಿ, ರಾಜಕುಮಾರ ಹೂಗಾರ, ವಿಜಯಲಕ್ಷ್ಮಿ ಹೂಗಾರ, ಸುಭಾಷ ಕಲಖೋರಾ ಇದ್ದರು. ವಿವರ >> 8

ದಿನಾಂಕ 26-9-2011 ವಿಜಯ ~~[illegible]~~ ಕರ್ನಾಟಕ



ಸುಲ್ತಾನಬಾದ ಗ್ರಾಮದಲ್ಲಿ ನಡೆದ ಶ್ರೀ ರಾಮಲಿಂಗೇಶ್ವರ ಕಳಸಾರೋಹನ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಮಠಾಧೀಶರು ಹಾಗೂ ಶಾಸಕರು ಮುಂತಾದ ಗಣ್ಯರು ಭಾಗವಹಿಸಿದ್ದರು.

ದಿನಾಂಕ 11-8-2011 ಗುರುವಾರ ಸೆಂಚುರಿ ಕರ್ನಾಟಕ ದಿನಪತ್ರಿಕೆ

Scanned by CamScanner

# ಸಂಗೀತದಿಂದ ಮಾನಸಿಕ ನೆಮ್ಮದಿ: ತ್ರಿ ಪುರಾಂತಶ್ರೀ

ಬಸವಕಲ್ಯಾಣ, ೮– ಮನುಷ್ಯನಲ್ಲಿ ಶಾಂತಿ ನೆಮ್ಮದಿ ಕಡಿಮೆಯಾಗಿದೆ ಶಾಂತಿ ಸಿಗಬೇಕಾದರೆ ಅದು ಸಂಗೀತದಿಂದ ಮಾತ್ರ ಸಾಧ್ಯ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಅವರು ಬೀದರನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯುವ ಸೌರಭ ಯೋಜನೆಯಡಿ ತಾಲೂಕಿನ ಮೋರಖಂಡಿ ಗ್ರಾಮದ ಗ್ರಾಮ ಪಂಚಾಯತ ಆವರಣದಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ ಮನುಷ್ಯನಿಗೆ ಅಂಟಿಕೊಳ್ಳುವ ಹಲವಾರು ರೋಗಗಳಿಗೆ ನಿವಾರಣೆ ಮಾಡುವಂತಹ ಶಕ್ತಿ ಸಂಗೀತಕ್ಕಿದೆ. ಇದು ಸಂಶೋಧನೆಯಿಂದ ದೃಢಪಟ್ಟಿದೆ ಎಂದರು.

ಗ್ರಾಂ ಪಂಚಾಯತ ಅಧ್ಯಕ್ಷರಾದ ವಂದನಾ ಪಂಡಿತ ಗೋರ್ಟೆ ಮಾತನಾಡಿ ಗ್ರಾಮೀಣ ಭಾಗದಲ್ಲಿನ ಕಲಾವಿದರಿಗೆ ನಾವೆಲ್ಲರು ಪ್ರೋತ್ಸಾಹಿಸುವ ಕೆಲಸ ನಮ್ಮದಾಗಿದೆಯಂದರು.

ಗ್ರಾಪಂ ಉಪಾಧ್ಯಕ್ಷ ಗುರುನಾಥ ಸೋನಕೆ, ಸದಸ್ಯ ದತ್ತು ಪಸರರ್ಕಲೆ, ಬಸ್ಸಪ್ಪ ಉಸ್ತುರೆ, ಸುರೇಶ ಖಂಡಪ್ಪಾ, ಡಾ.ಸೋಮನಾಥ ಹಲಸೆ, ಸಂಜು ಭೊಗಲೆ, ಸಂದೀಪ ಖಿಲಾರೆ ಉಪಸ್ಥಿತರಿದ್ದರು.

ರಾವಣ ಮೇತ್ರೆ ಮಾಧವರಾವ ಔಂಡೆ, ಮುರಲಿಧರ ದಾಬಕೆ ಮುಂತಾದವರು ಹಾಜರಿದ್ದರು.

ಸಂಚಾಲನೆ ಹಾಗೂ ಸ್ವಾಗತ ಶಾಂತಯ್ಯ ಮಠಪತಿ, ವಂದನಾರ್ಪಣೆ ಪಂಡೀತ ಗೋರ್ಟೇ ಮಾಡಿದರು. ರಮೇಶ ಕೆ. ಗರುಡಕರ್ ಯುವ ಕಲಾವಿದ ವಚನ ಸಂಗೀತ ನಡೆಸಿದರು. ಸಹ ಕಲಾವಿದರಾದ ಸಿದ್ಧಲಿಂಗ ನೇತೆ, ಶಶಿಧರ ಪಾಟೀಲ ಜನಪದ ಗೀತೆ ಹಾಡಿದರು. ರಾಮಚಂದ್ರ ಕಲ್ ಹಿಪ್ಪರ್ಗಿ, ಪ್ರವೀಣ ದಾಂಡೇಕರ್ ತಬಲಾ ಸಾತ ನೀಡಿದರು.



ಮೋರಖಂಡಿ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗ್ರಾಪಂ ಅದ್ಯಕ್ಷೆ ವಂದನಾ ಪಂಡೀತ ಗೋರ್ಟೆ, ಪಿಬಿ ಟಂಕಸಾಲಿಮಠ ಡಾ.ಸೋಮನಾಥ ಹಲಸೆ ಉಪಸ್ಥಿತರಿದ್ದರು.

ದಿನಾಂಕ 9.8.2011 ಮಂಗಳವಾರ ವಿಜಯ ಕರ್ನಾಟಕ & ಸೆಂಚುರಿ ಕರ್ನಾಟಕ ದಿನಪತ್ರಿಕೆ.

# ಶ್ರಾವಣಮಾಸದ ವಿಶೇಷ ಪೂಜೆ

ಬಸವಕಲ್ಯಾಣ, ೮– ಇಲ್ಲಿಯ ತ್ರಿಪೂರಾಂತದ ಮರಿದೇವರ ಗುಡ್ಡದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕರ್ತೃ ಗದ್ದಿಗೆ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಷ.ಬ್ರ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶ್ರಾವಣ ಮಾಸದ ನಿಮಿತ್ಯ ಮಠದ ಸದ್ಭಕ್ತರಿಂದ ವಿಶೇಷ ರುದ್ರಾಭಿಷೇಕ, ಗುರುಗಳ ಪಾದಪೂಜೆ, ಅಕ್ಕಮಹಾದೇವಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ಜರುಗತ್ತಲಿದ್ದು ಈ ಪವಿತ್ರ ಮಾಸದಲ್ಲಿ ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದರ್ಶನ ಪಡೆದು ಕೃತಾರ್ಥರಾಗಲಿ ಶ್ರೀ ಘನಲಿಂಗರುದ್ರಮುನಿ ಸೇವಾ ಪ್ರತಿಷ್ಠಾನ ತಿಳಿಸಿದೆ.

ದಿನಾಂಕ 11-8-2011 ಸೆಂಚುರಿ ಕರ್ನಾಟಕ

# 'ಸುಲ್ತಾನಬಾದ್ ಸಮನ್ವಯತೆ ಮಾದರಿ'

ಪ್ರಜಾವಾಣಿ ವಾರ್ತೆ

ಹುಮನಾಬಾದ್: ಸುಲ್ತಾನಬಾದ್ ವಾಡಿ ಗ್ರಾಮದ ಜನತೆಯ ಧರ್ಮ ಸಮನ್ವಯತೆ ಜಿಲ್ಲೆಗೆ ಮಾದರಿ ಎಂದು ಹಾರಕೂಡದ ಪೂಜ್ಯ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಸುಲ್ತಾನಬಾದ್‌ವಾಡಿ ಗ್ರಾಮದಲ್ಲಿ ಬುಧವಾರ ನಡೆದ ರಾಮಲಿಂಗೇಶ್ವರ ದೇವಾಲಯ ಕಳಸಾರೋಹಣ ಮತ್ತು ನಂದಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಅವರು ದಿವ್ಯ ಸಾನ್ನಿಧ್ಯ ವಹಿಸಿ, ಮಾತನಾಡಿದರು.

ಜಿಲ್ಲೆಯ ಕೆಲವೇ ಉತ್ತಮ ಯುವ ರಾಜಕಾರಣಿಗಳಲ್ಲಿ ಹುಮನಾಬಾದ್ ಶಾಸಕ ರಾಜಶೇಖರ ಪಾಟೀಲ ಕೂಡ ಒಬ್ಬರು. ಉತ್ತಮ ಕರ್ತವ್ಯ ನಿರ್ವಹಣೆ ಮೂಲಕ ಅಪಾರ ಜನಪ್ರಿಯತೆ ಹೊಂದಿದ್ದಾರೆ ಎಂದರು, ಗ್ರಾಮದಲ್ಲಿ ಹಮ್ಮಿಕೊಂಡ ಕಾರ್ಯಕ್ರಮ ಪಕ್ಷಾತೀತವಾಗಿ ಕೆಲಸ ನಡೆಸುತ್ತಿರುವುದು ಆರೋಗ್ಯಕರ ಬೆಳವಣಿಗೆ ಎಂದು ನೇತೃತ್ವ ವಹಿಸಿದ್ದ ತಡೋಳಾದ ರಾಜೇಶ್ವರ ಶ್ರೀ ತಿಳಿಸಿದರು.

ದೇಶದ ಯುವ ಜನಾಂಗ ಎಚ್ಚೆತ್ತುಕೊಳ್ಳದಿದ್ದರೆ ಅಭಿವೃದ್ಧಿ ಅಸಾಧ್ಯ. ಕಲಂ 371 ತಿದ್ದುಪಡಿ ಸಂಬಂಧ ಸರ್ವರೂ ಪಕ್ಷಾತೀತ ಹೋರಾಟ ನಡೆಸಬೇಕು ಎಂದು ಅವರು ಸಲಹೆ ನೀಡಿದರು. ಬಿ.ಎಸ್.ಎಸ್.ಕೆ. ಅಧ್ಯಕ್ಷ ಸುಭಾಷ ಕಲ್ಲೂರ ಹಾಗೂ ಅಧ್ಯಕ್ಷತೆ ವಹಿಸಿದ್ದ ಶಾಸಕ ರಾಜಶೇಖರ ಪಾಟೀಲ ಮಾತನಾಡಿದರು.

ವಿವಿಧ ಮಠಾಧಿಶರು, ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಇದ್ದರು.




ಹುಮನಾಬಾದ್ ತಾಲ್ಲೂಕು ಸುಲ್ತಾನಬಾದ್ ವಾಡಿ ಗ್ರಾಮದಲ್ಲಿ ಬುಧವಾರ ಆಯೋಜಿಸಿದ್ದ ಶ್ರೀ ರಾಮಲಿಂಗೇಶ್ವರ ದೇವಾಲಯದ ಕಳಸಾರೋಹಣ ಮತ್ತು ನಂದಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಹಾರಕೂಡ ಚನ್ನವೀರ ಶಿವಾಚಾರ್ಯ ಸ್ವಾಮಿ ಮಾತನಾಡಿದರು. ರಾಜೇಶ್ವರಶ್ರೀ, ರಾಜಶೇಖರ ಪಾಟೀಲ, ಸುಭಾಷ ಕಲ್ಲೂರ, ಪ್ರೇಮಾ ಆರ್.ಪಾಟೀಲ ಇದ್ದರು.

ದಿನಾಂಕ 11-8-2011 ಗುರುವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ‘ಬಸವಮುಕ್ತಿನಾಥಯ್ಯ ಶ್ರೇಷ್ಠ ಶರಣರು’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಬಸವಮುಕ್ತಿನಾಥಯ್ಯ ಪವಿತ್ರ ಕಾಯಕ ಮಾಡುವ ನಿರ್ಮಲ ಹೃದಯದ ಶ್ರೇಷ್ಠ ಶರಣರಾಗಿದ್ದರು ಎಂದು ಭಾಲ್ಕಿ ಹಿರೇಮಠದ ಬಸವಲಿಂಗ ಪಟ್ಟದ್ದೇವರು ಹೇಳಿದರು.

ಇಲ್ಲಿನ ಹೆಳವರ ಓಣಿಯಲ್ಲಿ ಭಾನುವಾರ ಹಮ್ಮಿಕೊಂಡ ಬಸವಮುಕ್ತಿನಾಥಯ್ಯ ಮೂರ್ತಿ ಪ್ರತಿಷ್ಠಾಪನೆ ಮತ್ತು ಹೆಳವ ಸಮಾಜದ ತಾಲ್ಲೂಕು ಸಮಾವೇಶದ ನೇತೃತ್ವವಹಿಸಿ ಮಾತನಾಡಿದರು.

ಶರಣರ, ಸಂತರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ಬದುಕು ಪಾವನವಾಗುತ್ತದೆ. ಜೀವನಕ್ಕೆ ನೀತಿಯ ನೆಲೆಗಟ್ಟು ಇಲ್ಲದಿದ್ದರೆ ಬದುಕಿಯೂ ನಿರರ್ಥಕ ಎಂದು ಅಭಿಪ್ರಾಯ ಪಟ್ಟರು.

ಬೆಲ್ದಾಳ ಬಸವಯೋಗಾಶ್ರಮದ ಸಿದ್ಧರಾಮ ಶರಣರು ಮಾತನಾಡಿ ಸಮಾಜ ಒಗ್ಗಟ್ಟಿನಿಂದ ಇರಬೇಕು. ಬಸವಮುಕ್ತಿನಾಥಯ್ಯ ಶರಣರ ಸ್ಮಾರಕ ಸ್ಥಾಪಿಸುವ ಸಂಬಂಧ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಗೆ ಮನವಿ ಮಾಡಿಕೊಳ್ಳಲಾಗುವುದು ಎಂದೂ ಹೇಳಿದರು. ಹಾರಕೂಡ ಚೆನ್ನವೀರ ಶಿವಾಚಾರ್ಯರು ಮಾತನಾಡಿ ಜಾತಿ, ಧರ್ಮದ ಭೇದವಿಲ್ಲದೆ ಸರ್ವರೂ ಸಹಬಾಳ್ವೆ ನಡೆಸಿದರೆ ಸಮಾಜದಲ್ಲಿ ಶಾಂತಿ ಇರುತ್ತದೆ ಎಂದರು.

ಶಾಸಕ ಬಸವರಾಜ ಪಾಟೀಲ ಅಟ್ಟೂರ್ ಮಾತನಾಡಿ ಮುಕ್ತಿನಾಥಯ್ಯ ದೇವಸ್ಥಾನದ ಅಭಿವೃದ್ಧಿಗೆ 50 ಸಾವಿರ ರೂಪಾಯಿ ಮಂಜೂರು ಮಾಡಲಾಗಿದ್ದು ಅವಶ್ಯಕವಿದ್ದರೆ ಇನ್ನೂ ಹೆಚ್ಚಿನ ಹಣ ಕೊಡಲಾಗುವುದು ಎಂದು ಭರವಸೆ ಕೊಟ್ಟರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿದರು.




ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಬಸವಮುಕ್ತಿನಾಥಯ್ಯ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಲ್ಕಿ ಬಸವಲಿಂಗ ಪಟ್ಟದ್ದೇವರು ಮಾತನಾಡಿದರು. ಶಾಸಕ ಬಸವರಾಜ ಪಾಟೀಲ ಅಟ್ಟೂರ್, ಬೆಲ್ದಾಳ ಸಿದ್ಧರಾಮ ಶರಣರು, ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ಹಾರಕೂಡ ಚೆನ್ನವೀರ ಶಿವಾಚಾರ್ಯರು, ಬಸವಧರ್ಮಪೀಠದ ಸಿದ್ಧರಾಮೇಶ್ವರ ಸ್ವಾಮೀಜಿ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಪಾಲ್ಗೊಂಡಿದ್ದರು

ಹೆಳವ ಸಮಾಜದ ರಾಜ್ಯಾಧ್ಯಕ್ಷ ಈ.ಕೃಷ್ಣಪ್ಪ, ಬಸವಧರ್ಮ ಪೀಠದ ಸಿದ್ಧರಾಮೇಶ್ವರ ಸ್ವಾಮೀಜಿ, ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ಶಂಕರಲಿಂಗ ಸ್ವಾಮೀಜಿ, ವಿಭೂತಿ ಬಸವಾನಂದ, ಶಂಭುಲಿಂಗ ಕಾಮಣ್ಣ, ಸೈಯದ್‌ಪಾಶಾ ಹೈದ್ರಾಬಾದ್ ಮಾತನಾಡಿದರು.

ನಗರಸಭೆ ಸದಸ್ಯೆ ಬಾಯಮ್ಮ, ಪ್ರಮುಖರಾದ ದಶರಥ ಅಂದಕುಲ, ಬಾಬು ಟೈಗರ್, ತಿಪ್ಪಣ್ಣ ಯರಸನ್, ವೈಜನಾಥ ಕಾಮಶೆಟ್ಟಿ, ಶಬ್ಬೀರಪಾಶಾ ಮುಜಾವರ್ ಉಪಸ್ಥಿತರಿದ್ದರು. ಸುಭಾಷ ಯರಸನ್ ಸ್ವಾಗತಿಸಿದರು. ಡಾ.ಬಸವರಾಜ ಪಂಡಿತ ನಿರೂಪಿಸಿದರು. ಕಾರ್ಯಕ್ರಮದ ಮೊದಲು ಮೂರ್ತಿಯ ಮೆರವಣಿಗೆ ನಡೆಯಿತು.

ದಿನಾಂಕ 19-9-2011 ಸೋಮವಾರ ಪ್ರಜಾವಾಣಿ ದಿನಪತ್ರಿಕೆ

# ಗಾನಯೋಗಿ ಸ್ಮರಣೆ, ಸಂಗೀತ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪಂ.ಪುಟ್ಟರಾಜ ಗವಾಯಿಗಳು ಅನೇಕ ಜನ ಅಂಧರಿಗೆ ಸಂಗೀತದ ಕಣ್ಣು ಕೊಟ್ಟು ಅವರ ಬಾಳನ್ನು ಬೆಳಗಿಸಿದರು ಎಂದು ಸಂಗೀತಗಾರ ಪ್ರೊ.ಸಿದ್ರಾಮಯ್ಯ ಗೋರಟಾ ಹೇಳಿದರು.

ಗಾನಯೋಗಿ ಪಂ.ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೋತ್ಸವ ಅಂಗವಾಗಿ ಪುಟ್ಟರಾಜ ಗವಾಯಿ ಕಲಾ ಸಂಘದಿಂದ ಭಾನುವಾರ ಸಂಜೆ ಇಲ್ಲಿನ ಬಿಕೆಡಿಬಿ ಸಭಾಂಗಣದಲ್ಲಿ ಹಮ್ಮಿಕೊಂಡ ಸಂಗೀತ ಸಮ್ಮೇಳನದಲ್ಲಿ ಮಾತನಾಡಿದರು.

ಪುಟ್ಟರಾಜರಿಗೆ 2 ಸಾವಿರಕ್ಕೂ ಹೆಚ್ಚಿನ ತುಲಾಭಾರ ನಡೆಸಲಾಗಿದೆ. ಶಿಷ್ಯವೃಂದದಿಂದ ಅವರಿಗಾಗಿ ಏನೆಲ್ಲ ಮಾಡಲಾಗಿದ್ದರೂ ಸರ್ಕಾರದಿಂದ ಹೆಚ್ಚಿನ ಮನ್ನಣೆ ದೊರೆಯಲಿಲ್ಲ ಎಂದರು. ಉತ್ತರ ಕರ್ನಾಟಕ ಭಾಗದ ಸಂಗೀತಗಾರರಿಗೆ, ಕವಿ, ಕಲಾವಿದರಿಗೆ ಅಕಾಡೆಮಿಗಳ ನೇಮಕಾತಿ ಮತ್ತು ಮಹತ್ವದ ಪ್ರಶಸ್ತಿ ಕೊಡುವಲ್ಲಿ ನಿರ್ಲಕ್ಷಿಸಲಾಗುತ್ತಿದೆ ಎಂದು ಅತೃಪ್ತಿ ವ್ಯಕ್ತಪಡಿಸಿದರು.



ಬಸವಕಲ್ಯಾಣದಲ್ಲಿ ಭಾನುವಾರ ಸಂಜೆ ನಡೆದ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆಯಲ್ಲಿ ಸಿದ್ರಾಮಯ್ಯ ಗೋರಟಾಗೆ ‘ಸಂಗೀತ ಶರಣಶ್ರೀ’ ಪ್ರಶಸ್ತಿ ಕೊಡಲಾಯಿತು. ಸಚಿವ ರೇವು ನಾಯಕ್ ಬೆಳಮಗಿ, ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು, ರಾಜಕುಮಾರ ಮದಕಟ್ಟಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಶಶಿಧರ ಪಾಟೀಲ, ವಿಜಯಲಕ್ಷ್ಮಿ ಹೂಗಾರ ಪಾಲ್ಗೊಂಡಿದ್ದರು.

ಉದ್ಘಾಟನೆ ನೆರವೇರಿಸಿದ ಪಶು ಸಂಗೋಪನಾ ಸಚಿವ ರೇವು ನಾಯಕ್ ಬೆಳಮಗಿ ಮಾತನಾಡಿ ಸಂಗೀತದಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುತ್ತದೆ ಎಂದರು. ಸಂಗೀತಗಾರರಿಗೆ ಸರ್ಕಾರ, ಸಂಘ ಸಂಸ್ಥೆಯವರು ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದರು.

ಭಾಲ್ಕಿ ಬಸವಲಿಂಗ ಪಟ್ಟದ್ದೇವರು ಮಾತನಾಡಿ ಸಂಗೀತಗಾರರಲ್ಲಿ ಮಾತ್ರ ಗುರು–ಶಿಷ್ಯರ ಸಂಬಂಧ ಗಟ್ಟಿಯಾಗಿ ಉಳಿದಿದೆ. ಎಲ್ಲರೂ ಒತ್ತಡದ ಜೀವನ ನಡೆಸುತ್ತಿರುವ ಇಂದಿನ ದಿನಗಳಲ್ಲಿ ಸಂಗೀತ ಆಲಿಸುವುದು ಅತ್ಯಂತ ಜರೂರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಪ್ರೊ.ಸಿದ್ರಾಮಯ್ಯ ಗೋರಟಾ ಅವರಿಗೆ ‘ಸಂಗೀತ ಶರಣಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ತಬಲಾ ವಾದಕರಾದ ಶಿವರಾಜ ಖೇಲೆ, ಪ್ರವೀಣ ದಾಂಡೇಕರ್ ಅವರನ್ನು ಸನ್ಮಾನಿಸಲಾಯಿತು. ಸಹಾಯಕ ಆಯುಕ್ತ ಎಚ್.ಪ್ರಸನ್ನಕುಮಾರ, ವಿಜಯಲಕ್ಷ್ಮಿ ಹೂಗಾರ, ಮಹಾದೇವ ಹಲಸೆ, ಸುಭಾಷ ಕಲಖೋರಾ, ಶಾಂತಲಿಂಗಯ್ಯ ಮಠಪತಿ, ಶಶಿಧರ ಪಾಟೀಲ ಉಪಸ್ಥಿತರಿದ್ದರು.

ಕಲಾ ಸಂಘದ ಅಧ್ಯಕ್ಷ ರಾಜಕುಮಾರ ಮದಕಟ್ಟಿ ಸ್ವಾಗತಿಸಿದರು. ಶ್ರೀದೇವಿ ಖಂಡಾಳೆ ನಿರೂಪಿಸಿದರು. ಪ್ರಭುಲಿಂಗಯ್ಯ ಟಂಕಸಾಲಿಮಠ ವಂದಿಸಿದರು. ನಂತರ ಸಂಗೀತ ಸಮ್ಮೇಳನ ನಡೆಯಿತು. ಸಿದ್ರಾಮಯ್ಯ ಗೋರಟಾ, ಶ್ರೀರಾಮುಲು ಗಾದಗಿ, ಕವಿತಾ ಮಠಪತಿ, ಸಾಧನಾ ಹಂಚಾಟೆ ಹಾಡಿದರು.

ದಿನಾಂಕ 27-9-2011 ಪ್ರಜಾವಾಣಿ ದಿನಪತ್ರಿಕೆ

Scanned by CamScanner

# ಪುಟ್ಟರಾಜ ಗವಾಯಿಗಳ ಹೆಸರು ಅಮರ: ಬೆಳಮಗಿ

ಬಸವಕಲ್ಯಾಣ, ೨೬– ಸೂರ್ಯ ಚಂದ್ರನಿರುವವರೆಗೆ ಡಾ. ಪಂ. ಪುಟ್ಟರಾಜ ಗವಾಯಿಗಳ ಹೆಸರು ಅಮರವಾಗಿರುತ್ತದೆ ಎಂದು ಪಶು ಸಂಗೋಪನಾ ಸಚಿವ ರೇವೂನಾಯಕ ಬೆಳಮಗಿ ತಿಳಿಸಿದರು.

ಅವರು ಇಲ್ಲಿನ ಬಿ.ಕೆ.ಡಿ.ಬಿ ಗ್ರಂಥಾಲಯದ ಸಭಾಂಗಣದಲ್ಲಿ ಪಂ. ಪಂಚಾಕ್ಷರಿ ಗವಾಯಿಗಳ ಸಂಗೀತ ವಿದ್ಯಾಲಯ ಹಾಗೂ ಡಾ. ಪಂ. ಪುಟ್ಟರಾಜ ಗವಾಯಿಗಳವರ ಸಂಗೀತ ಕಲಾ ಟ್ರಸ್ಟನಿಂದ ಪರಮ ಪೂಜ್ಯ ಲಿಂ. ಗಾನಯೋಗಿ ಡಾ. ಪಂ. ಪುಟ್ಟರಾಜ ಗವಾಯಿಗಳವರ ಪ್ರಥಮ ಪುಣ್ಯ ಸ್ಮರಣೋತ್ಸವ ನಿಮಿತ್ತ ಹಮ್ಮಿಕೊಂಡ ಸಂಗೀತ ಸಮ್ಮೇಳನ ಉದ್ಘಾಟನೆ ನೆರವೇರಿಸಿ ಮಾತನಾಡಿದ ಸಚಿವರು, ಸಂಗೀತ ಕ್ಷೇತ್ರಕ್ಕೆ ಅವರ ಸೇವೆ ಅಮೋಘ. ಅಲ್ಲದೆ ಸಂಗೀತ ಮಹಾವಿದ್ಯಾಲಯಕ್ಕೆ ಬೇಕಾಗುವ ನಿವೇಶನ ಕುರಿತು ಪರಿಶೀಲಿಸುವ ಭರವಸೆ ನೀಡಿದರು.

ಇದೆ ಸಂದರ್ಭದಲ್ಲಿ ಸಂಗೀತ ಶರಣಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರೊ. ಸಿದ್ರಾಮಯ್ಯಾ ಮಠಪತಿ ಗೋರ್ಟಾ, ಸಂಗೀತ ಕಲಾವಿದರು ಮಾತನಾಡಿ ನನ್ನ ತಂದೆ ತಾಯಿ ಎದುರಿಗೆ ನನ್ನನ್ನು ಸನ್ಮಾನಿಸಿದ್ದು ನನ್ನ ಭಾಗ್ಯ. ನಿಜವಾಗಲೂ ರಾಚೋಟಿ ಪೂಜ್ಯಂ ಹಾಗೂ ಭಾಲ್ಕಿ ಹಿರಿಯ ಶ್ರೀಗಳ ಸಹಾಯ ನೆನಪಿಸಿಕೊಂಡ ಅವರು ಈ ಹಂತಕ್ಕೆ ತಲುಪಲು ಅವರೇ ಕಾರಣರು ಎಂದು ಮನದುಂಬಿ ಮಾತನಾಡಿ ಈ ಶರಣ ನಾಡಿನಲ್ಲಿ ರಾಜಕುಮಾರ ಹೂಗಾರ ಹಾಗೂ ಸಂಗಡಿಗರು ಸಂಗೀತವನ್ನು ಉಳಿಸಿಕೊಂಡು ಬರುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಸಾನಿಧ್ಯವನ್ನು ಭಾಲ್ಕಿಯ ಶ್ರೀ ಮ.ಘ.ಚ ಡಾ. ಬಸವಲಿಂಗ ಪಟ್ಟದೇವರು ಮಾತನಾಡಿ, ಇಂದು ಗುರು ಶಿಷ್ಯರ ಸಂಬಂಧ ಕಡಿಮೆಯಾಗುತ್ತಿದೆ. ಆದರೆ ಸಂಗೀತ ಕ್ಷೇತ್ರದಲ್ಲಿ ಅಂತಹ ಒಂದು ಸಂಬಂಧ ಕಾಣುತ್ತಿದೆ. ನಿಜವಾಗಲೂ ಇಂದಿನ ಟೆನ್ಷನ್ ಕಾಲದಲ್ಲಿ ಸಂಗೀತದ ಅವಶ್ಯಕತೆ ಇದೆ ಎಂದರು.

ಅಧ್ಯಕ್ಷತೆಯನ್ನು ತ್ರಿಪುರಾಂತದ ಪೂಜ್ಯಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಪಂ. ಪುಟ್ಟರಾಜ ಗವಾಯಿಗಳು ಅಂಧರ ಬಾಳಿನ ಬೆಳಕಾದರು. ಅವರ ಸೇವೆ ನಿಜಕ್ಕೂ ಅದ್ಭುತ ಎಂದರು.

ತಾ.ಪಂ. ಸದಸ್ಯರಾದ ಸುಭಾಷ ಕಲಖೋರಾ, ಮಹಾದೇವ ಹಲಸೆ, ಅಲ್ಲದೆ ಬಿ.ಜೆ.ಪಿ.ಯ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಆರ್. ಹೂಗಾರ ಇನ್ನಿತರರು ಉಪಸ್ಥಿತರಿದ್ದರು.

ನಂತರ ಅನೇಕ ಸಂಗೀತ ಕಲಾವಿದರು ತಮ್ಮ ಮಧೂರ ಕಂಠದಿಂದ ಸಂಗೀತ ಸುಧೆ ಹರಿಸಿದರು. ಅವರಲ್ಲಿ ಸಿದ್ರಾಮಯ್ಯಾ ಸ್ವಾಮಿ ಗೋರ್ಟಾ, ಕವಿತಾ ಮಠಪತಿ, ರಾಜಕುಮಾರ ಹೂಗಾರ, ರಾಮಲು ಗಾದಗಿ, ಸಂಗಯ್ಯಾಸ್ವಾಮಿ, ಸಿದ್ದಲಿಂಗ ನೇತೆ, ರಾಮಚಂದ್ರ ಕಲ್ಲಹಿಪ್ಪರ್ಗಿ, ಜನಾರ್ಧನ ವಾಘಮೋರೆ, ನವಲಿಂಗ ಪಾಟೀಲ, ಪ್ರವೀಣ ದಾಂಡೆಕರ, ಶಿವರಾಜ ಖೇಲೆ, ಇನ್ನಿತರರು ಸಹ ಕಲೆಯನ್ನು ಪ್ರದರ್ಶಿಸಿದರು.

ಪ್ರೊ. ಸೂರ್ಯಕಾಂತ ಶೀಲವಂತ, ವೆಂಕಟಣ್ಣಾ ಡೊಣ್ಣೆಗೌಡರು, ಶಶಿಧರ ಪಾಟೀಲ, ಪ್ರಭುಲಿಂಗಯ್ಯಾ, ರೇವಣಸಿದ್ದಯ್ಯಾ ಮಠಪತಿ, ಇನ್ನಿತರರು ಶ್ರಮಿಸಿದರು.

ಸ್ವಾಗತವನ್ನು ಕಲಾ ಟ್ರಸ್ಟಿನ್ ಅಧ್ಯಕ್ಷರಾದ ರಾಜಕುಮಾರ ಹೋಗಾರವರಿಂದ, ಸನ್ಮಾನಿತರ ಪರಿಚಯವನ್ನು ನವಲಿಂಗ ಪಾಟೀಲ, ಸಂಚಾಲನೆ ಶಾಂತಯ್ಯಾ ಎಸ್. ಮಠಪತಿ, ಕುಮಾರಿ ಶ್ರೀದೇವಿ ಖಿಂಡಾಳೆ, ವಂದಾನಾರ್ಪಣೆಯನ್ನು ಪ್ರಭುಲಿಂಗಯ್ಯಾ ಟಂಕ ಸಾಲಿಮಠ ಸಲ್ಲಿಸಿದರು.




ದಿನಾಂಕ 27-9-2011 ಮಂಗಳವಾರ ಸೆಂಚುರಿ ಕರ್ನಾಟಕ ದಿನಪತ್ರಿಕೆ



ಬಸವಕಲ್ಯಾಣದ ತ್ರಿಪುರಾಂತದ ಮರಿದೇವರ ಗುಡ್ಡದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರ ಮುನಿ ಶಿವಾಚಾರ್ಯರರು ೨೬ನೇ ಹುಟ್ಟು ಹಬ್ಬ ಆಚರಿಸಿಕೊಂಡರು.

# ತ್ರಿಪುರಾಂತ ಶ್ರೀಗಳ 26ನೇ ಜನ್ಮದಿನಾಚರಣೆ

ಬಸವಕಲ್ಯಾಣ, ೧– ಇಲ್ಲಿನ ತ್ರಿಪುರಾಂತ ಮರಿದೇವರ ಗುಡ್ಡದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಶುಕ್ರವಾರ ೨೬ನೇ ಜನ್ಮದಿನಾಚರಣೆ ಆಚರಿಸಿಕೊಂಡು, ಹಾಗೂ ೬ನೇ ವರ್ಧಂತಿ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮವನ್ನು ಕ.ಸಾ.ಪ ಅಧ್ಯಕ್ಷ ಪ್ರಭುಲಿಂಗಯ್ಯಾ ಟಂಕಸಾಲಿಮಠ ಉದ್ಘಾಟಿಸಿ, ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಮಠಗಳು ಅಮೋಘ ಸೇವೆ ಸಲ್ಲಿಸುತ್ತಿದ್ದು, ಐತಿಹಾಸಿಕ ಗವಿ ಮಠದಲ್ಲಿ ಶಿವಾಚಾರ್ಯರ ಹೆಸರಲ್ಲಿ ಶೈಕ್ಷಣಿಕ ಸೇವೆ ಜರುಗಲಿ ಎಂದರು.

ವೇದಿಕೆಯಲ್ಲಿ ಪತ್ರಕರ್ತರಾದ ಕಲ್ಯಾಣರಾವ ಮದರಗಾಂವಕರ್ ಇದ್ದರು. ಮಠದ ನೂರಾರು ಸದ್ಭಕ್ತರು ಶ್ರೀಗಳಿಗೆ ಅಭಿನಂದಿಸಿ ಆಶಿರ್ವಾದ ಪಡೆದರು. ಕಾರ್ಯಕ್ರಮದಲ್ಲಿ ಜಿ.ಇ. ಮುರಗಯ್ಯಾ ಸ್ವಾಮಿ ವಸ್ತದ, ಡಾ.ಬಸವರಾಜ ಸ್ವಾಮಿ, ರಮೇಶ ರಾಜೋಳೆ, ಈರಣ್ಣಾ ಶಿಲವಂತ, ಸೋಮನಾಥ ದೇವಣೆ, ಪ್ರಭು ಶೇಖರ ಕುಸನೂರ, ಶರಣೆ ಚಿತ್ರಾಬಾಯಿ, ಶ್ರೀಮತಿ ಶೋಭಾ, ಶ್ರೀಮತಿ ಪರೆಗ ಬಾಯಿ, ರಮೇಶ ಉಪಸ್ಥಿತರಿದ್ದರು.

2-10-2011 ಸೆಂಚುರಿ ಕರ್ನಾಟಕ ದಿನಪತ್ರಿಕೆ

# ತ್ರಿಪುರಾಂತ ಶ್ರೀ ಜನ್ಮ ದಿನಾಚರಣೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶ್ರೀ ರುದ್ರಮುನಿ ಶಿವಾಚಾರ್ಯರ ಗವಿ ಮಠ ತ್ರಿಪುರಾಂತ (ಮರಿದೇವರ ಗುಡ್ಡ)ದ ಪೀಠಾಧಿಪತಿಗಳಾದ ಶ್ರೀ ಶ್ರೀ ರುದ್ರಮುನಿ ಶಿವಾಚಾರ್ಯರ 26ನೇ ಜನ್ಮ ದಿನಾಚರಣೆ ಹಾಗೂ ಪಟ್ಟಾಧಿಕಾರದ 6ನೇ ವಾರ್ಷಿಕ ಮಹೋತ್ಸವ ಇತ್ತೀಚೆಗೆ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಧಾರ್ಮಿಕ ಕ್ಷೇತ್ರದ ಜತೆಗೆ ಶೈಕ್ಷಣಿಕ ಕ್ಷೇತ್ರದ ಪ್ರಗತಿಯಲ್ಲಿ ಮಠಗಳ ಪಾತ್ರ ಮಹತ್ವದ್ದು, ಶಿಕ್ಷಣ ಸಂಸ್ಥೆ ಅರಂಭಿಸಿ ಈ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ತ್ರಿಪುರಾಂತ ಶ್ರೀಗಳು ಯೋಜಿಸಬೇಕು ಎಂದರು.

ಪ್ರಮುಖರಾದ ಈರಣ್ಣ ಶೀಲವಂತ, ಡಾ.ಬಸವರಾಜ ಸ್ವಾಮಿ, ಮುರಗೆಪ್ಪ ಜೆಇ, ರಮೇಶ ರಾಜೋಳೆ, ಸೋಮನಾಥ ಮಲೋದೆ, ಪ್ರಭುಶೇಖರ, ರಮೇಶ, ಆದಿತ್ಯ ಸಾಗರ , ಭಜನಾ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

2-10-2011 ವಿಜಯ ಕರ್ನಾಟಕ ದಿನಪತ್ರಿಕೆ

ದಿನಾಂಕ 27-9-2011 ಪ್ರಜಾವಾಣಿ ದಿನಪತ್ರಿಕೆ

Scanned by CamScanner

**ಬಸವಕಲ್ಯಾಣ**

ಬಸವತತ್ತ್ವ ಪ್ರಚಾರ-ಪ್ರಸಾರಕ್ಕಾಗಿ ಬಸವಭೂಮಿಯಿಂದ ಆರಂಭಿಸಿ, ಕಾಶ್ಮೀರನಿಂದ ಕನ್ಯಾಕುಮಾರಿವರೆಗೆ ದೇಶವ್ಯಾಪಿ ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆ ಕೈಗೊಂಡು ಶುಕ್ರವಾರ ಆಗಮಿಸಿದ ಹುಲಸೂರನ ಶ್ರೀ ಶಿವಾನಂದ ಮಹಾ ಸ್ವಾಮಿಜಿಯವರಿಗೆ ಬಸವಕಲ್ಯಾಣದಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಸಸ್ತಾಪುರ ಬಂಗ್ಲಾ ಬಳಿ ಸ್ವಾಗತ ನೀಡಿ ಬರಮಾಡಿಕೊಂಡ ನಂತರ ಇಲ್ಲಿಯ ತ್ರಿಪುರಾಂತನಿಂದ ನಗರದ ಮುಖ್ಯ ರಸ್ತೆಯ ಮಾರ್ಗವಾಗಿ ಬಸವ ವೃತ್ತದವರೆಗೆ ನಡೆದ ಮೆರವಣಿಗೆಯಲ್ಲಿ ಪ್ರಮುಖರು ಭಾಗವಹಿಸಿದ್ದರು. ದಾರಿಯುದ್ದಕ್ಕೂ ನಾನಾ ಕಡೆಗಳಲ್ಲಿ ಶ್ರೀಗಳಿಗೆ ಸ್ವಾಗತ ಕೋರಿ ಸನ್ಮಾನಿಸಲಾಯಿತು.

ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯಿಂದ ಇಲ್ಲಿಯ ಬಿಕೆಡಿಬಿ ಗ್ರಂಥಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಶ್ರೀ ಶಿವಾನಂದ ಮಹಾಸ್ವಾಮಿಜಿ ಆಶೀರ್ವಚನ ನೀಡಿ, ದೇಶದಲ್ಲಿ ಎಲ್ಲ ಕಡೆ ಸಿಕ್ಕ ಸ್ವಾಗತಕ್ಕಿಂತಲೂ ಜಿಲ್ಲೆಯಲ್ಲಿ ದೊರೆತ ಸ್ವಾಗತ, ವಿಶೇಷವಾಗಿ ಬಸವಾದಿ ಶರಣರ ಪವಿತ್ರ ಭೂಮಿ ಬಸವಕಲ್ಯಾಣದಲ್ಲಿ ನೀಡಿದ ಸ್ವಾಗತ ಸಂತಸ ತಂದಿದೆ ಎಂದರು.

ಪಾದಯಾತ್ರೆ ವೇಳೆ ಹೊರ ರಾಜ್ಯಗಳಲ್ಲಿ ಜನತೆ ಆಸಕ್ತಿಯಿಂದ ಬಸವತತ್ತ್ವವನ್ನು ತಿಳಿದುಕೊಳ್ಳುತ್ತಿದ್ದರು ಎಂದು, ಯಾತ್ರೆ ಸಮಯದಲ್ಲಿ ಅನುಭವಗಳನ್ನು ತಿಳಿಸಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಬಸವತತ್ತ್ವ ಪ್ರಚಾರ-ಪ್ರಸಾರಕ್ಕಾಗಿ ಪಾದಯಾತ್ರೆ ನಡೆಸಿದ ಹುಲಸೂರ ಶ್ರೀಗಳು ಕಾರ್ಯವನ್ನು ಮಾಡಿದ್ದಾರೆ ಎಂದು ಬಣ್ಣಿಸಿದರು. ಸಾಯಗಾಂವನ ಶ್ರೀ ಶಿವಾನಂದ ದೇವರು ಸಮ್ಮುಖ ವಹಿಸಿದ್ದರು.

ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ ಅಧ್ಯಕ್ಷತೆ ವಹಿಸಿದ್ದರು. ಬಿಕೆಡಿಬಿ ಸದಸ್ಯ ವೈಜಿನಾಥ ಕಾಮಶೆಟ್ಟಿ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಮಂಗಲಾಬಾಯಿ ಉದರೆ, ವೀರಶೈವ ಮಹಾಸಭೆ ತಾಲೂಕು ಅಧ್ಯಕ್ಷ ಶಶಿಕಾಂತ ದುರ್ಗೆ, ಪಿಎಲ್‌ಡಿ ಅಧ್ಯಕ್ಷ ಬಾಬುರಾವ ಗೌಂಡಗಾಂವೆ, ರೈತ ಮುಖಂಡ ಬಸವರಾಜ ತಂಬಾಕೆ, ನಗರಸಭೆ ಸದಸ್ಯ ಸೂರ್ಯಕಾಂತ ಚಿಲ್ಲಾಬಟ್ಟೆ ಡಾ.ಪಿ.ಎಸ್. ಮಠಪತಿ, ಬಿಡಿಪಿಸಿ ಉಪಾಧ್ಯಕ್ಷ ಗದಗೆಪ್ಪ ಹಲಶೆಟ್ಟಿ ಸೇರಿದಂತೆ ನಿರ್ದೇಶಕರು, ಇದ್ದರು.

ಪ್ರಾಚಾರ್ಯ ನಿರ್ಮಲಾ ಶಟಗಾರ ವಂದಿಸಿದರೆ, ವಿಶ್ವನಾಥ ಮುಕ್ತಾ ನಿರೂಪಿಸಿದರು. ಬಿಡಿಪಿಸಿ, ವೀರಶೈವ ಮಹಾಸಭೆ ಬಸವತತ್ತ್ವ ಪ್ರಸಾರ ಕೇಂದ್ರ ಸೇರಿದಂತೆ ನಾನಾ ಸಂಘ-ಸಂಸ್ಥೆ ಪದಾಧಿಕಾರಿ-ಪ್ರಮುಖರು ಹುಲಸೂರ ಶ್ರೀಗಳನ್ನು ಸತ್ಕರಿಸಿದರು.



ದೇಶವ್ಯಾಪಿ ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆ ಕೈಗೊಂಡು ಬಸವಕಲ್ಯಾಣಕ್ಕೆ ಆಗಮಿಸಿದ ಹುಲಸೂರನ ಶ್ರೀ ಶಿವಾನಂದ ಮಹಾಸ್ವಾಮಿಗಳಿಗೆ ಶುಕ್ರವಾರ ಬಿಕೆಡಿಬಿ ಗ್ರಂಥಾಲಯ ಸಭಾಂಗಣದಲ್ಲಿ ಸತ್ಕರಿಸಲಾಯಿತು. ತ್ರಿಪುರಾಂತ ಶ್ರೀ, ಅನೀಲಕುಮಾರ ರಗಟೆ, ವೈಜಿನಾಥ ಕಾಮಶೆಟ್ಟಿ ಶ್ರೀ ಶಿವಾನಂದ ದೇವರು ಇದ್ದರು.

1-10-2011 ವಿಜಯ ಕರ್ನಾಟಕ ದಿನಪತ್ರಿಕೆ

ದಿನಾಂಕ 27-10-11 ಗುರುವಾರ ವಿಜಯ ಕರ್ನಾಟಕ



ಬಸವಕಲ್ಯಾಣ: ತ್ರಿಪುರಾಂತ ಗವಿ ಮಠದಲ್ಲಿ ಬುಧವಾರ ನಡೆದ ಅಭಿನಂದನಾ ಸಮಾರಂಭದಲ್ಲಿ ಶ್ರೀ ಶಿವಾನಂದ ಮಹಾಸ್ವಾಮಿಗಳನ್ನು ಸತ್ಕರಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಮೇಶ ರಾಜೋಳೆ, ಶರಣಪ್ಪ ಬಿರಾದಾರ, ಡಾ.ಗವಿಸಿದ್ಧಪ್ಪ ಪಾಟೀಲ್, ಡಾ.ಬಸವರಾಜ ಸ್ವಾಮಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಇದ್ದರು.

# ಹುಲಸೂರ ಶ್ರೀಗಳ ಸತ್ಕಾರ

▪ ವಿಕ ಸುದ್ದಿಲೋಕ ಬಸವಕಲ್ಯಾಣ

ತ್ರಿಪುರಾಂತನ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ, ಮರಿದೇವರ ಗುಡ್ಡದಲ್ಲಿ ಬುಧವಾರ ನಡೆದ ಅಭಿನಂದನಾ ಸಮಾರಂಭದಲ್ಲಿ ಬಸವತತ್ತ್ವ ಪ್ರಚಾರ-ಪ್ರಸಾರಕ್ಕಾಗಿ ದೇಶ ವ್ಯಾಪಿ ಬಸವಜ್ಯೋತಿ ಸದ್ಭಾವನಾ ಪಾದಯಾತ್ರೆ ನಡೆಸಿದ ಹುಲಸೂರನ ಶ್ರೀ ಶಿವಾನಂದ ಮಹಾಸ್ವಾಮಿಜಿ ಅವರನ್ನು ಸತ್ಕರಿಸಲಾಯಿತು.

ಸನ್ಮಾನ ಸ್ವೀಕರಿಸಿದ ಶ್ರೀ ಶಿವಾನಂದ ಮಹಾಸ್ವಾಮಿಜಿ ಆಶೀರ್ವಚನ ನೀಡಿ, ಏಳು ತಿಂಗಳು ನಡೆದ ಪಾದಯಾತ್ರೆ ಸಂದರ್ಭದಲ್ಲಿ ನಿರೀಕ್ಷೆಗೂ ಮೀರಿದ ಸ್ವಾಗತ ಸಿಕ್ಕಿದೆ ಎಂದು ಪಾದಯಾತ್ರೆ ವೇಳೆಯ ಅನುಭವ ಹಂಚಿಕೊಂಡರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ, ಆಶೀರ್ವಚನ ನೀಡಿದರು. ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಡಾ.ಬಸವರಾಜ ಸ್ವಾಮಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಡಾ.ಗವಿಸಿದ್ಧಪ್ಪ ಪಾಟೀಲ್, ಬಾಬುರಾವ ಪಟ್ನೆ, ರೇವಣಸಿದ್ಧಯ್ಯ ಮಠಪತಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಬಕ್ಕಯ್ಯ ಸ್ವಾಮಿ, ಶೇಷಪ್ಪ ಗಬ್ಬೂರ, ಶಾಂತಯ್ಯ ಮಠಪತಿ, ಪ್ರಕಾಶ ಸ್ವಾಮಿ ಇದ್ದರು.

Scanned by CamScanner

# ಭ್ರಷ್ಟಾಚಾರ ವಿರುದ್ಧ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಭ್ರಷ್ಟಾಚಾರ ವಿರುದ್ಧ ಜನಜಾಗೃತಿ ನಡೆಸುವ ಉದ್ದೇಶದಿಂದ ಇಲ್ಲಿನ ಸತ್ಯಾನುಭವ ಆಶ್ರಮದಿಂದ ಸಾರ್ವಜನಿಕರಿಂದ ಸಂಗ್ರಹಿಸಿದ ಅಭಿಪ್ರಾಯಗಳನ್ನು ಬಿಡುಗಡೆ ಮಾಡುವ ಕಾರ್ಯಕ್ರಮ ಈಚೆಗೆ ಬಿಕೆಡಿಬಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಗವಿಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಮತನಾಡಿ ಮನೆ, ಮನಗಳಲ್ಲಿನ ಭ್ರಷ್ಟಾಚಾರ ಮೊದಲು ತೊಲಗಿಸಬೇಕಾಗಿದೆ ಎಂದರು. ಬಸವ ಮಹಾಮನೆಯ ಬಸವಪ್ರಭು ಸ್ವಾಮೀಜಿ ಮಾತನಾಡಿ ಭ್ರಷ್ಟಾಚಾರ ತೊಲಗಿಸುವಲ್ಲಿ ಧಾರ್ಮಿಕ ಮುಖಂಡರು ಮಹತ್ವದ ಪಾತ್ರ ನಿರ್ವಹಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸತ್ಯಾನುಭವ ಆಶ್ರಮದ ಮುಖ್ಯಸ್ಥರಾದ ಫಾದರ್ ಬೆಂಜಮಿನ್ ಡಿಸೋಜಾ ಮಾತನಾಡಿ ನಮ್ಮ ಮನಸ್ಸಿನಲ್ಲಿನ ದುರ್ಬುದಿ ತೆಗೆದು ಹಾಕಿ ಸದ್ಬುದ್ಧಿ ಪಡೆದುಕೊಂಡರೆ ಆಚಾರ, ವಿಚಾರದಲ್ಲಿ ಬದಲಾವಣೆ ಸಾಧ್ಯ ಎಂದರು. ಸುಮಾರು 106 ಜನರು ಭ್ರಷ್ಟಾಚಾರ ನಿರ್ಮೂಲನೆ ಸಂಬಂಧ ತಮ್ಮ ಅಭಿಪ್ರಾಯ ಲಿಖಿತ ರೂಪದಲ್ಲಿ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಸಜ್ಜನರು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತದ ಕಾರಣ ಈ ಪಿಡುಗು ಹೆಚ್ಚಾಗುತ್ತಿದೆ. ನಮ್ಮ ದುರಾಸೆ, ಸ್ವಾರ್ಥದ ಕಾರಣವೇ ಜನರು ಭ್ರಷ್ಟಾಚಾರದಲ್ಲಿ ತೊಡಗುವಂತಾಗಿದೆ. ನಿಸ್ವಾರ್ಥ ಭಾವನೆಯಿಂದ ಕರ್ತವ್ಯಗೈದರೆ ನಿಜ ಜೀವನದ ಆನಂದ ಪಡೆಯಬಹುದು ಎಂದು ಜನರು ಅಭಿಪ್ರಾಯಪಟ್ಟಿದ್ದಾರೆ ಎಂದು ಪಟ್ಟಿಯನ್ನು ಓದಿ ಹೇಳಿದರು. ಮಿಲಿಂದ ಗುರೂಜಿ, ಉಪನ್ಯಾಸಕ ಡಾ.ಗವಿಸಿದ್ಧಪ್ಪ ಪಾಟೀಲ, ತಹಸೀಲ್ದಾರ ಜಗನ್ನಾಥರೆಡ್ಡಿ, ಡಾ.ಎಸ್.ಬಿ.ಮಹಾಜನ, ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಶಂಕರರಾವ ಜಮಾದಾರ, ಡಾ.ಬಸವರಾಜ ಸ್ವಾಮಿ ಮಾತನಾಡಿದರು. ಸಾರ್ವಜನಿಕರು ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಈಚೆಗೆ ಸತ್ಯಾನುಭವ ಆಶ್ರಮದಿಂದ ಭ್ರಷ್ಟಾಚಾರ ವಿರುದ್ಧ ಜನಜಾಗೃತಿ ನಡೆಸುವ ಉದ್ದೇಶದಿಂದ ಸಂಗ್ರಹಿಸಿದ ಅಭಿಪ್ರಾಯಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು. ಫಾದರ್ ಬೆಂಜಮಿನ್ ಡಿಸೋಜಾ, ತ್ರಿಪುರಾಂತ ಅಭಿನವ ರುದ್ರಮುನಿ ಶಿವಾಚಾರ್ಯರು, ಬಸವಪ್ರಭು ಸ್ವಾಮೀಜಿ, ಮಿಲಿಂದ ಗುರೂಜಿ ಪಾಲ್ಗೊಂಡಿದ್ದರು.

ದಿನಾಂಕ 3-11-2011 ಗುರುವಾರ ಪ್ರಜಾವಾಣಿ ದಿನಪತ್ರಿಕೆ

Scanned by CamScanner



ಪೂಜ್ಯ ಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಸಂಸ್ಥಾನ ಗವಿ ಮಠ. ತ್ರಿಪುರಾಂತ-ಬಸವಕಲ್ಯಾಣ.

Scanned by CamScanner